ಆಧುನಿಕಪೂರ್ವ ಗದ್ಯಕೋಶ

ಡಾ. ಜಿ. ಆರ್. ತಿಪ್ಪೇಸ್ವಾಮಿ



ADHUNIKA POORVA GADYAKOSHA

A Glosarry of Cultural Terminology

Author

Dr. G.R. Thippeswamy

Reader, Institute of Kuvempu Kannada Studies

Manasagangothri, Mysore - 570 006

Publisher

N. Thippeswamy

Administrative Officer

Kannada Pustaka Pradhikara

Chamarajpet, Bangalore - 560 018.

First Publsihed : 2004

ISBN : 81-7713-172-9

Pages : xxviii + 108

Price : **Rs. 60/-**

Printer :

Sri Rajendra Printers & Publishers

Behind Evening Bazaar, Shivarampet

Mysore - 570 001. ☎ : 0821-2476019

ಅರ್ಪಣೆ

ನಮ್ಮ ನಾಡಿನ ಎಲ್ಲಾ ಸಾಂಸ್ಕೃತಿ ಚಿಂತಕರಿಗೆ

ಅಕ್ಷರ ಸೂರ್ಯನಿಗೆ ನಮನ

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ

ಅಧ್ಯಕ್ಷರು

ಕನ್ನಡ ಪುಸ್ತಕ ಪ್ರಾಧಿಕಾರವು ನಾಡಿನ ಎಲ್ಲ ಬಗೆಯ ಜ್ಞಾನ ಸಂಪತ್ತನ್ನು ಉಳಿಸಿ-ಬೆಳೆಸುವ ತುಂಬು ಹಂಬಲವನ್ನು ಹೊತ್ತಿದೆ. ಇದು ಒಂದು ಬಗೆಯಲ್ಲಿ ಲೇಖಕ, ಪ್ರಕಾಶಕ, ಓದುಗ ಈ ಮೂವರ ಜತೆ ಸುಸಂಬದ್ಧವಾದ ಅಂತರ್‌ಜಾಲವನ್ನು ಪೋಷಿಸುವ ಸಾಂಸ್ಕೃತಿಕ ಚೈತನ್ಯದ ಸಂಸ್ಥೆಯಾಗಿದೆ. ನಮ್ಮ ನಾಡಿನ ಜ್ಞಾನಸಂಪತ್ತು ಅಕ್ಷಯವಾದುದು. ನಾವು ಬಗೆದಷ್ಟು ಮುಗಿಯದ ತವನಿಧಿ ಇದು. ಈ ನಿಧಿಯ ರಕ್ಷಣೆ, ಪಾಲನೆ ಮತ್ತು ಪೋಷಣೆ ಎಂದೆಂದೂ ಬೇಕು. ಅಕ್ಷರನಿಧಿಯು ಎಂದೆಂದೂ ಅಳಿಯುವುದಿಲ್ಲ. ಈ ನಿಧಿಗೆ ಒಡೆಯರಾದವರು ನಮ್ಮ ಓದುಗರು. ಪಾರಂಪರಿಕ ಜ್ಞಾನಕ್ಕೂ ಆಧುನಿಕ ಕಾಲದ ಜ್ಞಾನಕ್ಕೂ ಓದುಗರೇ ವಾರಸುದಾರರು. ಈ ವಾರಸುದಾರರಿಗೆ ನಿಧಿಯ ಮೌಲ್ಯವನ್ನೂ, ಮಹತ್ವವನ್ನೂ ತೆರೆದು ತೋರಿಸುವುದು ಪುಸ್ತಕ ಪ್ರಾಧಿಕಾರದ ಕರ್ತವ್ಯಗಳಲ್ಲಿ ಒಂದೆಂದು ತಿಳಿದಿದ್ದೇನೆ. ನಮ್ಮ ಕರ್ತವ್ಯವನ್ನು ನಾವು ಮಾಡುವುದು ಬೇಡವೇ ? ಈ ಕರ್ತವ್ಯಕ್ಕೆ ಹಲವು ದಾರಿಗಳಿವೆ. ಕೇವಲ ಪ್ರಕಟಣೆ ಮಾತ್ರ ನಮ್ಮ ಏಕೋದ್ದೇಶ್ಯವಲ್ಲ. ಪ್ರಕಟಣೆಯ ಜತೆಗೆ ಅಕ್ಷರ ಸಂಸ್ಕೃತಿ ದೀಪಗಳನ್ನು ಕತ್ತಲೆಯ ಹಲವು ಮೂಲೆಮುಡುಕುಗಳಲ್ಲಿ ಇಡುವುದು ನಮ್ಮ ಕರ್ತವ್ಯದ ಭಾಗವೇ ಆಗಿದೆ. ಪ್ರತಿಯೊಂದು ತಾಲ್ಲೂಕನ್ನೂ ಇಂಥ ದೀಪಗಳಿಂದ ಬೆಳಗಿಸಬೇಕಾಗಿದೆ. ನಗರ, ಪಟ್ಟಣ ಪ್ರದೇಶಗಳು ಅಕ್ಷರ ಬೆಳಕಿನಿಂದ ಬೆಳಗಿವೆ. ಆದರೆ, ದೂರದೂರದ ಕತ್ತಲೆಯ ಜಾಗಗಳೂ ಅಜ್ಞಾತವಲಯಗಳೂ ಬೆಳಗುವುದು ಪ್ರಜಾಪ್ರಭುತ್ವದ ಕಾಲದಲ್ಲಿ ಅತಿ ಮುಖ್ಯವಲ್ಲವೆ ? ಈಗ ನಮ್ಮೆಲ್ಲರ ಕಣ್ಣು ಮತ್ತು ಮನಸ್ಸು ಗ್ರಾಮ-ಗ್ರಾಮಾಂತರಗಳಿಗೂ ತಾಲ್ಲೂಕು-ತಾಲ್ಲೂಕಾಂತರಗಳ ಕಡೆಗೂ ಚಾಚಬೇಕಾಗಿದೆ. ಅಲ್ಲಿರುವ ಸಹಸ್ರಾರು ಜ್ಞಾನದಾಹಿಗಳ ಮನಸ್ಸನ್ನು ಅರಳಿಸುವ, ಅಕ್ಷರಲೋಕಕ್ಕೆ ಕರೆದೊಯ್ಯುವ ಕೆಲಸ ಮಾಡಬೇಕಾಗಿದೆ. ಇದಕ್ಕಾಗಿ ಪುಸ್ತಕ ಪ್ರಕಟಣೆಯ ಜತೆಗೆ, ಪುಸ್ತಕ ಮೇಳ, ಪುಸ್ತಕ ಜಾತ್ರೆ ಆಗುವುದು ಅಗತ್ಯ. ಇದು ನೆರವೇರಿದಾಗ 'ಕನ್ನಡ ಪುಸ್ತಕ ಪ್ರಾಧಿಕಾರ' ಎಂಬ ಮಾತಿಗೆ ಬೆಲೆ ಬರುತ್ತದೆ; ಅದಕ್ಕೊಂದು ಸಾಂಸ್ಕೃತಿಕ ಮೌಲ್ಯ ಪ್ರಾಪ್ತವಾಗುತ್ತದೆಂಬ ನಂಬುಗೆ ನನ್ನದು !

ಜ್ಞಾನದ ಹಂಬಲ ಪ್ರತಿಯೊಬ್ಬರಿಗೂ ಉಂಟು ! ಈ ಜ್ಞಾನವು ಹಲವು ರೂಪಗಳಲ್ಲಿ ತೋರುತ್ತದೆ. 'ಜ್ಞಾನದ ಬಲದಿಂದ ಅಜ್ಞಾನದ ಕೇಡು' ಎಂದು ಬಸವಣ್ಣನವರು ಹೇಳಿದ್ದುಂಟು! ಇದು ಆಧುನಿಕ ಜ್ಞಾನಕ್ಕೂ ಅವಲಂಬಿಸುತ್ತದೆ. ಇಪ್ಪತ್ತನೆಯ ಶತಮಾನ ಕಳೆದು ಹೊಸ ಸಹಸ್ರಮಾನದಲ್ಲಿರುವ ನಾವು ಹಲವು ಬಗೆಯ ತೊಡಕುಗಳಲ್ಲಿ ಮತ್ತು ಸಂಕಟಗಳಲ್ಲಿ ಸಿಕ್ಕಿಕೊಂಡಿದ್ದೇವೆ. ಒಂದು ಕಡೆ ಇಪ್ಪತ್ತನೆಯ ಶತಮಾನ ಸಾಹಿತ್ಯಕವಾಗಿ ಸಮೃದ್ಧವಾದ ಕಾಲವೇನೋ ನಿಜ. ಮೂಲಜ್ಞಾನದ ಬೇರುಗಳು ಹೊರಹೊಮ್ಮಿ ಹಲವು ಬಗೆಯ ವೈವಿಧ್ಯಗಳಿಂದ ವಿರಾಜಮಾನವಾದ ಕಾಲವೂ ಆಗಿದೆ! ಸಾಹಿತ್ಯಕವಾಗಿ ಎಷ್ಟು

ಸಮೃದ್ಧವೋ ಸಾಂಸ್ಕೃತಿಕವಾಗಿಯೂ ಅಷ್ಟೇ ಬಗೆ ಬಗೆಯ ವಾಗ್ವಾದ ಮತ್ತು ಸಂವಾದಗಳಿಂದ ಕೂಡಿದ ಕಾಲವಾಗಿದೆ! ಅನೇಕ ತಳವರ್ಗದ ಜನಸ್ತೋಮಗಳು ಮೊದಲ ಬಾರಿಗೆ ಅಕ್ಷರ ಸೂರ್ಯನಿಗೆ ನಮಸ್ಕರಿಸಿದ್ದುಂಟಷ್ಟೆ. ಜ್ಞಾನಾರ್ಜನೆ ಎಂಬುದು ಒಂದು ಶೈಕ್ಷಣಿಕ ಶಿಸ್ತಾಗಿದೆ. ಆದರೆ, ಇದು ಸಮಾಜದ ಅವಿರತ ಹಾಗೂ ಸದಾಕಾಲವೂ ಹಂಬಲಿಸುವ ಆಶಯ ಆಗಬೇಕು. ಈ ಆಶಯ, ಹಂಬಲ ಹಲವು ಬಗೆಯ ಸಂಕೇತಗಳಲ್ಲೋ, ರೂಪಕಗಳಲ್ಲೋ ಕಾಣಿಸುತ್ತದೆ. ಪಾರಂಪರಿಕ ಜ್ಞಾನ ಮತ್ತು ಆಧುನಿಕ ಜ್ಞಾನ ಇವೆರಡು ಬೇರುಗಳನ್ನು ಕಸಿ ಹಾಕುವ ಅಗತ್ಯ ನಮ್ಮ ಮುಂದಿದೆ. ಈಗ ಪಾರಂಪರಿಕ ಜ್ಞಾನವು ಕೇವಲ ಸಾಹಿತ್ಯಿಕ ಸಮೃದ್ಧತೆಯ ಕಡೆಗೆ ಮಾತ್ರ ಬೊಟ್ಟು ಮಾಡಿ ತೋರಿಸುತ್ತಿದೆಯೆಂದು ನಾವು ತಿಳಿಯುವಂತಿಲ್ಲ. ಸಮಾಜ-ಸಮುದಾಯಗಳಿಗೆ ಬೇಕಾದ ಹಲವು ಬಗೆಯ ಜ್ಞಾನದ ಕೌಶಲ್ಯಗಳು ನಮ್ಮಲ್ಲಿ ಹಿಂದೆ ಇದ್ದುವು. ೧೮೩೦ರಲ್ಲಿ ಅತ್ಯುತ್ತಮ ತಾಂತ್ರಿಕಜ್ಞಾನ ನಮ್ಮಲ್ಲಿದ್ದುದನ್ನು ಹೇಗೋ ಈಗ ಉಳಿದುಕೊಂಡಿರುವ ವಿಲಿಯಂ ಆ್ಯಡಂ ವರದಿಗಳು ತಿಳಿಸುತ್ತವೆ. ಆದರೆ, ನಾವಿಂದು ಈ ಬಗೆಯ ಸ್ಮೃತಿಗಳಿಂದ ಹೊರಗುಳಿದಿದ್ದೇವೆ. ನಮ್ಮ ಸಂಸ್ಕೃತಿ ಸಮುದಾಯಗಳು ಪಡೆದಿರುವ ಜ್ಞಾನ ಕೌಶಲ್ಯ, ಜ್ಞಾನ ಸಂಪತ್ತನ್ನು- ಈ ಕಾಲದ ಅಗತ್ಯಗಳಿಗೆ ತಕ್ಕಂತೆ ಮರುಜೋಡಣೆ ಮಾಡುವ ಅಗತ್ಯವಿದೆ. ಇಲ್ಲದೆ ಹೋದರೆ, ಕಳೆದುಹೋದ ಕಾಲವು ನಿರ್ವಾತವಾಗಿತ್ತೆಂದೂ, ಬರುವ ಕಾಲ ಈ ನಿರ್ವಾತವನ್ನು ತುಂಬುವ ಹಂಬಲವನ್ನು ಹೊತ್ತಿರುವುದೆಂದೂ ತಿಳಿಯುವ ಕ್ಲೈಬ್ಯದಲ್ಲಿ ನಾವು ಮುಳುಗಬೇಕಾಗುತ್ತದೆ! ಈ ಅಜ್ಞಾನದಿಂದ ನಾವು ಎಚ್ಚರಗೊಳ್ಳಬೇಕಾಗಿದೆ. ಹೀಗೆ ಎಚ್ಚರಿಸುವ ಕಾರ್ಯವನ್ನು ನಾಡಿನ ಹಲವಾರು ಸಾಂಸ್ಕೃತಿಕ ಸಂಸ್ಥೆಗಳು ಮಾಡುತ್ತಿವೆ. ಆದರೆ, ಕನ್ನಡ ಪುಸ್ತಕ ಪ್ರಾಧಿಕಾರವು ತನ್ನದೇ ಆದ ಕೆಲವು ನಿರ್ದಿಷ್ಟ ಯೋಜನೆ ಮತ್ತು ಪ್ರಕಟಣ ನೀತಿಸಂಹಿತೆಯಿಂದ ಹೊಸ ಆಕಾರವನ್ನು ಪಡೆಯುವ ಹಂಬಲವನ್ನು ಹೊತ್ತಿದೆ.

ಈ ಹಿನ್ನೆಲೆಯಲ್ಲಿ ಹಲವು ಬಗೆಯ ಮಾಲೆಗಳನ್ನು ಹಿಂದಿನ ವರ್ಷಗಳಿಂದ ಕನ್ನಡ ಪುಸ್ತಕ ಪ್ರಾಧಿಕಾರವು ನಡೆಸಿಕೊಂಡು ಬರುತ್ತಿದೆ. ಹೊಸ ಹೊಸ ಮಾಲೆಗಳು ಈಗೀಗ ಅಸ್ತಿತ್ವಕ್ಕೆ ಬರುತ್ತಿವೆ. ನಮ್ಮ ಹೊಸ ಓದು, ಹೊಸ ನುಡಿಗಟ್ಟು, ಹೊಸ ಸಂವೇದನೆಗಳು ಸಹಸ್ರಮಾನದ ಉದಯಕ್ಕೆ ಸಜ್ಜುಗೊಳ್ಳುವ ಅಗತ್ಯವಿದೆಯೆಂದು ಪುಸ್ತಕ ಪ್ರಾಧಿಕಾರವು ತಿಳಿಯುತ್ತದೆ ! ಕನ್ನಡ ಪುಸ್ತಕ ಪ್ರಾಧಿಕಾರವು ಮಹತ್ವದ ಪ್ರಕಟಣೆಗಳನ್ನು ಹೊರತರುತ್ತಿರುವುದು ಸರಿಯಷ್ಟೆ. ಆಕರ ಗ್ರಂಥಗಳ ಪ್ರಕಟಣೆ, ಜನಸಾಮಾನ್ಯರೆಲ್ಲ ಓದಬಲ್ಲ ಪ್ರಕಟಣೆ, ಮಕ್ಕಳ ಸಾಹಿತ್ಯ ಪ್ರಕಟಣೆ, ವಿಜ್ಞಾನ ಸಾಹಿತ್ಯ ಪ್ರಕಟಣೆ – ಮೊದಲಾದವುಗಳನ್ನು ವಿವಿಧ ಮಾಲೆಗಳಲ್ಲಿ ಪುಸ್ತಕ ಪ್ರಾಧಿಕಾರವು ಪ್ರಕಟಿಸುತ್ತಿದೆ. ನಾಡಿನ ಜನತೆ ಅತ್ಯಂತ ಪ್ರೀತಿಯಿಂದ ನಮ್ಮ ಪ್ರಕಟಣೆಗಳನ್ನು ಸ್ವಾಗತಿಸುತ್ತಿದೆ. ಈಗ ಆಕರ ಗ್ರಂಥಮಾಲೆಯ ಅಡಿಯಲ್ಲಿ ಡಾ. ಜಿ.ಆರ್. ತಿಪ್ಪೇಸ್ವಾಮಿ ಅವರ 'ಆಧುನಿಕ ಪೂರ್ವ ಗದ್ಯಕೋಶ' ಗ್ರಂಥವು ಪ್ರಕಟವಾಗುತ್ತಿದೆ.

ಡಾ. ಜಿ. ಆರ್. ತಿಪ್ಪೇಸ್ವಾಮಿ ಹಳಗಾಲದ ಸಾಹಿತ್ಯ ಮತ್ತು ಹೊಸಗಾಲದ ಸಾಂಸ್ಕೃತಿಕ ನಂಟನ್ನು ತಿಳಿದವರು. ಅವರು ಕಳೆದ ಕಾಲು ಶತಮಾನಕ್ಕು ಹೆಚ್ಚು ಪ್ರಾಚೀನ, ಅರ್ವಾಚೀನ ಸಾಹಿತ್ಯ ವಿಶ್ಲೇಷಣೆಯಲ್ಲಿ ತೊಡಗಿದ್ದಾರೆ. ಅವರು ತಮ್ಮ ವಿಶ್ಲೇಷಣೆಗೆ ಮುಖ್ಯವಾಗಿ ಆಧುನಿಕ ಪರಿಕಲ್ಪನೆಗಳ ಒತ್ತಡ ಇರುವಂತೆ ; ಸಾಹಿತ್ಯವೇ ನೀಡುತ್ತಿರುವ ದೇಸಿ ಪರಿಕಲ್ಪನೆಗಳ ಜತೆಗೆ ನಂಟನ್ನೂ ಇರಿಸಿಕೊಂಡೇ

ಬರುತ್ತಿದ್ದಾರೆ. ಈ ಸಾಹಿತ್ಯದಲ್ಲಿ ಹಳತು - ಹೊಸತು ಎಂಬುದು ಒಂದು ಆಂಶಿಕ ಭೇದವೇ ಹೊರತು; ಸರ್ವಾಂಶಿಕ ಭೇದವಲ್ಲ. ಈ ರಹಸ್ಯವು ಡಾ. ಜಿ. ಆರ್. ತಿಪ್ಪೇಸ್ವಾಮಿ ಅವರಿಗೆ ತಿಳಿದಿದೆ.

ಆಧುನಿಕ ಪೂರ್ವ ಗದ್ಯಕೋಶ - ಕನ್ನಡಕ್ಕೆ ಹೊಸ ಬಗೆಯ ಗ್ರಂಥವಾಗಿದೆ. ಇದು ನಮ್ಮ ಗದ್ಯಕಾವ್ಯಗಳಲ್ಲಿ ಪ್ರಯೋಗಗೊಂಡಿರುವ ವಿಶೇಷವಾದ ಸಾಂಸ್ಕೃತಿಕ ಉಕ್ತಿಗಳನ್ನು ಆಯ್ದು - ಅವುಗಳಿಗೆ ಉಚಿತವಾದ ಟಿಪ್ಪಣಿಗಳನ್ನು ಬರೆಯಲಾಗಿದೆ. ಇವುಗಳಿಗೆ ಲೇಖಕರು ವಡ್ಡಾರಾಧನೆಯಿಂದ ಹಿಡಿದು ಕೆಂಪು ನಾರಾಯಣನ ಮುದ್ರಾ ಮಂಜೂಷದವರೆಗೂ ಹರಡಿದೆ. ಲೇಖಕ ವಿದ್ವಾಂಸರು ತಮ್ಮ 'ಗದ್ಯಕೋಶ'ವನ್ನು ಮೂರು ಅಧ್ಯಾಯಗಳಾಗಿ ವಿಂಗಡಿಸಿಕೊಂಡಿದ್ದಾರೆ. ಮೊದಲನೆಯ ಅಧ್ಯಾಯವು ವ್ಯಕ್ತಿ, ಕುಟುಂಬಗಳಿಗೆ ಸಂಬಂಧಿಸಿವೆ ; ಎರಡನೆಯ ಅಧ್ಯಾಯವು ಆಚರಣೆ ಮತ್ತು ನಂಬಿಕೆಗಳಿಗೆ ಸಂಬಂಧಿಸಿವೆ ; ಮೂರನೆಯದು ಗ್ರಾಮೀಣ ಐತಿಹ್ಯ ಮತ್ತು ಪುರಾಣಗಳಿಗೆ ಸಂಬಂಧಿಸಿದೆ.

ಈ ಕೋಶದ ಸಾಂಸ್ಕೃತಿಕ ಉಕ್ತಿಗಳನ್ನು ಓದುತ್ತಿದ್ದರೆ : ಒಂದು ಸಾವಿರಕ್ಕೂ ಮಿಕ್ಕಿದ ವರ್ಷಗಳಲ್ಲಿ ಕನ್ನಡ ಜನ ಮನ ತಾಳಿದ ನಿಲುವು, ಎತ್ತಿದ ತಾತ್ವಿಕ ಪ್ರಶ್ನೆಗಳು, ಕೊಟ್ಟುಕೊಂಡ ಉತ್ತರಗಳು ನಮಗೆ ಸೂರ್ಯಸ್ಪಷ್ಟವಾಗುತ್ತವೆ ; ಸಂಸ್ಕೃತಿ ಅಧ್ಯಯನಕ್ಕೆ ಪುಷ್ಟಿಯನ್ನು ಕೊಡುತ್ತವೆ. ಇಂಥ ಸಾಂಸ್ಕೃತಿಕ ಉಕ್ತಿಪ್ರಪಂಚ ಕಟ್ಟಿಕೊಡುವ ವಿವರಗಳು ಕನ್ನಡ ಸಂಸ್ಕೃತಿಯ ಅಧ್ಯಯನಾಸಕ್ತರಿಗೆ ಬೆಲೆಯುಳ್ಳ ದಾರಿಗಳನ್ನು ತೋರಿಸುತ್ತವೆ. ಈ ಉಕ್ತಿಪ್ರಪಂಚವು ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಕುಟುಂಬಕ್ಕೂ ಸಂಬಂಧಿಸಿವೆ ; ಕುಟುಂಬಗಳಿಗೆ ಸಂಬಂಧಿಸಿರುವಂತೆ ಸಮಾಜಕ್ಕೂ ಸಂಬಂಧಿಸಿವೆ. ಇವು ಒಂದರೊಡನೊಂದು ಸಂಬಂಧಗಳ ನೇಯ್ಗೆಯನ್ನು ಪಡೆದಿರುವುದು ಎಲ್ಲರಿಗೂ ತಿಳಿದಿರುವ ಸಂಗತಿಗಳೇ. ಈ ಬಗೆಯ ಉಕ್ತಿಗಳು ಕೇವಲ ಕನ್ನಡ ಸಾಹಿತ್ಯ ಬಲ್ಲವರಿಗೆ ಮಾತ್ರವಲ್ಲ, ಸಮಾಜೋ ಸಾಂಸ್ಕೃತಿಕ ಅಧ್ಯಯನ ಮಾಡುವವರಿಗೂ ಹೊಸ ಬೆಳಕನ್ನೂ ಹೊಸ ತಿಳಿವನ್ನೂ ನೀಡಬಲ್ಲವೆಂಬುದು ನನ್ನ ನಮ್ರ ತಿಳಿವಳಿಕೆ. ಕನ್ನಡ ಸಂಸ್ಕೃತಿಯ ಪುನಾರಚನೆ ಮಾಡುವವರು ಇಂಥ ಪುಸ್ತಕಗಳಿಗೆ ಹೋಗುವುದು ಅನಿವಾರ್ಯವಾಗಿದೆ. ಡಾ. ಜಿ. ಆರ್. ತಿಪ್ಪೇಸ್ವಾಮಿ ಈಗ 'ಗದ್ಯಕೋಶ' ಸಿದ್ಧಪಡಿಸಿದ್ದಾರೆ. ಅವರು 'ಪದ್ಯಕೋಶ'ವನ್ನೂ ತೆಗೆದುಕೊಂಡು ಒಂದು ಸ್ವಯಂಪೂರ್ಣವಾದ ಗ್ರಂಥವನ್ನೂ ಸಿದ್ಧಪಡಿಸುವುದು ತುಂಬಾ ಉಪಕಾರವಾದುದು. ಆ ಬಗೆಯ ಸಿದ್ಧತೆ ಮಾಡುವ ಶಕ್ತಿ ಸಾಮರ್ಥ್ಯ ಡಾ. ಜಿ. ಆರ್. ಅವರಿಗೆ ಇದೆ. ಅದು ಸಿದ್ಧಗೊಳ್ಳುವ ಪೂರ್ವದಲ್ಲಿ ಇಂಥದೊಂದು ಕೃತಿಯನ್ನು ಬಹು ಓದಿನ ಫಲವಾಗಿ ಕನ್ನಡ ಪುಸ್ತಕ ಪ್ರಾಧಿಕಾರಕ್ಕೆ ಸಿದ್ಧಪಡಿಸಿ ಕೊಟ್ಟಿದ್ದಾರೆ. ನಾನು ಅವರ ಶ್ರಮವನ್ನು ಅಭಿನಂದಿಸುತ್ತೇನೆ.

ಈ ಗ್ರಂಥ ಪ್ರಕಟಗೊಳ್ಳಲು ಪ್ರಾಧಿಕಾರದ ಸದಸ್ಯ ಮಿತ್ರರ ಸಹಕಾರ ಒದಗಿದೆ. ಉತ್ತಮ ಮುದ್ರಣಕ್ಕೆ ಪ್ರಸಿದ್ಧರಾದ ಶ್ರೀ ಡಿ.ಎನ್. ಲೋಕಪ್ಪನವರು ಮುದ್ರಿಸಿ ನೀಡಿದ್ದಾರೆ. ಶ್ರೀ ರಫೀಕ್ ಉಪ್ಪಿನಂಗಡಿ ಮುಖಪುಟದ ವಿನ್ಯಾಸ ಮಾಡಿಕೊಟ್ಟಿದ್ದಾರೆ. ಕನ್ನಡ ಜನ ಪ್ರೀತಿಯಿಂದ ಪುಸ್ತಕಗಳನ್ನು ಕೊಂಡು ಓದಿ ಪ್ರೋತ್ಸಾಹಿಸುತ್ತಿದ್ದಾರೆ. ಇವರೆಲ್ಲರಿಗೂ ಪುಸ್ತಕ ಪ್ರಾಧಿಕಾರದ ಕೃತಜ್ಞತೆಗಳು ಸಲ್ಲುತ್ತವೆ.

ಲೇಖಕರ ಎರಡು ಮಾತು

ಗ್ರಾಮೀಣ ಸಂಸ್ಕೃತಿ ಸಂದರ್ಭಕೋಶದ ಪರಿಕಲ್ಪನೆಯೇ ಹೊಸ ಬಗೆಯದು. ಈಗಾಗಲೆ ಕನ್ನಡದಲ್ಲಿ ಹೊರಬಂದಿರುವ ಪದಕೋಶ, ಪದವಿವರಣಕೋಶ, ವಿಶ್ವಕೋಶ - ಇತ್ಯಾದಿಗಳಿಂದ ಹೊರತಾಗಿ ಹೊಸ ಸಾಧ್ಯತೆಗಳ ಕಡೆಗೆ ಮುಖ ಮಾಡುವ ಆಶಯ ಇದರದು. ಇಂಥದ್ದೊಂದು ಮಹತ್ತರವಾದ ಮತ್ತು ಮೌಲಿಕವಾದ ಯೋಜನೆಯನ್ನ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದಾಗ ಪ್ರೊ. ಬರಗೂರು ರಾಮಚಂದ್ರಪ್ಪನವರು ಹಮ್ಮಿಕೊಂಡಿದ್ದರು. ಆಗ ಅವರು ವ್ಯಕ್ತಪಡಿಸಿದ ಸಂದರ್ಭಕೋಶದ ಪರಿಕಲ್ಪನೆ ಈ ರೀತಿಯದು :

'ನಮ್ಮ ಭಾಷೆ, ನಮ್ಮ ಆಚರಣೆ, ನಮ್ಮ ನಂಬಿಕೆ, ನಮ್ಮ ಸಾಮಾಜಿಕ ಆರ್ಥಿಕ ಆಡಳಿತಾತ್ಮಕ ವ್ಯವಸ್ಥೆ - ಹೀಗೆ ಹತ್ತಾರು ಸಂಗತಿಗಳು ಸಂಸ್ಕೃತಿಯ ಭಾಗವಾಗಿದ್ದು, ಇನ್ನು ನಿರ್ದಿಷ್ಟ ಸಂದರ್ಭಕ್ಕನುಗುಣವಾಗಿ ಸಾಹಿತ್ಯದಲ್ಲಿ ಅಭಿವ್ಯಕ್ತಗೊಳ್ಳುತ್ತಿವೆ. ಹೀಗೆ ಅಭಿವ್ಯಕ್ತಗೊಂಡ ಸಂದರ್ಭದಲ್ಲಿ ಇವುಗಳ ಪಾತ್ರವೇನು ಎಂದು ವಿಶ್ಲೇಷಿಸುವುದು ಈ ಕೋಶದ ಕಾರ್ಯ. ಪಠ್ಯದ ಸಂದರ್ಭ ಹಾಗೂ ಅದು ರಚಿತವಾದ ಕಾಲದ ಸಾಂಸ್ಕೃತಿಕ ಸಂದರ್ಭಗಳ ವಿಶ್ಲೇಷಣೆಯ ಜೊತೆಗೆ ಇಂದಿನ ಸಾಂಸ್ಕೃತಿಕ ಸಂದರ್ಭದಲ್ಲಿ ಸದರಿ ಅಂಶಗಳ ಪ್ರಸ್ತುತತೆ ಹಾಗೂ ಪರಿವರ್ತನ ಶೀಲತೆಗಳನ್ನು ಗಮನಿಸಿ ಒಟ್ಟಾರೆ ಈ ಮೂರು ಸಂಸ್ಕೃತಿ ಸಂದರ್ಭಗಳನ್ನು ಆಧರಿಸಿ ವಿವರಣೆ - ವಿಶ್ಲೇಷಣೆಗಳನ್ನು ನಡೆಸುವುದು ಸಂಸ್ಕೃತಿ ಸಂದರ್ಭ ಕೋಶದ ಕೆಲಸವಾಗಿರುತ್ತದೆ. ಹೀಗೆ ಇದು ಸಂಸ್ಕೃತಿ ಸಂದರ್ಭವನ್ನು ಪ್ರಧಾನವಾಗಿರಿಸಿಕೊಂಡ ಸಂಶೋಧನೆಯ ಕಾರ್ಯವಾಗಿದೆ." ಇಂಥ ಕೆಲಸದ ರೂಪುರೇಷೆಗಳು ಮುಳಿಯ ತಿಮ್ಮಪ್ಪಯ್ಯ, ಶಂಬಾಜೋಷಿ, ಬೆಟಗೇರಿ ಕೃಷ್ಣಶರ್ಮ, ಹಂಪ. ನಾಗರಾಜಯ್ಯ, ಚಿದಾನಂದಮೂರ್ತಿ, ಎಂ. ಎಂ. ಕಲಬುರ್ಗಿ, ಮುಂತಾದ ಹಿರಿಯ ವಿದ್ವಾಂಸರ ಬರಹಗಳಲ್ಲಿ ಈಗಾಗಲೇ ವ್ಯಕ್ತವಾಗಿವೆ. ಪ್ರಾಚೀನ ಸಂಸ್ಕೃತಿಯ ಹೊಳಹುಗಳನ್ನು ಪರಿಚಯಿಸುವಲ್ಲಿ ಇವರೆಲ್ಲರ ಬರಹಗಳು ತುಂಬ ಮಹತ್ವ ಪಡೆದಿವೆ. ಇದರ ಮುಂದುವರಿಕೆಯಾಗಿ ಹಾಗೂ ಸಾಂಸ್ಕೃತಿಕ ಸಂಗತಿಗಳನ್ನ ಸಮಕಾಲೀನ ಸಂದರ್ಭದಲ್ಲಿಟ್ಟು ನೋಡುವ ಸದಾಶಯವನ್ನ ಹೊತ್ತದ್ದು ಈ 'ಆಧುನಿಕ ಪೂರ್ವ ಗದ್ಯಕೋಶ'.

ಆಧುನಿಕ ಪೂರ್ವ ಗದ್ಯದ ಒಡಲಲ್ಲಿ ದೇಸೀ ನೆಲೆಯ ಭೌಗೋಳಿಕತೆಯನ್ನ ಸಾಂಸ್ಕೃತಿಕತೆಯನ್ನ ಶೋಧಿಸುವ ಆಶಯ ಹೊತ್ತ ಪ್ರಸ್ತುತ ಕೋಶ ಪೂಜ್ಯಗುರುಗಳೂ, ನಮ್ಮ ನಾಡಿನ ಪ್ರಸಿದ್ಧ ಬರಹಗಾರರೂ ಆದ ಪ್ರೊ. ಬರಗೂರು ರಾಮಚಂದ್ರಪ್ಪನವರ ಒತ್ತಾಸೆಯ ಮೇರೆಗೆ ಸಿದ್ಧವಾದದ್ದು. ಇದನ್ನ ನಮ್ಮ ನಾಡಿನ ಪ್ರಸಿದ್ಧ ಚಿಂತಕರೂ ವಿಮರ್ಶಕರೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಅವರು ಪ್ರಕಟಿಸುವ ಜವಾಬ್ದಾರಿ ಹೊತ್ತಿದ್ದಾರೆ. ಅಲ್ಲಿಯ ಆಡಳಿತಾಧಿಕಾರಿಗಳೂ, ಸದಸ್ಯರೂ ಮತ್ತು ಸಿಬ್ಬಂದಿ ವರ್ಗದವರು - ಇವರೆಲ್ಲರಿಗೂ

ನಾನು ಆಭಾರಿಯಾಗಿರುವೆ. ಪ್ರಕಟಣೆಯ ವಿವಿಧ ಹಂತಗಳಲ್ಲಿ ಹಿರಿಯ ಸಾಹಿತಿಗಳಾದ ಪ್ರೊ. ಹಂಪನಾ, ಡಾ. ರಾಗೌ, ಪ್ರೊ. ಶಿವರಾಮಯ್ಯ, ಡಾ. ಕೃಷ್ಣಮೂರ್ತಿ ಹನೂರು, ಡಾ. ರಂಗಾರೆಡ್ಡಿ ಕೋಡಿರಾಂಪುರ - ಮುಂತಾದವರು ನೆರವಾಗಿದ್ದಾರೆ. ಶ್ರೀ ರಫೀಕ್ ಸುಂದರ ರಕ್ಷಾಪುಟ ಸಿದ್ಧತೆಗೆ ಕಾರಣರಾಗಿದ್ದಾರೆ. ಶ್ರೀ ಜಿ. ಇ. ಅಜ್ಜಪ್ಪ ಇದರ ಕರಡು ತಿದ್ದುವಿಕೆಯಲ್ಲಿ ನೆರವಾಗಿದ್ದಾರೆ. ಮಾನ್ಯ ಶ್ರೀ ಡಿ. ಎನ್. ಲೋಕಪ್ಪ ಮತ್ತು ಸಿಬ್ಬಂದಿವರ್ಗ ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿದ್ದಾರೆ. ನನ್ನ ಪಾಡಿಗೆ ನಾನು ಓದು ಬರಹದಲ್ಲಿ ತೊಡಗಿಕೊಳ್ಳಲು ಸದಾ ನೆರವಾಗುತ್ತಿರುವ ನನ್ನ ಮಡದಿ ಶ್ರೀಮತಿ ಜಿ. ಕಮಲಾವಾಣಿ, ಮಕ್ಕಳಾದ ಸಿಂಧು, ಬಿಂದು ಅವರನ್ನ ಮರೆಯುವಂತಿಲ್ಲ.

ಈ ಎಲ್ಲರಿಗೂ ನನ್ನ ಧನ್ಯವಾದಗಳು.

ಡಾ. ಜಿ. ಆರ್. ತಿಪ್ಪೇಸ್ವಾಮಿ

ಪ್ರಸ್ತಾವನೆ

ಬದುಕಿನ ಹಲವು ಸಂಗತಿಗಳು ನಮ್ಮ ಸಂಸ್ಕೃತಿಯ ಭಾಗವೇ ಆಗಿವೆ. ಭಾಷೆ, ನಂಬಿಕೆ, ಆಚರಣೆ ಸಂಪ್ರದಾಯಗಳು ಸಾಮಾಜಿಕ, ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಸಂಗತಿಗಳು ಸಂಸ್ಕೃತಿಯ ಅವಿಭಾಜ್ಯ ಅಂಗಗಳಾಗಿದ್ದು ಸಂದರ್ಭೋಚಿತವಾಗಿ ಸಾಹಿತ್ಯದಲ್ಲಿ ಮೂಡಿ ಬರುತ್ತವೆ. ಈ ರೀತಿ ಬರಹದ ರೂಪ ಪಡೆದ ಈ ಸಂಗತಿಗಳ ಅಸ್ತಿತ್ವವೇನು ಎಂಬುದರ ಶೋಧನೆಯೇ ಪ್ರಸ್ತುತ ಗ್ರಾಮೀಣ ಸಂಸ್ಕೃತಿ ಸಂದರ್ಭಕೋಶದ ಉದ್ದೇಶ. ಪಠ್ಯದ ಸಂದರ್ಭವನ್ನು ಹೇಳುವುದರ ಜೊತೆಗೆ ಅದು ಹುಟ್ಟಿಕೊಂಡ ಕಾಲಮಾನದ ಸಂಸ್ಕೃತಿಯ ಸಾಂದರ್ಭಿಕತೆಯನ್ನೂ ಹೇಳಬೇಕು. ಇವುಗಳ ಹಿನ್ನೆಲೆಯಲ್ಲಿ ಪ್ರಸ್ತುತ ಸಂದರ್ಭದಲ್ಲಿ ಅವುಗಳಿಗೆ ಬೆಲೆ ಕಟ್ಟಬೇಕು - ಇದು ಈ ಗ್ರಾಮೀಣ ಸಂದರ್ಭ ಕೋಶದ ಆಶಯ. ಇದನ್ನು ಅತ್ಯಂತ ಜಾಗರೂಕತೆಯಿಂದ, ಪ್ರಾಮಾಣಿಕತೆಯಿಂದ ನಿರ್ವಹಿಸಿದ್ದೇನೆಂಬ ವಿಶ್ವಾಸ ನನಗಿದೆ. ಪ್ರಾಚೀನ ಕನ್ನಡದಲ್ಲಿ ಸ್ವತಂತ್ರವಾಗಿಯೇ ಬರೆದ ಗದ್ಯ ಗ್ರಂಥಗಳು ಕೆಲವಿವೆ. ಅವುಗಳಲ್ಲಿ ಮುಖ್ಯವಾದವು ಹೀಗಿವೆ :

	ಗ್ರಂಥಕಾರ	ಕಾಲ	ಗ್ರಂಥ
೧.	ಶಿವಕೋಟ್ಯಾಚಾರ್ಯ ?	೯೦೦	ವಡ್ಡಾರಾಧನೆ
೨.	ಚಾವುಂಡರಾಯ	೯೦೮	ತ್ರಿಷಷ್ಟಿಲಕ್ಷಣ ಮಹಾಪುರಾಣ
೩.	ದುರ್ಗಸಿಂಹ	೧೦೪೦	ಪಂಚತಂತ್ರ (ಗದ್ಯ ಪ್ರಧಾನ ಚಂಪು)೩
೪.	ನಯಸೇನ	೧೧೧೨	ಧರ್ಮಾಮೃತ (ಗದ್ಯ ಪ್ರಧಾನ ಚಂಪು)
೫.	ಮಗ್ಗೆಯ ಮಾಯಿದೇವ	೧೪೩೦	ಷಟ್‌ಸ್ಥಲ ಗದ್ಯ
೬.	ಗುಬ್ಬಿಯ ಮಲ್ಲಣ್ಣ	೧೪೭೫	ವಾತುಲತಂತ್ರ ಟೀಕೆ
೭.	ನಿಜಗುಣ ಶಿವಯೋಗಿ	೧೫೦೦	ಪರಮಾರ್ಥ ಪ್ರಕಾಶಿಕೆ
೮.	ನಿಜಗುಣ ಶಿವಯೋಗಿ	೧೫೦೦	ವಿವೇಕ ಚಿಂತಾಮಣಿ
೯.	ಚಿಕದೇವರಾಜ	೧೬೭೨	ಚಿಕದೇವರಾಜ ಬಿನ್ನಪ
೧೦.	ತಿರುಮಲಾರ್ಯ	೧೬೭೨	ಚಿಕದೇವರಾಯ ವಂಶಾವಳಿ
೧೧.	ಶಾಂತಲಿಂಗದೇಶಿಕ	೧೬೭೨	ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ
೧೨.	ದೇವಚಂದ್ರ	೧೮೦೦	ರಾಜಾವಳೀ ಕಥೆ
೧೩.	ಕೆಂಪುನಾರಾಯಣ	೧೮೫೦	ಮುದ್ರಾಮಂಜೂಷ
೧೪.	ಮುದ್ದಣ	೧೯೦೦	ರಾಮಾಶ್ವಮೇಧ

ಈ ಮೇಲಿನ ಎಲ್ಲ ಆಧುನಿಕ ಪೂರ್ವದ ಗದ್ಯ ಕೃತಿಗಳನ್ನು ಶೋಧಿಸಿ ನೋಡಲಾಗಿಲ್ಲ. ಶಿವಕೋಟ್ಯಾಚಾರ್ಯ, ಚಾವುಂಡರಾಯ, ಮುದ್ದಣ, ಕೆಂಪುನಾರಾಯಣ, ತಿರುಮಲಾರ್ಯ, ದೇವಚಂದ್ರ, ಶಾಂತಲಿಂಗದೇಶಿಕ - ಇತ್ಯಾದಿ ಕವಿಗಳ ಕೃತಿಗಳನ್ನು ಪ್ರಾತಿನಿಧಿಕವಾಗಿ ಗಮನಿಸಲಾಗಿದೆ. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂದರ್ಭಗಳನ್ನು ಹುಡುಕುವ - ಪರಿಚಯಿಸುವ ಕೆಲಸ ಪ್ರಾಸಂಗಿಕವಾಗಿ ಅಲ್ಲಲ್ಲಿ ನಡೆದಿದೆ. ಆ ರೀತಿ ಪರಿಚಯಿಸುವಾಗಲೂ ಕೆಲವು ವಿದ್ವಾಂಸರು ಒಮ್ಮೊಮ್ಮೆ ವೈಭವೀಕರಿಸಿರುವುದುಂಟು. ಆದರೆ ಪ್ರಾಚೀನ ಸಂದರ್ಭಗಳ ಸಾಂಸ್ಕೃತಿಕ ವೈಶಿಷ್ಟ್ಯಗಳನ್ನು ಪರಿಚಯ ಮಾಡಿಕೊಡುವಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡ ವಿದ್ವಾಂಸರು ಪ್ರಸ್ತುತ ಸಂದರ್ಭಕ್ಕೆ ಅವುಗಳನ್ನು ಅನ್ವಯಿಸಿ ನೋಡುವ ಕ್ರಿಯೆಗೆ ಇಳಿಯಲಿಲ್ಲವೆಂಬುದನ್ನು ಗಮನಿಸಬೇಕು. ಕನ್ನಡದಲ್ಲಿ ಜಾನಪದ ಚಟುವಟಿಕೆಗಳು ಆರಂಭಗೊಂಡ ಕಾಲದಲ್ಲಿ ಜಾನಪದವನ್ನು ಸಂಗ್ರಹಿಸುವುದರ ಜೊತೆಗೆ ಮಾರ್ಗ ಮತ್ತು ದೇಸಿ ಕೃತಿಗಳಲ್ಲಿರುವ ಜಾನಪದ ಅಂಶಗಳನ್ನು ಪತ್ತೆ ಮಾಡುವ ಕೆಲಸವೂ ಕೆಲವು ಕಾಲ ಜರುಗಿತು. ಜಾನಪದದ ಬಗ್ಗೆ ಖಚಿತವಾದ ಪರಿಕಲ್ಪನೆಗಳು ಇಲ್ಲದೇ ಇದ್ದ ಆ ಕಾಲದಲ್ಲಿ ಈ ಕೆಲಸವೂ ಸಹ ಸಮಗ್ರವಾಗಿ ಜರುಗಲಿಲ್ಲ. ಇವನ್ನೆಲ್ಲ ಗಮನಿಸಿದರೆ ಪ್ರೊ. ಬರಗೂರು ರಾಮಚಂದ್ರಪ್ಪ ನವರ ಅವಧಿಯ ಸಾಹಿತ್ಯ ಅಕಾಡೆಮಿ ಹಮ್ಮಿಕೊಂಡಿದ್ದ ಈ ಯೋಜನೆ ಹೊಸ ರೀತಿಯದೆನಿಸುವುದರಲ್ಲಿ ಯಾವುದೇ ಅನುಮಾನವಿಲ್ಲ.

ಕನ್ನಡ ಸಾಹಿತ್ಯದಲ್ಲಿ ಪದ್ಯಕ್ಕಿಂತ ಮೊದಲು ಗದ್ಯವೇ ಇತ್ತೆಂದು ಹೇಳಬಹುದು. ಮಾತಿನಲ್ಲಿ 'ಗದ್ಯಪದ್ಯ' ಎಂದು ಹೇಳುವಾಗ ಗದ್ಯಕ್ಕೆ ಮೊದಲ ಮನ್ನಣೆ ದೊರೆತಿದ್ದರೂ ಕನ್ನಡದಲ್ಲಿ ಪದ್ಯ ಸಾಹಿತ್ಯ ಪಡೆದಷ್ಟು ಜನಪ್ರಿಯತೆಯನ್ನು ಗದ್ಯ ಸಾಹಿತ್ಯ ಪಡೆಯಲಿಲ್ಲ. ಗದ್ಯದಲ್ಲಿ ನಿರೂಪಿಸಬಹುದಾದ ಸಂಗತಿಗಳನ್ನು ಪದ್ಯದಲ್ಲಿಯೇ ನಿರೂಪಿಸತೊಡಗಿದರು. ಬಹುಕಾಲ ನೆನಪಿನಲ್ಲಿಟ್ಟುಕೊಳ್ಳಲು ಸುಲಭವೆಂಬುದು ಇಂಥ ಕ್ರಿಯೆಗೆ ಕಾರಣವಾಗಿದ್ದಿರಬಹುದು. ಆದ್ದರಿಂದಲೇ 'ಪದ್ಯಂ ಹೃದ್ಯಂ ಗದ್ಯಂ ವಧ್ಯಂ'- ಎಂಬ ಅಭಿರುಚಿಯ ಮಾತು ಬಂದಿತ್ತು. ಅಲ್ಲದೆ ಗದ್ಯ ಕವಿಯ ಒರೆಗಲ್ಲು ಆಗಿತ್ತು. ಅದೇನೇ ಇರಲಿ ನಮಗೆ ಲಭ್ಯವಾಗಿರುವ ಮೊಟ್ಟ ಮೊದಲ ಗದ್ಯ ಕೃತಿ 'ವಡ್ಡಾರಾಧನೆ' (ಕ್ರಿ. ಶ. ೯೨೦). ಹತ್ತನೇ ಶತಮಾನದ ಆರಂಭದಲ್ಲಿ ದೊರೆತಿರುವ ಇದೊಂದು ಕಥಾಗುಚ್ಛ. ಜೈನಧರ್ಮಕ್ಕೆ ಸಂಬಂಧಿಸಿದ ಅನೇಕ ವಿಷಯಗಳನ್ನು ಹೊರಗೆಡಹುತ್ತದೆ. ಇಲ್ಲಿನ ಗದ್ಯ ಸರಳವಾಗಿದೆ ಎನಿಸಿದರೂ ಅನೇಕ ಅರ್ಧವಾಕ್ಯಗಳ ಸರಮಾಲೆಯಿಂದ ಕೂಡಿದ್ದು ಕೊನೆ ಕಾಣದೆ ಸಾಗಿದೆ. ಮೇಲಿಂದ ಮೇಲೆ ಸಾಕಷ್ಟು ಪುನರುಕ್ತಿಗಳೂ ಗೋಚರವಾಗುತ್ತವೆ. ಇವೆಲ್ಲಕ್ಕಿಂತ ಮುಖ್ಯವಾಗಿ ತನ್ನ ಅಂತರಂಗದ ಸತ್ವದಿಂದ, ಶೈಲಿಯ ಸೊಗಸಿನಿಂದ, ದೇಸೀಯತೆಯಿಂದ, ಸರಸ ಸಂಭಾಷಣೆಗಳಿಂದ, ಸೊಗಸಾದ ನುಡಿಗಟ್ಟು, ಗಾದೆ, ಉಪಮೆ ಮಾತುಗಳಿಂದ ಇದೊಂದು ಬಹುಮುಖ್ಯ ಕೃತಿ ಎನಿಸುತ್ತದೆ. ಸಾಮಾಜಿಕ ವಿಚಾರಗಳನ್ನು ಹೇಳುವಲ್ಲಿ ಇದರ ಮಹತ್ವ ಅಡಗಿದೆ. ಕಥನಕಲೆಯಂತೂ ಇವತ್ತಿಗೂ ಆದರ್ಶವಾಗಿದೆ ಎನ್ನಬಹುದು. ದೇಶೀಯ ಪ್ರಚುರತೆ, ವಿಶಿಷ್ಟವಾದ ವ್ಯಾಕರಣ ಪ್ರಕ್ರಿಯೆಗಳು ಅಪೂರ್ವ ಪದಗಳು, ಜೀವಂತ ಮಾತುಗಾರಿಕೆ, ಅನುಭವ ಸಂಪನ್ನವಾದ ಅಭಿವ್ಯಕ್ತಿ, ಕನ್ನಡ ಸಂಸ್ಕೃತ ಪದಗಳ ಸಮತೂಕ - ಇವುಗಳಿಂದ ವಡ್ಡಾರಾಧನೆಯ ಗದ್ಯ ವಿಶಿಷ್ಟವಾದ ರೂಪ ತಾಳಿದೆ. ಹಳಗನ್ನಡ ಗದ್ಯದ ಉತ್ತಮ ಮಾದರಿಗೆ ಇದು

ಮೇಲು ಪಂಕ್ತಿಯಾಗಿದೆ.

ಹಂಪನಾ ಅವರು ಹೇಳುವಂತೆ "ವಡ್ಡಾರಾಧನೆಯ ಗದ್ಯವೆಂದರೆ ಸಂಸ್ಕೃತ ಕನ್ನಡಗಳ ಹವಣರಿತ ಹದವಾದ ಹಿತಮಿತವಾದ ಸಮ್ಮಿಳನವನ್ನು ಸಾರುವ ಉಲ್ಲಾಸಗತಿಯ ಗದ್ಯ. ಸಂಸ್ಕೃತ ಶಬ್ದ ಅದರಲ್ಲಿ ಬಂದರೂ ಅದು ತೀರ ಸಹಜವಾಗಿ ಅನಿವಾರ್ಯವಾಗಿ ಬಂದಿದೆ........ ಇದರ ಶೈಲಿ ಸೊಗಸಾದ ಕನ್ನಡಮೆನಿಪ್ಪಾ ನಾಡಿನ ದೇಸೀಶೈಲಿ. ಇದರ ಮಾತು ಕನ್ನಡಿಗರ ಮನೆ ಮಾತು. ಮೂಲ ಪ್ರಾಕೃತ ಗಾಹೆಗಳಲ್ಲಿ ಬಹುಶಃ ಅದರ ವ್ಯಾಖ್ಯಾನಗಳಲ್ಲಿ ಸಾಗುವ ಸಣ್ಣ ಸಣ್ಣ ಸೂಚನೆಗಳ ಸೂಕ್ಷ್ಮಗಳನ್ನು ವಡ್ಡಾರಾಧನಕಾರ ಅವಲಂಬಿಸಿ ಅದನ್ನು ಪರಿಷ್ಕಾರವಾಗಿ ರಸಪುಷ್ಟಿಗೊಳಿಸಿ ವಿಸ್ತರಿಸುವ ರೀತಿ ಅದ್ಭುತವಾದುದು. ಮೂಲದ ಸೂರ್ಯರಶ್ಮಿಯನ್ನು ಕಾಮನಬಿಲ್ಲನ್ನಾಗಿಸಿ ಬಿಂಬಿಸುವಲ್ಲಿ ವಡ್ಡಾರಾಧನಕಾರನ ಪ್ರಯತ್ನ ಸಾರ್ಥಕವಾಗಿದೆ". ಜೈನಧರ್ಮಕ್ಕೆ ಅಥವಾ ನಿರ್ದಿಷ್ಟ ಧರ್ಮಕ್ಕೆ ಹೊರತಾದ ಎಷ್ಟೋ ಸಂಗತಿಗಳು ಇಲ್ಲಿ ಹಾಸುಹೊಕ್ಕಾಗಿರುವುದನ್ನು ಕಾಣಬಹುದು.

ವಡ್ಡಾರಾಧನೆಯ ಕಥೆಗಳೂ ಜೈನಧರ್ಮದ ಪ್ರಚಾರಕ್ಕೆ ಬಂದಂಥವು. ಜೈನ ಧರ್ಮ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಕಾಲದಲ್ಲಿ ಈ ಗ್ರಂಥ ರಚಿಸಲ್ಪಟ್ಟಿರುವುದರಿಂದ ಆ ಧರ್ಮದ ಕಟ್ಟುಕಟ್ಟಳೆಗಳು, ಬಿಗಿ ಆಚರಣೆಗಳು ನಮಗೆ ನೇರವಾಗಿ ತಾಗುವುದರಿಂದ ಪ್ರತಿ ಹಂತದಲ್ಲೂ ಇದೊಂದು ಧಾರ್ಮಿಕ ಗ್ರಂಥ ಎನ್ನುವುದನ್ನು ಸಾಬೀತುಪಡಿಸುತ್ತದೆ. ಅಲ್ಲದೆ ಅತಿ ದೀರ್ಘವಾದ ಸಂಸ್ಕೃತ ಭೂಯಿಷ್ಠ ಸಮಾಸ ವಾಕ್ಯಗಳು, ಪ್ರಾಕೃತದ ಶ್ಲೋಕ ಗಾಹೆಗಳೂ ಪುನರಾವರ್ತನೆಯಾಗುವುದರಿಂದ ಮತ್ತು ಅವೆಲ್ಲವೂ ಒಂದಲ್ಲ ಒಂದು ವಿಧದಲ್ಲಿ ಜೈನ ವ್ಯಕ್ತಿಗಳಿಗೇ ಸಂಬಂಧಿಸಿರುವುದರಿಂದ, ಧರ್ಮದ ಬಿಸಿ ಓದುಗರಿಗೆ ತಟ್ಟುತ್ತಾ ಹೋಗುತ್ತದೆ.

ಆದರೆ ನಯಸೇನನ ಧರ್ಮಾಮೃತದ ಕತೆಗಳಲ್ಲಿ ಇಂಥ ವಾತಾವರಣ ಇಲ್ಲ. ಇಲ್ಲಿ ಎಲ್ಲಾ ಜಾತಿ, ಧರ್ಮ, ಮತಗಳಿಗೆ ಸಂಬಂಧಪಟ್ಟ ಜನರೂ ಬರುತ್ತಾರೆ. ವ್ಯಕ್ತಿಯೊಬ್ಬ ಇನ್ನೊಂದು ಜಾತಿ ಧರ್ಮಕ್ಕೆ ಸೇರಿದವರನ್ನು ಹೀಯಾಳಿಸುವುದು, ಗೇಲಿ ಮಾಡುವುದು, ಜನಪದ ಜೀವನದಲ್ಲಿರುವ ಸಾಮಾನ್ಯ ಸಂಗತಿ. ಇಂಥ ಅಂಶಗಳನ್ನು ವಡ್ಡಾರಾಧನೆಯಲ್ಲಿ ನಾವು ಕಾಣಲು ಸಾಧ್ಯವಿಲ್ಲ. ಒಂದೆರಡು ಅಪವಾದಗಳಿರಬಹುದು. ಆದರೆ ನಯಸೇನ ವ್ಯಕ್ತಿಗಳನ್ನು ನೇರವಾಗಿ ಆ ಧಾರ್ಮಿಕ ಕ್ರಿಯೆಯಲ್ಲಿ ತೊಡಗಿಸಿ ಅನುಭವಗಳನ್ನು ಪಡೆದುಕೊಂಡು ಅನಂತರ ಜೈನ ಧರ್ಮವನ್ನು ತಾನಾಗಿಯೇ ಸ್ವೀಕರಿಸುವ, ಅವನ ಹೃದಯ ಪರಿರ್ತನೆಯಾಗುವ ರೀತಿಯನ್ನು ಚಿತ್ರಿಸುತ್ತಾನೆ. (ಉದಾ : ಜಿನದತ್ತ ಶೆಟ್ಟಿ ಮತ್ತು ವಸುಭೂತಿಯ ಕತೆ). ಯಾವುದೇ ಒತ್ತಾಯ ಇರುವುದಿಲ್ಲ. ಹಾಗೆ ಪರಿವರ್ತನೆಯಾಗದಿರುವಂಥ ವ್ಯಕ್ತಿಗಳ ಬಗ್ಗೆ ಕವಿಗೆ ತಾತ್ಸಾರವಾಗಲೀ ಅಸಹ್ಯವಾಗಲೀ ಇಲ್ಲ. ಆದರೆ ಇಂಥ ಸಂಯಮವನ್ನು ಮುಂದೆ ಬಂದ ಜೈನ, ವೈದಿಕ ಕವಿಗಳು ಪ್ರಕಟಪಡಿಸುವುದಿಲ್ಲ. ಈ ದೃಷ್ಟಿಯಿಂದಲೇ ಇದೊಂದು ಧಾರ್ಮಿಕ ಕಾವ್ಯವೆಂದು ಮೇಲುನೋಟಕ್ಕೆ ಕಂಡರೂ ಎಲ್ಲ ಮತಧರ್ಮಗಳಿಗೆ ಸಮಾನ ಗೌರವ ನೀಡಿರುವುದು ಕವಿಯ ವಿಶಾಲ ಮನೋಧರ್ಮವನ್ನು ವ್ಯಕ್ತಪಡಿಸುತ್ತದೆ. ಇಂಥ ಸಮತೋಲನವನ್ನು ಕಾಯ್ದುಕೊಳ್ಳದ ಕವಿಗಳಲ್ಲಿ ತಮ್ಮ ಧರ್ಮವೇ ಶ್ರೇಷ್ಠ ಎಂಬ ಅಹಂ ಗೋಚರವಾಗುತ್ತದೆ.

ವಡ್ಡಾರಾಧನೆಯಾಗಲೀ ಪಂಪನ ಚಂಪೂ ಶೈಲಿಯ ಆದಿಪುರಾಣವಾಗಲೀ ತಮ್ಮ ಪಾಂಡಿತ್ಯ

ಪೂರ್ಣತೆಯಿಂದಾಗಿ ಜನಸಾಮಾನ್ಯರ ಬಳಿಗೆ ಹೋಗುವ ಕಾವ್ಯಗಳಾಗಲಿಲ್ಲ. ಇಲ್ಲಿ ಬರುವ ಭವಾವಳಿಗಳು, ಧಾರ್ಮಿಕ ವಿದಿ ನಿಷೇಧಗಳು, ಸೂತ್ರ ತಪ್ಪಿ ಹರಿಯುವ ವರ್ಣನೆಗಳು - ಇವೆಲ್ಲವೂ ಜೈನ ಧರ್ಮವನ್ನು ಜನರಿಗೆ ಮುಟ್ಟಿಸುವಲ್ಲಿ ವಿಫಲವಾದವು. ಆದರೆ ಎಲ್ಲಿ ಅತ್ಯಂತ ಶ್ರೇಷ್ಠ ಕವಿಗಳು ವಿಫಲರಾದರೋ ಅಲ್ಲಿ ನಯಸೇನ ಧಾರ್ಮಿಕ ದೃಷ್ಟಿಯಿಂದ ಗೆದ್ದ. ಈತನಿಗಿಂತ ಮೊದಲು ಬಂದವರೆಲ್ಲರೂ ಒಬ್ಬೊಬ್ಬ ತೀರ್ಥಂಕರನು ಕತೆಗಳನ್ನು ಹೇಳಬೇಕೆಂಬ ಹಟಕ್ಕೆ ಬಿದ್ದು ಅವನ ಭವಾವಳಿಗಳನ್ನು, ಸ್ಥಿತಿಗತಿಗಳನ್ನು ಕೇಳಿ ಪರಿನಿರ್ವಾಣವಾದುದನ್ನು ಚಿತ್ರಿಸುವಾಗ ಜೈನನಲ್ಲದ ವ್ಯಕ್ತಿಗೆ ಇಂಥ ಸಂಗತಿಗಳ ಬಗ್ಗೆ ಕಿಂಚಿತ್ತೂ ಆಸಕ್ತಿ ಉಳಿಯುವುದಿಲ್ಲ. ಆಗಮಿಕ ಕಾವ್ಯಗಳಲ್ಲಿ ಧಾರ್ಮಿಕವಾದ ಇಂಥ ಅನಿವಾರ್ಯ ನಿರ್ಬಂಧ, ಲೌಕಿಕ ಕಾವ್ಯಗಳಲ್ಲಿ ರಾಜರ ನಿರ್ಬಂಧ ಎರಡೂ ಸೇರಿಕೊಂಡು ಸಾಹಿತ್ಯವನ್ನು ಧರ್ಮವನ್ನು ಜನಸಾಮಾನ್ಯರಿಂದ ದೂರ ಕೊಂಡೊಯ್ದುವು. ಇಂಥ ಪರಿಸ್ಥಿತಿಯ ಅಪಾಯವನ್ನು ಕಂಡೇ ವೀರಶೈವ ಧರ್ಮದವರು ಜನಬಳಕೆಯ ವಚನ ಮಾಧ್ಯಮವನ್ನು ರೂಪಿಸಿಕೊಂಡದ್ದು. ಈ ವಚನಕಾರರಿಗೆ ಸಮಕಾಲೀನನಾಗಿದ್ದ ನಯಸೇನ ತೀರ್ಥಂಕರರ ಕತೆಗಳಿಗೆ, ಅಂಥ ಬೋರು ಹೊಡೆಸುವ ಭವಾವಳಿಗಳ ಕತೆಗಳಿಗೆ ಕಟ್ಟುಬೀಳದೆ ಜನಸಾಮಾನ್ಯರಲ್ಲಿ ಬೇರೂರಿದ್ದ ಜನಪದ ಕತೆಗಳನ್ನೇ ಅಲ್ಪಸ್ವಲ್ಪ ವ್ಯತ್ಯಾಸಗಳೊಂದಿಗೆ ಜೈನ ಕತೆಗಳನ್ನಾಗಿ ಮಾಡಿ ಹೇಳಹೊರಟಿದ್ದು ನೂತನ ಅಂಶವಾಗಿದೆ. (ಉದಾ : ಧನಕೀರ್ತಿ ಕಥೆ, ಚಂದ್ರಹಾಸನ ಕಥೆ). ಒಬ್ಬ ಜೈನ ಸನ್ಯಾಸಿಯಾಗಿ ಎಲ್ಲ ಧಾರ್ಮಿಕಾಚರಣೆಗಳನ್ನು ವಿಧಿವತ್ತಾಗಿ ಮಾಡಬೇಕಾಗಿದ್ದ ಸಂದರ್ಭದಲ್ಲಿ, ಅಂಥದ್ದನ್ನು ಬಿಂಬಿಸುವಂಥ ಸಂದರ್ಭದಲ್ಲಿ ನಯಸೇನ ತೀರ್ಥಂಕರರ ಕಥೆಗಳಿಗೆ ಶರಣು ಹೊಡೆದು ಜನಪದ ಶೈಲಿಯ ಕತೆಗಳನ್ನು ಆರಿಸಿಕೊಳ್ಳುವುದರ ಮೂಲಕ, ಶೈಲಿಯನ್ನು ಬದಲಾಯಿಸಿಕೊಳ್ಳುವುದರ ಮೂಲಕ ಧರ್ಮಾಮೃತವನ್ನು ನಿರೂಪಿಸಹೊರಟದ್ದು ಅವನ ಆಲೋಚನಾ ಕ್ರಮವೇ ಭಿನ್ನ ದಾರಿ ಹಿಡಿದಿತ್ತು ಎಂಬುದನ್ನು ಸಾಬೀತು ಪಡಿಸುತ್ತದೆ.

ದೇಸಿ ಸೊಗಸು ನಯಸೇನನ ಬರವಣಿಗೆಯ ಆಕರ್ಷಣೆಗಳಲ್ಲಿ ಒಂದು. ಕವಿರಾಜಮಾರ್ಗಕಾರ, (ದೇಸಿ ಬೇರೆ ಬೇರೆ ಅಪ್ಪುದರಿಂ ವಾಸುಗಿಯುಂ ಅರಿಯಲಾರದೆ ಬೇಸರಿಸುಗುಂ - ಇದು ಅಂದಿನ ಭಾಷೆಯ ಪ್ರಾದೇಶಿಕ ವ್ಯತ್ಯಾಸಗಳನ್ನು ಗುರ್ತಿಸುವಂಥದ್ದು) ಪಂಪ, (ಬಗೆ ಪೊಸ ತಪ್ಪುದಾಗಿ ಮೃದುಬಂಧದೊಳೊಂದುವುದೊಂದಿ ದೇಸಿಯೊಳ್ ಪುಗುವುದು ಪೊಕ್ಕು ಮಾರ್ಗದೊಳೆ ತಳ್ಪುದು ತಳ್ತೊಡೆ ಕಾವ್ಯಬಂಧಂ ಒಪ್ಪುಗುಂ) ರನ್ನ, (ಪೊಸದೇಸಿಯ ಬೆಡಗನ್ನು), ನಾಗವರ್ಮ (ನವರಸ ಮುಣ್ಮೆ ಮಾತು ಪೊಸತಾಗಿರೆ ದೇಸಿಯ ದೇಸಿವೆತ್ತುದಂಬ ವೊಲಿರೆ..... ಪೊಚ್ಚ ಪೊಸತಾಗೆ ಪೇಟ ಲೊಡರ್ಚಿದವನು) ಅಸಗ, ಮನಸಿಜ - ಹೀಗೆ ನಯಸೇನನ ಪೂರ್ವ ಕವಿಗಳು ಮಾರ್ಗ ಕಾವ್ಯದಲ್ಲಿ ದೇಸಿ ಕೂಡಿಕೊಂಡಾಗ ಅದರಿಂದ ಉಂಟಾಗುವ ಕಾವ್ಯದ ಕಾಂತಿಯನ್ನು ಮೆಚ್ಚಿಕೊಂಡಿದ್ದಾರೆ.

> **ಅಸಗನದೇಸಿ ಪೊನ್ನನ ಮಹೋನ್ನತಿವೆತ್ತ ಬೆಡಂಗು ಪಂಪನೊಂ**
> **ದ ಸದ್ವಸಮುಪ್ಪ ಪೂರ್ವರಸಮೆಯ್ದೆ ಗಜಾಂಕುಶ ನೊಳ್ಪುವೆತ್ತುರಂ**
> **ಜಿಸುವ ಸದರ್ಥ ದೃಷ್ಟಿ ಗುಣವರ್ಮನ ಜಾಣ್ಮೆವಿರತ್ನಸೋಜೆಕೋ**
> **ಭಿಸೆ ನೆಲಸಿರ್ಕೆ ಧಾರಿಣಿ ಮನಂಗೊಳೆ ಮತ್ಕೃತಿಯೊಳ್ನಿರಂತರಂ (೧ - ೩೯)**

ಎಂದು ನಯಸೇನ ಹೇಳಿರುವುದನ್ನು ಗಮನಿಸಿದರೆ ದೇಸಿಗೆ ಅವನು ಕೊಟ್ಟ ಪ್ರಾಧಾನ್ಯತೆಯನ್ನು ಗಮನಿಸದೆ ಇರಲಾಗದು. ಆದರೆ ಚಂಪೂ ಕಾವ್ಯ ಭಾಷೆಗೂ ಮಧ್ಯೆ ಏರ್ಪಟ್ಟಿದ್ದ, ಅದುವರೆಗಿನ ಬಿಗಿಯಾದ ಕಾವ್ಯಭಾಷೆಯ ವಿರುದ್ಧ ನಯಸೇನ ತನ್ನ ನಿಲುವನ್ನು ಕಾವ್ಯದ ಮೊದಲಲ್ಲೇ ವ್ಯಕ್ತಪಡಿಸಿರುವುದು ಆತನ ಸ್ವತಂತ್ರ ಮನೋಧರ್ಮವನ್ನು ವ್ಯಕ್ತಪಡಿಸುತ್ತದೆ.

ಸಕ್ಕದಮಂ ಪೇೞ್ವೊಡೆ ನೆಱೆ
ಸಕ್ಕದಮಂ ಪೇೞ್ಗೆ ಶುದ್ಧಗನ್ನಡದೊಳ್ ತಂ
ದಿಕ್ಕುವೆ ಸಕ್ಕದಮಂ
ತಕ್ಕುದೆ ಬೆರಸಲ್ಕೆ ಘೃತಮುಮಂ ತೈಲಮುಮಂ (೧ - ೪೨)

ನಯಸೇನ ಈ ರೀತಿ ಹೇಳಲು ಕಾರಣ ಇಷ್ಟೆ : ಕಾವ್ಯದಲ್ಲಿ ತುಂಬ ಸುಲಭವಾಗಿ ಅರ್ಥವಾಗುವಂಥ ಸಂಸ್ಕೃತ ಪದಗಳನ್ನು ಬಳಸಬೇಕೇ ವಿನಾ ಪಾಂಡಿತ್ಯ ಮೆರೆಯುವುದಕ್ಕಾಗಿ ಪ್ರತಿಭಾ ಪ್ರದರ್ಶನಕ್ಕಾಗಿ ಅವುಗಳನ್ನು ತುರುಕಬಾರದೆಂಬುದು ಆತನ ಆಶಯ. ಸಂಸ್ಕೃತ ಪದ ಬಳಕೆಯಲ್ಲಿ ಸರಳತೆಯನ್ನು ಕಾಪಾಡ್ಕಿಕೊಂಡು ಬರಬೇಕೆಂಬುದು ಆತನ ನಿಲುವು. ಭಾಷೆಯ ವಿಷಯದಲ್ಲಿ ಕವಿಗೆ ಇಂಥ ಜನಪರ ನಿಲುವು ಇದ್ದುದರಿಂದಲೇ ಆತ, ಪಂಡಿತ ಶೈಲಿಯಲ್ಲಿ ಕಾವ್ಯರಚನೆಗೆ ತೊಡಗುವ ನಿಲುವನ್ನು ಸಹಜವಾಗಿಯೇ ವಿರೋಧಿಸಿದ್ದು,

ಪೊಸಕನ್ನಡದಿಂ ವ್ಯಾವ
ರ್ಣಿಸುವೆಂ ಸತ್ಕೃತಿಯನೆಂದು ಕನ್ನಡಮಂ ಚಿಂ
ತಿಸಿ ಕೂಡಲಾರದಕ್ಕಟ
ಮಿಸುಕದ ಸಕ್ಕದಮನಿಕ್ಕುವವನುಂ ಕವಿಯೇ (೧ - ೪೧)

ಎಂದು ಹೇಳುವಲ್ಲೂ ಜನಸಾಮಾನ್ಯನನ್ನು ದೃಷ್ಟಿಯಲ್ಲಿಟ್ಟುಕೊಂಡು ಹೇಳಿದ್ದಾನೆ. ಸಹಜತೆ ತನ್ನ ಕಾವ್ಯದ ವಿಶಿಷ್ಟತೆ ಎಂದು ಎದೆ ತಟ್ಟಿಕೊಳ್ಳುವ ನಯಸೇನ ಅಸಹಜತೆಯಿಂದ ಪಾಂಡಿತ್ಯಪೂರ್ಣವಾಗಿ ಕೃತಿರಚನೆ ಮಾಡಿದರೆ ಅಂಥ ಕೃತಿ ಕೃತಕವಾಗಿ ಅನೇಕರ ರಸಾಸ್ವಾದನೆಯಿಂದ ವಂಚಿತವಾಗುತ್ತದೆ ಎಂಬ ಆಶಯವನ್ನು ಈ ರೀತಿ ವ್ಯಕ್ತಪಡಿಸಿದ್ದಾನೆ :

ಮಳೆಯಿಲ್ಲದ ಪೊಯ್ನೀರಿಂ
ಬೆಳೆಗುಮೆಧರೆ ಮಱುಗಿ ಕುದಿದು ಶಾಸ್ತ್ರದ ಬಲದಿಂ
ದಳಿಪಿಂ ಪೇೞ್ವೊಡೆಮದು ಕೋ
ಮಳಮಕ್ಕುಮೆ ಸಹಜಮಿಲ್ಲದಾತನ ಕಬ್ಬಂ

ಜನಭಾಷೆಯನ್ನು ಕಾವ್ಯಭಾಷೆಯನ್ನಾಗಿ ರೂಢಿಸಿಕೊಂಡವರಲ್ಲಿ ನಯಸೇನ ಅಗ್ರಗಣ್ಯ. ಇದು ಆತನ ಸಾಮಾಜಿಕ ಬದುಕಿನ ಸಂಕೇತವಾಗಿದೆ. ಈತ ಒಬ್ಬ ಜೈನ ಸನ್ಯಾಸಿಯಾದರೂ ಬದುಕಿನ ನಿಕಟ ಸಂಪರ್ಕ ಪಡೆದವನು. ಈತನ ಕಾವ್ಯದಲ್ಲಿ ಕಂಡುಬರುವ ಜನರ ರೀತಿ, ನೀತಿ, ಕೌಟುಂಬಿಕ ಚಿತ್ರಣ, ವ್ಯಾಪಾರ, ವ್ಯವಸಾಯ, ಬೇರೆ ಬೇರೆ ಜಾತಿಗಳ ವಿವರ, ಕಸುಬುಗಳು, ಆಡಳಿತವರ್ಗದ ವಿವರ,

ಮಂತ್ರ, ತಂತ್ರ, ಐಂದ್ರಜಾಲಿಕ ವಿದ್ಯೆ, ನಂಬಿಕೆ, ಆಚರಣೆ, ಪಶು ಪಕ್ಷಿ ಪ್ರಾಣಿಗಳ ವಿವರ ಇವೆಲ್ಲವುಗಳನ್ನು ಗಮನಿಸಿದರೆ ನಯಸೇನನಿಗಿರುವಷ್ಟು ಅಪಾರವಾದ ಲೋಕಾನುಭವ ಕನ್ನಡ ಕವಿಗಳಲ್ಲಿ ಅನೇಕರಿಗಿಲ್ಲವೆಂದೇ ಹೇಳಬಹುದು. ತನ್ನ ಚಂಪೂ ಕಾವ್ಯದಲ್ಲಿ ಬಳಸಿ ಪರಂಪರಾಗತವಾದ ಮಾರ್ಗೀಶೈಲಿಯ ಬಿಗಿಯನ್ನು ಸಡಿಲಗೊಳಿಸಿರುವುದು ಇಲ್ಲಿ ಮೆಚ್ಚಬೇಕಾದ ಸಂಗತಿ. ಆತ ಉದ್ದೇಶವನ್ನು ಸಾರುವಾಗ ಆತನ ಸಹಜ ಕೌಶಲದಿಂದ ಮೂಡಿಬಂದ ಮಾಲೋಪಮೆಗಳ ಸರಮಾಲೆಯಲ್ಲಿ ಇವೆಲ್ಲವುಗಳನ್ನು ಅಡಕಗೊಳಿಸಿರುವುದು ಆತನಿಗಿರುವ ಗಾಢವಾದ ಸಾಮಾಜಿಕ ಸಂಪರ್ಕದ ಸಂಕೇತವಾಗಿದೆ. ತನ್ನ ಕಾಲದ ಜನಜೀವನದೊಂದಿಗೆ ಈ ರೀತಿಯ ನಿಕಟ ಸಂಬಂಧ ಹೊಂದಿ ವಿಶಾಲ ವ್ಯಾಪ್ತಿಯಲ್ಲಿ ಸಾಮಾಜಿಕ ಅನುಭವಗಳನ್ನು ಅಭಿವ್ಯಕ್ತಪಡಿಸಿರುವುದರಿಂದ ಆತನೊಬ್ಬ ಬದುಕಿನ ಬಗೆಗೆ ಕಾಳಜಿ ವಹಿಸಿದ ಪ್ರಮುಖ ಕವಿಯಾಗಿಯೂ ಕಂಡುಬರುತ್ತಾನೆ. ಒಂದು ಕೃತಿ ಸಾರ್ವಕಾಲಿಕ ಮಾನ್ಯತೆ ಪಡೆಯಬೇಕಾದರೂ ಕವಿ ಬದುಕಿದ್ದ ಕಾಲದ ಸಾಮಾಜಿಕ ಜೀವನ ಚಿತ್ರಣವೂ ಅದರೊಂದಿಗೆ ಕೂಡಿಕೊಂಡಿರಬೇಕು. ಆಗ ಅದು ಹೊಸ ಅನುಭವ ಮತ್ತು ನೂತನ ದಾರಿಯೊಂದನ್ನು ಸೃಷ್ಟಿಸಿದೆ ಎಂದು ಹೇಳುತ್ತೇವೆ. ಈ ಮಾತಿಗೆ ಧರ್ಮಾಮೃತ ಕಾವ್ಯ ಉತ್ತಮ ಉದಾಹರಣೆಯಾಗಿದೆ.

ಹಳ್ಳಿ - ನಗರಗಳಲ್ಲಿ ಇದ್ದಿರಬಹುದಾದ ಕಾವಲು ವ್ಯವಸ್ಥೆ (ಜಾವದ ಕಾಪಿನವರಂತೇಟುತ್ತುಂ ೧- ೧೬೦), ಹೊಲೆಯರು ನೇಯ್ಗೆ ಕೆಲಸ ಮಾಡುತ್ತಿದ್ದದ್ದು (ಮಡಿಗಸಗಂ ಸೀರೆಗೆ ಪೊಲೆಯಂ ೯- ೧೦೮), ಅವಿವಾಹಿತ ಹುಡುಗ ಹುಡುಗಿಯರು ಹಲ್ಲುಜ್ಜಬಾರದೆಂಬ ಸಾಮಾಜಿಕ ನಿಷೇಧ (೯-೮೯), ಅತ್ತೆ ಮತ್ತು ಅಳಿಯ ಒಬ್ಬರನ್ನೊಬ್ಬರು ಮುಖ ನೋಡಬಾರದು ಎಂಬ ಕಟ್ಟಳೆ (೪-೭೭), ಮೈಲಾರನ ಭಕ್ತರು ಮೈದುಂಬಿ ಹೊಡೆದುಕೊಳ್ಳುತ್ತಿದ್ದ ಪದ್ಧತಿ (೩-೩೦೬), ಪಗರಣದಲ್ಲಿ ಗಡ್ಡ ಮೀಸೆ ಬೋಳಿಸಿಕೊಂಡು ವೇಷ ಹಾಕುತ್ತಿದ್ದ ರೀತಿ (೧೦-೬೧), ಮಾಂಸವನ್ನು ಅಡಿಗೆ ಮನೆಯಲ್ಲಿ ಬೇಯಿಸದ ಅಂಗಳ ಅಥವಾ ದನದ ಕೊಟ್ಟಿಗೆಗಳಲ್ಲಿ ಒಲೆಯೂಡಿ ಬೇಯಿಸುತ್ತಿದ್ದ ಪದ್ಧತಿ (ಇದು ಈಗಲೂ ಇದೆ) - ಇತ್ಯಾದಿ ಅಂದಿನ ಜನರಲ್ಲಿ ರೂಢಿಗತವಾಗಿ ಉಳಿದುಕೊಂಡು ಬಂದಿದ್ದ ಸಾಮಾಜಿಕ ನಡವಳಿಕೆಗಳನ್ನು ಸಂದರ್ಭಾನುಸಾರವಾಗಿ ಕೊಡುತ್ತಾ ಹೋಗಿದ್ದಾನೆ. ಇನ್ನೂ ವಿಚಿತ್ರ ಅಂದರೆ ಅಂದಿನ ಕಾಲದಲ್ಲಿ ಅಮಂಗಳಕಾರಕ ಇಲ್ಲವೇ ಕ್ಷುದ್ರವೆಂದು ಕರೆಸಿಕೊಳ್ಳುತ್ತಿದ್ದ ವಾಂತಿಯನ್ನು ಮೈಲಾರವೆಂದು (೮ - ೧೭೬) ತೊತ್ತನ್ನು ಪಿರಿಯದೇವಿ ಎಂದು, ಅಂಗಾರವಾರವನ್ನು ಮಂಗಳವಾರವೆಂದು (೧೪ - ೨೧), ಹಳೆಯ ಹೆಂಚನ್ನು ಮಂಗಳ ಎಂದು, ಎಮ್ಮೆಯನ್ನು ಮಹಾದೇವಿ ಎಂದು ಕರೆಯುತ್ತಿದ್ದ ವಿಚಿತ್ರ ರೂಢಿಗಳ ದಾಖಲೆಯೂ ಈ ಕಾವ್ಯದಲ್ಲಿ ಕಂಡುಬರುತ್ತದೆ. ಜನಜೀವನದ ಚಿತ್ರಣ ನೀಡುವ ಇಂಥ ಹಲವು ಕಾರಣಗಳಿಂದಾಗಿ ನಯಸೇನನ ಧರ್ಮಾಮೃತ ಮೇಲ್ನೋಟಕ್ಕೆ ಧಾರ್ಮಿಕ ಗ್ರಂಥ ಎನಿಸಿದರೂ ಅದರ ಅಂತರಾಳವನ್ನು ಗಮನಿಸಿದಾಗ ಅದೊಂದು ಕವಿಯ ಸಮಕಾಲೀನ ಜನಜೀವನದ ಸಾಂಸ್ಕೃತಿಕ ದಾಖಲೆ ಎನಿಸುತ್ತದೆ.

ಯಾವುದಾದರೊಂದು ವಸ್ತುವಿಗೆ ಅಥವಾ ಯಾವುದೇ ವ್ಯಕ್ತಿಯ ನಡವಳಿಕೆಯ ಸಮರ್ಥನೆಗೆ ಬಳಕೆಯಾಗಿರುವ ಮಾಲೋಪಮೆಗಳು ಧರ್ಮಾಮೃತ ಕಾವ್ಯದ ವಿಶಿಷ್ಟ ಲಕ್ಷಣವಾಗಿವೆ. ಗದ್ಯ ಭಾಗದಲ್ಲಿಯೇ ಹೆಚ್ಚಾಗಿ ಕಾಣಿಸಿಕೊಂಡಿವೆ. 'ಅಳಿಯನಂ ಕಂಡತ್ತೆಯಂತೆ' (೧೨-೫೫), 'ಕೂಸಿನಂತೆ

ಮೊಲೆಯಂ ಪತ್ತಿ' (೩-೭೫), 'ಕೊರಲ್ ಬಿಗಿದ ಕರುವಿನಂತೆ ಗೋಳಿಡುವ' (೩ - ೨೦೬), 'ಕೋಳಿಯಂತೆ ಕೆದಕುತ್ತ' (೩-೭೫), 'ನೀರಂ ಕಂಡ ಕತ್ತೆಯಂತೆ' (೧೪-೧೦೪), 'ಬೊಚ್ಚಲ್ ಪೆಱುವವಳಂತೆ ತೊಟಲುತ್ತುಂ' (೧-೧೬೦), 'ಪಲ್ಲಸಂದಿಯ ಅಡಕೆಯಂತೆ' (೯-೨೩) ಇತ್ಯಾದಿ ಜನಜೀವನದಿಂದ ಅವರ ದೈನಂದಿನ ವ್ಯವಹಾರದ ಮಾತುಕತೆಗಳಿಂದ ಎತ್ತಿ ತೆಗೆದ ಉದಾಹರಣೆಗಳು, ನಯಸೇನನ ಲೋಕಾನುಭವ ... ಜೀವನಾನುಭವ ಸೂಕ್ಷ್ಮ ಗ್ರಹಿಕೆಗೆ ಇವು ಉತ್ತಮ ಉದಾಹರಣೆಗಳಾಗಿವೆ. ಸಮ್ಯಗ್‌ದರ್ಶನ ಸಹಾಯ ವಿಲ್ಲದೆ ಮುಕ್ತಿ ಸಂಪತ್ತನ್ನು ಪಡೆಯುವೆನೆಂದು ಹೇಳುವ ದಡ್ಡನನ್ನು ಕುರಿತು ಹೇಳುವಾಗ ಕೊಡುವ ಮೂರ್ಖರ ಹೋಲಿಕೆ ನೋಡಿ : "ಸಮ್ಯಗ್‌ದರ್ಶನವಿಲ್ಲದೆ ನಿರಂತರ ಸ್ಥಾಯಿಯಪ್ಪ ಮುಕ್ತಿಶ್ರೀಯಂ ಪಡೆವೆನೆಂಬಾತಂ ಕಣ್ಣಿಲ್ಲದೆ ಕಾಣ್ಬೆನೆಂಬ, ಮಣ್ಣಿಲ್ಲದೆ ಬೆಳೆವೆನೆಂಬ, ಸತಿಯಿಲ್ಲದೆ ಸುತರಂ ಪಡೆವೆನೆಂಬ, ಮಿತಿಯಿಲ್ಲದೆ ಪರದುಗೆಯ್ವೆನೆಂಬ, ಕೇರಿಲ್ಲದೆ ಚಿತ್ರಮಂ ಬರೆವೆನೆಂಬ, ನೀರಿಲ್ಲದೆ ಕೊಳನಡುವೆನೆಂಬ, ಅಂಬಿಲ್ಲದೆ ಬೆಲ್ಪಿಡನೆಂಬ, ತೂಬಿಲ್ಲದೆ ಕೆರೆಯು ಕಟ್ಟುವೆ ಎಂಬ, ಕಾಲಿಲ್ಲದೆ ಪರಿವೆನೆಂಬ, ಕೀಲಿಲ್ಲದೆ ಪಡಿದೆಱೆವೆನೆಂಬ, ಭೈತ್ರ್ಯಮಿಲ್ಲದೆ ಸಮುದ್ರದೊಳ್ಪೋಪೆನೆಂಬ ಗೋತ್ರಮರಿಯದೆ ಕೂಸುಗುಡುವೆನೆಂಬ, ಕಿವಿಯಿಲ್ಲದೆ ಕೇಳ್ವೆನೆಂಬ, ಸವಿಯಿಲ್ಲದುಣ್ಬೆನೆಂಬ, ಧನಮಿಲ್ಲದಧಿಕನೆಂಬ, ವಾಹನ ಮಿಲ್ಲದೇರುವೆನೆಂಬ, ನಾಲಿಗೆಯಿಲ್ಲದೆ ನುಡಿವೆನೆಂಬ, ಪಱುಗೋಲಿಲ್ಲದೆ ಪೊರೆಯಂ ಪಾಯ್ವೆನೆಂಬ ಪಚ್ಚಪಸಿಯೆಗ್ಗನಂ ಪೋಲ್ಗುಂ" (೧-೬೭)

ವಸುಭೂತಿ ಎಂಬ ಬ್ರಾಹ್ಮಣನೊಬ್ಬ ಹಣದಾಸೆಯಿಂದ ಜಿನದತ್ತ ಸೆಟ್ಟಿಯ ಮಾತಿನಂತೆ ವ್ರತ ಆರಂಭಿಸಿ ತಲೆಯ ಕೂದಲುಗಳನ್ನು ಕಿತ್ತುಕೊಂಡು ಕಷ್ಟಕ್ಕೀಡಾದಾಗ ವಸುಭೂತಿಯ ಮನದಲ್ಲಿ ಎದ್ದ ಭಾವನೆಗಳನ್ನು ನಯಸೇನ ಎಷ್ಟೊಂದು ಸೂಕ್ಷ್ಮವಾಗಿ ವಿವರಿಸುವ ಜಾಣ್ಮೆಯನ್ನು ತೋರುತ್ತಾನೆಂಬುದಕ್ಕೆ ಉತ್ತಮ ಉದಾಹರಣೆಯಾಗಿದೆ : "ಕುದುರೆಯೇರ್ದ ಕುಱುಂಬನಂತೆ ನಡ್ಕಗುತ್ತುಂ ಪೆಣನಂ ಕಂಡ ಪಂದೆಯಂತೆ ಕಣ್ಣಂ ಮುಚ್ಚುತ್ತುಂ ಬಿನ್ನಪಂಗೆಯ್ವ ವೊಕ್ಕಲಿಗನಂತೆ ಸುಯ್ಯುತ್ತುಂ ಸಿಕ್ಕಿದ ಕಳ್ಳನಂತೆ ಪಲವಂ ನೆನೆ ಯುತ್ತುಂ ಗ್ರಹಪೀಡಿತನಂತೆ ತೊನೆಯುತ್ತುಂ ಪೇನುಳ್ಳನಂತೆ ತಲೆಯಂ ತುಱಿಸುತ್ತುಂ ಕೆಱು ಸತ್ತಾವಿನಂತೆ ಮಱುಗುತ್ತುಂ ತಾಯ್ ಸತ್ತ ಶಿಶುವಿನಂತೆ ಬಾಯ್ಬಿಡುತ್ತುಂ ಕೆಸರೋಳು ಬಿಟ್ಟನಂತೆ ಮಿಡುಕುತ್ತುಂ ಮಗನಿಲ್ಲದರ್ಥ ಪತಿಯಂತೆ ಬೆದೆ ಬೆದೆ ಬೇಯುತ್ತುಂ ಸೂಲವೇರಿದನಂತೆ ಕಾಲಂ ನೀಡುತ್ತುಂ ಕೂಚ್ಚಿಡೆಮದನಂತೆ ಬಂಬಲ್ವಾಡುತ್ತುಂ ಮುಳ್ವೊಕ್ಕವನಂತೆ ಕುಸಿಯುತ್ತುಂ ಸೂಲೆಯುಳ್ಳವನಂತೆ ಕವಿದು ಬೇಟುತ್ತುಂ ಮೋನಂಗೊಂಡ ಚಪಳನಂತುಮ್ಮಳಿಸುತ್ತುಂ...." (೧-೧೪೪) ವಿಷಯದ ಖಚಿತತೆಗಾಗಿ ನಯಸೇನ ಚಿತ್ರಿಸಿರುವ ಇಂಥ ಮಾಲೋಪಮೆಗಳು ಧರ್ಮಾಮೃತ ಕಾವ್ಯದಲ್ಲಿ ಬಹಳಷ್ಟಿವೆ. ನಯಸೇನ ಹೆಚ್ಚಿನ ಸಂಖ್ಯೆಯ ಮಾಲೋಪಮೆಗಳನ್ನು ಕೊಟ್ಟ ಕವಿ ಎಂಬ ಮಾತು ನಮ್ಮಲ್ಲಿದೆ. ಈ ಅಂಶವೂ ಧರ್ಮಾಮೃತ ಕಾವ್ಯದ ನಾವೀನ್ಯಗಳಲ್ಲಿ ಒಂದಾಗಿವೆ.

ಗದ್ಯಶೈಲಿ ಧರ್ಮಾಮೃತದ ಇನ್ನೊಂದು ವೈಶಿಷ್ಟ್ಯ. ವಡ್ಡಾರಾದನೆಯಂಥ ಪೂರ್ವ ಕೃತಿಗಳ ಪ್ರಭಾವ ಇದರ ಮೇಲಾಗಿದ್ದರೂ ಈ ಗದ್ಯದಲ್ಲಿ ಒಂದು ನಮೂನೆಯ ನಾವೀನ್ಯವಿದೆ. ತನ್ನ ಹಿಂದಿನ ಚಂಪೂ ಕವಿಗಳು ಗದ್ಯದಲ್ಲಿ ಬಳಸುತ್ತಿದ್ದ ದೀರ್ಘ ಸಮಾಸ ಕಾವ್ಯಾಲಂಕಾರಗಳಿಂದ ಕೂಡಿದ ಸಂಸ್ಕೃತ ಭೂಯಿಷ್ಠ ಶೈಲಿಗೆ ಬದಲಾಗಿ ಸರಳವೂ ಸುಲಲಿತವೂ ಆದ ವಾಕ್ಯಗಳಿಂದ ತುಂಬಿ ಹರಿದಿರುವುದು ಇಲ್ಲಿಯ

ವೈಶಿಷ್ಟ್ಯ. ಉದಾಹರಣೆಗಾಗಿ ಶ್ರೇಣಿಕ ಮಹಾರಾಜನು ಕೊಲ್ಲದ ವ್ರತವನ್ನು ಹೇಳಿಕೊಡಬೇಕೆಂದು ಗೌತಮಸ್ವಾಮಿಗಳನ್ನು ಕೇಳಿಕೊಂಡಾಗ ಅವರು ಸಕಲ ಜೀವಿಗಳಿಗೂ ಹಿತಕರವಾದ ಜಿನಮತವನ್ನು ಹೇಳಹೊರಟ ಮಾತುಗಳನ್ನು ನಯಸೇನ ಚಿತ್ರಿಸಿರುವ ರೀತಿ ಇದು : "ಕರೆಗೊಯ್ದ ಸೀರೆಯಂತೆ ರಾಶಿಗೆ ಬಂದಾರಂಬಂದಂತೆ ಪತ್ರಂ ಸೀಳ್ದ ಸಾಲದಂತೆ ಕೈನೀರೆಱೆದ ಮದುವೆಯಂತೆ ಫಲವಾದ ತೋಟದಂತೆ, ಕೈಗಚಿ ದೂಟದಂತೆ, ಗೆಲ್ದಂಗೊಂಡ ಕಾಳೆಗದಂತೆ ಕಾಲ್ಕಿಡಿದ ನಲ್ಲಳಂತೆ ಮೀಸೆ ಬಂದ ಜವ್ವನದಂತೆ ಪೊತ್ತಿಸಿದ ಸೊಡರಂತೆ ದರ್ಶನದೆಂಟಂಗಮೊಳಂ ಮುನ್ನ ಸಂಪೂರ್ಣವಾಗ ನೆರೆದು, ಮಾಡಿದ ಮನೆಯಂ ಪುಗುವಂತೆ ಪಣ್ಣೆದಾನೆಯನೇಱುವಂತೆ ಮಡಿಯನುಡುವಂತೆ ಸಮೇದಾಭರಣಮಂ ತುಡುವಂತ ಪರಿದಾಡುವ ಮಗನು ಮುದ್ದಾಡುವಂತೆ ಸಜ್ಜನಳಾದ ಸೂಳೆಯಂ ಸಿಂಗಾರಂಗೆಯ್ದಂತೆ ತನಗಾದೂರಂ ಸೇರುವಂತೆ ಹಿತವಂಗೆ ಕಾರ್ಯಮಾನಱಿಪುವಂತೆ ಬುದ್ಧಿವಂತನಪ್ಪವುಗಂಗೆ ತನಗಾದೂರಂ ಸೇರುವಂತೆ ಹಿತವಂಗೆ ಕಾರ್ಯಮನಪ್ಪುವಂತೆ ಬುದ್ಧಿವಂತನಪ್ಪನಂಗೆ ಬಯ್ಕೆಯಂ ತೋಱುವಂತೆ ಕೇಡಿಂಗಂ ಬಡತನಕ್ಕಮಪ್ಪ ಪೆಂಡತಿಗೆ ಮನೆವಾರ್ತೆಯಂ ನುಡಿವಂತೆ ಕೊಲ್ಲದ ವ್ರತಮಂ ಕೈಕೊಂಡು" (೧೦-೨೧)- ಹೀಗೆ ಮುಂದುವರಿಯುವ ಇಂಥ ಉಪಮೆಗಳು. ಯಥೇಚ್ಛವಾಗಿ ಕಂಡುಬರುತ್ತವೆ. ನಯಸೇನನ ಗದ್ಯದಲ್ಲಿ ಪೆಡುಸಾದ ಬರವಣಿಗೆಯ ಧಾಟಿಯಾಗಲೀ ಕ್ಲಿಷ್ಟಪದಗಳ ಗುಂಪುಗಳಾಗಲೀ ಕಂಡು ಬರುವುದಿಲ್ಲ.

ಅಂತೆಯೇ ಈತನ ಕತೆಗಾರಿಕೆಯ ಕಲೆಯೂ ಮೆಚ್ಚುವಂಥದ್ದು. ಜೈನ ತತ್ತ್ವಗಳು ಜನಸಾಮಾನ್ಯರಿಗೆ ಸುಲಭವಾಗಿ ಖುಶಿ ಕೊಡುವಂತಹ ಕತೆಗಳ ಮೂಲಕವೇ ಸಾಧ್ಯ ಎಂದು ನಂಬಿದವನು ನಯಸೇನ. ವಡ್ಡಾರಾಧನೆಯ ನಂತರ ಮತೀಯ ವಿಷಯಗಳ ಪ್ರಚಾರ ಮಾಧ್ಯಮವಾಗಿ ಜನಪದ ಆಶಯವುಳ್ಳ ಕತೆಗಳನ್ನು ಬಳಸಿಕೊಂಡು ಜೀವ ತುಂಬಿದವನು ನಯಸೇನನೇ ಎಂದು ಹೇಳಬಹುದು. 'ದರ್ಶನದ ಕತೆ' (ವಸುಭೂತಿ), ನಯಸೇನನ ಉತ್ತಮ ಕತೆಗಾರಿಕೆಗೆ ಉದಾಹರಣೆಯಾಗಿದೆ.

ಜೈನಧರ್ಮದ ಬಗ್ಗೆ ನಂಬಿಕೆಯಿರುವ ಮತ್ತು ಅದರ ಪಾರಾಯಣನಾದ ದಯಾಮಿತ್ರಸೆಟ್ಟಿಯ ಧರ್ಮಶ್ರವಣವನ್ನು ಕಂಡು ವಸುಭೂತಿ ಹಾಸ್ಯ ಮಾಡುವುದು, ಜೈನಧರ್ಮ ಮತ್ತು ಜೈನ ಸನ್ಯಾಸಿಗಳ ಬಗ್ಗೆ ವಸುಭೂತಿಯಲ್ಲಿ ಮನೆ ಮಾಡಿರುವ ತಾತ್ಸಾರ ಮನೋಭಾವವನ್ನು ಹೋಗಲಾಡಿಸಲು, "ಆರಂಭದಲ್ಲಿಯೂ ವ್ರತ ಸಮಾಪ್ತಿಯಲ್ಲಿಯೂ ಧೈರ್ಯದಿಂದ ತಲೆಯ ರೋಮಗಳನ್ನೆಲ್ಲ ಕೀಳಿಸಿಕೊಂಡು ನಮಗೆ ಕೊಡತಕ್ಕದ್ದು. ಆಮೇಲೆ ಗಂಭೀರವಾಗಿ ಒಂದೇ ಕಡೆ ಕುಳಿತು ಅಧ್ಯಯನ ನಿರತನಾಗಬೇಕು. ಎರಡು ತಿಂಗಳ ಕಾಲ ವಸ್ತ್ರಾಲಂಕಾರಗಳಲ್ಲಿ ಉಪೇಕ್ಷೆಯಿಂದಿದ್ದು ನಾವು ಹೇಳುವ ರೀತಿಯಲ್ಲಿ ವ್ರತವನ್ನಾಚರಿಸಬೇಕು" ಎಂದು ಹೇಳಿ ಆ ಕ್ರಿಯೆಗೆ ತೊಡಗಿಸಿದ ನಂತರ, ವಸುಭೂತಿ ಹಣದ ಆಸೆಗಾಗಿ ಪಟ್ಟ ಪಾಡನ್ನು ಈ ಕತೆ ಸ್ವಾರಸ್ಯವಾಗಿ ಹೇಳುತ್ತದೆ. ವೈದಿಕ ಮತದ ವಿಡಂಬನೆ, ವೈದಿಕನೊಬ್ಬ ಸ್ವಾನುಭವದಿಂದ ಜೈನಧರ್ಮವನ್ನು ಸ್ವೀಕರಿಸುವುದು, ಆತನ ದುರಾಸೆ ತನ್ನ ಧರ್ಮವನ್ನು ಹೀಯಾಳಿಸಿದವನಿಗೆ ಕ್ರಮಕ್ರಮವಾಗಿ ಉತ್ತರಿಸಿ ಅಂಥವನ ಮನಸ್ಸನ್ನು ಪರಿವರ್ತಿಸುವುದು - ಇವೆಲ್ಲವೂ ನಮ್ಮ ಸುತ್ತಿನ ಗಾದೆ - ಹೋಲಿಕೆ, ಸೂಕ್ತಿಗಳ ಮೂಲಕ ಸುಲಭ ಗ್ರಾಹ್ಯವಾಗುವಂತೆ ಅಭಿವ್ಯಕ್ತಗೊಳಿಸಿರುವುದು ನಯಸೇನನ ಉತ್ತಮ ಕತೆಗಾರಿಕೆಯ ಲಕ್ಷಣಗಳಾಗಿವೆ.

ಕಳ್ಳತನ ಮಾಡಿದವನನ್ನು ಪತ್ತೆ ಮಾಡಲು ಕತೆಯ ಒಳಗೊಂದು ಕತೆ ಹೇಳುವ ತಂತ್ರವನ್ನು

ಬಳಸಿರುವುದು ಉಂಟು. ಸತ್ಯವ್ರತದ ಕತೆ ಈ ದೃಷ್ಟಿಯಲ್ಲಿ ಕಲಾತ್ಮಕವೆನಿಸುತ್ತದೆ. ಚಿನ್ನ ಕದ್ದವನು ಜಿನಪಾಲಿತ ಮುನಿ ಎಂದು ಅನುಮಾನಿಸಿ ಆತನನ್ನು ನೇರವಾಗಿ ಪ್ರಶ್ನಿಸದ ಜಿನದತ್ತಸೆಟ್ಟಿ, ಸತ್ಕರಿಸಿದವರಿಗೇ ವಂಚನೆ ಮಾಡುವ ವಂಚಕರ ಕತೆಗಳನ್ನು ಹೇಳುವುದು - ತಾನು ಕಳ್ಳನಲ್ಲವೆಂಬರ್ಥದಲ್ಲಿ ನಿರಪರಾಧಿಗಳ ಮೇಲೆ ಸಂಶಯಪಟ್ಟು ಪಾಪಕ್ಕೀಡಾದವರ ಕತೆಗಳನ್ನು ಜಿನಪಾಲಿತ ಮುನಿ ಹೇಳುವುದು - ಹೀಗೆ ಏಕರೂಪದ ಆಶಯವುಳ್ಳ ಕತೆಗಳು ಒಂದರೊಳಗೊಂದು ಹುಟ್ಟಿಕೊಂಡಿವೆ. ಸ್ಪರ್ಧೆ - ಚತುರತೆ ಇವೆಲ್ಲಾ ಇಲ್ಲಿ ಕಂಡುಬರುತ್ತವೆ. ಕಳವು ಮಾಡಿದವನು ಸೆಟ್ಟಿಯ ಮಗನೇ ಎಂದು ತಿಳಿದಿದ್ದರೂ ಒಬ್ಬರಿಗೊಬ್ಬರು ಕತೆಗಳನ್ನು ಹೇಳುವುದರ ಮೂಲಕ ಅಪರಾಧಿಯನ್ನು ಹುಡುಕುವ ಜನಪದ ಶೈಲಿಯ ಮಾರ್ಗ ಕೇಳುವವರಿಗೆ ಆನಂದವನ್ನುಂಟು ಮಾಡುತ್ತದೆ. ಒಡಪುಗಳ ಮೂಲಕ ಉತ್ತರ ಕೊಡುವ ಜನಪದ ಧಾಟಿಯನ್ನು ಇದು ಹೋಲುತ್ತದೆ. ಇದು ನಯಸೇನನ ಕಥನಕಲೆಯ ವಿಶಿಷ್ಟ ತಂತ್ರವೆನ್ನಬಹುದು. ಧರ್ಮಾಮೃತದಲ್ಲಿ ಈ ಥರದ ಮಾರ್ಗವನ್ನು ನಯಸೇನ ರೂಢಿಸಿಕೊಂಡಿದ್ದಾನೆ.

ಜನಬಳಕೆಯಲ್ಲಿದ್ದ ಆಡುಮಾತು, ಗಾದೆ, ನುಡಿಗಟ್ಟು ಇತ್ಯಾದಿಗಳನ್ನು ಧರ್ಮಾಮೃತ ಕಾವ್ಯದಲ್ಲಿ ಸಂದರ್ಭಾನುಸಾರ ಸನ್ನಿವೇಶಕ್ಕೆ ತಕ್ಕಂತೆ ಬಳಸಿಕೊಳ್ಳುವುದರ ಮೂಲಕ ನಯಸೇನ ತನ್ನ ಕಾವ್ಯಕ್ಕೆ ದೇಸೀಯ ಸೊಬಗು ತಂದುಕೊಟ್ಟಿದ್ದಾನೆ. ಖೇಚರಿಯಲ್ಲ ಗೀಚರಿಯೆ (೩-೪೯), ಅಜ್ಜಂ ಪಜ್ಜಂ (೩-೫೯), ಸಿರಿಯುಂ ಗಿರಿಯುಂ ಸುಖಮುಂ ದುಃಖಮುಂ (೩-೧೬೮) ಇಂಥ ಆಡು ಮಾತಿಗೆ ಹತ್ತಿರವಾದ ಪದಗಳು, ಚಾಟು ಕಾರಿಸು (೧೦-೪೭), ಮೂವೆಡ್ಡಮಾಗು (೫-೧೩), ಪುದುಕು ನೀರುಳ್ಳು (೪-೨೪೫), ಮುಟ್ಟುಗೆಡು (೪-೨೫೭), ಸೊಪ್ಪು ಸೊವಡಾಗು (೧೨-೨೨೦) - ಮೊದಲಾದ ನುಡಿಗಟ್ಟುಗಳು, ನಾಣ್ನುಡಿಗಳು ಜೊತೆಗೆ ಹೆಚ್ಚಿನ ಸಂಖ್ಯೆ ಗಾದೆಗಳು ಇಲ್ಲಿ ಸೇರ್ಪಡೆಯಾಗಿವೆ. ಪೆಂಡತಿಗೆ ಕೂರ್ಪಾತನತ್ತೆಯೊಡನೆ ಕಿರ್ಚುಪೊಕ್ಕಂ (೧೧-೩೧), 'ಜೋಯಿಸನ ಮಗಳ್ ಪಸೆಯ ಮೇಲೆ ರಂಡೆಯಾದಳ್ (೧೨-೩೮) ಇತ್ಯಾದಿ ಕಾವ್ಯದ ದೇಸೀಸಂಪನ್ನತೆಗೆ ಸಾಕಷ್ಟು ಪುಷ್ಟಿ ಕೊಟ್ಟಿವೆ.

ಚಾವುಂಡರಾಯನನ್ನು ಕಥನ ಕವಿಗಿಂತ ಹೆಚ್ಚಾಗಿ ಗದ್ಯ ಕವಿ ಎಂದೇ ಕರೆಯುತ್ತಾರೆ. ೧೦ನೇ ಶತಮಾನದ ಗದ್ಯದ ಒಂದು ಮಾದರಿಗೆ ಈತನ 'ಚಾವುಂಡರಾಯ ಪುರಾಣ'ವನ್ನು ಹೆಸರಿಸಬಹುದು. ಅರುವತ್ತೂ ಮೂರು ಪುರಾತನರ ಕಥೆಗಳಿಂದ ಕೂಡಿದ ಇದು ಜೈನ ಧರ್ಮದ ಒಂದು ಮುಖ್ಯ ಆಕರ ಗ್ರಂಥ. ಇದರಲ್ಲಿನ ಗದ್ಯ ಶೈಲಿ ವಡ್ಡಾರಾಧನೆಯದಕ್ಕಿಂತ ಸ್ವಲ್ಪಮಟ್ಟಿಗೆ ಪ್ರೌಢವಾದುದು. ಶಾಸನಗದ್ಯ, ವಡ್ಡಾರಾಧನೆಯ ಗದ್ಯ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಒಂದು ಘಟ್ಟವಾದರೆ, ಚಾವುಂಡರಾಯ ಪುರಾಣದ ಗದ್ಯ ಮತ್ತೊಂದು ಘಟ್ಟವೆನ್ನಬಹುದು. ಕಥಾ ಗದ್ಯಕ್ಕೆ ವಡ್ಡಾರಾಧನೆಯಲ್ಲಿ ಪ್ರಾಧಾನ್ಯತೆ ಇದ್ದರೆ ಚಾವುಂಡರಾಯ ಪುರಾಣದಲ್ಲಿ ಅದರೊಂದಿಗೆ ಶಾಸ್ತ್ರೀಯ ಗದ್ಯ ಮಿಲನಗೊಂಡಿದೆ. ಇದು ಚಾವುಂಡರಾಯ ಪುರಾಣದ ಹಿರಿಮೆ. ಚಾವುಂಡರಾಯ ಪುರಾಣದ ನಂತರ ಕನ್ನಡ ಕವಿಗಳಲ್ಲಿ ಗದ್ಯದ ಬಗೆಗೆ ಒಂದು ರೀತಿಯ ಅನಾದರ ಮನೋಭಾವ ಗೋಚರವಾಯಿತು. ೧೦ನೇ ಶತಮಾನದ ನಂತರ ಬಹಳ ಕಾಲದವರೆಗೆ ಪೂರ್ಣ ಪ್ರಮಾಣದ ಗದ್ಯ ಕೃತಿಗಳು ಕಾಣಿಸಿಕೊಳ್ಳಲೇ ಇಲ್ಲ ; ಗದ್ಯ ಕಣ್ಮರೆಯಾಗಲೂ ಇಲ್ಲ. ಚಂಪೂ ಕವಿಗಳು ತಮ್ಮ ಕಾವ್ಯಗಳಲ್ಲಿ ಅಲ್ಲಲ್ಲಿ ಗದ್ಯವನ್ನು ತಂದರು. ಬಸವಣ್ಣನವರ ಕಾಲಕ್ಕೆ ಸಾಹಿತ್ಯ ಜನಬಳಕೆಯ ಮಾತಿಗಿಳಿದು ಬಿಟ್ಟಿತು. ೧೮-೧೯ನೆಯ ಶತಮಾನದಲ್ಲಿ ಕನ್ನಡ ಗದ್ಯ ಸಾಹಿತ್ಯ

ವಿಪುಲವಾಗಿ ಬೆಳೆಯಿತೆನ್ನಬಹುದು. ಈ ಸಂದರ್ಭದಲ್ಲಿ ಕಾಣಬರುವಷ್ಟು ಗದ್ಯ ಕೃತಿಗಳು ಹಿಂದೆ ಮತ್ತಾವ ಕಾಲದಲ್ಲಿಯೂ ಕಂಡುಬರುವುದಿಲ್ಲ. ಇದನ್ನು ಗದ್ಯ ಸಾಹಿತ್ಯದ ಸುವರ್ಣಯುಗವೆಂದೇ ಕರೆಯಬಹುದು. ಕಳಲೆ ನಂಜರಾಜ (೧೭೪೦) ದೇವಚಂದ್ರ (೧೭೭೧-೧೮೪೧), ಮುಮ್ಮಡಿ ಕೃಷ್ಣರಾಜ (೧೭೯೪-೧೮೬೮), ಕೆಂಪು ನಾರಾಯಣ (೧೮೨೩), ಅಳಿಯ ಲಂಗರಾಜ (೧೮೨೩-೧೮೭೪), ಮುದ್ದಣ (೧೯೦೦) - ಮೊದಲಾದ ಗದ್ಯ ಲೇಖಕರು ಈ ಕಾಲದ ಪ್ರಸಿದ್ಧರೆನ್ನಬಹುದು. ತರುವಾಯ ಒಡೆಯರ ಕಾಲದಲ್ಲಿ ಬಂದ ತಿರುಮಲಾರ್ಯನು ಗದ್ಯದಲ್ಲಿ ಹೆಚ್ಚು ಕೃತಿಗಳನ್ನು ಹೊರತಂದ. ಕೆಂಪುನಾರಾಯಣನ 'ಮುದ್ರಾಮಂಜೂಷ' ಹಳಗನ್ನಡ-ಹೊಸಗನ್ನಡಗಳ ವಿಚಿತ್ರ ಮಿಶ್ರಣವಾಗಿದೆ. ಕಥಾನಿರೂಪಣೆಗೆ ಉಚಿತವಾದ ಗದ್ಯವನ್ನಿಲ್ಲಿ ಕಾಣಬಹುದು. ಭಾಷೆ ಒಂದು ಹಂತದಿಂದ ಮತ್ತೊಂದು ಹಂತವನ್ನು ತಲುಪುತ್ತಿದ್ದ ಸಂದರ್ಭದ ಸಂದಿಗ್ಧತೆಗಳೆಲ್ಲ ಈ ಕೃತಿಯಲ್ಲಿ ಗೋಚರವಾಗಿ ಬಿಡುತ್ತವೆ. ಭಾಷೆಯಲ್ಲಿ ಸರಳವಾಗಿದ್ದು ಕುತೂಹಲವನ್ನು ಕೆರಳಿಸುತ್ತದೆ.

ಕವಿರಾಜ ಮಾರ್ಗದ ನಂತರ ಸುಮಾರು ಒಂದು ಸಾವಿರ ವರ್ಷಗಳ ಅವಧಿಯಲ್ಲಿ ಕನ್ನಡಿಗರ ಅಭಿರುಚಿ ಪದ್ಯದತ್ತಣಿಂದ ಗದ್ಯದತ್ತ ಸರಿದು ಬಂದಿತು. ಪೂರ್ಣ ಪ್ರಮಾಣದ ಗದ್ಯ ಕೃತಿಗಳು ಹುಟ್ಟಿಕೊಡವು. ಮುದ್ದಣನಂತೂ 'ಪದ್ಯಂ ವಧ್ಯಂ ಗದ್ಯಂ ಹೃದ್ಯಂ' ಎಂದು ಸಾರಿ ಎರಡು ಗದ್ಯಕೃತಿಗಳನ್ನು ರಚಿಸಿದ. 'ಅದ್ಭುತ ರಾಮಾಯಣ' ಸರಳ ಶೈಲಿಯಲ್ಲಿ ಚೊಕ್ಕವಾಗಿರುವ ಹಳಗನ್ನಡ ಗ್ರಂಥ.

ಹಳಗನ್ನಡ ಗದ್ಯದ ಜೊತೆಯಲ್ಲಿ ಅಪ್ರಜ್ಞಾಪೂರ್ವಕವಾಗಿ ಹೊಸಗನ್ನಡ ಪ್ರಯೋಗಗಳೂ ಬಂದಿವೆ. ನೀತಿಪುರಾಣವೆನಿಸುವ ಈ ಕೃತಿಯಲ್ಲಿರುವ ಕಥಾಭಾಗ ಸ್ವಲ್ಪವೇ ಆಗಿದ್ದರೂ ಹಲವು ಅದ್ಭುತಗಳು ಇದರಲ್ಲಿ ಜರುಗುತ್ತವೆ. ಇಲ್ಲಿ ಸೀತೆಗೆ ಪ್ರಾಧಾನ್ಯ. ರಾವಣನನ್ನು ಕೊಲ್ಲಲಾಗದ ರಾಮ ಯುದ್ಧದಲ್ಲಿ ಮೂರ್ಛೆ ಹೋಗುತ್ತಾನೆ. ಸೀತೆ ದುರ್ಗಿಯಾಗಿ ರಾವಣನನ್ನುಕೊಂದು ಲೋಕಕಲ್ಯಾಣವನ್ನು ಸಾಧಿಸುತ್ತಾಳೆ. ಸೀತೆಯ ಹಿಂದಿನ ಜನ್ಮ ವೃತ್ತಾಂತದ ವಿವರಗಳೂ ಸಹ ಕೃತಿಯಲ್ಲಿ ಬರುತ್ತವೆ.

ವಾರ್ದಕ ಷಟ್ಪದಿಯಲ್ಲಿ ಬರೆಯಲಾದ ಕಾವ್ಯವೇ ಮುದ್ದಣನ 'ಶ್ರೀರಾಮ ಪಟ್ಟಾಭಿಷೇಕ'. ವನವಾಸದಿಂದ ಹಿಂತಿರುಗಿ ಬಂದ ಮೇಲೆ ನಡೆದ ರಾಮನ ಪಟ್ಟಾಭಿಷೇಕದ ಕಥೆ ಇದು. ಇದರಲ್ಲಿ ಕಥೆಗಿಂತ ವರ್ಣನೆಯೇ ಹೆಚ್ಚಾಗಿದೆ. ರಾಮಬರುವುದನ್ನು ಕಾಯುತ್ತ ನಿಂತಿದ್ದ ಭರತನ ಪ್ರೀತಿ, ಉತ್ಸಾಹ, ಸಂಭ್ರಮ ಇತ್ಯಾದಿಗಳ ಚಿತ್ರ ಹೃದಯಂಗಮವಾಗಿದೆ. ರಾಮಭಕ್ತಿಗೆ ಇಲ್ಲಿ ಪ್ರಾಮುಖ್ಯತೆ ಸಂದಿದೆ. ಭಕ್ತ ಪ್ರತಿಪಾದನೆ ಮಾಡುವಷ್ಟು ಸಮುದ್ರ ವರ್ಣನೆಗಳು, ಪ್ರಾಮುಖ್ಯತೆ ಸಂದಿದೆ. ಭಕ್ತ ಪ್ರತಿಪಾದನೆ ಮಾಡುವಷ್ಟು ಸಮುದ್ರವರ್ಣನೆಗಳು, ರಾಮನೋಡಿದ ಸ್ಥಳಗಳ ವರ್ಣನೆಗಳು ಇಲ್ಲಿ ವಿಜೃಂಭಿಸಿವೆ. ಎಸ್.ವಿ. ಪರಮೇಶ್ವರ ಭಟ್ಟರು ಹೇಳುವಂತೆ "ಅದರಲ್ಲಿ ಸುಲಭತೆ ಇರುವಂತೆ ಕ್ಲಿಷ್ಟತೆಯೂ ಇರುವುದು, ಶಬ್ದ ಚಮತ್ಕಾರಗಳಿರುವಂತೆ ಅರ್ಥಚಮತ್ಕಾರಗಳೂ ಕಂಡುಬರುವುವು". ಒಟ್ಟಾರೆ ಮುದ್ದಣನ ಪ್ರತಿಭೆಗೆ ಇದು ಸಾಕ್ಷಿ ಎಂಬಂತಿದೆ.

ಆಧುನಿಕರಲ್ಲಿ ಮೊದಲಿಗನಾದ ಮುದ್ದಣ ಅನೇಕ ರೀತಿಯಿಂದ ಓದುಗರಲ್ಲಿ ಕುತೂಹಲ ಮೂಡಿಸುತ್ತಾನೆ. ಪಂಪನಿಂದ ತನ್ನ ಕಾಲದವರೆಗಿನ ಸಾಹಿತ್ಯವನ್ನು ಬಲ್ಲವನು. ಎಲ್ಲ ವಿಧದಲ್ಲೂ ಆತನ ಕಾಲ ಸಂಧಿಕಾಲವಾಗಿತ್ತು. ಪ್ರಾಚೀನ ಮಹಾಕಾವ್ಯಗಳು ಮತ್ತೆ ಕಾಣಿಸಿಕೊಳ್ಳುವ ವಾತಾವರಣ

ವಿರಲಿಲ್ಲ. ತನ್ನ ಕಾಲಕ್ಕೆ ಸಂಪೂರ್ಣವಾಗಿ ಹೊಂದಿಸಿಕೊಳ್ಳುವ ಮನಸ್ಸು ಆತನಿಗಿರಲಿಲ್ಲ. ಈ ಕಾರಣದಿಂದ ಹಳೆಯದರ ಮುಲಾಜಿಲ್ಲದೆ ಪೂರ್ಣವಾಗಿ ಹೊಸದಾಗಿ ಬರೆಯುವೆನೆಂಬ ಮನಸ್ಸು ಆತನಲ್ಲಿರಲಿಲ್ಲ. ಇಂಥ ಬಿಕ್ಕಟ್ಟಿನ ಸಂದರ್ಭದಲ್ಲಿ ಹಳೆಯ ವಸ್ತುವನ್ನು ಬೆಳೆಸಿಕೊಂಡು ಅದಕ್ಕೆ ಹೊಸ ಸ್ವರೂಪ ಕೊಡುವಲ್ಲಿ ಮಹತ್ವದ ಕವಿ ಎನಿಸಿದ. ಈತನ ಕಾವ್ಯದ 'structure ಸಾಂಪ್ರದಾಯಿಕವಾದುದೇ ಆದರೂ ಅದರ ಸೃಜನಶೀಲ ಕ್ರಿಯೆಯಲ್ಲಿ ಬಿಕ್ಕಟ್ಟಿದೆ. ತಾನು ಬರೆಯ ಹೊರಟಿರುವ ಕಾವ್ಯದ ಬಗ್ಗೆ ಕವಿಗೆ ಎಚ್ಚರವಿದೆ. ಆದರೆ ಅದನ್ನು ಕ್ರಿಯೆಯಲ್ಲಿ ತರಲು ಸಾಧ್ಯವಾಗುತ್ತಿಲ್ಲ. ಮುದ್ದಣನ ಕೃತಿಗಳಲೆಲ್ಲ ಪ್ರಮುಖವಾದುದು 'ರಾಮಾಶ್ವಮೇಧ' ಎಂಬುದು ನಿಜ. ಈ ಕೃತಿಯಲ್ಲಿ ಮುದ್ದಣನ ಪ್ರತಿಭೆ ಇನ್ನೂ ಮಿಂಚಿದೆ. ಇಲ್ಲಿಯೊ ಕವಿ 'ಪದ್ಯಂ ವಧ್ಯಂ ಗದ್ಯಂ ಹೃದ್ಯಂ' ಎಂದು ಗದ್ಯದ ಹಿರಿಮೆಯನ್ನು ಸಾರಿದ್ದಾನೆ. ಕೃತಿಯ ಆರಂಭದಲ್ಲಿ ಬರುವ ಮಳೆಗಾಲದ ವರ್ಣನೆ, ಮುದ್ದಣ ಮನೋರಮೆಯರ ಸಂಭಾಷಣಾ ಕುಶಲತೆ, ಕಥಾ ನಿರೂಪಣೆಯಲ್ಲಿನ ನಾವೀನ್ಯತೆ - ಇವೆಲ್ಲವೂ ಈತನ ಗದ್ಯ ಶೈಲಿಯ ಸೊಗಸುಗಾರಿಕೆಗೆ ಸಾಕ್ಷಿಯಾಗಿವೆ. ಹಳಗನ್ನಡ ಭಾಷೆಯನ್ನ ಹೊಸಗನ್ನಡ ಧೋರಣೆಯಲ್ಲಿ ಬಳಸಿರುವುದೇ ಮುದ್ದಣನ ವೈಶಿಷ್ಟ್ಯ.

ಇದರ ಕಥೆ ರಾಮನು ಅಗಸನೊಬ್ಬನು ಆಕ್ಷೇಪಿಸಿದನೆಂದು ಗೂಢಚಾರರಿಂದ ತಿಳಿದು ಸೀತೆಯನ್ನು ಕಾಡಿನಲ್ಲಿ ಬಿಟ್ಟದ್ದು, ವಾಲ್ಮೀಕಿ ಅವಳನ್ನು ರಕ್ಷಿಸಿದ್ದು, ರಾಮ ಅಶ್ವಮೇಧಯಾಗವನ್ನು ಮಾಡುವಾಗ ಶತ್ರುಘ್ನ ನಾಯಕನಾಗಿದ್ದು, ರಾಮನ ಸೈನ್ಯಕ್ಕೂ ರಾಮನ ಮಕ್ಕಳು ಲವಕುಶರಿಗೂ ಯುದ್ಧ ಪ್ರಾಪ್ತವಾದದ್ದು. ಕಥೆ ಹಳೆಯದೇ. ಪದ್ಮ ಪುರಾಣದಲ್ಲಿಯ ಶೇಷರಾಮಾಯಣವೇ ಇದರ ಕಥಾನಕಕ್ಕೆ ಮೂಲವಾಗಿದೆ. ಆದರೆ ಇದಕ್ಕೆ ಮುದ್ದಣ ನೀಡಿದ ಚೌಕಟ್ಟು ವಿಶಿಷ್ಟವಾದುದು. 'ಕಥೆ ಹಳೆಯದೇ ಆಗಿದ್ದರೂ ಅದರಲ್ಲಿ ಬರುವ ಮುದ್ದಣ ಮನೋರಮೆಯ ಸರಸ - ಸಂವಾದಗಳು ಅತ್ಯಾಧುನಿಕವಾಗಿ ವರ್ಣಿಸಲ್ಪಟ್ಟಿವೆ. ಈ ಎರಡು ಪಾತ್ರಗಳು ಆಧುನಿಕ ಮನಸ್ಸಿನ ಪ್ರತಿನಿಧಿಗಳಂತಿವೆ. ಮನೋರಮೆಯ ಕೋರಿಕೆಯ ಮೇರೆಗೆ ಯಾವ ಕಥೆ ಹೇಳಬೇಕೆಂದು ಮುದ್ದಣ ಕೇಳುತ್ತಿರುವಾಗ, ಯಾವಧಾಟಿಯಲ್ಲಿ ಹೇಳಬೇಕೆಂದು ಮಾತು ಬಂದಾಗ 'ಪದ್ಯಂ ವಧ್ಯಂ ಗದ್ಯಂ ಹೃದ್ಯಂ ಹೃದ್ಯಮಪ್ಪ ಗದ್ಯದೊಳೆ ಪೇಳು' ಎಂದು ಮನೋರಮೆ ತನ್ನ ಅಭಿಪ್ರಾಯ ತಿಳಿಸುತ್ತಾಳೆ. ಇದು ಸರಸ ಸಂಭಾಷಣೆ ಎನಿಸಿದರೂ ಸಮಕಾಲೀನ ಸಂದರ್ಭದ ಸಾಹಿತ್ಯರಚನೆಯನ್ನು ಕುರಿತಂತೆ ಕವಿ ವ್ಯಂಗ್ಯವಾಡಿದ್ದಾನೆ. ಈ ರೀತಿಯ ಸಂವಾದ ಕಾವ್ಯದಲ್ಲಿ ನಾಲ್ಕಾರು ಸಲ ಬರುತ್ತದೆ. 'ಸೀತಾ ಪರಿತ್ಯಾಗ'ದಂಥ ಸಮಸ್ಯೆಯನ್ನು ಈ ಎರಡು ಪಾತ್ರಗಳು ವಿಮರ್ಶೆಯ ಒರೆಗೆ ಹಚ್ಚಿ ನೋಡುತ್ತವೆ. ಸೀತೆಯನ್ನು ಕಾಡಿನಲ್ಲಿ ಉಳಿಸಿ ಮುದ್ದಣ ಅಯೋಧ್ಯೆಯ ಕಥೆ ಹೇಳುತ್ತಾನೆ. ಆಗ ಮನೋರಮೆ 'ಸುಡು ಸುಡು ನಿನ್ನ ಜನ್ನಗುದುರೆಯಂ ಆ ಕತೆಗೀಗಳೆ ಪೊಳ್ತೆ ಆಃ | ಸೀತೆಯೇನಾದಳೆಂತಿರ್ದಳೆಂದು ಪೇಳೆಯ್' ಎನ್ನುತ್ತಾಳೆ. ಇದು ಸಹೃದಯರ ಪ್ರತಿಕ್ರಿಯೆಯೆ ಆಗಿದೆ. ಯುದ್ಧ ವರ್ಣನೆಗಳು ಬಂದಾಗ ಅವಳು ತೋರಿಸುವ ಪ್ರತಿಕ್ರಿಯೆ ತೂಕಡಿಕೆ. ಕಾವ್ಯದ ಕೊನೆಯಲ್ಲಿ 'ಈಗಳ್ ಸರ್ವರುಂ ಪುರಕೆ ಬಿಜಯಂ ಗೈವರ್' ಎಂದು ಮುದ್ದಣ ಹೇಳುತ್ತಾನೆ. ಆಗ ತಕ್ಷಣ ಮನೋರಮೆ 'ಏಂ ಸೀತೆಯನಿನ್ನುಂ ಕೂಡಿಪೋಗನೆ ಉರಿದೆ ಪೋದನೆ ರಾಮಂ' ಎನ್ನುತ್ತಾಳೆ. ಹೀಗೆ ಕಾವ್ಯದ ಉದ್ದಕ್ಕೂ ಮನೋರಮೆ ಪ್ರತಿಕ್ರಿಯೆ ವ್ಯಕ್ತಪಡಿಸುತ್ತ ಸಹೃದಯರ ಪ್ರತಿನಿಧಿಯಾಗಿ ಇಡೀ ಕಾವ್ಯದ ವಿಮರ್ಶೆಯ ಭಾಗವಾಗಿ ಚಿತ್ರಿತಳಾಗಿದ್ದಾಳೆ. ಈಕೆ ಎತ್ತುವ ಪ್ರಶ್ನೆಗಳಲ್ಲಿ ರೂಢಮೂಲವಾದಂಥ ಸ್ತ್ರೀ ಬದುಕಿನ

ವಿಶ್ಲೇಷಣೆಯನ್ನು ಕಲಕುವ ಮಾನುಷನೆಲೆಯನ್ನು ಸ್ಥಾಪಿಸುವ ಪ್ರಾಮಾಣಿಕ ಪ್ರಯತ್ನ ಎದ್ದು ಕಾಣುತ್ತದೆ. 'ಸೀತಾಪರಿತ್ಯಾಗ'ದ ಸಂದರ್ಭದಲ್ಲಿ ಅವನನ್ನು ಸಮರ್ಥಿಸುವುದು ಯಾವ ಕವಿಗೂ ಕಷ್ಟ. ಮುದ್ದಣನು ಅವನಲ್ಲಿ ಮಿಕ್ಕಿದ ವಿಕಾರದರ್ಶತೆಯನ್ನು ಸಲ್ಲದ ನಿಷ್ಠುರತೆಯನ್ನು ಆರೋಪಿಸಿ ಅವನಿಗೂ ಸೀತೆಗೂ ಕೂಡಿಯೇ ಅನ್ಯಾಯ ಮಾಡಿದ್ದ ಎಂಬ ಅಭಿಪ್ರಾಯವೇನೋ ಸರಿ ಆದರೆ ಮೂಲ ಮತ್ತು ಜೈಮಿನಿಭಾರತದಲ್ಲಿ ಇಲ್ಲದ ಒಂದು ಅಂಶ ರಾಮಾಶ್ವಮೇಧದಲ್ಲಿದೆ. ಸೀತೆಯನ್ನು ಅರಣ್ಯಕ್ಕೆ ಕಳಿಸಿದ ಮೇಲೆ ಆಕೆಯ ಬದುಕೇನಾಯಿತೋ ಎಂದು ಆಕೆಯ ಮಾನಸಿಕ ಸ್ಥಿತಿಯನ್ನು ಕುರಿತು ಮರುಗುವ ಸನ್ನಿವೇಶವಿದೆ. ಈ ಬದಲಾವಣೆ ಮಾನವೀಯ ನೆಲೆಯ ಕಡೆಗೆ ಸಾಗಿದುದಾಗಿದೆ. ಈ ದೃಷ್ಟಿಯಿಂದ ಮುದ್ದಣ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಬಹಳ ಮುಖ್ಯ ಕವಿಯಾಗಿ ಕಾಣಿಸುತ್ತಾನೆ. ಮುದ್ದಣನ ತಮಾಷೆಗೆ, ಮರುಕಕ್ಕೆ, ವಿಡಂಬನೆ ವ್ಯಂಗ್ಯಗಳಿಗೆ ಬದುಕಿನ ಸಂಕಟಗಳಿಗೆ ಕಾವ್ಯದಲ್ಲಿ ಹಲವಾರು ಉದಾಹರಣೆಗಳು ಲಭ್ಯವಾಗುತ್ತವೆ. ಕಥೆಯ ತಂತ್ರದಲ್ಲಿ ಇದೊಂದು ರಮ್ಯ ರೀತಿಯಾಗಿದೆ. ಅದಕ್ಕಾಗಿಯೇ ಎಸ್. ವಿ. ರಂಗಣ್ಣನವರು ಹೇಳುವಂತೆ ಸಾಮಾನ್ಯ ಚಿತ್ರದಲ್ಲಿಯೂ ಅಲ್ಲಲ್ಲಿ ಸುವರ್ಣದ ಗೆರೆಗಳನ್ನು ನೋಡಿ ಸಂತಸಪಡಬಹುದಾಗಿದೆ. ಕನ್ನಡ ವ್ಯಾಕರಣ, ಛಂದಸ್ಸು, ಕಾವ್ಯ ನಿಘಂಟು ವ್ಯಾಖ್ಯೆ - ಇತ್ಯಾದಿ ಪ್ರಕಾರಗಳಲ್ಲಿಯೂ ಕೆಲಸ ಮಾಡಿ ಹಲವು ಸೂಚನೆಗಳನ್ನು ನೀಡಿರುವ ಮುದ್ದಣ ಸಹೃದಯ ಓದುಗರ ಗೌರವಕ್ಕೆ ಪಾತ್ರನಾಗಿದ್ದಾನೆಂದು ಹೇಳಬಹುದು.

ಈತನ 'ಶ್ರೀರಾಮ ಪಟ್ಟಾಭಿಷೇಕ'ವಂತೂ ಸಂಸ್ಕೃತ ಭೂಯಿಷ್ಠವಾದದ್ದು. ನಾನಾ ರೀತಿಯ ಶಬ್ದಾಲಂಕಾರಗಳು ಶ್ಲೇಷೆ, ಉಪಮೆ, ಉತ್ಪ್ರೇಕ್ಷೆ, ನುಡಿಗಟ್ಟು, ತಂತ್ರನಾವೀನ್ಯತೆ, ಇತ್ಯಾದಿಗಳಿಂದಾಗಿ ಯಕ್ಷಗಾನ, ಪ್ರಸಂಗಗಳಿಗಿಂತ ಗಣನೀಯ ಮಟ್ಟದಲ್ಲಿ ಆತನ ಪಾಂಡಿತ್ಯವು ವಿಜೃಂಭಿಸಿತು. ಆದರೆ ಆತನ ಗದ್ಯದಲ್ಲಿ ಮೂಡಿ ಬಂದ ಪದಗಳ ಹೊಂದಾಣಿಕೆಯಾಗಲೀ ಲಯದ ನಯಗಾರಿಕೆಯಾಗಲೀ ಪದ್ಯದಲ್ಲಿ ಗೋಚರವಾಗಲಿಲ್ಲವೆನ್ನಬಹುದು. "ಚಿಕ್ಕ ದೇವರಾಯ ವಂಶಾವಳಿ ಹಾಗೂ ಚಾವುಂಡರಾಯ ಪುರಾಣಗಳು ಮಾತ್ರ ಮುದ್ದಣನ ಗದ್ಯಕ್ಕೆ ಹತ್ತಿರವಾದ ಗದ್ಯವನ್ನೇ ಹೊಂದಿಕೊಂಡಿದ್ದು ಅಲ್ಲಲ್ಲಿ ದೇಸಿ ನುಡಿಗಟ್ಟುಗಳೂ ಬಳಕೆಯಾಗಿವೆ. ಆದರೆ ಅವುಗಳಲ್ಲಿ ವಿಷಯ ಪ್ರತಿಪಾದನೆ ವಿಧಾನ, ಸಂಸ್ಕೃತ ಕೂಡುನುಡಿಗಳ ಬಳಕೆ, ಮಾರ್ಗೀಯ ಶೈಲಿ, ಮುದ್ದಣನಂತೆ ಮೋಹಕವಲ್ಲ. ಆತನು ತಂದಿರುವ ಪದ ಗಳ ವೈವಿಧ್ಯ, ಲಾಲಿತ್ಯ, ಸೂಕ್ಷ್ಮತೆ, ಆ ಕೃತಿಗಳಲ್ಲಿ ಕಾಣಿಸಿಕೊಂಡದ್ದಕ್ಕಿಂತ ಭಿನ್ನವಾದುದೇ ಆಗಿದೆ. ಆದರೂ ಈ ಎರಡು ಕೃತಿಗಳ ಹಾದಿಯಲ್ಲಿ ಮುದ್ದಣನು ಸಾಗಿದನೆಂದೂ ಹಾಗೆ ಸಾಗುವಾಗ ಸ್ವಂತಿಕೆಯನ್ನು ಉಳಿಸಿಕೊಂಡು ಸಾಗಿದನೆಂದೂ, ಹಳಗನ್ನಡದ ವ್ಯಂಜಕತೆಯನ್ನು ಹೆಚ್ಚಿಸಿದನೆಂದೂ ತಿಳಿದುಕೊಳ್ಳ ಬಹುದು" (ಡಾ. ನಾ. ದಾಮೋದರ ಶೆಟ್ಟಿ : ಮುದ್ದಣನ ಶಬ್ದ ಪ್ರತಿಭೆ, ಕ. ಸಾ. ಪ. ಬೆಂಗಳೂರು, ೧೯೯೪)

ಇದುವರೆಗೆ ಇಂಥ ಕೆಲಸದ ರೂಪುರೇಷೆಗಳು ಮುಳಿಯ ತಿಮ್ಮಪ್ಪಯ್ಯ, ಶಂಬಾಜೋಷಿ, ಬೆಟಗೇರಿ ಕೃಷ್ಣಶರ್ಮ, ಹಂಪ. ನಾಗರಾಜಯ್ಯ, ಚಿದಾನಂದಮೂರ್ತಿ, ಎಂ. ಎಂ. ಕಲಬುರ್ಗಿ- ಮೊದಲಾದ ವಿದ್ವಾಂಸರ ಬರಹಗಳಲ್ಲಿ ವ್ಯಕ್ತವಾಗಿವೆ. ಈ ವಿದ್ವಾಂಸರ ಬರವಣಿಗೆಯು ಪ್ರಾಚೀನ ಸಂಸ್ಕೃತಿಯ ರೂಪುರೇಷೆಗಳ ಹೊಳಹುಗಳನ್ನ ಪರಿಚಯಿಸಿತಾದರೂ ಸಮಕಾಲೀನ ಸಂದರ್ಭದಲ್ಲಿಟ್ಟು ನೋಡುವ ಕೆಲಸವನ್ನು ಅಷ್ಟಾಗಿ ಮಾಡಲಿಲ್ಲ. ಪ್ರಮುಖವಾಗಿ ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ಶಿವರಾಮಯ್ಯ

ಅವರು 'ಗ್ರಾಮೀಣ ಸಾಂಸ್ಕೃತಿಕ ಸಂದರ್ಭಕೋಶ ಚಂಪುವನ್ನು ಸಿದ್ಧಪಡಿಸಿದ್ದಾರೆ. ಈ 'ಕೋಶ' ಹಳಗನ್ನಡದ ಶ್ರೇಷ್ಠ ಕವಿಗಳಾದ ಪಂಪ, ಪೊನ್ನ, ರನ್ನ, ಜನ್ನ ಮುಂತಾದವರ ಕಾವ್ಯಗಳಿಗೆ ಮಾತ್ರ ಸೀಮಿತವಾಗಿದ್ದು ಸಾಂಸ್ಕೃತಿಕ ವೈಶಿಷ್ಟ್ಯತೆಯ ಕಾವ್ಯದ ಸಾಲುಗಳನ್ನು ಆಯ್ಕೆ ಮಾಡಿಕೊಂಡು ಅವುಗಳಿಗೆ ಪಠ್ಯದ ಸಂದರ್ಭ, ಆ ಕಾಲದ ಸಾಮಾಜಿಕ, ರಾಜಕೀಯ, ಧಾರ್ಮಿಕ, ಚಾರಿತ್ರಿಕ, ಆರ್ಥಿಕ, ಸಾಂಸ್ಕೃತಿಕ ಸಂಗತಿಗಳನ್ನು ಆಧುನಿಕಕ್ಕೆ ಹೊಂದಿಸಿ ಕ್ರಮವಾಗಿ ವಿವರಣೆಗಳನ್ನ ನೀಡಿರುವುದು ಗಮನಾರ್ಹ ವಿಷಯವಾಗಿದೆ. ಇದರಲ್ಲಿ ಭಾಷಿಕ ಅಂಗಗಳು, ನಂಬಿಕೆ ಆಚರಣೆಗಳು, ಕಲೆಗಳು, ಸಮಾಜ ವ್ಯವಸ್ಥೆಯ ಒಳನೆಲೆ, ಐತಿಹ್ಯ ಮತ್ತು ಪುರಾಣಗಳು - ಎಂಬ ಐದು ಭಾಗಗಳಿವೆ. ಎಲ್ಲಾ ವಿಭಾಗಗಳಲ್ಲೂ ಒಂದು ಕ್ರಮವಿದೆ.

ಗ್ರಾಮೀಣ ಸಂಸ್ಕೃತಿ ಆಧುನಿಕತೆಯ ಪ್ರಭಾವದಿಂದ ನಶಿಸುತ್ತಿರುವ ಈ ದಿನಗಳಲ್ಲಿ ಅಲ್ಲಿಯ ನಂಬಿಕೆಗಳು, ಗಾದೆಗಳು, ಒಗಟುಗಳು, ನುಡಿಗಟ್ಟುಗಳು, ವಿಶೇಷ ಮಾತುಗಾರಿಕೆ, ಜಾನಪದ ವಲಯದ ಇವನ್ನೆಲ್ಲ ವ್ಯವಸ್ಥಿತವಾದ ರೀತಿಯಲ್ಲಿ ಸಂದರ್ಭಕ್ಕೆ ತಕ್ಕಂತೆ ಲೇಖಕರು ವಿವರಿಸಿ ತಮ್ಮ ಅನುಭವದ ವೈಶಾಲ್ಯತೆಯನ್ನ ಪ್ರಕಟಪಡಿಸಿದ್ದಾರೆ. ಒಂದೊಂದರ ವಿವರಣೆಯನ್ನು ನೋಡಿದಾಗಲೂ ಲೇಖಕರಿಗೆ ಗ್ರಾಮೀಣ ಸಂಸ್ಕೃತಿಯ ಎಷ್ಟೆಲ್ಲ ವಿಶಾಲವಾದ, ಆಳವಾದ ಬಹುಮುಖೀ ಜ್ಞಾನವಿದೆ ಎಂಬುದು ಅರಿವಿಗೆ ಬರುತ್ತದೆ. ಕೆಲವೊಂದು ಪದಗಳ ಮೂಲವು ಕನ್ನಡ ಸೋದರ ಭಾಷೆಗಳಾದ ತಮಿಳು, ತೆಲುಗುಗಳಲ್ಲಿರುವುದನ್ನು ಗುರುತಿಸಿದ್ದಾರೆ. ಹತ್ತನೇ ಶತಮಾನದ ಚಂಪೂ ಕವಿಗಳು ತಮ್ಮ ಕಾವ್ಯಗಳಲ್ಲಿ ಬಳಸಿರುವ ಮಾತುಗಳು ಕಂಪ್ಯೂಟರ್ ಯುಗದಲ್ಲೂ ಎಷ್ಟು ಪ್ರಸ್ತುತವಾಗಿವೆ, ನೈಜವಾಗಿವೆ ಎಂಬುದನ್ನು ವಿವರಿಸಿರುವ ರೀತಿಯಲ್ಲಿಯೇ ಸೊಗಸುಗಾರಿಕೆ ಇದೆ. ಚಂಪೂ ಕೃತಿಗಳನ್ನ ಓದಿದ ಯಾರಿಗೇ ಆಗಲಿ ಇಲ್ಲಿರುವ ಮಾತುಗಳು ಹೊಸದೇನೂ ಅಲ್ಲ ಎಂದೆನಿಸಿದರೂ ಶಿವರಾಮಯ್ಯ ಅವರು ಕೊಟ್ಟಿರುವಷ್ಟು ವಿವರಣೆಯನ್ನ ಯಾರೂ ಊಹಿಸಿಕೊಂಡಿರಲಾರರು. ಅಗತ್ಯಕ್ಕೆ ಮೀರಿ ವಿವರಗಳನ್ನು ಒದಗಿಸಿದ್ದಾರೆಂದೆ ನಿಸಿದರೂ ಕಾವ್ಯಾಭ್ಯಾಸಿಗಳಿಗೆ ಅನ್ಯ ಜ್ಞಾನ ಶಿಸ್ತುಗಳಿಗೆ ಇದರ ಅಗತ್ಯತೆ ಇದೆ ಎಂದು ಅನಿಸಿಬಿಡುತ್ತದೆ. ಯಾವುದೇ ಕಾಲ ಘಟ್ಟದ ಸಂಗತಿಗಳನ್ನು ಆಧುನಿಕಗೊಳಿಸುವಾಗ ಶ್ರಮ ಸಂಸ್ಕತಿಯ ಶೋಧನೆಯೇ ಅವರಿಗೆ ಮುಖ್ಯವಾಗಿ ಬಿಡುತ್ತದೆ.

ಪ್ರಸ್ತುತ ಕೋಶದ ಬರವಣಿಗೆಗೂ ಈ ಮಾತು ಅನ್ವಯವಾಗುತ್ತದೆ. ಚಂಪೂ ಕೃತಿಗಳ ಜನಜೀವನವನ್ನು ವಿವರಿಸುವಾಗ ಕರ್ನಾಟಕ ಸಂಸ್ಕೃತಿಯ ಬಗೆಗೆ ಸಹಜವಾದ ಆಪ್ತತೆಯನ್ನು ವ್ಯಕ್ತಪಡಿಸುತ್ತಾರೆ. ದೇಶೀ ಚಿಂತನೆಗೆ ಆ ಮುಖೇನ ಗ್ರಾಸ ಒದಗಿಸಿ ಬಿಡುತ್ತಾರೆ. ಚಂಪೂ ಪ್ರಕಾರಗಳ ಒಡಲಿನಿಂದ ದೇಸಿ ನೆಲೆಯ ಭೌಗೋಳಿಕತೆಯನ್ನು ಶೋಧಿಸುತ್ತಿರುವುದರಿಂದ ಕೋಶ ರಚನೆಯ ಈ ಪ್ರಯತ್ನ ಮೊದಲನೆಯದಾಗಿ ಕಾಣಿಸುತ್ತದೆ. ಜೊತೆಗೆ 'ಸಾಹಿತ್ಯವನ್ನು ಸಾಂಸ್ಕೃತಿಕ ವಿಮರ್ಶೆಯ ಮೂಲಕ ಅನ್ವಯಿಸಿಕೊಳ್ಳುವುದು, ಸಾಹಿತ್ಯ ಚಿಂತನೆಯನ್ನು ಉನ್ಮತ್ತ ಅನುಭವದಿಂದ ಜೀವನ ಅನುಭವಕ್ಕೆ ತರುವ ಸಾಂಸ್ಕೃತಿಕ ಜವಾಬ್ದಾರಿ ಇಲ್ಲಿದೆ.'

ಇದರ ಮುಂದುವರಿಕೆಯಾಗಿ ಹಾಗೂ ಇಂಥದ್ದೇ ಆಶಯವನ್ನ ಹೊತ್ತು ಹೊರ ಬಂದ ಕೃತಿ 'ಆಧುನಿಕ ಪೂರ್ವಗದ್ಯಕೋಶ'.

ಡಾ. ಜಿ.ಆರ್. ತಿಪ್ಪೇಸ್ವಾಮಿ

ಸಂಕೇತಗಳ ವಿವರ

* ವಡ್ಡಾ - ವಡ್ಡಾರಾಧನೆ
* ಮು. ಭಂಡಾರ - ಮುದ್ದಣಭಂಡಾರ
* ರಾ. ಮೇಧ ರಾಮಾಶ್ವಮೇಧ
* ಚಾವುಂಪು - ಚಾವುಂಡರಾಯ ಪುರಾಣ
* ಶ್ರೀರಾ - ಶ್ರೀರಾಮ ಪಟ್ಟಾಭಿಷೇಕ
* ಭೈರಕಾ - ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ
* ಚಿ. ವಂಶಾವಳಿ - ಚಿಕ್ಕದೇವರಾಜ ವಂಶಾವಳಿ
* ಮುದ್ರಾ - ಮುದ್ರಾಮಂಜೂಷ
* ರ. ಕ. ರತ್ನಾವತಿ ಕಲ್ಯಾಣ
* ರಾ. ಕ. ರಾಜಾವಳೀಕಥಾಸಾರ
* ಪಂ. ತಂತ್ರ - ಪಂಚತಂತ್ರ

ಪರಿವಿಡಿ

ಗ್ರಾಮೀಣ ಐತಿಹ್ಯ ಮತ್ತು ಪುರಾಣಗಳು

ವ್ಯಕ್ತಿ ಮತ್ತು ಕುಟುಂಬ

ಗ್ರಾಮ – ನಗರ – ಖೇಡ – ಖರ್ವಡ – ಮಡಂಬ

ವಡ್ಡಾರಾಧನೆಯಲ್ಲಿ ಬಹುತೇಕ ಕಡೆ ಬಳಕೆಯಾಗಿರುವ ಪದಪುಂಜಗಳಿವು. ಕೌಟಿಲ್ಯ ಬರೆದ ಅರ್ಥಶಾಸ್ತ್ರದಲ್ಲಿಯೂ ಗ್ರಾಮ, ಪುರ, ಖೇಡ, ಖರ್ವತ, ಮಡಂಬ ಪಟ್ಟಣ ಕುರಿತ ವಿವರಗಳು ದೊರಕುತ್ತವೆ. ಪಂಪನ ಆದಿಪುರಾಣವೂ ಈ ಬಗ್ಗೆ ಮಾಹಿತಿ ನೀಡುತ್ತದೆ : "ಕ್ರೋಶದ್ವಿ ಕ್ರೋಶ ಸೀಮಾ ಭಾಗ ಯೋಜನ ಪಂಚಶು ಕುಟುಂಬ.....ಸೀಮೋಪ ಲಕ್ಷಿತಂಗಳುಮಪ್ಪ ಮಹಾಗ್ರಾಮಂಗಳುಮಂ ಪೂರ್ವೋತ್ತರಾಂಭ ಪ್ಲವಂಗಳುಮಂ ನಾನಾ ಭವನ ವಿನ್ಯಾಸೋದ್ಯಾನ ಲೀಲಾ ಜಲಾಶಯಂಗಳುಮಂ ಪ್ರಧಾನ ಪುರುಷಾಧ್ಯಾಸಿತಂಗಳಪ್ಪ ಪುರಂಗಳುಮಂ ಗಿರಿಸರಿತ್ಸಂಯದ್ಧಂಗಳಪ್ಪ ಖೇಟಂಗಳುಮಂ ಉರ್ವೀಧರ ನಿರುದ್ಧಂಗಳಪ್ಪ ಖರ್ವಡಂಗಳುಮಂ ಪಂಚಶತ ಗ್ರಾಮ ಪರೀತಪಂಗಳಪ್ಪ ಮಂಡಂಬಂಗಳುಮಂ ಸಮುದ್ರೋತ್ಕೀರ್ಣ ನಿವಾಸಂಗಳಪ್ಪ ಪಟ್ಟಣಂಗಳುಮಂ ನಿಮ್ನಗಾತಟ ನಿಕಟವರ್ತಿಗಳಪ್ಪ ಮಹಾದ್ರೋಣಾ ಮುಖಂಗಳುಮಂ ಶಿಲಾವ್ಯೂಢ ಧಾನ್ಯ ಸಂಚಯೋಪಭೋಗಿ ನಿವಾಸಿಗಳಪ್ಪ ಸಂವಾಹಂಗಳುಮಂ ಪೋಷಾಕರ ಸಂಗ್ರಹಾಕರ ಗೋವ್ರಜಂಗಳು ಮಂ" (೮-೬೩)

ಮನುಷ್ಯ ಸಮುದಾಯ ವಾಸ ಮಾಡುವ ಊರನ್ನು ಗ್ರಾಮ ಎಂದೂ ಹಳ್ಳಿ ಎಂದೂ ಕರೆಯುತ್ತಾರೆ. ಭಾರತ ಹಳ್ಳಿಗಳ ನಾಡು ಎಂದೇ ಹೆಸರಾಗಿದೆ. ನೂರಕ್ಕೆ ಕಡಿಮೆ ಇಲ್ಲದೆ ಐನೂರಕ್ಕಿಂತ ಹೆಚ್ಚಾಗದೆ ಇರುವ ವ್ಯವಸಾಯಗಾರರ ಕುಟುಂಬಗಳು ವಾಸಮಾಡುವ ಪರಿಸರವಿದು. ಇದರ ಎಲ್ಲೆ ಕಟ್ಟು ಒಂದೆರಡು ಕ್ರೋಶಗಳಷ್ಟಿರುತ್ತದೆ. ಎಲ್ಲೆಯ ನಿರ್ಧಾರಕ್ಕೆ ನದಿ, ಬೆಟ್ಟ, ಕಾಡು ಇತ್ಯಾದಿಗಳನ್ನು ಆರಿಸುತ್ತಾರೆ. ನಗರ ಗ್ರಾಮಕ್ಕಿಂತ ಹಿರಿದಾದುದು. ಪಟ್ಟಣ ಎಂಬ ಹೆಸರೂ ಇದಕ್ಕಿದೆ. ರಾಜಧಾನಿ ಎಂಬರ್ಥವೂ ಇದೆ. ಎತ್ತರವಾದ ಕೋಟೆಯನ್ನುಳ್ಳ ಊರಿಗೆ 'ಖೇಡ' ಎಂದು ಕರೆಯುವುದುಂಟು. ನದಿ ಹಾಗೂ ಪರ್ವತಗಳಿಂದ ಆವರಿಸಿದ ಕಾರಣ ಸಾಕಷ್ಟು ಸುರಕ್ಷತೆ ಈ ಸ್ಥಳಕ್ಕಿರುತ್ತದೆ. ಊರ ಹೆಸರಿನ ಕೊನೆಯಲ್ಲಿ 'ಖೇಡ' ಎಂಬ ಶಬ್ದ ಸೇರಿಸಿ ಹೇಳುವುದುಂಟು.

ಹಳ್ಳಿ ಖೇಡ, ಮಾನ್ಯ ಖೇಡ, ಮಳ ಖೇಡ ಇತ್ಯಾದಿ. ಕ್ಷುಲ್ಲಕ ಪ್ರಾಕಾರವಿರುವ ಊರನ್ನು 'ಖರ್ವಡ' ಎನ್ನುತ್ತಾರೆ. ಕೌಟಿಲ್ಯ 'ದ್ವಿಶತಗ್ರಾಮ್ಯ : ಕಾರ್ವಾಟಿಕಂ' (ಅರ್ಥಶಾಸ್ತ್ರ ೨–೧) ಎಂದು ಕರೆದಿದ್ದಾನೆ. ಮಡಂಬ ಎಂದರೆ ದೂರಸ್ಥಲ, ಸೀಮಾಂತದಲ್ಲಿರುವ ಪಟ್ಟಣ ಎಂಬ ಅರ್ಥಗಳಿವೆ. ಐನೂರು ಗ್ರಾಮಗಳ ವ್ಯಾಪಾರಾದಿಗಳ ಕೇಂದ್ರ ಸ್ಥಳವನ್ನು 'ಮಡಂಬ' ವೆಂದು ಕರೆದಿದ್ದಾರೆ. 'ಪತ್ತನ' ಎಂಬುದಕ್ಕೆ ಗಾಡಿಗಳಲ್ಲಾಗಲಿ ದೋಣಿಗಳಲ್ಲಾಗಲಿ ಪ್ರಯಾಣ ಮಾಡಿ

ತಲುಪಬಹುದಾದ ಪುರ ಎಂಬ ಅರ್ಥವಿದೆ. ಪತ್ತನ ಮತ್ತು ಪುರ ಇವು ಬೇರೆ ಬೇರೆ ಎಂದೂ ರತ್ನ ಮತ್ತು ಸಂಪತ್ತು ಆಗಮಿಸುವ ಮುಖ್ಯ ಕೇಂದ್ರವಿದೆಂದೂ ಹೇಳುವುದುಂಟು. ರತ್ನ ದೊರಕುತ್ತದೆಂಬ ವಿವರಣೆ ಇಂಥದ್ದರಿಂದ ಹೊರಬಿದ್ದಿರಬಹುದು. ನಾನ್ನೂರು ಗ್ರಾಮಗಳ ಕೇಂದ್ರವೆನಿಸಿದ ಗ್ರಾಮವನ್ನು ಕೌಟಿಲ್ಯ 'ದ್ರೋಣಾಮುಖ' ವೆಂದು ಕರೆದಿದ್ದಾನೆ. ಸಮುದ್ರತಟದಲ್ಲಿರುವ ಊರು ಅಥವಾ ಬಂದರಿಗೆ 'ದ್ರೋಣಾಮುಖ' ವೆಂದು ಬೃಹತ್ ಕಥಾ ಕೋಶ ನಿರೂಪಿಸುತ್ತದೆ. ಹಂಪನಾ ಅವರು ತಮ್ಮ ವಡ್ಡಾರಾಧನೆ ಸಮಗ್ರ ಅಧ್ಯಯನದಲ್ಲಿ ಹೀಗೆ ಉಲ್ಲೇಖಿಸಿದ್ದಾರೆ: "ಮಳೆಗಾಲವನ್ನು ಬಿಟ್ಟು (ವರ್ಷಾವಾಸ) ಗ್ರೀಷ್ಮ ಮತ್ತು ಹೇಮಂತ ಋತುಗಳ ಎಂಟು ತಿಂಗಳುಗಳಲ್ಲಿ (ಮಹಾವೀರ ತೀರ್ಥಂಕರನ ಶಿಷ್ಯರು) ಭಗವಂತರು ವಿಹಾರ ಮಾಡುವ ಕ್ರಮ ಹೀಗೆ ಹಳ್ಳಿಗಳಲ್ಲಿ ಒಂದು ದಿನ, ನಗರಗಳಲ್ಲಿ ಆಯ್ದು ದಿನ ಉಳಿಯುವರು. (ಅವರು) ವಾಸೀ ಚಂದನ ಸಮಾನ ಕಲ್ಪರಾಗಿರುವರು, ಅವರಿಗೆ ಸುಖ ದುಃಖಗಳು ಸಮಾನ. ಇಹಲೋಕ ಪರಲೋಕಗಳಲ್ಲಿ ಅವರಿಗೆ ಲೋಭವಿಲ್ಲ. ಅವರಿಗೆ ಸಂಸಾರವನ್ನು ದಾಟಬೇಕಾಗಿದೆ. ಅವರು ಕರ್ಮನಾಶಕ್ಕಾಗಿ ಪ್ರಯತ್ನಿಸುವರು. ಅದರಂತೆ ವಡ್ಡಾರಾಧನೆಯಲ್ಲಿ ಅನೇಕ ಕಡೆ ಜೈನ ಯತಿಗಳು ವಿಹಾರ ಮಾಡುವ ಸಂದರ್ಭಗಳಲ್ಲಿ ಈ ನುಡಿಕಟ್ಟು ಬಳಕೆಯಾಗಿದೆ. ಇದಕ್ಕೊಂದು ಪರಂಪರೆ ಇದೆ, ಹಿನ್ನೆಲೆ ಇದೆ." ವಡ್ಡಾರಾಧನೆಯ ಕಥೆಗಳಲ್ಲಿ ತೋರಿ ಬರುವ ಗ್ರಾಮ, ಪುರ ಇತ್ಯಾದಿಗಳನ್ನು ಸುತ್ತಿ ಬರುತ್ತಿರುವ ಜಿನ ಮುನಿಗಳ ಸಮೂಹವು ಒಂದು ಸಂಸ್ಕೃತಿಯ ಸಂದರ್ಭವನ್ನು ಅರ್ಥೈಸುವುದರಲ್ಲಿ ವಿಶೇಷ ಸಹಕಾರಿಯಾಗುತ್ತವೆ.

ಗೋಮಂಡಳಂ ಕಾವೊಂ

ವಡ್ಡಾ (ಪು.೨೨)

ಸುಕುಮಾರಸ್ವಾಮಿಯ ಕಥೆಯಲ್ಲಿ ಬರುವ ವೀರಪೂರ್ಣ ಎಂಬುವವನು ಅರಸರ ಹಸುಗಳನ್ನು ಕಾಯುವವನು. ಈತನ ಕಸುಬಿನೊಂದಿಗೆ ಗೋಮಂಡೆಯ ಪ್ರಸ್ತಾಪವೂ ಇದೆ. ಗೋಮಂಡಳದೊಳಗೊಳ್ಳಿದುವಪ್ಪ ಪತ್ತು ಪಯನುಮಂ (೨೨), ಗೋವುಗಳೊಳೊಳ್ಳಿದುವಪ್ಪ ಎಮ್ಮೆಯುಂ ಪಸುಗಳುಮನಾಯ್ದು (೨೨) ಎಂಬ ಪ್ರಯೋಗಗಳಿವೆ. ಕುರಿ, ದನ ಇವುಗಳ ಹಿಂಡನ್ನು 'ಮಂಪೆ' ಎಂದೂ ಹಸುಗಳ ಹಿಂಡನ್ನು 'ಗೋಮಂದೆ' ಎಂದೂ ಕರೆಯುವುದುಂಟು. ಹಳ್ಳಿಗಳಲ್ಲಿ ಎಲ್ಲರೂ ತಮ್ಮ ತಮ್ಮ ಮನೆಗಳಲ್ಲಿರುವ ದನ, ಕರು, ಎಮ್ಮೆಗಳನ್ನು ಮಂದೆಗೆ ಬಿಡುತ್ತಾರೆ. ಈ ಮಂದೆಯನ್ನು ನೋಡಿಕೊಳ್ಳುವುದಕ್ಕೆಂದೇ ಊರವರು ಒಬ್ಬನನ್ನು ನೇಮಕ ಮಾಡಿರುತ್ತಾರೆ. ಬೆಳಗಿನಿಂದ ಹೊತ್ತು ಮುಳುಗುವವರೆಗೆ ಕಾಯ್ದುಕೊಂಡು ಬಂದು

ಸಂಬಂಧಿಸಿದವರ ಮನೆಗೆ ಆ ಜಾನುವಾರುಗಳನ್ನು ತಲುಪಿಸುವುದು ಆತನ ಕರ್ತವ್ಯವಾಗಿರುತ್ತದೆ. ಈ ಕೆಲಸಕ್ಕಾಗಿ ಆತನಿಗೆ ಸಂಭಾವನೆಯಾಗಿ ದವಸ ಧಾನ್ಯಗಳನ್ನು ಕೊಡುವ ಪದ್ಧತಿ ಇದೆ. 'ಕುರುಬನ ಮನ್ದೆ ತೋಳ ಕಾದ ಹಾಗೆ', 'ಮನ್ದೇ ಬಳಿಗೆ ತೋಳ ಬಂದರೆ ತಂದೆ ಬಳೀಗೆ ಓಡಿ ಹೋದ', 'ತಿಂದರೆ ದಕ್ಕದು ಮನ್ದೆ ಹಣ' - ಎಂಬ ಗಾದೆ ಮಾತುಗಳು ಮಂದೆಯ ಬಗೆಗಿವೆ. ಗೋಕುಲ, ಗೋಧನ, ಗೋವ್ರಜ, ಆಕಳ ಹಿಣ್ಡು ಎಂಬ ಪ್ರಯೋಗಗಳೇ ಇವೆ.

ಭಾರತದಲ್ಲಿ ಹಸುಗಳು ಇಂದಿಗೂ ಪವಿತ್ರವಾಗಿದ್ದರೂ ಒಂದು ಕಾಲದಲ್ಲಿ ಇವು ಈಜಿಪ್ಶಿಯನ್ ಹಾಗೂ ಗ್ರೀಕೋ ರೋಮನ್ ಜನರ ಮತ ಧರ್ಮಶಾಸ್ತ್ರದಲ್ಲಿ ಗಮನಾರ್ಹವಾದ ಪ್ರಾಮುಖ್ಯವನ್ನು ಪಡೆದಿದ್ದವು. ಮಾನವಶಾಸ್ತ್ರಜ್ಞರು ಈ ಪ್ರಾಮುಖ್ಯದ ಸುಳುಹುಗಳನ್ನು ಗುರುತಿಸಿದ್ದಾರೆ. ವೇದ ಕಾಲದ ಭಾರತೀಯರು ಎತ್ತು, ಕುರಿ ಮತ್ತು ಮೇಕೆಗಳ ಮಾಂಸವನ್ನು ತಿನ್ನುತ್ತಿದ್ದರು. ಆದರೂ ಎತ್ತುಗಳಿಗೆ ಇರುವ ಬೆಲೆಯಿಂದಾಗಿ ಅವುಗಳನ್ನು ದೊಡ್ಡ ಮನರಂಜನಾ ಉತ್ಸವ ಮತ್ತು ವಿವಾಹ ಉತ್ಸಹಗಳಂತಹ ಸಂದರ್ಭದಲ್ಲಿ ಮಾತ್ರ ಕಡಿಯುತ್ತಿದ್ದರು. ಭೂಮಿ ಮತ್ತು ಹಸುವಿನ ನಡುವೆ ಇರುವ ನಿಗೂಢ ಸಂಬಂಧದ ಬಗ್ಗೆ ಋಗ್ವೇದದಲ್ಲಿ ಅನೇಕ ಸೂಚನೆಗಳಿವೆ. ಜನ್ಮಾಂತರದ ಬಗೆಗಿನ ಸಾಮಾನ್ಯ ನಿಲುವುಗಳು ರೂಪಿತವಾದ ನಂತರವೇ ಹಸುಗಳನ್ನು ಕೊಲ್ಲುವುದರ ಬಗ್ಗೆ ಅಥವಾ ಹಿಂಸಿಸುವುದರ ಬಗ್ಗೆ ನಿಷೇಧಗಳು ಜಾರಿಗೆ ಬಂದದ್ದು. ಪ್ರಾಚೀನ ಸೂತ್ರಗಳಲ್ಲಿ ಗೌರವಾನ್ವಿತ ಅತಿಥಿಗೆ ಹಸುವಿನ ಮಾಂಸದ ಭೋಜನದ ಆತಿಥ್ಯ ನೀಡಬೇಕು ಎಂದಿರುವುದು ಕೇವಲ ಔಪಚಾರಿಕ ಮಾತು ಎಂದು ಭಾವಿತವಾದರೂ ಮತ್ತು ಅದನ್ನು ಅತಿಥಿಯೂ ಔಪಚಾರಿಕವಾಗಿಯೇ ನಿರಾಕರಿಸಬೇಕಿತ್ತು ಎಂದು ಭಾವಿಸಿದರೂ ಆ ಪದ್ಧತಿ ಅದಕ್ಕೂ ಹಿಂದಿನ ಕಾಲದ ಉಳಿಕೆಯಾಗಿದ್ದಿರಬಹುದು. ಮಹಾಭಾರತದ ಕಾಲಕ್ಕೆ ಹಸುವಿನ ಪಾವಿತ್ರ್ಯತೆಗೆ ಸಂಪೂರ್ಣ ಮಾನ್ಯತೆ ದೊರಕಿತ್ತು. ಅದರ ಮಹಾ ಪರಿಶುದ್ಧತೆ ಹಾಗೂ ಹಸುಗಳನ್ನು ದಾನ ಮಾಡಿದರೆ ದೊರಕುವ ಪುಣ್ಯ ಇವು ಸ್ಥಾಪಿತವಾಗಿದ್ದುವು. ಹಾಲು, ಮೊಸರು, ತುಪ್ಪ, ಗಂಜು, ಸಗಣಿ - ಈ ಐದು ಪದಾರ್ಥಗಳು ಪರಿಶುದ್ಧವಾಗಿದ್ದು, ಅವುಗಳನ್ನು ಶುದ್ಧೀಕರಣ ಸಮಾರಂಭಗಳಲ್ಲಿ ಬಳಸಲಾಗುತ್ತದೆ.

ಕೃಷ್ಣ ಹಸು ಮೇಯಿಸುವ ದೃಶ್ಯಾವಳಿ ಭಾರತೀಯರಿಗೆಲ್ಲ ತುಂಬ ಪ್ರಿಯವಾದುದಾಗಿದೆ. ಹಸುಗಳನ್ನು ದೇವಸ್ಥಾನಗಳಿಗೆ ದಾನವಾಗಿ ಕೊಡುತ್ತಿದ್ದ ಸಂಪ್ರದಾಯವು ತಮಿಳುನಾಡಿನಲ್ಲಿರುವಂತೆ ಅಲ್ಲಿಯ ಶಾಸನಗಳಿಂದ ತಿಳಿದುಬರುತ್ತದೆ. ಕರ್ನಾಟಕದಲ್ಲಿಯ ಒಂದು ಶಾಸನದಲ್ಲಿ ದೇವಸ್ಥಾನಕ್ಕೆ ಹನ್ನೆರಡು ಹಸುಗಳನ್ನು ಬಿಟ್ಟುಕೊಟ್ಟ ವಿಷಯವಿದೆ. ಹೊಸ ಮನೆಯನ್ನು ಈಗಲೂ ಮನುಷ್ಯರಿಗಿಂತ ಮೊದಲು ಹಸುವೇ ಪ್ರವೇಶಿಸಬೇಕು. ಪಾಪಿಯ ದೃಷ್ಟಿ ತಗುಲಿದರೆ ಹಸುವಿನ ಕೆಚ್ಚಲಿನಲ್ಲಿಯ ಹಾಲು ಇಂಗಿ ಹೋಗುತ್ತದೆ ಎಂಬಂಥ ನಂಬಿಕೆಗಳೂ ಕನ್ನಡನಾಡಿನಲ್ಲಿವೆ. ಸತ್ಯಕ್ಕೆ ಪ್ರತಿಮೆಯಾಗಿ ಕನ್ನಡದ ಜನಪದ ಕಥನಗೀತ ಗೋವಿನ ಹಾಡು ಎಲ್ಲರಿಗೂ ಗೊತ್ತಿರುವ ವಿಚಾರ.

. . . ಪೊಡೆ ಪಜೆಯನೆಂದು ಪಜೆಯಂ ಪೊಯ್ಸಿ

(ವಡ್ಡಾ. ಪು. ೧೯೦)

ಚಾಣಾಕ್ಯರಿಸಿಯ ಕತೆಯಲ್ಲಿ ಬರುವ ಪ್ರಸಂಗ. ಚಾಣಾಕ್ಯನು ತನ್ನ ಪ್ರತಿಜ್ಞೆ ಈಡೇರಿ, ನಂದರಾಜ್ಯ ಎಲ್ಲವೂ ವಶವಾದಾಗ ಸಂತೋಷದ ಸಂಕೇತವಾಗಿ ತಮ್ಮಟೆಯನ್ನು ಹೊಡೆಸಿ ಕುಣಿಯುತ್ತಾನೆ. ತಮಟೆ ಒಂದು ಬಗೆಯ ಚಪ್ಪಟೆಯಾದ ಚರ್ಮವಾದ್ಯ. ಹಲಗೆ ಎಂಬ ಹೆಸರೂ ಇದಕ್ಕಿದೆ. ಜನಪದ ವಾದ್ಯಗಳಲ್ಲಿ ಒಂದು. ಜನಪದ ಕಲಾ ಪ್ರದರ್ಶನ, ಹಬ್ಬ ಹರಿದಿನ, ಜಾತ್ರೆ ಉತ್ಸವಗಳ ಸಂದರ್ಭದಲ್ಲಿ ತಮ್ಮಟೆಯನ್ನು ಬಳಸುತ್ತಾರೆ. 'ಮಿಳ್ಳಿಪ ಪಟಿಯಿಗೆ ಸೂಳೈಪ ತಂಬಟಂ' (ವರ್ಧಮಾನಪುರಾಣ - ೮ - ೫೦), 'ಬೀಸುವ ಚಾಮರದ ಪೊಯ್ಯ ತಂಬಟದ. . ಸರ್ವ ಸಂಭ್ರಮದ ನಡುವೆ ಸಕಲ ಜನದಾನಂದ ರಸಂ ಮಡುಗಟ್ಟೆ' (ನಂಬಿಯಣ್ಣನ ರಗಳೆ), 'ತಾಟಿಸುವ ತಂಬಟದ. . . . ಕಾಳೆಯ ಬಿಲ್ಲುಲಿಯ ಸಡಗರ ಮೆಲ್ಲಾ ದೆಸೆಗಳಂ ಕಿವುಂಡು ವಡಿಸೆ' (ಕಬ್ಬಿಗರ ಕಾವ), 'ಪಜೆಯ ಪೆರ್ಗಾಳೆಯ ಪಳಹದ ಕೊಟಲ ತಂಬಟೆಯ... ಭೇರಿಯ ಭೂರಿ ನಿನಾದಂ ದೆಸೆ ಮುಟ್ಟೆ ಪಳಂಚಲೆಯೆ' (ರಾಮಾಶ್ವಮೇಧ) - ಇತ್ಯಾದಿ ಪ್ರಯೋಗಗಳಿರುವುದನ್ನು ಗಮನಿಸಬಹುದು. ಜನಪದ ಕಲಾ ಪ್ರದರ್ಶನದಲ್ಲಿ ಅದರಲ್ಲೂ ರಂಗನ ಕುಣಿತ, ಮಾರೀ ಕುಣಿತ ಮೊದಲಾದ ಗಂಡು ಕುಣಿತಗಳಲ್ಲಿ ತಮಟೆಯ ಪಾತ್ರ ಪ್ರಮುಖವಾದುದು. ತಮಟೆ ವಾದನ ಮಾಡುತ್ತಲೇ ನೆಲದ ಮೇಲಿನ ಸೂಜಿ ಮತ್ತಿತರ ಸೂಕ್ಷ್ಮ ವಸ್ತುಗಳನ್ನ ಕಣ್ಣಿನಿಂದ, ಬಾಯಿಂದ ಎತ್ತುವ ಪ್ರತಿಭಾವಂತ ಜನಪದ ಕಲಾವಿದರಿದ್ದಾರೆ. ಜನಪದ ಕಲೆಗಳು ವಾದ್ಯಗಳು ಬದುಕಿನ ಭಾಗವಾಗಿದ್ದರ ಬಗೆಗೆ ವಡ್ಡಾರಾಧನಕಾರನ ತಿಳಿವಳಿಕೆಯನ್ನ ಅರಿಯಲು ಇದು ಸಹಾಯವಾಗುತ್ತದೆ.

ಗಂಗೆಯೆಂಬ ಮಹಾನದಿಯ..

(ವಡ್ಡಾ. ಪು. ೪೨)

ಸುಕೌಶಳಸ್ವಾಮಿಯ ಕಥೆಯಲ್ಲಿ ಸತ್ತ ವಿದ್ಯುನ್ಮಾಳಿಯು ಸಾಗರಸೇನ ಮತ್ತು ಧರಣಿಯರಿಗೆ ಸಿದ್ಧಾರ್ಥನೆಂಬ ಹೆಸರಿನ ಮಗ ಗಂಗಾನದಿಯ ನೈರುತ್ಯ ಭಾಗದಲ್ಲಿ ಹುಟ್ಟಿದನೆಂಬ ಪ್ರಸ್ತಾಪವಿದೆ. ಈ ನದಿಯ ಬಗೆಗಿನ ಗೌರವಗಳು ಬೇರೆ ಬೇರೆ ಸಂದರ್ಭದಲ್ಲಿ ಪ್ರಕಟಗೊಂಡಿವೆ. ಗಂಗಾ ಮಹಾನದಿಯಂ ಪಾಯ್ದು (೭೨), ಗಂಗಾ ಮಹಾನದಿಯ ನಡುವೆ (೭೨) ಗಂಗೆಯಂ ಮಿಾಯಲ್ ಪೋಗಿ(೧೫) ಇತ್ಯಾದಿ ಉಲ್ಲೇಖಗಳು ವಡ್ಡಾರಾಧನೆಯಲ್ಲಿ ದೊರಕುತ್ತವೆ.

ಇದೊಂದು ಪವಿತ್ರ ಮತ್ತು ಪ್ರಸಿದ್ಧ ನದಿ. ಇದರಲ್ಲಿ ಸ್ನಾನ ಮಾಡಿದರೆ ಪಾಪ ಕಡಿಮೆಯಾಗಿ ಪುಣ್ಯಲಭಿಸುತ್ತದೆಂಬ ನಂಬಿಕೆ ಇದೆ. 'ಗಂಗೆಗೆ ಹೋಗಿ ತೆಂಗಿನ ಓಟೆ ತನ್ದ ಹಾಗೆ', 'ಗಂಗೆಗೆ ಹೋದರೂ ತಪ್ಪಿಗೇ ಮೇಲೆ ಜ್ಞಾನ' - ಇತ್ಯಾದಿ ಗಾದೆ ಮಾತುಗಳಿವೆ. 'ಗಂಗಾ ಸ್ನಾನ ತುಂಗಾ ಪಾನ' ಎಂಬ ನುಡಿಗಟ್ಟಿದೆ.

ಧರ್ಮ ಘೋಷ ಭಟಾರರ ಕಥೆಯಲ್ಲಿ (೯೫) ಗಂಗಾದೇವಿಯ ಪ್ರಸ್ತಾಪವಿದೆ. ಋಷಿ ಗಂಗಾನದಿಯ ದಡಭಾಗದಲ್ಲಿ ಮೂರ್ಛಿತರಾದಾಗ ಆರೈಕೆ ಮಾಡುವ ಸಲುವಾಗಿ ಗಂಗೆ ಬರುತ್ತಾಳೆ. ಆದರೆ ಆಕೆಯ ಆರೈಕೆಯನ್ನು ಋಷಿ ನಿರಾಕರಿಸುತ್ತಾನೆ. ಹಿಂದೂ ಪುರಾಣಗಳಲ್ಲಿ ಗಂಗೆ ಪ್ರಮುಖ ಪಾತ್ರ ವಹಿಸುತ್ತಾಳೆ.

ಅಯೋಧ್ಯಾನಗರ ವೊಡ್ಡಾ

(ವಡ್ಡಾ. ಪು. ೪೬)

ಕೋಶಲದೇಶ ಮತ್ತು ಪ್ರದೇಶಗಳ ಮುಖ್ಯ ನಗರ. ಇದನ್ನು ದೇಶವೆಂದೂ ನಗರವೆಂದೂ ಕರೆಯುವುದುಂಟು. ವಿನೀತಪುರವೆಂಬ ಹೆಸರೂ ಇದಕ್ಕಿದೆ. ಭಾರತದ ಚರಿತ್ರೆಯಲ್ಲಿ ಪುರಾಣಗಳಲ್ಲಿ ಹಾಗೂ ರಾಷ್ಟ್ರೀಯ ಮಹಾಕಾವ್ಯಗಳಲ್ಲಿ ಅಯೋಧ್ಯಾನಗರಕ್ಕೆ ವಿಶಿಷ್ಟ ಸ್ಥಾನವಿದೆ. ಪುರಾಣಗಳ ಪ್ರಕಾರ ಸೂರ್ಯವಂಶದ ದೊರೆಗಳಿಗೆ ಅಯೋಧ್ಯೆ ರಾಜಧಾನಿ ಆದರೆ ಹಸ್ತಿನಾವತಿ ಚಂದ್ರವಂಶದ ಅರಸುಗಳ ರಾಜಧಾನಿ. ಅಯೋಧ್ಯೆ ಪ್ರಕರಣ ಇನ್ನೂ ಮುಗಿಯದ ಕಥೆ ಇಂಡಿಯಾದ ಆತ್ಮಕಥೆಯ ಕೇಂದ್ರ ಬಿಂದು ಈ ನಗರ.

ಎಳ್ಳ ಗಾಣಂಗಳೊಳಿಟ್ಟಯ್ನೂರ್ವರ್ ಋಷಿಯರ್ಕಳಂ ಪಿಟೆದು ಕೊಂದನ್

(ವಡ್ಡಾ. ಪು. ೧೭೮)

ಮಹೇಂದ್ರ ದತ್ತಾಚಾರ್ಯರೇ ಮೊದಲಾದ ಅಯ್ನೂರು ರಿಸಿಗಳ ಕಥೆಯಲ್ಲಿ ವ್ಯಾಳನು ಐನೂರು ಋಷಿಯರನ್ನು ಎಳೆಸಿ ತಂದು ಎಳ್ಳಿನ ಗಾಣಗಳಿಗೆ ಹಾಕಿ ಹಿಂಡಿ ಕೊಲ್ಲುವ ಸನ್ನಿವೇಶ ಬರುತ್ತದೆ. 'ಗಾಣ' ಎಣ್ಣೆಯನ್ನು ಅಥವಾ ಕಬ್ಬಿನ ರಸವನ್ನು ತೆಗೆಯುವ ಯಂತ್ರ. ಗಾಣದಿಂದ ಎಣ್ಣೆ ತೆಗೆಯುವವನನ್ನು 'ಗಾಣಿಗ' ಎನ್ನುತ್ತಾರೆ. ಎಣ್ಣೆ ತೆಗೆಯುವ ಕಾಯಕ ಮಾಡುವ ವರ್ಗವೇ

ನಮ್ಮಲ್ಲಿದೆ. ಗಾಣ ಗ್ರಾಮ ಜೀವನದ ಪ್ರಮುಖ ಅಂಗವಾಗಿತ್ತು. ಗಾಣಕ್ಕೂ ತೆರಿಗೆಯನ್ನು ವಿಧಿಸುತ್ತಿದ್ದರು. 'ಗಾಣದೆತ್ತಿನಂತೆ' ಎಂಬ ಕನಕದಾಸರ ಕೀರ್ತನೆ ಜನಪ್ರಿಯವಾದುದು. 'ಎಣ್ಣೆ ಬರುವಾಗ ಗಾಣ ಮುರೀತು', 'ಗಾಣದೆತ್ತಿಗೆ ಗೆಜ್ಜೆಯಾಕೆ?, ಗೋಣಿಗೆ ಗವಸಣಿಗೆ ಯಾಕೆ' ಎಂಬಿತ್ಯಾದಿ ಗಾದೆ ಮಾತುಗಳಿವೆ. 'ಗಾಣಿಗನು ಈಶ್ವರನ ಕಾಣನೆಂಬುದು ಸಹಜ ಏಣಾಂಕಧರನು ಧರೆಗಿಳಿಯಲವನಿಂದ ಗಾಣವಾಡಿಸುವ' (ಸರ್ವಜ್ಞ) 'ತೆಲ್ಲಿಗರೊಯ್ದು ಗಾಣವಾಡೊಳ್ಳಿತೆನಿಸಿದ ತೈಲ ಕುಂಭ ಕೋಟಿಗಳ ತಂದರು' (ಸಿದ್ಧರಾ.೮-೫೧) ಇತ್ಯಾದಿ ಪ್ರಯೋಗಗಳಿವೆ.

ಕಾರುಣ್ಯದಿಂ ನಿಱಿಸಿ ಎಳ್ಳುಂಡೆಯನಿಕ್ಕಿದೊಡೆ

(ವಡ್ಡಾ. ಪು. ೧೬೪)

ಚಿಲಾತಪುತ್ರನ ಕತೆಯಲ್ಲಿ ಬರುವ ಪ್ರಸಂಗ. ಸಾರ್ಥಾಧಿಪತಿ ನಂದಿಮಿತ್ರನು ಉಳಿದುಕೊಂಡಿದ್ದ ಊರಿಗೆ ತಪೋವರರೆಂಬ ಋಷಿಗಳು ಬರುತ್ತಾರೆ. ಹಗಲು ಭಿಕ್ಷಾಟನೆ ಮಾಡಿದರೂ ಯಾರೂ ನೀಡಲಿಲ್ಲ. ಊರಿನಿಂದ ಹೊರಟು ಹೋಗುತ್ತಿರುವ ಸಂದರ್ಭದಲ್ಲಿ ಅವರನ್ನು ಕರೆದು ನಂದಿಮಿತ್ರ ರುಚಿಯಾದ ಎಳ್ಳುಂಡೆಯನ್ನು ಉಣಬಡಿಸುತ್ತಾನೆ. ಅದನ್ನು ತಿಂದು ನೀರು ಕುಡಿದು ಆತನನ್ನು ಆಶೀರ್ವದಿಸಿ ಹೋಗುತ್ತಾರೆ.

ಎಳ್ಳಿನಲ್ಲಿ ಅಗಸೆಳ್ಳು, ಊರೆಳ್ಳು, ಕರೆಯೆಳ್ಳು, ಕಾಡಗುಜಿ ಎಳ್ಳು, ಕಾಡೆಳ್ಳು, ಕಾರೆಳ್ಳು, ಗುಜಿಯೆಳ್ಳು ಗುಜೆಳ್ಳು, ಜಳ್ಳು ಎಳ್ಳು, ಹುಚ್ಚೆಳ್ಳು, ಹೊಳ್ಳೆಳ್ಳು - ಇತ್ಯಾದಿ ವಿಧಗಳಿವೆ. ಎಳ್ಳು ಮತ್ತು ಬೆಲ್ಲದ ಮಿಶ್ರಣದಿಂದ ಮಾಡಿದ ಉಂಡೆಯನ್ನು 'ಎಳ್ಳುಂಡೆ' ಎನ್ನುತ್ತಾರೆ. ಗಣಪತಿಯ ಪೂಜೆಯ ಸಂದರ್ಭದಲ್ಲಿ 'ಎಳ್ಳುಂಡೆ ಜೇನುತುಪ್ಪ ನಮ್ಮ ವಿನಾಯಕಂಗೆ' ಎಂದು ಹಾಡುವುದುಂಟು.

'ಎಳ್ಳನ್ನು ಬಿಸಿಲಿಗೆ ಒಣಗುತ್ತದೆ ನೀನು ಯಾಕೆ ಒಣಗುತ್ತಿ ಮುರಳೀ ಬೀಜವೇ?' 'ಎಳ್ಳೊಣಗಿದರೆ ಎಣ್ಣೆ ಬರುತ್ತದೆ ನೀನು ಯಾಕೆ ಒಣಗುತ್ತಿ, ಮುರಳೀ ಬೀಜವೇ?' - ಎಂಬ ಗಾದೆಗಳು ಎಳ್ಳನ್ನು ಕುರಿತಾಗಿವೆ.

ಒಕ್ಕಲ ಮಕ್ಕಳ ಕಸವರಮೆಲ್ಲಮಂ ಕಳ್ದೊಡೆ

(ವಡ್ಡಾ. ೧೨೩)

ವ್ಯವಸಾಯ ಮಾಡುವ ರೈತಾಪಿ ಮಕ್ಕಳನ್ನು ಒಕ್ಕಲು ಮಕ್ಕಳು, ಒಕ್ಕಲಿಗರು ಎನ್ನುತ್ತಾರೆ. ಬೇಸಾಯಗಾರ ಎಂಬ ಪದವೂ ಇದೆ. 'ಕಾಡಿನಲ್ಲಿ ಹುಲಿ ಕೂಗಿದರೆ ಊರಿನಲ್ಲಿ ಒಕ್ಕಲು ತೆಗೆದರಂತೆ' ಎಂಬ ಗಾದೆ ಮಾತಿದೆ.

ವಿದ್ಯುಚ್ಚೋರನೆಂಬ ರಿಸಿಯ ಕಥೆಯಲ್ಲಿ ಮೇಲಿನ ಪ್ರಸಂಗ ಬರುತ್ತದೆ. ಪಟ್ಟಣದಲ್ಲಿ ಕಳ್ಳತನವಾದಾಗ ತಳವಾರ ಯಮದಂಡನನ್ನು ಪ್ರಶ್ನಿಸುವಾಗ ಈ ಸಂದರ್ಭ ಬರುತ್ತದೆ. ಒಕ್ಕಲು ಮಕ್ಕಳಲ್ಲಿ ಹೇಳಿಕೊಳ್ಳುವಂಥ ಕಸವರ ಏನಿರುತ್ತದೆ. ಆದರೆ ವಿದ್ಯುಚ್ಚೋರ ಅದನ್ನೂ ಬಿಡದೆ ಕದಿಯುತ್ತಿದ್ದನೆಂಬ ವಿಚಾರ ಇಲ್ಲಿ ಮುಖ್ಯವೆನಿಸುತ್ತದೆ. 'ಒಕ್ಕಲಗೇರ್ಯಾಗ ಮಳೆರಾಯ ಮಕ್ಕಳ ಮಾರ್‍ಯಾರ ಮಳೆರಾಯ' ಎಂಬ ಜನಪದಗೀತೆ ಇದೆ. ಒಕ್ಕಲಿಗ ಮುದ್ದನ ಪ್ರಸ್ತಾಪ ರಾಜಾವಳಿ ಕಥಾಸಾರದಲ್ಲಿ ಬರುತ್ತದೆ. (ಪು.೧೩೦)

ಔಚಿತ್ಯದರ್ಥಮೆಂಬುದರಿಂ. . .

(ರಾ. ಕಥಾಸಾರ, ಪುಟ ೨೩೬)

ಸಂದರ್ಭೋಚಿತವಾಗಿ ಔಚಿತ್ಯವನ್ನ ಅರಿತುಕೊಂಡೇ ಮಾತನಾಡಬೇಕು ಎಂದು ಹೇಳುವ ಸಂದರ್ಭದಲ್ಲಿ ದೇವಚಂದ್ರ ಕೊಡುವ ವಿವರಣೆ ನಮ್ಮ ಜನಪದ ಸಂಸ್ಕೃತಿಗೆ ಸಂಬಂಧಿಸಿದುದಾಗಿದೆ.

ಕೇತಗೌಡ ಮತ್ತು ಬಿರಗಿ ಇಬ್ಬರು ದಂಪತಿಗಳು. ತಂದೆಯ ನಿಧನಾನಂತರ ಕೇತಗೌಡನ ತಂಗಿ ಕೇತಿಯನ್ನು ಸಂಗಗವುಡನೆಂಬ ಮುದುಕ ತನ್ನ ಮಗನಿಗೆ ಮದುವೆಮಾಡಿಕೊಳ್ಳಬೇಕೆಂಬ ಬಯಕೆಯಿಂದ ಕೇತಿಯ ತಾಯಿಯನ್ನ ವಿಚಾರಿಸಿದ. ವಿವಾಹವಾಗುವವನ ಸೌಂದರ್ಯ ಮತ್ತು ಶಾರೀರಿಕ ದಕ್ಷತೆಯ ಬಗೆಗೆ ಆಕೆ ವಿಚಾರಿಸಿದಾಗ ಆ ಮುದುಕ 'ಕಣ್ಣೊಂದು ಹೆಚ್ಚು ಬಿಳುಪಾಗಿ ಹಾಗಪಾಲು ದೃಷ್ಟಿಯಿದೆ' ಎಂದನು. ಇನ್ನೊಂದು ಕಣ್ಣು ಇಲ್ಲ ಎಂದ. ನೋಡಿಕೊಳ್ಳಲು ಮನೆಯಲ್ಲಿ ಮತ್ತಾರಿದ್ದಾರೆಂದು ಕೇಳಲಾಗಿ ಗಂಡನನ್ನು ಕಳೆದುಕೊಂಡ ನನ್ನ ಅಕ್ಕನಿದ್ದಾಳೆ. ಅವಳೇ ನಿನ್ನ ಮಗಳನ್ನು ನೋಡಿಕೊಳ್ಳುವಳು ಎಂದ. ಹಣಕಾಸು, ಧಾನ್ಯ, ಕರವು ಇವೆಲ್ಲ ಲಭ್ಯವೇ ಎಂದು ಕೇಳಿದ್ದಕ್ಕೆ ಹಣಕಾಸು, ಆಭರಣಗಳ ಬಗ್ಗೆ ನಿರುತ್ತರನಾದರೂ ಧಾನ್ಯ, ಕರವು ಬಗ್ಗೆ

ಉತ್ಸಾಹದಿಂದಲೇ ಎಲ್ಲವೂ ಇದೆ ಎಂದು ಉತ್ತರಿಸಿದ. ಇದಕ್ಕೆ ಮರುಳಾದ ತಾಯಿ ಮಗಳನ್ನು ಕೊಟ್ಟು ಮದುವೆ ಮಾಡಿದಳು. ಆದರೆ ಕಣ್ಣಿಲ್ಲದ ಗಂಡ ಅನ್ನ ಪಡೆಯದೆ ಮನೆಯಲ್ಲಿಯೇ ಉಳಿದ. ಕಟ್ಟಿಕೊಂಡವಳ ಕೃಪೆಯಿಂದ ಸಂಪತ್ತು ದೊರಕಿತು. ಕೃಷಿಯನ್ನ ಆರಂಭಿಸಿದ. ಎತ್ತಿಲ್ಲದಿರಲು ಎಪ್ಪತ್ತು ಎತ್ತನ್ನು ತಂದನು. ನೂರು ದುಡ್ಡಿಗೆ ಸತ್ತೆಮ್ಮೆ ಕೋಣನನ್ನು ತಂದು ೨೦೦ ದುಡ್ಡನ್ನು ತೆಗೆದುಕೊಂಡು ಹೋಗುತ್ತಿರುವಾಗ ಅದು ಕಳ್ಳರ ಪಾಲಾಯಿತು. ಕೋಣ ಮತ್ತು ಎತ್ತನ್ನು ಕಣ್ಣಾಲ್ಲಿ ಕಣ್ಣಟ್ಟು ಸಾಕಿದ. ಹುರಿದ ರಾಗಿಯನ್ನು ಬಿತ್ತಲಾಗಿ ಹಾರಕ ಬೆಳೆಯಿತು. ಅರ್ಧ ರಾಗಿಯನ್ನು ನಂಟನ ಗುಳಿಯಲ್ಲಿ ಹಾಕಿ ಇನ್ನರ್ಧವನ್ನ ಮನೆಯಲ್ಲಿರಿಸಿದ. ಅವರೆ ಸೇವಗೆ, ಅವರೆ ದೋಸೆಯನ್ನ ಮನೆಯಲ್ಲಿ ಮಾಡಿದರು. ಇದೆಲ್ಲವನ್ನು ಅಣ್ಣನಾದವನು ಗಮನಿಸುತ್ತಿದ್ದ. 'ನನ್ನ ತಂಗಿಯು ಕಾವಲಿಯಲ್ಲಿದ್ದ ೭ ದೋಸೆ ಕೈವಟ್ಟಿಲಲ್ಲಿದ್ದ ೬ ದೋಸೆ ನೆಲವಿನ ಮೇಲೆ ೧೦ ದೋಸೆ ಇದ್ದವು ಇವನ್ನು ಕೈಯಿಂದ ಎತ್ತಿ ನೋಡಿ ಮೂರೇ ದೋಸೆ ಎಂದು ೨೪ ದೋಸೆಯನ್ನು ಅತ್ತೆ ಸೊಸೆ ತಾಯಿ ಮಗಳು ಅತ್ತಿಗೆ ನಾದಿನಿ ಈ ಆರೂ ಜನರು ಮೂರು ದೋಸೆಯನ್ನು ಮುರಿಯದೆ ತಿಂದರು. ನಾನು ಹದಿನಾರು ಮುಡಿ ಹಿಟ್ಟು ಹುರಿದ ಹುರುಳಿ ಉದಕವನ್ನು ಉಂಡು ಭೂಮಿಯನ್ನು ತಲೆ ಕೆಳಗು ಮಾಡಿ ಬೇಸುತ್ತಾ ಹಟ್ಟಿಯಲ್ಲಿದ್ದ ಮೇಷ್ಠನ್ನು ತೆಗೆದುಕೊಂಡು ಹೋಗಿ ಬರುತ್ತಿದ್ದೆನು. ಅಷ್ಟರೊಳಗೆ ಮನೆಯಲ್ಲಿ ಅವರೆ ಸೇವಗೆ ಮಾಡಿಟ್ಟರು. ಅದಕ್ಕೆ ಒಳ್ಳೆಣ್ಣೆಯನ್ನು ತರಲು ಅದು ಕೈಎಣ್ಣೆಯಾಯಿತು ಅದನ್ನು ಬಿಟ್ಟು ಕಣ್ಣು ಬಿಟ್ಟು ಉಂಡು ಕೈಗಚ್ಚಿಕೊಂಡು ಬಂದೆನು. ಆನಂತರ ಒಂದು ನಿಂಬೆಕಾಯಿ ಗಾತ್ರ ರಾಗಿ ಹಿಟ್ಟನ್ನು ಯಾರಾದರೂ ಕೊಟ್ಟರೆ ಬೆಟ್ಟವನ್ನ ಕಟ್ಟುತ್ತೇನೆ ಎಂದುಕೊಂಡೆನು'. ಇತ್ಯಾದಿ ಹೇಳಿದ್ದನ್ನು ನೋಡಿದರೆ ಇವುಗಳ ಔಚಿತ್ಯದ ಅರ್ಥವನ್ನು ಆಯಾಯ ಸಂದರ್ಭಕ್ಕೆ ತಕ್ಕಂತೆ ಅರ್ಥಮಾಡಿಕೊಳ್ಳಬೇಕೆಂದು ದೇವಚಂದ್ರನ ಅಭಿಪ್ರಾಯ.

ಧೈರ್ಯಮಿಲ್ಲದಂಗಾವ ಕಾರ್ಯಮುಂ ಆಗದು

(ರಾ. ಕಥಾಸಾರ, ಪುಟ. ೨೩೯)

ಮನುಷ್ಯನಿಗೆ ಮುಖ್ಯವಾಗಿ ಧೈರ್ಯ ಬೇಕು. ಅದಿಲ್ಲದಿದ್ದರೆ ಏನು ಮಾಡಲೂ ಕಷ್ಟವೆಂಬುದಕ್ಕೆ ದೇವಚಂದ್ರನ ನಿರೂಪಣೆ ಇದು. ಕೃಷಿಕನೊಬ್ಬ ಜಡಿಮಳೆಯಲ್ಲಿ ಕಟ್ಟಿಗೆಯಿಲ್ಲದೆ ಉಪವಾಸವಿದ್ದ. ಮಳೆ ಬಿಡಲೇ ಇಲ್ಲ. ಚಾವಡಿಯಲ್ಲಿ ಮಾರಿಯನ್ನ ಹೊನ್ನೆಮರವೆಂದು ಭಾವಿಸಿ ಈ ಹೊತ್ತಿಗೆ ಈ ಕಟ್ಟಿಗೆ ಸಾಕು ಎಂದು ಕೊಡಲಿಯನ್ನೆತ್ತಿದ. ಮಾರಿ ಪ್ರತ್ಯಕ್ಷಳಾಗಿ ನನ್ನನ್ನೇಕೆ ಸೀಳುವೆ ಎಂದಾಗ ತನ್ನ ಉಪವಾಸದ ಕಾರಣ ಹೇಳಿದ. ಆತನ ಧೈರ್ಯಕ್ಕೆ ಮೆಚ್ಚಿದ ಮಾರಿಯು ನನ್ನನ್ನು ಕಡಿಯಬೇಡ

ನಿನ್ನ ಮನೆಯ ಮುಂಭಾಗದಲ್ಲಿ ಸೌದೆಯ ಹೊರೆ ಇದೆ ಹೋಗು ಎಂದು ಹೇಳಿ ಪ್ರತಿದಿನ ತನ್ನ ಪರಿವಾರದವರಿಂದ ಆತನಿಗೆ ಸೌದೆ ಹೊರೆಯನ್ನ ಹಾಕಿಸುತ್ತಿದ್ದಳು. ಈ ಸಂಗತಿ ತಿಳಿದ ನೆರೆ ಮನೆಯಾಕೆ ತನ್ನ ಗಂಡನನ್ನು ಕಾಡಿದಳು. ಆತ ಹೆದರಿಕೊಂಡೇ ಮಾರಿಯನ್ನ ಸೀಳಲು ಹೋದ. ಹೇಗೆ ಕೊಡಲಿಯನ್ನೆತ್ತಿ ನಿಂತಿದ್ದನೋ ಅದೇ ಭಂಗಿಯಲ್ಲಿ ನಿಲ್ಲುವಂತೆ ಮಾರಿ ಮಾಡಿದಳು. ಎಷ್ಟೊತ್ತಾದರೂ ಸೌದೆ ಹೊರೆಯಿಂದ ಗಂಡ ಮನೆಗೆ ಬಾರದಿರುವುದನ್ನು ಕಂಡ ಹೆಂಡತಿ ಬಂದು ನೋಡಿದರೆ ಗಂಡ ನಿಶ್ಚಲನಾಗಿ ನಿಂತಿದ್ದ, ಗಾಬರಿಗೊಂಡ ಆಕೆ ತನ್ನ ಕರ್ಣಾಭರಣವನ್ನ ಕಾಣಿಕೆಯಾಗಿತ್ತು ಬಿಡಿಸಿದಳು. ಅದಕ್ಕೆ ಮಾರಿಯು ನಿತ್ಯವೂ ಆತ ಗೌಡನ ಮನೆಗೆ ಕಟ್ಟಿಗೆಯನ್ನು ಹಾಕಿದರೆ ಬಿಡುವೆನು ಎಂದಳು. ಹಾಗಾಗಿ ಆತ ಅನ್ಯರ ಮನೆಯಲ್ಲಿ ಕಟ್ಟಿಗೆ ಹಾಕುವ ಆಳಾಗಿಬಿಟ್ಟನು. ಇದರಿಂದ ಅರ್ಥವಾಗುವುದೇನೆಂದರೆ ಧೈರ್ಯವಿಲ್ಲದವನಿಗೆ ಯಾವ ಕೆಲಸವೂ ಸಾಧ್ಯವಾಗುವುದಿಲ್ಲ ಎಂಬುದು. ಇಂಥ ಆಶಯದ ಕಥೆಗಳು ಜಾನಪದದಲ್ಲಿ ಅನೇಕ ಇವೆ. ವೈವಿಧ್ಯಮಯ ಕಥೆಗಳಿಗೆ ದೇವಚಂದ್ರ ಹೆಸರುವಾಸಿ. ರಾಜನ ದಡ್ಡತನ ತಿಳಿಸಿಕೊಡುವ ಕಳ್ಳನ ಕಥೆ, ಅತಿಥಿ ಸತ್ಕಾರದಲ್ಲಿ ಕಾಪಟ್ಯ ತೋರುವ ಎಡ ಶ್ರುತಿಯ ಕತೆ, ಬುದ್ಧಿ ಪಕ್ವವಿಲ್ಲದ ಕೇತಗೌಡನ ಕತೆ, ಪರರ ಕಷ್ಟವರಿಯದ ದಾಸನ ಕಥೆ, ಕೊಡಲಿಗೆ ಹೆದರುವ ಮಾರಿ ದೇವತೆ ಕತೆ ಸೌದೆ ಹೊರುವ ಕಥೆ – ಮುಂತಾದ ಹಲವಾರು ವೈವಿಧ್ಯಮಯ ಕಥಾ ಪ್ರಪಂಚವೇ ರಾಜಾವಳಿ ಕಥಾಸಾರದಲ್ಲಿ ಲಭ್ಯವಾಗುತ್ತದೆ.

ಏನಿತ್ತರ್ ಏನಿತ್ತರ್

(ರಾ. ಕಥಾಸಾರ, ಪುಟ ೨೩೯)

ಅತಿಯಾಸೆ ಗತಿಕೇಡು ಎಂಬುದಕ್ಕೆ ಇದೊಂದು ಉದಾಹರಣೆ. ರಾಜಾಶ್ರಯದಲ್ಲಿದ್ದ ವೈದಿಕನೊಬ್ಬ ರಾಜನನ್ನು ಕಾದುಕೊಂಡಿದ್ದನು. ರಾಜಸಭೆಯಲ್ಲಿರುವಾಗಲೇ ವೈದಿಕನಿಗೆ ಅಪಾನವಾಯು ಬಂದು ಶಬ್ದವಾಯಿತು. ಇದು ರಾಜನದು ಎಂದು ತಿಳಿಯದ ಕಟ್ಟಿಗೆಯವರು ಯಾರೆಂದು ಕೂಗಿಕೊಂಡರು. ಇದನ್ನ ತಿಳಿದಿದ್ದ ವೈದಿಕ 'ನಾನು ತಪ್ಪಿದೆ' ಎಂದು ಕೈಮುಗಿದೆದ್ದ. ಕಟ್ಟಿಗೆಯವರು ಆತನನ್ನು ಗುದ್ದಿ ಹೊರದಬ್ಬಿದರು. ಇದನ್ನು ಕಂಡು ಮೆಚ್ಚಿದ ರಾಜ ಆತನಿಗೆ ಮತ್ತೊಂದು ನೆವದಿಂದ ಒಂದು ನೂರು ಉಂಬಳಿಯನ್ನು ಕೊಟ್ಟನು. ಉಂಬಳಿ ಪಡೆದ ವಿಷಯ ತಿಳಿದ ಮತ್ತೊಬ್ಬ ವೈದಿಕನ ಹೆಂಡತಿ ಅದೇ ರೀತಿ ಮಾಡಲು ತನ್ನ ಗಂಡನಿಗೆ ಹೇಳಿದಳು. ಅವರೆಯನ್ನು ತಿಂದ ಆತ ಸಭೆಯನ್ನ ಸೇರಿ ಅಪಾನವಾಯುವಿನ ಮೂಲಕ ಶಬ್ದವನ್ನು ಮಾಡಿದ. ಇದನ್ನು ಕಂಡ ರಾಜ ಆತನ ಕುಂಡಿಯ ಮೇಲೆ ಮೂರು ಬರೆ ಹಾಕಿ ಕಳುಹಿಸಿದ. ಅಷ್ಟರಲ್ಲಿ

ಹೆಂಡತಿ ಗಂಡನನ್ನು ಸ್ವಾಗತಿಸಲು ಬಾಗಿಲ ಬಳಿ ಕಾಯುತ್ತಿದ್ದಳು. ಕುಂಟುತ್ತಲೇ ಬರುತ್ತಿದ್ದ ಗಂಡನನ್ನು ನೋಡಿ ಆತುರದಿಂದ 'ಏನಿತ್ತರ್ ಏನಿತ್ತರ್' ಎಂದು ಕೇಳಿದಳು. 'ಬಠಗೆಯನ್ನು ಕೊಟ್ಟರು' ಎಂದ. ತಪ್ಪಾಗಿ ಗ್ರಹಿಸಿದ ಆಕೆ 'ಆ ಹಳ್ಳಿ ಒಳ್ಳೆಯದು ನಮ್ಮಿಬ್ಬರಿಗೆ ಮೃಷ್ಟಾನ್ನ' ವಾಗುತ್ತದೆಂದಳು. ಆತ 'ಮರುಳೆ ತೇಜಬರೆ' ಎಂದ. 'ತೇಜಿಯನ್ನೇಕೆ ಏರಿಬರಲಿಲ್ಲ' ಎಂದು ಮರು ಪ್ರಶ್ನೆ ಹಾಕಿದಳು. ಆತ ಹತ್ತಿರಕ್ಕೆ ಬಂದು ಕುಂಡೆಯನ್ನು ತೋರಿಸಿದನು. ಆಗ ಆಕೆ ಹಸಿರು ಬಿದಿರನ್ನು ತೇಯ್ದು ಗಾಯಕ್ಕೆ ಬೇಸರದಿಂದಲೇ ಹಚ್ಚಿದಳು.

ಅಂಕಡೊಂಕನಕಾಯಿ ಏತರಕಾಯೆಂದು. . . .

(ರಾ. ಕಥಾಸಾರ, ಪುಟ. ೨೩೮)

ಸಿರಿ ಸಂಪತ್ತಿನ ಅಹಂಕಾರವಿರುವವರಿಗೆ ತಿಳುವಳಿಕೆ ಇರುವುದಿಲ್ಲ ಎಂಬ ಅಂಶವನ್ನ ದೇವಚಂದ್ರ ನಿರೂಪಿಸುವ ರೀತಿ ಸೊಗಸಾಗಿದೆ. ಗೊಲ್ಲರ ಹೆಣ್ಣು ಮಗಳೊಬ್ಬಳು ತಂದೆ ತಾಯಿಗಳನ್ನು ಕಳೆದುಕೊಂಡು ಹುಣಿಸೆಕಾಯಿಯನ್ನು ಆಯ್ದು ಮಾರಿ ಜೀವನ ಹೊರೆಯುತ್ತಿದ್ದಳು. ಸುಂದರಿಯಾಗಿದ್ದ ಅವಳನ್ನ ಕಂಡ ರಾಜ ಅವಳಿಗೆ ಮನಸೋತ. ಅವಳನ್ನ ತನ್ನ ರಾಣಿಯನ್ನಾಗಿ ಮಾಡಿಕೊಂಡದ್ದಲ್ಲದೆ ತನ್ನ ಸಂಪತ್ತೆಲ್ಲವನ್ನ ಕೊಟ್ಟನು. ಪಲ್ಲಕ್ಕಿ, ಛತ್ರ ಚಾಮರ ಎಲ್ಲವನ್ನು ಕೊಟ್ಟನು. ದಾರಿಯಲ್ಲಿ ಬರುತ್ತಿರುವಾಗ ಹುಣಿಸೆಮರವನ್ನು ಕಂಡು 'ಈ ಅಂಕುಡೊಂಕಿನ ಕಾಯಿ ಯಾವುದು' ಎಂದು ಕೇಳಿದಳು. ಪಕ್ಕದಲ್ಲಿದ್ದಾತ 'ತಾವು ಹೊತ್ತು ಮಾರುತ್ತಿದ್ದ ಕಾಯಿ' ಎಂದ. ಈ ಉತ್ತರದಿಂದ ನಾಚಿಕೆ ಪಟ್ಟುಕೊಂಡ ಆಕೆ ಈ ವಿಷಯವನ್ನ ಯಾರಿಗೂ ಹೇಳಬೇಡವೆಂದು ಅವನನ್ನು ವಿನಂತಿಸಿಕೊಂಡಳು. ಇದಕ್ಕೆ ಸಂವಾದಿಯಾಗಿ ನಾಯಿ ಸಿಂಹಾಸನದ ಮೇಲೆ ಕುಳಿತರೂ ತನ್ನ ಬುದ್ಧಿಯನ್ನ ಬಿಡಲಿಲ್ಲ ಎಂಬ ಜನಪ್ರಿಯ ಮಾತು ಬಳಕೆಯಲ್ಲಿದೆ.

ಪರರ ಕಷ್ಟಮಂ ಸುಖಿ ಅರಿಯನ್

(ರಾ. ಕಥಾಸಾರ ಪುಟ. ೨೪೧)

ಕಷ್ಟ ಸುಖಗಳ ವಿಮರ್ಶೆ ರಾಜಾವಳಿ ಕಥಾಸಾರದಲ್ಲಿ ಜನಪದ ಕಥೆಗಳ ಮೂಲಕ ನಿರ್ಣಯವಾಗಿರುವುದುಂಟು. ವಿಟಪುರುಷನೊಬ್ಬ ತಾನು ಬರುವ ಸುದ್ದಿ ತಿಳಿಸಿ ಸೂಳೆಯ ಬಳಿಗೆ ಹೋಗುತ್ತಾನೆ. ಅಷ್ಟರಲ್ಲಿ ಆಕೆಯ ಮನೆ ಬೆಂಕಿ ಹತ್ತಿಕೊಂಡು ಉರಿಯ ತೊಡಗಿತ್ತು. ಅದನ್ನು ನೋಡಿಯೂ ಈ ವಿಟಪುರುಷ ಆಕೆಯನ್ನ ಹಾಸಿಗೆ ಎಲ್ಲಿ ಹಾಕಲಿ ಎಂದು ಕೇಳುತ್ತಾನೆ. ಈತನ

ಕಾಟದಿಂದ ಆಕೆಗೆ ಎಲ್ಲಿಲ್ಲದ ಕೋಪ ಬರುತ್ತದೆ. ಅದರ ಪರಿಣಾಮವಾಗಿ ಆ ಬೆಂಕಿಯಲ್ಲಿ ಕುಂಡೆಯನ್ನು ಕಾಸಿಕೊಂಡು ಆತ ಹೊರಟುಹೋಗುತ್ತಾನೆ.

ಅದೇ ರೀತಿ ದಾಸಯ್ಯನೊಬ್ಬ ದಡದಲ್ಲಿ ಕುಳಿತು ನಾಮ ಹಚ್ಚಿಕೊಳ್ಳುತ್ತಿರುತ್ತಾನೆ. ಆಚೆ ದಡದಲ್ಲಿರುವ ವ್ಯಕ್ತಿಯನ್ನು ಬೇಗ ಬರುವಂತೆ ಕೂಗುತ್ತಾನೆ. ಗಾಬರಿಯಿಂದಲೇ ಆ ವ್ಯಕ್ತಿ ನೀರನ್ನು ಹಾದು ದಾಸಯ್ಯನ ಬಳಿ ಹೋಗಿ ಕಾರಣ ಕೇಳುತ್ತಾನೆ, 'ನನ್ನ ಯಾವ ಭಾಗದ ನಾಮ ಚೆನ್ನಾಗಿದೆ ಹೇಳು' ಎನ್ನುತ್ತಾನೆ. ಗಾಬರಿಗೊಂಡು ಹೋದ ಈತನಿಗೆ ನಿರಾಶೆಯಾಗುತ್ತದೆ. ಅನ್ಯರ ಕಷ್ಟವನ್ನ ಸುಖಿಯು ತಿಳಿಯಲಾರನು ಎಂಬುದಕ್ಕೆ ಇವೆಲ್ಲಾ ಉದಾಹರಣೆಗಳು.

ಗವಾಕ್ಷದಿಂದೆಯ್ದುತ್ತವಳೊಳೆನೇಹಂ ಮಾಡುತ್ತಿರಲು

(ರಾ. ಕಥಾಸಾರ ಪು. ೨೭೨)

ರತ್ನಾಕರನು ಮೂಡಬಿದರೆಯಲ್ಲಿ ಅರಸನ ಮಗಳನ್ನು ಮೋಹಿಸಿ ಯೋಗಾಭ್ಯಾಸ ಬಲದಿಂದ ವಾಯುಧಾರಣೆ ಮಾಡಿ ಗವಾಕ್ಷದ ಮೂಲಕ ಹೋಗಿ ಆಕೆಯನ್ನು ಸಂಧಿಸುತ್ತಿರಲು ಅರಸನು ಆತನನ್ನು ಹಿಡಿಸಲು ಯತ್ನಿಸಿದ. ಪ್ರಾಚೀನಕಾಲದ ಹಳ್ಳಿಯ ಮನೆಗಳ ನಿರ್ಮಾಣದಲ್ಲಿ ಗಾಳಿ ಬೆಳಕಿಗಾಗಿ ಮನೆಯ ಮೇಲ್ಭಾಗದಲ್ಲಿ ಗವಾಕ್ಷ ಬಿಡುತ್ತಿದ್ದದ್ದು ವಾಡಿಕೆ. ಮಳೆಗಾಲದಲ್ಲಿ ಅದನ್ನು ಮುಚ್ಚಿ ಉಳಿದ ಸಂದರ್ಭದಲ್ಲಿ ತೆಗೆಯುತ್ತಿದ್ದರು. ಅಂಥ ಸ್ಥಳಗಳನ್ನು ಪ್ರಣಯಿಗಳು ಬಳಸಿಕೊಳ್ಳುವುದು ಹೊಸದೇನಲ್ಲ. 'ಹೋದೆ ಪಿಶಾಚಿ ಅಂದ್ರೆ ಬಂದೇ ಗವಾಕ್ಷೀಲಿ' ಎಂಬ ಗಾದೆಯೊಂದಿದೆ.

ನೀರಿಟೆಯದ ಗಂಟಲೊಳ್ ಕಡುಬಂ ತುಱುಕಿದಂತಾಯ್ತು

(ಮು. ಭಂಡಾರ, ಸಂ. ೨ ರಾ. ಮೇಧ, ಪು ೧೦೭)

ಸಂಸ್ಕೃತ ಭೂಯಿಷ್ಠವಾದ ಶೈಲಿಯಲ್ಲಿ ರಾಮಾಯಣ ಕತೆಯನ್ನು ಮುದ್ದಣ ಹೇಳ ಹೊರಟಾಗ ಹೆಂಡತಿಯಿಂದ ಬಂದ ಪ್ರತಿಕ್ರಿಯೆ ಇದು. ಕನ್ನಡವನ್ನೇ ಅರ್ಥಮಾಡಿಕೊಳ್ಳಲು ಕಷ್ಟ ಪಡುವ ತನಗೆ ಸಂಸ್ಕೃತ ಕಡು ಕಷ್ಟ ಎಂಬುದನ್ನು ಈ ಮಾತಿನ ಮುಖಾಂತರ ಅಭಿವ್ಯಕ್ತಿಸಿದ್ದಾಳೆ. ಈ ಮಾತು ಈಗ ಇಂಗ್ಲಿಷ್‌ಗೆ ಅನ್ವಯಿಸುತ್ತದೆ. ಮುದ್ದಣನ ಮಾತೃಭಾಷಾ ಪರಿಜ್ಞಾನ ಅತ್ಯಾಧುನಿಕವಾಗಿದೆ. ಕಡುಬು ಒಂದು ಸಿಹಿ ಪದಾರ್ಥ.

ಮಡದಿಯಂ ರಘುಜನಂತಿರೆ ಕೊಂಡಾಳೆಂ ಬಾಟಿಂ. . .

(ಮು. ಭಂಡಾರ, ಸಂ. ೩, ರಾ. ಮೇಧ. ೧೨೩)

ಗಂಡನಿಗೆ ತಿಳಿಸದೆ ಬಂದ ಮಗಳನ್ನು ತಂದೆ ತಾಯಿಗಳು ಕರೆದುಕೊಂಡು ಬಂದು ಒಪ್ಪಿಸುವಾಗ ಅಳಿಯ ಅಗಸನಾಡುವ ಮಾತು. ಅಗಲಿ ಹೋದ ಹೆಂಡತಿಯನ್ನು ರಾಮನ ಹಾಗೆ ನಾನು ಸ್ವೀಕರಿಸಿ ಅವಳಿಗೆ ಗಂಡನಾಗಿರುವುದಿಲ್ಲ. ಅವಳೊಡನೆ ಬದುಕುವುದಿಲ್ಲ' ಎಂದು ಬಿರುಸಾಗಿ ಮಾತನಾಡುತ್ತಾನೆ. ಅಗಸ ಗ್ರಾಮೀಣ ವ್ಯವಸ್ಥೆಯ ಆಯಗಾರರಲ್ಲಿ ಒಬ್ಬ. ಈತನ ಮಾತುಗಳ ಪರಿಣಾಮವಾಗಿಯೇ ರಾಮ ಸೀತೆಯನ್ನು ಅಡವಿ ಪಾಲು ಮಾಡುತ್ತಾನೆ. ಈಗಲೂ ಸಹ ಅಗಸರನ್ನು ಸೀತೆಯನ್ನು ಅಡವಿ ಪಾಲು ಮಾಡಿದವರು ಎಂದು ಮಾತನಾಡುವುದುಂಟು. ಗ್ರಾಮೀಣ ಪ್ರದೇಶಗಳಲ್ಲಿ 'ಬಿಟ್ಟ ಹೆಂಡತಿಯನ್ನು ಕಟ್ಟಿಕೊಳ್ಳಲು ನಾನೇನು ಶ್ರೀರಾಮ ಚಂದ್ರನಲ್ಲ' ಎಂಬುದು ನುಡಿಗಟ್ಟಾಗಿದೆ. ಬಿಟ್ಟ ಹೆಂಡತಿಯನ್ನು ಕಟ್ಟಿಕೊಳ್ಳಲು ನಾನೇನು 'ಪಟ್ಟಾಭಿರಾನಂತೆ ಕೆಟ್ಟೋದವನೆ' ಎಂದು ಬಯಲು ನಾಟಕದ ಅಗಸನ ಮಾತಿದೆ.

ಆಂ ಪರಾಧೀನೆ ಗಡ ! ಪುರಾಣಮನೋದಿಂದಬಟಿಯಮಲ್ತೆ ದಕ್ಷಿಣೆಯನೀವುದು

(ಮು ಭಂಡಾರ ಸಂ. ೨, ರಾ. ಮೇಧ ಪು. ೧೦೭)

ಕತೆಯನ್ನು ಯಾವ ಧಾಟಿಯಲ್ಲಿ ಹೇಳಲಿ, ಹೇಳಿದರೆ ನನಗೇನು ಕೊಡುವೆ ಎಂದು ಮುದ್ದಣ ಕೇಳುತ್ತಿರುವ ಸಂದರ್ಭದಲ್ಲಿ ಹೆಂಡತಿ ಮನೋರಮೆ ಹೇಳುವ ಮಾತಿದು. ಹಿಂದೆ ಅರಮನೆಯಲ್ಲಿ ಕತೆಗಳನ್ನು ಓದಿದರೆ ಸಂಭಾವನೆಯಾಗಿ ಬೆಲೆ ಬಾಳುವ ವಸ್ತುಗಳನ್ನು ಕೊಡುತ್ತಿದ್ದರು. ಆ ಪರಂಪರೆಯನ್ನು ಬಲ್ಲ ಕವಿ ತನ್ನ ಹೆಂಡತಿಯ ಬಳಿ ಕಾವ್ಯ ಓದುವಾಗಲೂ ಅಂಥದ್ದನ್ನು ನಿರೀಕ್ಷಿಸುತ್ತಾನೆ. ಹೆಣ್ಣು ಗಂಡಸಿನ ಅಧೀನೆ ಜೊತೆಗೆ ಪುರಾಣ ಓದಿದ ನಂತರವೇ ಅದಕ್ಕೆ ತಕ್ಕ ಉಡುಗೊರೆ ನೀಡುವುದು. ಈ ಉತ್ತರ ಸಮಂಜಸವಾಗಿದೆ.

ಪೆತ್ತಬ್ಬೆಗೆ ತಮ್ಮತ್ತಣೆನಟಿವಾಯ್ತೆಂದು ನಾಣ್ಚಿ, ತಲೆವಾಗಿರ್ಕುಮಕ್ಕುಂ

(ಮು. ಭಂಡಾರ ಸಂ. ೨, ರಾ. ಮೇಧ, ಪು. ೧೦೯)

ಪ್ರಕೃತಿವರ್ಣನೆ ಮಾಡುವಾಗ ಕವಿ ಮುದ್ದಣ ರಸಬಾಳೆಯ ದೊಡ್ಡಗೊನೆಗಳು ಕೆಳಮುಖವಾಗಿ ಬಾಗಿರುವ ದೃಶ್ಯವನ್ನು ವರ್ಣಿಸಿದ್ದಾನೆ. 'ಬಾಳೆಗೊಂದೇ ಗೊನೆ ಬಾಳೋರಿಗೆ ಒಂದೇ ಮಾತು' ಎಂಬ ನಾಣ್ನುಡಿ ಇರುವಂತೆ ಗೊನೆಬಿಟ್ಟ ನಂತರ ಆ ಗಿಡದಿಂದ ಪ್ರಯೋಜನವಿಲ್ಲವೆಂದು ಕಡಿದುಬಿಡುತ್ತಾರೆ. ಅದನ್ನೇ ಕವಿ ತಮ್ಮನ್ನು ಹೆತ್ತ ತಾಯಿಗೆ ತಮ್ಮಿಂದ ಸಾವು ಉಂಟಾಯಿತೆಂದು ನಾಚಿಕೆಯಿಂದ ತಲೆ ತಗ್ಗಿಸಿರಬೇಕು ಎಂಬುದಾಗಿ ವರ್ಣಿಸಿದ್ದಾನೆ.

ಸೋಲ್ತು ಸುಣ್ಣದೊಳಾದಂ

(ಶ್ರೀರಾ, ಪು. ೧೫೦)

ವಿದ್ಯುನ್ಮಾಲಿನಿಯೆಂಬ ರಕ್ಕಸನು ಶತ್ರುಘ್ನನ ಸೈನ್ಯದೊಂದಿಗೆ ಹೋರಾಡಿ ಹೇಳುವ ಸಂದರ್ಭ. ಮುದ್ದಣನು 'ಸೋತು ಸುಣ್ಣವಾದ' ಎಂಬ ನುಡಿಗಟ್ಟನ್ನು ಇಲ್ಲಿ ಬಳಸಿಕೊಂಡಿದ್ದಾನೆ. ಈ ನುಡಿಗಟ್ಟಿನ ಬಳಕೆ ಈಗಲೂ ಇದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಂತು ಇದು ಮನೆ ಮಾತಾಗಿದೆ.

ನನ್ನ ಅತ್ತೆಯ ಮಗಳೆ ಮುತ್ತಿನ ಚೆಂಡೆ

(ರಾ. ಮೇಧ. ಪು. ೧೮೭)

ತೇಜಃ ಪುರವರ್ಣನೆಯಲ್ಲಿ ಮುದ್ದಣ ತನ್ನ ಹೆಂಡತಿ ಮನೋರಮೆಯನ್ನು ಹೊಗಳುವ ಸಂದರ್ಭ. ಮದುವೆ ಸಂದರ್ಭಗಳಲ್ಲಿ ಹಿಂದಿನ ಕಾಲದಲ್ಲಿ ಇಂಥ ಜಾನಪದ ಹಸೆ ಹಾಡುಗಳನ್ನು ಹಾಡುತ್ತ ಗಂಡು ಹೆಣ್ಣಿನ ವಿನೋದದಲ್ಲಿ ದಿಬ್ಬಣದವರು ಮುದಗೊಳ್ಳುತ್ತಿದ್ದರೆ ನಾಗರಿಕತೆ ಮುಂದುವರೆದಂತೆ ಗ್ರಾಮೀಣ ಜನರ ಹಸೆ ಹಾಡುಗಳು ಕಣ್ಮರೆಯಾಗುತ್ತಿವೆ.

ಕೊಟ್ಟಂ ಕೆಟ್ಟನ್

(ರಾ. ಮೇಧ, ಪು. ೧೯೧)

ನಗರ ವರ್ಣನೆಯ ಸಂದರ್ಭದಲ್ಲಿ ಬರುವ ಸನ್ನಿವೇಶ. ಇಕ್ಕಳ, ಚಿಮಟ, ಕತ್ತರಿ, ಸುತ್ತಿಗೆ, ಕೈವಾರ, ಕಂಬಚ್ಚು, ಕೊಳವೆ, ಅಡ್ಡಕಲ್ಲು, ಅರ ಮುಂತಾದ ಸಾಧನಗಳು ರಾಶಿಯಾಗಿದ್ದು ಅವುಗಳಿಂದ ಬಡಿಯುತ್ತಿದ್ದರೆ 'ಕೊಟ್ಟವನು ಕೆಟ್ಟ' ಎಂಬ ಶಬ್ದ ಬರುತ್ತಿತ್ತೆಂದು ಕವಿ ಮುದ್ದಣ ವರ್ಣಿಸಿದ್ದಾನೆ. ಆಭರಣಗಳ ಕೆಲಸ ಮಾಡುವವನು ಸುತ್ತಿಗೆಯಿಂದ ಅಡ್ಡಕಲ್ಲಿಗೆ ಪದೇ ಪದೇ ಹೊಡೆಯುತ್ತಿದ್ದರೆ ಬರುವ ಶಬ್ದವನ್ನು ಜನಪದರು 'ಕೊಟ್ಟೋನು ಕೆಟ್ಟ' ಎಂದು ಕೇಳಿಸುತ್ತದೆಂಬಂತೆ ಊಹಿಸುತ್ತಾರೆ. ಚಿನ್ನ ಬೆಳ್ಳಿ ಕೆಲಸ ಮಾಡುವವನ ವೃತ್ತಿ ಮತ್ತು ಆತನ ವ್ಯಕ್ತಿತ್ವದ ಬಗೆಗೆ ಈ ಮಾತು ಯೋಚಿಸುವಂತೆ ಮಾಡುತ್ತದೆ. ಕೊಟ್ಟ ವಸ್ತು ಹಿಂದಿರುಗಿ ಬಾರದಿದ್ದಾಗಲೂ ಗ್ರಾಮಾಂತರ ಪ್ರದೇಶಗಳಲ್ಲಿ ಸಹಜವಾಗಿ ಈ ಪದವನ್ನು ಬಳಸುವುದುಂಟು.

ಕುಱುಂಬನ ಕುತ್ತಕ್ಕೆ ಕುಱಿಯ ಪಿತ್ತಮೆ ಮರ್ದಾಯ್ತು

(ಮು. ಭಂಡಾರ, ಸಂ. ೨, ರಾ.ಮೇಧ.ಪು. ೧೩೩)

ಅಡವಿಯಲ್ಲಿ ಬಿಟ್ಟಾಗ ಸೀತೆ ಲಕ್ಷ್ಮಣನಿಗೆ ಇಷ್ಟು ಜನ ಮೈದುನರಿದ್ದೂ ತನಗೀಗತಿ ಬಂದಿತಲ್ಲಾ ಎಂದು ಹೇಳುವ ಸಂದರ್ಭ. ಕುರುಬನ ರೋಗ ನಿವಾರಣೆಗೆ ಕುರಿಯ ಪಿತ್ತವೇ ಮದ್ದು ಎಂಬುದು ಲೋಕಗಾದೆ. ಇಲ್ಲಿ ರಾಮನೆಂಬ ಕುರುಬನ ಮೇಲಿನ ಅಪವಾದವೆಂಬ ರೋಗನಿವಾರಣೆಗೆ ಕುರಿಯಂತೆ ಸಾಧುವಾದ ಸೀತೆಯ ಪರಿತ್ಯಾಗವೆ ನಿವಾರಣೋಪಾಯ ಎಂಬ ಸಾಮ್ಯತೆ ಇದೆ.

ದಯೆಯಿರ್ಕುಮಪ್ಪೊಡೆ ಲೋಗರನುವಿಂಗೊಂದು ದಮ್ಮಣಿಯ ನೇರ್ಪಡಿಸ್ಕೆ

(ಮು. ಭಂಡಾರ, ಸಂ. ೨, ರಾ. ಮೇಧ. ೧೩೫)

ರಾಮನ ಆದೇಶದಂತೆ ಸೀತೆಯನ್ನು ಕಾಡಿನಲ್ಲಿ ಬಿಟ್ಟು ಬರುವಾಗ ಲಕ್ಷ್ಮಣನಿಗೆ ಸೀತೆ 'ನನ್ನಲ್ಲಿ ದಯೆಯಿರುವುದಾದರೆ, ಜನರ ಅನುಕೂಲಕ್ಕೆಂದು ಒಂದು ಅರವಟ್ಟಿಗೆಯನ್ನು ಏರ್ಪಡಿಸು' ಎಂಬುದಾಗಿ ತಿಳಿಸುತ್ತಾಳೆ. ಅರವಟ್ಟಿಗೆ ಎಂದರೆ ದಾರಿಯ ಅಕ್ಕಪಕ್ಕಗಳಲ್ಲಿ ಕಟ್ಟಿಕೊಂಡ ಸಣ್ಣ ಮಂಟಪ ಎಂದು ಅರ್ಥ. ಬಾಯಾರಿ ಬಂದ ಪ್ರಯಾಣಿಕರಿಗೆ ಕುಡಿಯಲು ನೀರನ್ನು ಇಟ್ಟಿರುತ್ತಾರೆ.

ಪ್ರಯಾಣಿಕರಿಗೆ ಕುಡಿಯಲು ನೀರನ್ನು ಕೊಡುವುದಕ್ಕಾಗಿಯೇ ಹಿಂದಿನ ಕಾಲದಲ್ಲಿ ಅರವಟ್ಟಿಗೆಗಳಲ್ಲಿ ಹುಡುಗರನ್ನು ಇಟ್ಟಿರುತ್ತಿದ್ದರು. ಈ ಬಗೆಗೆ ಶಾಸನಗಳಲ್ಲಿ ಮಾಹಿತಿ ದೊರೆಯುತ್ತದೆ. ಅಲ್ಲದೆ ಅರವಟ್ಟಿಗೆಗಳಲ್ಲಿ ಬಂದವರಿಗೆ ನೀರು ಕೊಡುತ್ತಿದ್ದ ಯುವತಿಯರ ಬಗೆಗೆ ಕಾವ್ಯಗಳಲ್ಲಿ ಮಾಹಿತಿ ದೊರಕುತ್ತದೆ. ಸಾಮಾನ್ಯವಾಗಿ ಬೇಸಗೆಯ ದಿನಗಳಲ್ಲಿ ಇಂಥ ನೀರು ಕೊಡುವ ವ್ಯವಸ್ಥೆ ಇರುತ್ತಿತ್ತು. ಅರವಟ್ಟಿಗೆಗಳು ಬಹುಪಾಲು ದೇವಾಲಯಗಳಿಗೆ ಇಲ್ಲವೆ ಛತ್ರಗಳಿಗೆ ಹೊಂದಿಕೊಂಡೇ ಇರುತ್ತಿದ್ದವು. ಪುಣ್ಯ ಬರಲೆಂದು, ನೆನಪಿರಲೆಂದೂ ಅರವಟ್ಟಿಗೆಗಳನ್ನು ಕಟ್ಟಿಸುತ್ತಿದ್ದರು. ಸೀತೆ ಹೇಳಿದ ಮಾತಿನಲ್ಲೂ ಇಂಥದೇ ಆಶಯವಿರುವುದನ್ನು ಕಾಣುತ್ತೇವೆ. ಬಾಯಾರಿದ ದಾರಿ ಹೋಕ ಯುವಕನಿಗೆ ಅರವಟ್ಟಿಗೆಯ ನೀರೆರೆಯುವ ಹಳ್ಳಿಯ ಪ್ರಮದೆಯನ್ನು ಕುರಿತಾದ ಚಿತ್ರಗಳು ಗ್ರಾಮೀಣ ಸೊಗಡಿನಿಂದ ಕೂಡಿ ಹಳಗನ್ನಡ ಕಾವ್ಯಗಳಲ್ಲಿ ರಂಜಿಸುತ್ತವೆ.

ಇರುಳ್ ಕಂಡ ಬಾವಿಯೊಳ್ ಪಗಲೊಳ್ ಬಿದ್ದಂತೆ

(ರಾ. ಮೇಧ, ಪುಟ ೨೨೦)

ಸಾತ್ವನ ಎಂಬ ಬ್ರಾಹ್ಮಣನು ಮುನಿಗಳನ್ನು ಗಮನಿಸದೆ ಔಚಿತ್ಯಮೀರಿ ನೀರನ್ನು ಮುಕ್ಕಳಿಸಿ ಉಗುಳಿಬಿಟ್ಟನು. ಅದಕ್ಕೆ ಮುನಿಗಳು ಕೋಪಿಸಿಕೊಂಡು 'ಭೂಮಿಯಲ್ಲಿ ರಾಕ್ಷಸನಾಗಿ ಹುಟ್ಟು' ಎಂದು ಶಾಪ ಹಾಕಿದರು. ಆಗ ಮುನಿಗಳ ಮಹಿಮೆಯನ್ನು, ಪ್ರಾಬಲ್ಯವನ್ನು ಕುರಿತು ಸಾತ್ವನ ಹೇಳುವ ಸಂದರ್ಭ. ರಾತ್ರಿ ಕಂಡ ಬಾವಿಯಲ್ಲಿ ಹಗಲು ಬಿದ್ದ ಹಾಗೆ ಎಂಬುದು ಒಂದು ನುಡಿಗಟ್ಟು. ನಿಜಸ್ಥಿತಿ ಗೊತ್ತಿದ್ದರೂ, ಅಪಾಯವಿದೆ ಎಂದು ತಿಳಿದಿದ್ದರೂ ಹೋಗಿ ಸಿಕ್ಕಿ ಬೀಳುವಾಗ ಈ ಮಾತನ್ನು ವ್ಯಕ್ತಪಡಿಸುವುದುಂಟು.

ಕಡೆಗೆ ಹುಂಗುಟ್ಟದೆ ಗುಱುಗುಮ್ಮನಿರ್ಪಯ್

(ರಾ. ಮೇಧ. ಪು. ೨೪೦)

ಕತೆಯ ಕೊನೆಗೆ ಹುಂಗುಟ್ಟದೆ ಏನೂ ಮಾತನಾಡದೆ ಇದ್ದೀಯಲ್ಲ ಎಂದು ಹೆಂಡತಿ ಮನೋರಮೆಗೆ ಮುದ್ದಣ ಹೇಳುವ ಸಂದರ್ಭ. ಆಸಕ್ತಿಯಿಂದ ಕೇಳಿದರೆ ಮಾತ್ರ ಕತೆ ಹೇಳಲು ಸಾಧ್ಯ. ಕತೆಗಾರ ಕತೆ ಹೇಳುತ್ತಿದ್ದಾಗ ನಡುನಡುವೆ ಕೇಳುಗ ಹೂಗುಡುತ್ತಿರುತ್ತಾನೆ. ಈ ರೀತಿ ಹೂ ಗುಟ್ಟಿದರೆ ಮಾತ್ರವೇ ಕತೆ ಮುಂದುವರಿಯಲು ಸಾಧ್ಯ. ಜನಪದ ಕತೆಗಳು ಬದುಕಿರುವುದು

ಇಂಥ ತಂತ್ರಗಾರಿಕೆಯಲ್ಲಿ. ಕತೆಗಾರ ಕೇಳುಗನನ್ನು ತನ್ನ ಕಡೆ ಸದಾ ಸೆಳೆಯುವ ಮಾರ್ಗವೂ ಇದಾಗಿದೆ ಎನ್ನಬಹುದು. ಕತೆ ಕೇಳುವವನು ಆಸಕ್ತಿಯಿಂದ ಕೇಳಬೇಕು. ಹೇಳುವವನು ಅವನ ಆಸಕ್ತಿಯನ್ನು ಕೆರಳಿಸುವಂತೆ ಹೇಳಬೇಕು. ಇಲ್ಲವಾದರೆ ಕಥಾ ಸಾಹಿತ್ಯಕ್ಕೆ ಬೆಲೆಯೇ ಇಲ್ಲ.

ಹೋಳಿಗೆ ತುಪ್ಪಕ್ಕಿಂದೇಂ ನಿನಗೆ ಶೋಭನಮೆ ?

(ರಾ. ಮೇಧ, ಪು. ೨೪೩)

ಕತೆ ಮುಗಿದ ಮೇಲೆ ಮುದ್ದಣ ಹೆಂಡತಿಯನ್ನು 'ಈ ಮಂಗಳ ಸಮಯದಲ್ಲಿ ಹೋಳಿಗೆ ತುಪ್ಪವನ್ನು ತಿನ್ನಲು ಬಡಿಸುವುದಿಲ್ಲವೇ ?' ಎಂದು ಕೇಳುತ್ತಾನೆ. ಆಗ ಆಕೆ 'ಹೋಳಿಗೆ ತುಪ್ಪವನ್ನು ಮಾಡಲು ನಿನಗೇನು ಈದಿನ ಶೋಭಾನವೇ' - ಎನ್ನುತ್ತಾಳೆ. ಸೋಬಾನೆಗೆ ಪ್ರಸ್ತ, ಮಂಗಲ, ಶುಭ ಕರ್ಮಗಳು ಎಂಬ ಅರ್ಥಗಳಿವೆ. ಸೋಬಾನೆಯ ಹಾಡುಗಳೂ ಇವೆ. ಹೆಣ್ಣು ಗಂಡಿನ ಪ್ರಥಮ ರಾತ್ರಿಯ ಸಂದರ್ಭದಲ್ಲಿ ಹೋಳಿಗೆ ತುಪ್ಪದ ಅಡುಗೆಯನ್ನು ಮಾಡುತ್ತಿದ್ದಿರಬಹುದು. 'ನೇಮವಿದ್ದರೆ ವ್ರತ ಹೋಮವಿದ್ದರೆ ಶೋಭನ', 'ಬಾರು ಬಿಗಿದರೆ ಮದ್ದಳೆ ನಾರಿ ಇದ್ದರೆ ಶೋಭನ' - ಎಂಬಿತ್ಯಾದಿ ಗಾದೆ ಮಾತುಗಳೇ ಇವೆ.

ಚೋರ ಹೇಳಿದ ಲುಬ್ಧನರಿಯ ಕಥೆ

(ಚಾವುಂಪು. ಪು. ೪೨೯)

ಜಂಬೂಸ್ವಾಮಿ ಕಥಾಭಾಗದಲ್ಲಿ ಜಂಬುಕುಮಾರನಿಗೂ ಚೋರನಿಗೂ ಜರುಗಿದ ಮಾತುಕತೆಯ ಸಂದರ್ಭ. ನರಿಯೊಂದು ತಾನು ಕಚ್ಚಿಕೊಂಡಿದ್ದ ಮಾಂಸವನ್ನು ಬಿಸುಟು ನದಿಯಲ್ಲಿ ಹೊಳೆಯುತ್ತಿದ್ದ ಮೀನನ್ನು ಹಿಡಿಯಲು ಹಾರಿತು. ಆದರೆ ಮೀನು ಸಿಗಲಿಲ್ಲ. ಹರಿಯುತ್ತಿದ್ದ ನದಿಯಲ್ಲಿ ನರಿ ಕೊಚ್ಚಿ ಹೋಯಿತು. ಅತಿಲುಬ್ಧನಾದವನು ಹೀಗೆ ತಾನೂ ಹಾಳಾಗುತ್ತಾನೆಂಬುದು ಇದರಿಂದ ತಿಳಿಯುತ್ತದೆ. ಭೈರವೇಶ್ವರ ಕಥಾಮಣಿ ಸೂತ್ರರತ್ನಾಕರ ಭಾಗ ಒಂದರಲ್ಲಿಯೂ (೩೭೪) ಲುಬ್ಧ ನರಿಯ ಕಥೆ ಬರುತ್ತದೆ. ಜಾನಪದ ಆಶಯದ ಈ ಪ್ರಾಣಿಕಥೆ ತನ್ನಲ್ಲಿಯ ಸುಖವನ್ನು ಬಿಟ್ಟು ಅಗೋಚರ ಸುಖಕ್ಕೆ ಆಸೆ ಪಡುವುದು ದಡ್ಡತನವೆಂಬ ನೀತಿಗೆ ಇದು ಮಾದರಿಯಾಗಿದೆ. ಗುಳ್ಳೆನರಿ ಅತಿ ಬುದ್ಧಿವಂತ ಪ್ರಾಣಿ ಎಂದು ಹೆಸರು ಪಡೆದಿದ್ದರೂ ಅದು ಕೂಡ ಬೇಸ್ತು ಬೀಳುವುದುಂಟು ಎಂಬುದು ಈ ಅನ್ಯೋಕ್ತಿಯ ಸಾರ.

ಚೋರ ಹೇಳಿದ ಲೋಭಿ ನರಿಯ ಕಥೆ

(ಬಾವುಂ ಪು. ಪು. ೪೨೯)

ಜಂಬೂಸ್ವಾಮಿ ಕಥೆಯಲ್ಲಿ ಜಂಬೂ ಕುಮಾರನಿಗೂ ಚೋರನಿಗೂ ಜರುಗಿದ ಸಂಭಾಷಣೆಯ ಸಂದರ್ಭ. ಅರಣ್ಯದಲ್ಲಿನ ಆನೆಯನ್ನು ಕಿರಾತನೊಬ್ಬ ಬಾಣ ಬಿಟ್ಟು ಕೊಂದು ಹಾಕಿದ. ಮರದ ಪೊಟರೆಯಲ್ಲಿದ್ದ ಹಾವು ಆತನನ್ನು ಕಚ್ಚಿತು. ಅದನ್ನು ಸಾಯಿಸಿ ತಾನೂ ಸತ್ತ. ಹೀಗೆ ಆನೆ, ಬೇಡ, ಹಾವು ಸತ್ತದ್ದನ್ನು ಗಮನಿಸಿದ ನರಿ ಅವುಗಳನ್ನು ತಿನ್ನುವ ಆಸೆಯನ್ನು ವ್ಯಕ್ತಪಡಿಸಿತು. ಬಿಲ್ಲಿನ ಹುರಿಯನ್ನು ತಿನ್ನಲು ಹೋಗಿ ಹುರಿ ಹರಿದು ಪೆಟ್ಟುಬಿದ್ದು ತಾನೂ ಸತ್ತಿತು. 'ಆಸೆಯೇ ದುಃಖಕ್ಕೆ ಮೂಲ' ಎಂಬ ಗಾದೆಯ ಆಶಯಕ್ಕೆ ಇದು ತೀರಾ ಹತ್ತಿರವಿದೆ. ಇಂಥ ದುರಾಸೆಯುಳ್ಳ ನರಿಯ ಕಥೆ ದುರ್ಗಸಿಂಹನ ಪಂಚತಂತ್ರ (ಮಿತ್ರ ಕಾರ್‍ಯ ಪ್ರಕರಣ ೪ನೇ ಕಥೆ) ಸಂಸ್ಕೃತದ ಹಿತೋಪದೇಶದ ಕತೆಗಳಲ್ಲಿಯೂ ಬರುತ್ತದೆ. ಅತಿ ಆಸೆ ಕೆಟ್ಟದ್ದು ಎಂಬ ನೀತಿಯನ್ನು ಇದು ಒಳಗೊಂಡಿದೆ.

ಕಳ್ಳಾ, ಕಳ್ಳಾ, ಹುಲೀ ಇರಿ

(ಮುದ್ರಾ, ೨ ಪು. ೬)

ನವನಂದರು ನಿಷ್ಕಾರಣವಾಗಿ ಮೌರ್ಯ ಪುತ್ರರನ್ನು ಸಂಹರಿಸಲು ಯತ್ನಿಸುತ್ತಿದ್ದಾಗ ರಾಕ್ಷಸನು ಅವರಿಗೆ ಹೀಗೆ ಹೇಳುವನು. ಅವರು ಮುಂದೆ ಶತ್ರುಗಳಾದರೆಂಬ ನಿಶ್ಚಯವಿದ್ದರೆ 'ಕಳ್ಳಾ, ಕಳ್ಳಾ, ಹುಲೀ ಇರಿ' ಎಂಬ ಲೋಕಗಾದೆಯಂತೆ ಮುಂದೆ ಶತ್ರುಗಳು ನಿಮ್ಮ ಮೇಲೆ ಬೀಳಬಹುದಾದ ಸಂದರ್ಭದಲ್ಲಿ ಇವರನ್ನು ಉಬ್ಬಿಸಿ ಯುದ್ಧಕ್ಕೆ ಕಳುಹಿಸಿ ಹಗೆಗಳ ಕೈಯಿಂದಲೇ ಇವರ ನಿಗ್ರಹವನ್ನು ಮಾಡಿಸಬಹುದು. ಆಗ ನಿಮಗೆ ಲೋಕಾಪವಾದವೂ ತಪ್ಪುತ್ತದೆ. ಶತ್ರು ನಿಗ್ರಹವೂ ಆಗುತ್ತದೆ ಎಂದು ರಾಕ್ಷಸ ತಿಳಿಸುವನು.

ಹಿಂದೆ ಕಾಡಿನಲ್ಲಿ ಊರಿಂದೂರಿಗೆ ಪ್ರಯಾಣಿಸುವ ಕಾಲದಲ್ಲಿ ಕಳ್ಳರು ದರೋಡೆ ಮಾಡುತ್ತಿದ್ದರು. ಅವರಿಂದ ಬಚಾವಾಗಬೇಕಾಗಿತ್ತು. ಮತ್ತು ಕಾಡಿನ ಹುಲಿಗಳಿಂದಲೂ ತಪ್ಪಿಸಿಕೊಳ್ಳಬೇಕಾಗಿತ್ತು. ಹೀಗಿರುವಾಗ ಎರಡೂ ಅಪಾಯಗಳಿಂದ ರಕ್ಷಿಸಕೊಳ್ಳಲು ಈ ಗಾದೆ ಹುಟ್ಟಿಕೊಂಡಿದೆ. ಹುಲಿ ಎದುರಾಗಿದೆಯೆಂದು ಕಳ್ಳ ಹತ್ತಿರ ಬರಲಾರ ಮತ್ತು ಹುಲಿ ಇರುವುದಾದರೆ ಕೂಗಾಟಕ್ಕೆ ಬೆದರಿ ಓಡಿಹೋಗುವುದು, ಹೀಗೆ ಪ್ರಾಣಭಯದಿಂದ ದರೋಡೆಯಿಂದ ರಕ್ಷಿಸಿಕೊಳ್ಳಲು ಜಾನಪದ ಪ್ರಜ್ಞೆ ಕಂಡುಕೊಂಡ ಉಪಾಯಾಂತರದ ಗಾದೆ ಮಾತಿದು. ಈಗ ಕಾಡೂ ಇಲ್ಲ, ಹುಲಿಯೂ ಇಲ್ಲ. ಇದ್ದರೂ ಜನ ಹೀಗೆ ಪ್ರಯಾಣಿಸುವುದಿಲ್ಲ. ಆದ್ದರಿಂದ ಮೇಲಿನ ಗಾದೆ ಪ್ರಚಲಿತವಿಲ್ಲ.

ಇದಕ್ಕೆ ಸಂವಾದಿಯಾಗಿ ಅಗಸ ಮತ್ತು ಹುಲಿಯ ಪ್ರಸಂಗವಿದೆ. ಒಂದು ದಿನ 'ಹುಲಿ ಬಂತು ಹುಲಿ ಬಂತು' ಎಂದು ಅಗಸನೊಬ್ಬ ಹೊಳೆದಡದಲ್ಲಿ ಕೂಗಿಕೊಂಡ. ಜನರು ಬಡಿಗೆ ಹಿಡಿದು ಬಂದು ನೋಡಿದರು. ಹುಲಿ ಇಲ್ಲ, ಇನ್ನೊಂದು ದಿನವೂ ಹಾಗೆಯೇ ಕೂಗಿಕೊಂಡ ಜನರು ಕೆಲಸ ಕಾರ್ಯ ಬಿಟ್ಟು ಬಡಿಗೆ ಹಿಡಿದು ಬಂದರು. ಆದರೆ ಹುಲಿ ಇರಲಿಲ್ಲ. ಅಗಸನಿಗೆ ವಿನೋದ. ಮತ್ತೊಂದು ದಿವಸವೂ ಅವನು ಕೂಗಿಕೊಂಡ. ಆದರೆ ಜನರು ಸುಳ್ಳೆಂದು ಭಾವಿಸಿ ಯಾರೂ ಬರಲಿಲ್ಲ. ಅಗಸ ನಿಜಕ್ಕೂ ಹುಲಿಯ ಬಾಯಿಗೆ ತುತ್ತಾಗಿದ್ದ.

ಬ್ರಾಹ್ಮಣ ತೇಜಸ್ಸು ಕ್ಷಾತ್ರ ತೇಜಸ್ಸಂ ತಿರಸ್ಕರಿಸುವುದೆಂಬರ್ಥವು ಪುರಾಣ ಪ್ರಸಿದ್ಧವು

(ಮುದ್ರಾ, ೫ ೭೯)

ಸುಮತಿ ಎಂಬ ಮಂತ್ರಿಯು ಚಾಣಕ್ಯನ ಹಾಗೂ ಚಂದ್ರಗುಪ್ತರ ಸ್ನೇಹದ ಕಾರಣ ನಂದರ ರಾಜ್ಯಕ್ಕೆ ಗಂಡಾಂತರವಿದೆ ಎಂಬುದನ್ನು ಅಮಾತ್ಯ ರಾಕ್ಷಸನಿಗೆ ಹೇಳುತ್ತಾನೆ. ಬ್ರಾಹ್ಮಣರು ಮೇಲೆ ಎಂಬುದು ಇಲ್ಲಿನ ತಾತ್ಪರ್ಯ. ಬ್ರಾಹ್ಮಣ ಕ್ಷತ್ರಿಯರ ಪೈಪೋಟಿ ಸದಾ ಇರುತ್ತದೆ. ವಸಿಷ್ಠ ವಿಶ್ವಾಮಿತ್ರರಿಗೆ ಸಂಬಂಧಿಸಿದ ಪುರಾಣಕತೆಯನ್ನು ಗಮನಿಸಬಹುದು, 'ಬ್ರಹ್ಮ ತೇಜೋಬಲಂ ಬಲಂ, ಕ್ಷತ್ರಿಯ ಬಲಂ ದಿಗ್ಬಲಂ' ಎಂಬ ವಾಕ್ಯವುಂಟು. ಬ್ರಾಹ್ಮಣನ ಮಾತಿನ ಮಹಿಮೆಯೇ ಉಳಿದ ವರ್ಣಗಳನ್ನು ನಿರ್ವೀರ್ಯಗೊಳಿಸಬಲ್ಲುದು.

ಕೊಲ್ಲುವುದಕ್ಕೂ ಕೊಲ್ಲಿಸುವುದಕ್ಕೂ ಈಶ್ವರನೇ ಬಾಧ್ಯನು

(ಮುದ್ರಾ, ಪು. ೧೬೪)

ನವನಂದರು ಮಡಿದ ನಂತರ ಚಂದ್ರಗುಪ್ತನಿಗೆ ಜ್ಞಾತಿ ವಧೆ ಮಾಡಿದೆನೆಂಬ ಅನುತಾಪ ಹುಟ್ಟಿದಾಗ ಚಾಣಕ್ಯ ಹೀಗೆ ಸಮಾಧಾನಗೊಳಿಸುವನು. ಎಲ್ಲವೂ ಈಶ್ವರ ಇಚ್ಛೆಯ ಮೇರೆಗೆ ನಡೆಯುವುದು. ಮನುಷ್ಯ ಮಾತ್ರದವರ ಕೈಯಲ್ಲಿ ಏನಿದೆ ಎಂಬ ಗೀತೆಯ ಸಾರ ಇಲ್ಲಿ ವ್ಯಕ್ತವಾಗಿದೆ. ಹಿಂದೂ ದರ್ಶನ ಇದು. ಆದರೂ ಪೌರುಷ ಪ್ರಯತ್ನ ಬೇಡವೇ ಎಂದಾಗ ಅದೂ ಬೇಕು ಎಂಬುದು ಇನ್ನೊಂದು ತರ್ಕಸಾರ. ಪೌರುಷವಾದಿಗಳು, ದೈವವಾದಿಗಳು, ಸದ್ಯಃ ತೃಪ್ತವಾದಿಗಳು – ಹೀಗೆ ಮೂರು ಸ್ವಭಾವದ ಮನುಷ್ಯರು ಇರುತ್ತಾರೆ.

ಆಚರಣೆ ಮತ್ತು ನಂಬಿಕೆಗಳು

ಕಾರ್ತೀಕ ಋಷಿಯ ಕಥೆ

ಜಾನಪದ ಅಂಶಗಳ ದೃಷ್ಟಿಯಿಂದ ವಡ್ಡಾರಾಧನೆಯ ಈ ಕಥೆ ಮುಖ್ಯವಾಗುತ್ತದೆ. ತಂದೆ ಮಗಳನ್ನು ಮದುವೆಯಾಗುವುದು, ಆಟದ ಸಂದರ್ಭದಲ್ಲಿ ಹುಡುಗ ತನ್ನ ತಂದೆ ತಾಯಿಗಳ ವಿಷಯ ತಿಳಿಯುವುದು, ಪಗರಣದ ಆಟಗಳು, ಬಾದುಬ್ಬೆ ಪರ್ವದ ಸಂಗತಿಗಳು - ಇತ್ಯಾದಿ ಹಲವಾರು ಸಂಗತಿಗಳಿವೆ. ಕತೆ ಹೀಗಿದೆ : ಅಗ್ನಿರಾಜನಿಗೆ ಆರು ಜನ ಹೆಣ್ಣು ಮಕ್ಕಳು. ಕೃತ್ತಿಕೆ ಕೊನೆಯವಳು. ಸೌಂದರ್ಯಕ್ಕೆ ಮಾರು ಹೋಗಿ ಈಕೆಯನ್ನು ಮದುವೆಯಾಗಲು ತಂದೆ ಬಯಸಿದ. ರಾಣಿಯನ್ನು ಬೇಡಿ ಕೃತ್ತಿಕೆಯನ್ನು ಮದುವೆಯಾಗುತ್ತಾನೆ. ಆಕೆಯಿಂದ ಕಾರ್ತೀಕ (ಮಗ) ಮತ್ತು ವೀರಶ್ರೀ (ಮಗಳು) ಹುಟ್ಟಿದರು. ಇಂಥ ಅರಸನನ್ನು ಕಂಡ ಜನರೂ ರಾಜನ ಹಾಗೆಯೇ ಆಗುತ್ತಾರೆ. ತಂದೆ ಮಗಳನ್ನು ಮದುವೆಯಾಗುವ ಪದ್ಧತಿ ತುಂಬ ಹಳೆಯದು. ಬ್ರಹ್ಮ ತನ್ನ ಮಗಳನ್ನು ಮದುವೆಯಾದ ಸಂಗತಿ ವೈದಿಕ ಪುರಾಣದಲ್ಲಿದೆ. ಅನಾಗರೀಕವಾದ ಈ ಪದ್ಧತಿ ಕಾಲಕ್ರಮದಲ್ಲಿ ತಪ್ಪಿಹೋಗಿರಬಹುದು. ನಿಷೇಧಗೊಳ್ಳುತ್ತಿದ್ದ ಇಂಥ ಘಟನೆಯನ್ನು ಅಗ್ನಿರಾಜ ಮತ್ತು ಕೃತ್ತಿಕೆಯ ಸಂಬಂಧ ಪ್ರಾತಿನಿಧಿಕವಾಗಿ ನಿರೂಪಿಸುತ್ತದೆ. ಸುಂದರಿಯಾದ ಮಗಳನ್ನು ತಂದೆ ಮದುವೆಯಾಗುವ ಆಶಯದ ಕತೆಗಳು ಕನ್ನಡ ಜಾನಪದದಲ್ಲಿವೆ. 'ಕಂಚಿನ ತೇರು', 'ಮರಬುಗುಡಿ' (ಕೆ. ವೈ. ಶಿವಕುಮಾರ, ಎಪ್ಪತ್ತೊಂದು ಜನಪದ ಕತೆಗಳು) ಕತೆಗಳಲ್ಲಿ ಈ ಆಶಯವಿದೆ. ಈ ಪದ್ಧತಿ ಕೆಲವು ಕಡೆ ಒಪ್ಪಿತವಾದರೂ ಅನೇಕ ಕಡೆ ನಿಷೇಧವಾಗಿದೆ. ಸೋದರ ಸೋದರಿ ತಂದೆ ಮಗಳು, ತಾಯಿ ಮಗನ ಸಂಬಂಧ ಈ ರೀತಿ ಮೂರು ಬಗೆಯಲ್ಲಿ ಸಂಬಂಧದ ಬಗ್ಗೆ ಕಥೆಗಳಿವೆ. ಈಡಿಪಸ್‌ನ ಕಥೆಯೂ ತುಂಬ ಜನಪ್ರಿಯವಾಗಿದೆ. ಅಗಮ್ಯಗಮನ ಕಥಾಶ್ರೇಣಿಯಲ್ಲಿ ಕಾರ್ತೀಕ ಋಷಿಯ ಕಥೆ ತುಂಬ ಮುಖ್ಯವಾದು ದೆನ್ನಬಹುದು.

ನಾಗರ್ಗೆ ಪರಸಿ ಪೆತ್ತರಪ್ಪುದಱಿಂ ನಾಗಶ್ರೀಯೆಂದು ಪೆಸರನಿಟ್ಟರ್

(ವಡ್ಡಾ, ಪು. ೧೨)

ಸುಕುಮಾರಸ್ವಾಮಿ ಕಥೆಯಲ್ಲಿ ರಾಜಪುರೋಹಿತ ಸೋಮಶರ್ಮ ಮತ್ತು ಅವನ ಪತ್ನಿ ತ್ರಿವೇದಿ – ಇವರಿಗೆ ನಾಗಶ್ರೀ ಹುಟ್ಟುತ್ತಾಳೆ. ನಾಗದೇವರ ವರದಿಂದ ಹುಟ್ಟಿದವಳಾದುದರಿಂದ ಈಕೆಗೆ 'ನಾಗಶ್ರೀ' ಎಂಬ ನಾಮಕರಣ ಮಾಡುತ್ತಾರೆ. ಮಕ್ಕಳ ಫಲ ಬೇಡುವುದಕ್ಕೆಂದು ಹೋದವ್ವರ

ಬಗ್ಗೆ 'ಮಕ್ಕಳಂ ಬೇಡಿ ಸಂಬರನಾಗ ಠಾಣಕ್ಕೆ ಪರಕೆಗುಡಲ್ ಪೋಪುದಂ' ಎಂಬ ಪ್ರಯೋಗವಿದೆ. ಪಂಚಮಿಯಂದು ಪೆಣ್ಗೂಸುಗಳ್ವೆರಸು ಪಿರಿದು ಮರ್ಚನೆಯಂ (೧೨) ಮಕ್ಕಳ ಬೇಡಿ ದೇವತೆಗಳ್ಗಂ ಪರಸಿ ಪೂಜೆಯಂ ಮಾಡುತ್ತಿರ್ಪ್ಪೊರ್ಳ್ (೪೩) ಮೊದಲಾದ ಉಲ್ಲೇಖಗಳನ್ನು ಇಲ್ಲಿ ಗಮನಿಸಬಹುದು.

ಮಕ್ಕಳಿಲ್ಲದಿದ್ದರೆ ಮಾನಸಿಕ ನೆಮ್ಮದಿ ಇರುವುದಿಲ್ಲ. ಮಕ್ಕಳಿಲ್ಲದಿರುವವ ಸಮಾಜದಲ್ಲಿ ತಲೆ ಎತ್ತಿ ತಿರುಗಾಡುವುದೂ ಕಷ್ಟ. ಅಷ್ಟರಮಟ್ಟಿಗೆ 'ಬಂಜೆ,' 'ಗೊಡ್ಡುಮುಂಡೆ' ಎಂಬ ನಿಂದೆಗೆ ಗುರಿಯಾಗುತ್ತಾರೆ. ಇಂಥ ನಿಂದೆಗಳಿಂದ ತಪ್ಪಿಸಿಕೊಳ್ಳಲು ಮಕ್ಕಳಿಲ್ಲದ ಹೆಂಗಸರು ಸಂತಾನಕ್ಕಾಗಿ ನಾನಾ ರೀತಿಯ ಆಚರಣೆ ಸಂಪ್ರದಾಯಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದುಂಟು. ಇಷ್ಟ ದೈವಗಳಿಗೆ ಹರಕೆ ಹೊರುವುದು, ಉರುಳುಸೇವೆ ಮಾಡುವುದು, ದೇವರ ಮುಂದೆ ಬೋರಲು ಬೀಳುವುದು, ನಾಗರಪೂಜೆ, ಗಂಗಮ್ಮನ ಪೂಜೆ ಮಾಡುವುದು, ಅರಳಿಮರ ಪ್ರದಕ್ಷಿಣೆ ಹಾಕುವುದು, ಅಂತ್ರ ಮಂತ್ರ ಕಟ್ಟಿಸಿಕೊಳ್ಳುವುದು ಇತ್ಯಾದಿ ಆಚರಣೆ ಸಂಪ್ರದಾಯಗಳಲ್ಲಿ ತೊಡಗುತ್ತಾರೆ. ಈ ಸಂದರ್ಭದಲ್ಲಿ ಸಂತಾನ ಪ್ರಾಪ್ತಿಯಾದರೆ ಕರುಣಿಸಿದ ದೈವದ ಹೆಸರನ್ನಿಡುವ ಪದ್ಧತಿ ಇದೆ. ಗಂಡು ಮಗುವಾದರೆ ಗಂಡು ದೈವದ ಹೆಸರು ಹೆಣ್ಣು ಮಗುವಾದರೆ ಹೆಣ್ಣು ದೈವದ ಹೆಸರನ್ನೂ ಇಡುವುದುಂಟು. ಸುಕುಮಾರಸ್ವಾಮಿ ಕಥೆಯಲ್ಲೂ ಸಹ ನಾಗದೇವತೆಯ ಕೃಪೆಯಿಂದ ಹುಟ್ಟಿದ್ದರಿಂದ 'ನಾಗಶ್ರೀ' ಎಂದು ಕರೆಯುತ್ತಾರೆ. ಹೆಣ್ಣು ಮಗು ಬೇಕೆಂದು ಬೇಡಿಪಡೆದ ಅಪರೂಪದ ಪ್ರಸಂಗದ ದಾಖಲೆ ಇದು.

ತನ್ನ ಬತ್ತಮಂ ಚಂಪಾನಗರಕ್ಕೆ ಮಾಱಲೆಂದುಕೊಂಡು ಪೋಗಿ

(ವಡ್ಡಾ. ಪು. ೨೦)

ಸುಕುಮಾರಸ್ವಾಮಿ ಕಥೆಯಲ್ಲಿ ಬರುವ ಪ್ರಸಂಗ. ವೈನಯಿಕನೆಂಬ ಕಳ್ಳ. ಈತನ ಸಹಾಯಕ ವೈಕ. ಜನರಧಾನ್ಯವನ್ನು ಅರುವತ್ತು ಬಳ್ಳ ಅಳೆದುಕೊಂಡು ಅಳೆದಿರುವುದು ಇಪ್ಪತ್ತು ಬಳ್ಳ ಎಂದು ಹೇಳಿ ಮೋಸ ಮಾಡುತ್ತಿದ್ದ. ವ್ಯೋಮಕ ಎಂಬುವವನು ನೆಲದಲ್ಲಿ ರಂಧ್ರವನ್ನು ಕೊರೆದು ಮೇಲಿನ ರಾಶಿ ಭತ್ತ ಹಾಗೇ ಜರುಗಿ ನೆಲಮಾಳಿಗೆ ಸೇರುವಂತೆ ಮಾಡುತ್ತಿದ್ದ. ಮತ್ತುಒಮ್ಮೆ ಜಗದ್ಸ್ನಹನೆಂಬ ರೈತ ತಾನು ಬೆಳೆದ ಭತ್ತವನ್ನು ಮಾರುವುದಕ್ಕೆ ಚಂಪಾನಗರಕ್ಕೆ ಬರುತ್ತಾನೆ. ಆಗ ಇವರ ಮೋಸದ ಅರಿವಾಗಿ ಅರಸನಿಗೆ ದೂರು ಕೊಡುತ್ತಾನೆ. ರಾಜ ಕಳ್ಳತನ ಸುಳ್ಳಿನ ಅಪರಾಧಕ್ಕೆ ಅವರನ್ನು ಕೊಲ್ಲಿರೆಂದು ಆಜ್ಞೆ ಮಾಡುತ್ತಾನೆ. ಭತ್ತ ಬೆಳೆಯುತ್ತಿದ್ದ

ಕೃಷಿಕ ಪದ್ಧತಿಯನ್ನು ಮತ್ತು ರೈತರಿಗೆ, ಜನಸಾಮಾನ್ಯರಿಗೆ ಮಾಡುತ್ತಿದ್ದ ಮೋಸವನ್ನು, ಬಯಲಾದಾಗ ಅರಸನು ವಿಧಿಸುತ್ತಿದ್ದ ಶಿಕ್ಷಾ ಪದ್ಧತಿಯನ್ನು ವೊಡ್ಡಾರಾಧನೆಕಾರ ಇಲ್ಲಿ ದಾಖಲಿಸಿದ್ದಾನೆ.

ಅಂಗಡಿಯಲ್ಲೇ ಮಲಗುತ್ತಿದ್ದ ಯಜಮಾನರೂ ಇದ್ದರು. ಗಾಡಿಗಳಲ್ಲಿ ಸಾಮಾನು ಸರಂಜಾಮುಗಳನ್ನು ತುಂಬಿಕೊಂಡು ಸಾಗಿಸುತ್ತಿರುವಾಗ ತಮ್ಮ ಅನುಕೂಲಕ್ಕೆ ತಕ್ಕಂತೆ ಅಲ್ಲಲ್ಲಿ ನೆಲೆಸಿ ಮಾರಾಟ ಮಾಡುತ್ತಿದ್ದ ಶಾಕಟಿಕ ಪರದರ (೭೬) ಸಂಗತಿಗಳೂ ವೊಡ್ಡಾರಾಧನೆಯಲ್ಲಿ ದಾಖಲಾಗಿವೆ.

ಕಾಯ್ದು ಕರ್ಬೊನ್ನ ಪ್ರತಿಮೆಗಳನಪ್ಪವೇವೆಂ

(ವಡ್ಡಾ. ಪು. ೨೧)

ಸುಕುಮಾರಸ್ವಾಮಿ ಕಥೆಯಲ್ಲಿ ಬರುವ ಪ್ರಸಂಗ. ಮೋದಾಳಿಯನ್ನು ಬೋದನಿಗೆ ಮದುವೆ ಮಾಡಿಕೊಡುವ ವ್ಯವಸ್ಥೆ ಆಗುತ್ತಿರುತ್ತದೆ. ಇನ್ನೇನು ತಾಳಿ ಕಟ್ಟಬೇಕೆಂಬಷ್ಟರಲ್ಲಿ ನಂದ ಬರುತ್ತಾನೆ. 'ಈಗ ಅವಳು ನನ್ನ ತಮ್ಮನ ಹೆಂಡತಿ ನನಗೆ ಬೇಡ' ಎಂದು ನಂದ ಅಂದರೆ, 'ಇವಳು ಅಣ್ಣನ ಹೆಂಡತಿ ನನಗೆಬೇಡ' ಎಂದು ಬೋದನು ಹೇಳುತ್ತಾನೆ. ಹೀಗಾಗಿ ಆಕೆಗೆ ಮದುವೆ ಇಲ್ಲದೆ ತಂದೆಯ ಮನೆಯಲ್ಲಿಯೆ ಉಳಿಯುತ್ತಾಳೆ. ನಾಗಸೂರ ಎಂಬುವವನು ಎಂಟು ಜನ ಹೆಂಡಿರಿದ್ದರೂ ರಹಸ್ಯವಾಗಿ ಮೋಧಾಳಿಯೊಂದಿಗೆ ಪ್ರಣಯ ಸಂಬಂಧ ಬೆಳೆಸುತ್ತಾನೆ. ಅವಳೊಂದಿಗೆ ಆತ ಚಂಪಾನಗರಕ್ಕೆ ಬಂದದ್ದನ್ನೂ ತಳವಾರನು ಗಮನಿಸಿ ಅರಸನ ಗಮನಕ್ಕೆ ತರುತ್ತಾನೆ. ಅಕ್ರಮ ಸಂಬಂಧ ಬೆಳೆಸಿದ್ದರ ತಪ್ಪಿಗೆ ಕಾದ ಕಬ್ಬಿಣದ ಪ್ರತಿಮೆಗಳನ್ನು ತಬ್ಬಿಕೊಳ್ಳಬೇಕೆಂಬ ಶಿಕ್ಷೆಯನ್ನು ಅವರಿಗೆ ಅರಸನು ವಿಧಿಸುತ್ತಾನೆ. ಅನೈತಿಕ ಸಂಬಂಧ ಬೆಳೆಸುವುದು ನೀತಿಯುತವಲ್ಲ. ಅಂಥ ಸಂಬಂಧಗಳೇನಾದರೂ ಇದ್ದರೆ ಅವುಗಳನ್ನು ಕಂಡು ಅರಸನ ಗಮನಕ್ಕೆ ತರುವುದು ತಳವಾರನ ಕರ್ತವ್ಯವಾಗಿತ್ತು. ಹಾಗೆಯೇ ಇಂಥ ಅಪರಾಧಗಳನ್ನು ಮಾಡಿದವರನ್ನು ಅರಸನು ಸುಮ್ಮನೆ ಬಿಡುತ್ತಿರಲಿಲ್ಲ. ಅವರಿಗೆ ತಕ್ಕ ಶಿಕ್ಷೆಯನ್ನು ವಿಧಿಸಿ ತನ್ನ ಪ್ರಾಂತದ ಮರ್ಯಾದೆಯನ್ನು ಕಾಪಾಡಿ ಕೊಳ್ಳುತ್ತಿದ್ದ. ಈ ದೃಷ್ಟಿಯಿಂದ ರಾಜ ಆದರ್ಶನೆನಿಸಿಕೊಳ್ಳುತ್ತಿದ್ದ. ಆದರೆ ಮೋದಾಳಿಯನ್ನು ಕಾರಣಾಂತರಗಳಿಂದ ಪರಿತ್ಯಜಿಸಿದ ಬೋದ ಮತ್ತು ನಂದರಿಗೆ ಯಾವ ಶಿಕ್ಷೆಯೂ ಇಲ್ಲದಿರುವುದು ಇಲ್ಲಿ ಗಮನಾರ್ಹವೆನಿಸುತ್ತದೆ. ಕಡೆಗೂ ಹೆಣ್ಣು ಶಿಕ್ಷಾರ್ಹಳಾಗುವುದು ಅಂದಿನ ಸಮಾಜ ಒಪ್ಪಿದ ಮೌಲ್ಯವೇ ಆಗಿತ್ತು.

ಮೂಱು ದಿವಸಂ ನಿನಗಾಯುಷ್ಯಂ

(ವಡ್ಡಾ, ಪು. ೨೮)

ಸುಕುಮಾರ ಸ್ವಾಮಿ ಕಥೆಯಲ್ಲಿ ದಯಾಭದ್ರರು ಸುಕುಮಾರನನ್ನು ಕುರಿತು 'ನಿನಗೆ ಆಯಸ್ಸು ಉಳಿದಿರುವುದು ಇನ್ನು ಮೂರೇ ದಿನ' ಎಂದು ಹೇಳಿದರು. ಸಾವಿನ ಮುನ್ಸೂಚನೆ ನೀಡುವ ವಿವರಗಳು ವೊಡ್ಡಾರಾಧನೆಯಲ್ಲಿ ಹಲವಾರು ಕಡೆ ಬರುತ್ತವೆ. 'ನಿಮಗಿಂದಿನ ದಿವಸದ ನಿತೆಯಾಯಷ್ಯಂ' ನಿಮಗೆಲ್ಲರ್ಗ್ಗ ಕಱಿದೆಯಾಯುಷ್ಯಂ (೯೯) ನಿಮಗೆಲ್ಲರ್ಗ್ಗಮಿರ್ಪ್ಪತ್ತೊಂದು ದಿವಸಪಮಾಯುಷ್ಯಂ ನೀರದೆಸೆಯಿಂದಂ ನಿಮಗೆ ಸಾವಕ್ಕುಂ (೧೦೦) ಇತ್ಯಾದಿಯಾಗಿ ನಿರೂಪಿಸಲಾಗಿದೆ.

ಮುಂದೊದಗಲಿರುವ ಘಟನೆಗಳನ್ನು ಮುಂಚಿತವಾಗಿಯೇ ಭವಿಷ್ಯ ನುಡಿಯುವವರಿದ್ದಾರೆ; ಕಣಿ ಹೇಳುವವರಿದ್ದಾರೆ; ಶಾಸ್ತ್ರ ಹೇಳುವವರಿದ್ದಾರೆ. ಯಾವ ವಯಸ್ಸಿನಲ್ಲಿ, ಯಾವ ದಿನ, ಯಾವ ಹೊತ್ತಿಗೆ ಯಾರಿಂದ, ಯಾವುದರಿಂದ ಪ್ರಾಣ ಹೋಗುತ್ತದೆಂದು ಮುಂದಾಗಿಯೇ ಹೇಳುವ ರೂಢಿ ಇದೆ. ಸಾಮಾನ್ಯಕಾಗಿ ಜನಪದ ಕಥೆಗಳಲ್ಲಿ ಇಂಥ ಆಶಯಗಳು ಗೋಚರವಾಗುತ್ತವೆ. ಶಿಷ್ಟ ಸಾಹಿತ್ಯದಲ್ಲಂತೂ ಸಾವಿನ ಕಥೆ ಬಹಳವಾಗಿದೆ.

ಮೃತಕಮಂ ಕಂಡನಿಬರುಂ ಮೂರ್ಛೆವೋಗಿ ನೀಡಱಿಂದೆಟ್ಚತ್ತು ತಮ್ಮ ಬಸಿಱುಮಂ ತಲೆಯುಮಂ ಬಡಿದುಕೊಂಡು..

(ವಡ್ಡಾ, ಪು. ೩೦)

ಸುಕುಮಾರಸ್ವಾಮಿ ಸತ್ತಿರುವುದನ್ನು ಆತನ ತಾಯಿ ಮತ್ತು ಹೆಂಡಿರು ಕಂಡ ಸಂದರ್ಭ. ಸುಕುಮಾರಸ್ವಾಮಿಯ ರೂಪ, ತೇಜಸ್ಸು, ಯೌವ್ವನ, ಲಾವಣ್ಯ, ಸೌಭಾಗ್ಯ, ಕೀರ್ತಿ, ವಾಕ್ಚಾತುರ್ಯ, ದೇಹ ಮನಸ್ಸುಗಳ ಶೌಚ ಮತ್ತು ಸೊಬಗು, ಪ್ರೀತಿ, ಧೈರ್ಯ ಇತ್ಯಾದಿ ಗುಣಗಳನ್ನು ಸ್ಮರಿಸಿಕೊಂಡು ಅಳುವ ಪ್ರಸಂಗ. ಸತ್ತನಂತರ ಸತ್ತ ವ್ಯಕ್ತಿಯ ಸಂಬಂಧಿಕರು ಅಭಿವ್ಯಕ್ತಿಸುವ ದುಃಖದಲ್ಲಿ ವೈವಿಧ್ಯತೆಗಳಿವೆ. ಅಳುವುದು, ಹಿಂದಿನ ಸಾಧನೆಗಳನ್ನು ನೆನಪಿಸಿಕೊಳ್ಳುವುದು, ಉಪವಾಸವಿರುವುದು ನೆನಪಿಗಾಗಿ ಯಾವುದಾದರೂ ಆಹಾರ ಪದಾರ್ಥವನ್ನು ಮಿಾಸಲು ಬಿಡುವುದು, ಎದೆ ಬಡಿದು ಕೊಳ್ಳುವುದು, ತಲೆ ಬಡಿದುಕೊಳ್ಳುವುದು, ಬಾಯಿ ಬಡಿದುಕೊಂಡು ಅಳುವುದು, ಧೂಳಲ್ಲಿ ಬಿದ್ದು ಹೊರಳಾಡುವುದು, ಬಟ್ಟೆ ಬರೆಗಳನ್ನು ಹರಿದುಕೊಳ್ಳುವುದು, ತಲೆ ಬೋಳಿಸುವುದು, ಸಹ ಗಮನ ಹೊಂದುವುದು, ಗರುಡ ಆಗುವುದು

ಮೊದಲಾದ ಕ್ರಿಯೆಗಳನ್ನು ಸಾವಿನ ಸಂದರ್ಭದಲ್ಲಿ ಕಾಣುತ್ತೇವೆ. ಸುಕುಮಾರಸ್ವಾಮಿಯ ಕತೆ ಇದಕ್ಕೆ ಸಮರ್ಥ ಉದಾಹರಣೆಯಾಗಿದೆ.

. . . ಯೌವನಂ ನೆಱೆದ ಕೂಸಿನ ರೂಪಂ ನೋಡುತ್ತಿರ್ದಾರ್ಗೆ ಕುಡುವಮೆಂದು ತಮ್ಮೊಳೆ ನುಡಿಯುತ್ತಿರ್ಪಿನಂ

(ವಡ್ಡಾ. ಪು. ೩೩)

ಸುಕೌಶಳ ಸ್ವಾಮಿ ಕಥೆಯಲ್ಲಿ ಬರುವ ಪ್ರಸಂಗ. ವಯಸ್ಸಿಗೆ ಬಂದ ಮಗಳು ಬಸದಿಗೆ ಹೋಗಿ ಸಿದ್ಧ ಸೇಸೆಗಳನ್ನು ತಂದು ತಂದೆ ತಾಯಿಗಳಿಗೆ ಕೊಡುತ್ತಾಳೆ. ಪ್ರಸಾದವನ್ನು ಸ್ವೀಕರಿಸಿದ ತಂದೆ ಮಗಳು ವಯಸ್ಸಿಗೆ ಬಂದಿದ್ದಾಳೆಂದು ಭಾವಿಸಿ ಆಕೆಯನ್ನು ಯಾರಿಗೆ ಕೊಟ್ಟು ಮದುವೆ ಮಾಡಬೇಕು ಎಂದು ಯೋಚಿಸುತ್ತಾನೆ. ಅಥವಾ ಮಗಳ ಮದುವೆಯ ಬಗ್ಗೆ ಮಂತ್ರಿಗಳಲ್ಲಿ ಚರ್ಚಿಸಿ ಸಲಹೆ ಪಡೆಯುತ್ತಾನೆ. ಜೈನ ಕಥೆಗಳಲ್ಲಿ ಬರುವ ಸಾಮಾನ್ಯ ಮಾದರಿ ಇದು. ಸುಕೌಶಳ ಸ್ವಾಮಿ ಕಥೆಯಲ್ಲಿ ಬರುವ ಸುಕೇಶಿನಿಯ ಬಗ್ಗೆ ಅವಳ ತಂದೆ ತಾಯಿಯರು ಇದೇ ಬಗೆಯಲ್ಲಿ ಯೋಚಿಸುತ್ತಾರೆ. ಚಾವುಂಡರಾಯ ಪುರಾಣದಲ್ಲಿಯೂ ಇಂಥ ಪ್ರಸಂಗವಿದೆ. ವಯಸ್ಸಿಗೆ ಬಂದ ಮಗಳಿಗೆ ಮದುವೆ ಮಾಡಲೇಬೇಕೆಂಬ ಜವಾಬ್ದಾರಿ ತಂದೆ ತಾಯಿಗಳಿಗೆ ಯಾವತ್ತೂ ಇದ್ದ ವಿಚಾರವೇ. ಮೈಸೂರು ಜಿಲ್ಲೆ ಕೊಳ್ಳೇಗಾಲ, ಯಳಂದೂರು, ಚಾಮರಾಜನಗರ, ನಂಜನಗೂಡು ಮುಂತಾದ ತಾಲ್ಲೂಕುಗಳಲ್ಲಿ ವಯಸ್ಸಿಗೆ ಬಂದ ಹೆಣ್ಣು ಮಗಳನ್ನು ಕೂಸು ಎಂದು ಸಂಬೋಧಿಸುವುದು ಈಗಲೂ ಪ್ರಚಲಿತವಿದೆ.

ಸ್ವಯಂಬರದೊಳ್ ತನ್ನ ಭಾಗ್ಯದೊಳ್ ಮಚ್ಚಿದವರಂ ಕಯ್ಕೊಳ್ಗೆಂದು..

(ವಡ್ಡಾ. ಪು. ೪೦)

ಸುಕೌಶಳ ಸ್ವಾಮಿಯ ಕಥೆಯಲ್ಲಿ ಬರುವ ಸನ್ನಿವೇಶ. ಮನೋಹರಿಯ ಮದುವೆಗೆ ಸಂಬಂಧಿಸಿದ್ದು. ಇವಳ ಮದುವೆಗೆ ಬೇರೆ ಬೇರೆ ಅರಸು ಮಕ್ಕಳ ಪ್ರಸ್ತಾಪವಾಗಿರುತ್ತದೆ. ಅವರೆಲ್ಲ ಯೋಗ್ಯರಾದವರಲ್ಲ ಎಂದು ತೀರ್ಮಾನಿಸಿ ಸ್ವಯಂವರ ಪದ್ಧತಿಯ ಮೂಲಕ ಯೋಗ್ಯ ವರನನ್ನು ಆಕೆ ಆರಿಸಿಕೊಳ್ಳಲಿ ಎಂಬ ಸಲಹೆಗಳು ಬರುತ್ತವೆ. ರಾಜಕುಮಾರಿಯರು ಇಷ್ಟಪಟ್ಟವನನ್ನು ಆಯ್ಕೆ ಮಾಡಿಕೊಳ್ಳುವ ಒಂದು ವಿವಾಹ ಪದ್ಧತಿ ಕ್ಷತ್ರಿಯರಲ್ಲಿ ರೂಢಿಯಲ್ಲಿತ್ತು. ಶಿವಧನುಸ್ಸನ್ನು

ಎತ್ತಿದವರಿಗೆ ಸೀತೆಯನ್ನು ಕೊಡುತ್ತೇನೆಂದು ಹೇಳಿ ಸೀತಾ ಸ್ವಯಂವರವನ್ನು ಏರ್ಪಡಿಸಿದ್ದುಂಟು. ಮತ್ಸ್ಯ ಯಂತ್ರವನ್ನು ಭೇದಿಸಿದವರಿಗೆ ದ್ರೌಪದಿಯನ್ನು ಕೊಡುವುದೆಂದು ಹೇಳಿ ದ್ರೌಪದಿ ಸ್ವಯಂವರವನ್ನು ಏರ್ಪಡಿಸಿದ್ದುಂಟು. ಹಾಗೆಯೇ ಮನುಷ್ಯತ್ವವಿರುವ ನಳನನ್ನು ಪಡೆಯಲು ದಮಯಂತಿಯ ಸ್ವಯಂವರವೂ ಜರುಗುತ್ತದೆ. ಒಟ್ಟಾರೆ ಸ್ತ್ರೀಯ ಲೈಂಗಿಕ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯುವ ಒಂದು ವಿಶಿಷ್ಟ ವಿವಾಹ ಪದ್ಧತಿ ಎಂದು ಹೇಳಬಹುದು. ಹಾಗೆಯೇ ಕಟ್ಟಿಕೊಳ್ಳಬೇಕಾದವನ ತೋಳ್ಬಲವನ್ನ, ಯುಕ್ತಿಯನ್ನು ಪರೀಕ್ಷಿಸುವ ಸುಸಂದರ್ಭವೂ ಆಗಿದೆ ಎನ್ನಬಹುದು. ಸ್ವಯಂವರದಲ್ಲಿ ಮೂರು ವಿಧಗಳಿವೆ. ಇವು ಕ್ಷತ್ರಿಯರಿಗೆಂದೇ ಮಿಸಲಾದುವು. ಇಚ್ಛಾ ಸ್ವಯಂವರವೆಂಬುದು ಮೊದಲನೆಯದು. ಎರಡನೆಯದು ಸವ್ಯ ವಾಸ್ತವ ಸ್ವಯಂವರ. ಮೂರನೆಯದು ಶೌರ್ಯ ಶುಲ್ಕ ಸ್ವಯಂವರ. ಇಚ್ಛಾ ಸ್ವಯಂವರಕ್ಕೆ ಯಾವುದೇ ನಿರ್ಬಂಧವಿಲ್ಲ. ವಧು ತನ್ನ ಇಚ್ಛೆಯ ಮೇರೆಗೆ ಯಾರನ್ನು ಬೇಕಾದರೂ ತನ್ನ ಗಂಡನನ್ನಾಗಿ ಆರಿಸಿಕೊಳ್ಳಬಹುದು. ದಮಯಂತಿಯ ಸ್ವಯಂವರ ಇದಕ್ಕೆ ಒಳ್ಳೆಯ ಉದಾಹರಣೆ. ಸವ್ಯ ವಾಸ್ತವ ಸ್ವಯಂವರದಲ್ಲಿ ವರ ಕೆಲವು ಅರ್ಹತೆಗಳನ್ನು ಪಡೆದುಕೊಂಡಿರಲೇ ಬೇಕಾಗಿರುತ್ತದೆ. ಸೀತಾ ಸ್ವಯಂವರದಲ್ಲಿ ರಾಮ ತ್ರಯಂಬಕ ಎಂಬ ಧನುಸ್ಸನ್ನು ಎಳೆದು ಸೀತೆಯನ್ನು ವಿವಾಹವಾದ. ಶೌರ್ಯ ಶುಲ್ಕ ಸ್ವಯಂವರ ಸಾಹಸೀ ನಾಯಕರಿಗೆ ಸಂಬಂಧಪಟ್ಟದ್ದು, ಅರ್ಜುನ ಸುಭದ್ರೆಯನ್ನು ವಿವಾಹವಾದುದು ಈ ರೀತಿಯಲ್ಲೇ. ಇತ್ತೀಚಿನವರೆಗೂ ರಜಪೂತರಲ್ಲಿ ಸ್ವಯಂವರ ಪದ್ಧತಿ ಇತ್ತು, ಒಟ್ಟಿನಲ್ಲಿ ಸ್ವಸಾಮರ್ಥ್ಯವುಳ್ಳ ಗಂಡು ಸ್ವಯಂವರನಾಗುವುದೇ ಸ್ವಯಂವರ ಪದ್ಧತಿ.

ನಮ್ಮೊರೊಳಿರೆ ನಮಗೆ ಸಾವುಂ ಕೇಡು ಮೋಘುಮಕ್ಕುಮಿವವನನಟ್ಟಿ...

(ವಡ್ಡಾ. ಪು. ೭೬)

ಭದ್ರಬಾಹು ಭಟ್ಟಾರರ ಕಥೆಯಲ್ಲಿ ಬರುವ ಪ್ರಸಂಗ. ನಂದಿ ಮಿತ್ರನ ಬದುಕಿನಲ್ಲಿ ಸಂಭವಿಸುವ ಘಟನೆ ಇದು. ದೇವಿಲನೆಂಬುವವನು ಗಾಡಿ ಹೊಡೆಯುವವನು. ಈತನ ಹೆಂಡತಿ ಪೃಥ್ವಿಶ್ರೀ. ಈಕೆ ಗರ್ಭಿಣಿಯಾದೊಡನೆಯೇ ದೇವಿಲನ ಸಂಪತ್ತು ನಾಶವಾಯಿತು. ಅಲ್ಲದೆ ಆತ ಬೇರೆ ಗಾಡಿಯವರ ಜೊತೆಯಲ್ಲಿ ಗಾಡಿಗಳಲ್ಲಿ ಹತ್ತಿ ಮತ್ತು ಧಾನ್ಯವನ್ನು ತುಂಬಿ ತೆಗೆದುಕೊಂಡು ಹೋಗುತ್ತಿದ್ದಾಗ ಅದನ್ನು ಕಳ್ಳರು ಲೂಟಿ ಮಾಡಿ, ದೇವಿಲನನ್ನು ಕೊಂದು, ಎತ್ತುಗಳನ್ನು ಸೂರೆ ಮಾಡುತ್ತಾರೆ. ನಂದಿಮಿತ್ರ ಹುಟ್ಟಿದ ಮೂರು ತಿಂಗಳಲ್ಲಿಯೇ ತಾಯಿಯೂ ಮರಣ ಹೊಂದುತ್ತಾಳೆ. ಅನಾಥವಾದ ಮಗುವನ್ನು ನೆಂಟರು ಸಾಕತೊಡಗಿದಾಗ ಅವರು ಸಾಯುತ್ತಾರೆ. ಹೀಗೆ ಮಗು ತಾಯಿಯ ಗರ್ಭದಲ್ಲಿರುವಾಗಲೇ ಕುಟುಂಬದಲ್ಲಿ ದುರಂತದ ಸೂಚನೆಗಳು ಒಂದಾದ

ಮೇಲೊಂದರಂತೆ ಕಾಣಿಸುತ್ತವೆ. ಹುಟ್ಟಿದ ಮೇಲೂ ದುರಂತಗಳು ಮುಂದುವರಿಯುತ್ತವೆ. ಮಗುವಿನ ಜನನದಿಂದಲೇ ಹೀಗಾಗುತ್ತಿರುವುದು ಎಂಬುದು ಜನರಿಗೆ ಖಾತ್ರಿಯಾಗುತ್ತದೆ. ಒಳ್ಳೆಯದು ಕೆಟ್ಟದ್ದರ ಬಗ್ಗೆ ನಂಬಿಕೆಗಳನ್ನಿಟ್ಟುಕೊಂಡಿದ್ದ ಊರವರು ಈ ಮಗು ಇಲ್ಲಿದ್ದರೆ ತಮಗೂ ಅಪಾಯವೆಂದು ಭಾವಿಸಿ ನಂದಿಮಿತ್ರನನ್ನು ಊರು ಬಿಡಿಸುತ್ತಾರೆ. ಅಪಶಕುನದ ಕಾರಣವಾಗಿ ಮಕ್ಕಳನ್ನು ಬಹಿಷ್ಕರಿಸುವ ಇಂಥ ಉದಾಹರಣೆಗಳು ವಡ್ಡಾರಾಧನೆಯಲ್ಲಿ ಅಲ್ಲಲ್ಲಿ ಕಾಣಿಸಿಕೊಳ್ಳುತ್ತವೆ. ಚಂದ್ರಹಾಸನ ಕತೆಯನ್ನು ಹೋಲುವ ಕತೆಗಳು ಜಗತ್ತಿನಲ್ಲಿ ಉಂಟು.

ಮುಂಬರುವ ಅಪಾಯದ ಸೂಚನೆಯಾಗಿರುವ ಲಕ್ಷಣಗಳೂ ಇವೆ. ಇಂತಹ ವಿಷಯಗಳಲ್ಲಿ ಪ್ರಾಚೀನ ಜನರಲ್ಲಿ ನಂಬಿಕೆಯೂ ಇತ್ತು. ಭದ್ರಬಾಹು ಭಟಾರರು ಒಂದು ಸಲ ಮನೆಯೊಂದಕ್ಕೆ ಭಿಕ್ಷೆಗೆ ಹೋದಾಗ ಆ ಮನೆಯಲ್ಲಿ ಯಾರೂ ಇರಲಿಲ್ಲ. ತೊಟ್ಟಿಲಲ್ಲಿ ಮಾತ್ರ ಒಂದು ಮಗುವಿತ್ತು. 'ಬೋಳಹ ಬೋಳಹ ಭಟಾರ' ಎಂದಿತು. ಎಷ್ಟು ಕಾಲ ಎಂದು ಕೇಳಿದ್ದಕ್ಕೆ ಹನ್ನೆರಡು ವರ್ಷ ವೆಂದಿತು. ಕಾಲದೋಷದಿಂದ ಹನ್ನೆರಡು ವರ್ಷ ಪ್ರಜಾಪೀಡೆಯಾಗುವುದೆಂದು ತಿಳಿಸಿದರು. ಚಂದ್ರಗುಪ್ತನೂ ಸಹ ಹದಿನಾರು ಕೆಟ್ಟ ಕನಸುಗಳನ್ನು ಕಾಣುತ್ತಾನೆ. ಇವೆಲ್ಲ ಅಪಾಯದ ಮುನ್ಸೂಚನೆ ಎಂದು ಭದ್ರಬಾಹು ಮುನಿಗಳು ಚಂದ್ರಗುಪ್ತನಿಗೆ ತಿಳಿಸುತ್ತಾರೆ. ಅಂದಿನ ಜನ ಜೀವನ ಅವರ ಕಲ್ಪನೆಗಳು ಇವೆಲ್ಲ ಹೇಗಿದ್ದವು ಎಂಬುದಕ್ಕೆ ಮೇಲಿನ ಪ್ರಸಂಗಗಳು ನಿದರ್ಶನವಾಗಿವೆ.

ಪದಿನಾಱುಂ ಕನಸುಗಳಂ

(ವಡ್ಡಾ. ಪು. ೮೬)

ಭದ್ರಬಾಹು ಭಟ್ಟಾರರ ಕಥೆಯಲ್ಲಿ ದೊರೆ ಚಂದ್ರಗುಪ್ತನು ಹದಿನಾರು ಕನಸುಗಳನ್ನು ಕಾಣುತ್ತಾನೆ. 'ಸೂರ್ಯ ಮುಳುಗುವುದು, ಕಲ್ಪವೃಕ್ಷದ ಕೊಂಬೆ ಮುರಿಯುವುದು, ನೆಲಕ್ಕೆ ಬರುತ್ತಿದ್ದ ವಿಮಾನವು ಬರದೆ ಮಧ್ಯದಿಂದಲೇ ಮೇಲಕ್ಕೆ ಹೊರಟುಹೋಗುವುದು, ಹನ್ನೆರಡು ತಲೆಯ ಹಾವು, ಚಂದ್ರನು ಒಡೆದುದು, ಅತ್ಯಂತ ವೇಗಶಾಲಿಗಳಾದ ಎರಡು ಆನೆಗಳು ತಮ್ಮಲ್ಲೇ ಹೋರಾಡಲು ತೊಡಗಿ ಹಿಂಜರಿದು ಹೊರಟು ಹೋದದ್ದು, ಮಿಂಚು ಹುಳು, ನೀರಿಲ್ಲದ ಕೆರೆಯ ನಡುಭಾಗ, ಹೊಗೆ ಹೆಚ್ಚಿದ ಕಾಳ್ಗಿಚ್ಚು, ಸಿಂಹಾಸನವನ್ನು ಹತ್ತಿದ ಕೋಡಗ, ಚಿನ್ನದ ತಟ್ಟೆಯಲ್ಲಿ ನಾಯಿ ಪಾಯಸ ನೆಕ್ಕುವುದು, ಕೋಡಗವು ಹತ್ತಿ ಕುಳಿತ ಮದ್ದಾನೆ, ಕಸದ ಕುಪ್ಪೆಯಲ್ಲಿ ತಾವರೆ ಹುಟ್ಟಿದುದು, ಸಮುದ್ರ ದಡ ಮೀರಿ ಬಂದದ್ದು, ಬಿಳಿಯ ಕತ್ತೆ ಹೂಡಿದ ಹೊನ್ನ ರಥ ರಾಜರು ಬಿಳಿ ಕತ್ತೆಗಳನ್ನು ಹತ್ತುವುದು' (ವಡ್ಡಾರಾಧನೆ ಕಥಾಲೋಕ ಪು. ೭೫) ಇವೇ ಮೊದಲಾದ ಹದಿನಾರು ಕೆಟ್ಟ ಕನಸುಗಳನ್ನು ಆತ ಕಂಡಿದ್ದು.

ಜನಪದರು ತಾವು ಕಂಡ ಕನಸುಗಳ ಬಗ್ಗೆ ಮಾತನಾಡುವ ಪರಿಪಾಠವಿದೆ. ಬೆಳಗಿನ ಜಾವ ಬಿದ್ದ ಕನಸುಗಳು ಶುಭವೆಂದು ಹೇಳುವುದುಂಟು. ತಾವು ಕಂಡ ಕನಸುಗಳನ್ನು ಹಿರಿಯಲ್ಲಿ ಹೇಳಿಕೊಂಡು ಅದರ ಫಲಾಫಲಗಳನ್ನು ಗ್ರಹಿಸುವುದುಂಟು. ಜೈನ ಕಥೆಗಳಲ್ಲಿಯೂ ಇದು ಬರುತ್ತದೆ. ಇದನ್ನು ಸ್ವಪ್ನಾಶಯ ಎಂದು ಕರೆಯುತ್ತಾರೆ. ಇಲ್ಲಿಯೂ ಸಹ ದೊರೆ ಚಂದ್ರಗುಪ್ತನು ತಾನು ಕಂಡ ಕನಸುಗಳ ಫಲಾಫಲ ಏನೆಂದು ಭದ್ರಬಾಹು ಮುನಿಯನ್ನು ಕೇಳಿ ತಿಳಿದುಕೊಳ್ಳುವುದುಂಟು. ಒಟ್ಟಾರೆ ಕೆಟ್ಟ ಕನಸುಗಳು ಭವಿಷ್ಯದಲ್ಲಿ ತೊಂದರೆಯಾಗುವುದೆಂಬುದರ ಮುನ್ಸೂಚನೆಗಳೆನ್ನುತ್ತಾರೆ.

ಕನಸುಗಳ ಮೂಲಕ ಭವಿಷ್ಯ ಹೇಳುವುದು ಜಗತ್ತಿನಾದ್ಯಂತ ಇರುವ ಒಂದು ಪ್ರಾಚೀನ ಅಭ್ಯಾಸ. ಕನಸು ತುಂಬ ಬಹಿರಂಗವಾಗಿ ಸ್ಪಷ್ಟವಾಗಿರಬಹುದು. ಉದಾಹರಣೆಗೆ, ನೀನು ಮಾಡಲಿರುವ ಕೆಲಸ ವಿನಾಶಕಾರಿಯಾದದ್ದು ಎಂದು ಸತ್ತ ಪೂರ್ವಜನೊಬ್ಬನು ವ್ಯಕ್ತಿಗೆ ಕನಸಿನಲ್ಲಿ ಬಂದು ಎಚ್ಚರಿಸಬಹುದು, ಅಥವಾ ಅದು ಸಾಂಕೇತಿಕವಾಗಿರಬಹುದು. ಉದಾಹರಣೆಗೆ, ಏಳು ಕೊಬ್ಬಿದ ಹಸುಗಳು ಮತ್ತು ಏಳು ಸಣಕಲು ಹಸುಗಳು ಕನಸಿನಲ್ಲಿ ಕಾಣಿಸಿಕೊಂಡವು. ಇದು ಏಳು ವರ್ಷಗಳು ಸಮೃದ್ಧಿ ಮತ್ತು ಏಳು ವರ್ಷಗಳು ಬರಗಾಲವನ್ನು ಸೂಚಿಸುತ್ತದೆ. ಇಂಥ ಸಂಕೇತಗಳನ್ನು ವ್ಯಾಖ್ಯಾನಿಸುವ ಮಾದರಿಗಳೂ ಇರುತ್ತವೆ. ಉದಾಹರಣೆಗೆ ಹಾವನ್ನು ಕಾಮದ ಅಥವಾ ಶತ್ರುವಿನ ಸಂಕೇತ ಎಂದು ಹೇಳಲಾಗುತ್ತದೆ. ಮಾನಸಿಕ ವಿಶ್ಲೇಷಣೆಯ ಕನಸಿನ ಸಂಕೇತಗಳೂ ಇದೇ ವರ್ಗಕ್ಕೆ ಸೇರುತ್ತವೆ. ಆಧುನಿಕ ಮನಃಶಾಸ್ತ್ರವು ಕನಸುಗಳನ್ನು ಅರ್ಥೈಸುವಲ್ಲಿ ವಿಶೇಷ ಸಹಾಕಾರಿಯಾಗಿದ್ದು ವ್ಯಕ್ತಿಯ ಮನೋ ವ್ಯಾಪಾರಗಳನ್ನು ವಿಶ್ಲೇಷಿತುತ್ತದೆ.

ಧರ್ಮಂಗೆಯ್ದವರ್ ಸೌಧರ್ಮ ಈಶಾನ ಸನತ್ಕುಮಾರ ಮಾಹೇಂದ್ರ ಬ್ರಹ್ಮ ಬ್ರಹ್ಮೋತ್ತರ ಲಾಂತವ ಕಾಪಿಷ್ಠ ಶುಕ್ರ ಮಹಾಶುಕ್ರ ಶತಾರ ಸಹಸ್ರಾರ ಆನತ ಪ್ರಾಣ ತಾರಣಾಚ್ಯುತಮೆಂಬ ಪದಿನಾಲ್ಕು ಕಲ್ಪಂಗಳೊಳಂ...

(ವಡ್ಡಾ. ಪು. ೯೭)

ಲಲಿತ ಘಟೆ ಕಥೆಯಲ್ಲಿ ಅಭಂಗಘೋಷರ ಉಪದೇಶದ ಸನ್ನಿವೇಶ. ಪಾಪ ಮಾಡಿ ನರಕವಾಸಿಗಳಾದವರ ಕತೆಯಿರುವಂತೆ ಪುಣ್ಯಮಾಡಿ ಸ್ವರ್ಗಲೋಕ ಪ್ರವೇಶಿಸಿದವರ ವಿವರಗಳೂ ಇವೆ. ಮೇಲಿನ ಲೋಕಗಳ ವರ್ಣನೆಯೇ ವಡ್ಡಾರಾಧನೆಯಲ್ಲಿ ಕಂಡು ಬರುತ್ತದೆ. ಇಲ್ಲಿಯ ಸನ್ನಿವೇಶವೂ ಅದೇ ಆಗಿದೆ. ಸುಖ ದುಃಖಗಳು ಮನುಷ್ಯನ ಬದುಕಿನಲ್ಲಿ ವರ್ತುಲದಂತೆ

ಸುತ್ತುತ್ತಿರುತ್ತವೆ. ಒಳ್ಳೊಳ್ಳೆಯ ಕೆಲಸಗಳನ್ನು ಮಾಡಿದವರಿಗೆ 'ಸೌಧರ್ಮ, ಈಶಾನ, ಸನತ್ಕುಮಾರ, ಮಾಹೇಂದ್ರ, ಬ್ರಹ್ಮ ಬ್ರಹ್ಮೋತ್ತರ, ಲಾಂತವ, ಕಾಪಿಷ್ಠ, ಶುಕ್ರ, ಮಹಾಶುಕ್ರ, ಶತಾರ, ಸಹಸ್ರಾರ, ಆನತ, ಪ್ರಾಣತ, ಆರಣ, ಅಚ್ಯುತ ಎಂಬ ಹದಿನಾರು ಕಲ್ಪಗಳಲ್ಲಿಯೂ ಅದಕ್ಕಿಂತ ಮೇಲಿರುವ ಸುದರ್ಶನ, ಅಮೋಘ, ಸುಪ್ರಬುದ್ಧ, ಯಶೋಧರ, ಸುಭದ್ರ, ಸುವಿಶಾಳ, ಸುಮನಸ, ಸೌಮನಸ, ಪ್ರೀತಿಂಕರ ಎಂಬ ಒಂಬತ್ತು ಗ್ರೈವೇಯಕಗಳಲ್ಲಿಯೂ ಅದಕ್ಕಿಂತ ಮೇಲಿರುವ ಲಚ್ಚಿ, ಮಹಾಲಚ್ಚ, ಮಾಳಿನಿ, ವೈರ ವೈರೋಚನೆ, ಸೋಮೆ, ಸೋಮರೂಪ, ಅಂಕೆ, ಪಳಿಕೆ, ಅಯಿಚ್ಚೆ - ಎಂಬ ಒಂಬತ್ತು ಅನುದ್ಧಿಸೆಗಳಲ್ಲಿಯೂ ಅದಕ್ಕಿಂತ ಮೇಲಿರುವ ವಿಜಯ, ವೈಜಯಂತ, ಜಯಂತ, ಅಪರಾಜಿತ, ಸರ್ವಾರ್ಥ ಸಿದ್ಧಿ ಎಂಬ ಐದು ಅನುತ್ತರೆಗಳಲ್ಲಿಯೂ ಇಂದ್ರ, ಪ್ರತೀಂದ್ರ, ಸಾಮಾನಿಕ, ತ್ರಯಸ್ತ್ರಿಂಶ, ಪಾರಿಷದ, ಆತ್ಮರಕ್ಷ, ಲೋಕಪಾಲ, ಅಹಮಿಂದ್ರ ಎಂಬ ಪದವಿಯನ್ನು ಪಡೆದು ಹುಟ್ಟುತ್ತಾರೆ. ಅವರಿಗೆ ಅಣಿಮಾ ಮಹಿಮಾ, ಲಘಿಮಾ, ಪ್ರಾಪ್ತಿ, ಪಾಗಲ್ಭ್ಯ, ಈಶಿತ್ವ, ವಶಿತ್ವ, ಕಾಮ ರೂಪಿತ್ವ ಎಂಬ ಎಂಟು ಗುಣಗಳಿಂದ ಕೂಡಿದ ಐಶ್ವರ್ಯ ಸಿದ್ಧಿಸುತ್ತದೆ. ದಿವ್ಯವಾದ ರೂಪ, ಲಾವಣ್ಯ, ಸೌಭಾಗ್ಯ, ಕಾಂತಿಗಳನ್ನು ಅವರು ಪಡೆಯುತ್ತಾರೆ. ಅವರ ಉಸಿರು ಪರಿಮಳಿಸುತ್ತದೆ ; ಆಯುಷ್ಯವಿರುವ ಅವರು ನವಯೌವನರಾಗಿಯೇ ಇರುತ್ತಾರೆ. ಮೃತ್ಯು, ಅಪಮೃತ್ಯು, ಮೂತ್ರ, ಪುರೀಷಗಳೂ, ಗಂಡ, ಕಕ್ಷಾ, ಕುಕ್ಷಿ ಪ್ರದೇಶಗಳಲ್ಲಿ ರೋಮಗಳೂ, ರೋಗ, ಶೋಕ, ದುಃಖಗಳೂ, ರಸ, ರುಧಿರ, ಮಾಂಸ, ಮೇದಸ್ಸು, ಅಸ್ಥಿ, ಮಜ್ಜ, ಶುಕ್ಲ ಎಂಬ ಸಪ್ತ ಧಾತುಗಳೂ ಇರುವುದಿಲ್ಲ. ಸಹಜವಾದ ಕಟಕ, ಕಟಸೂತ್ರ, ಕುಂಡಲಾದಿ ಹದಿನಾರು ಆಭರಣಗಳನ್ನು ಧರಿಸಿ ದಿವ್ಯವಸ್ತ್ರಗಳನ್ನಿಟ್ಟು ಸೂರ್ಯನಿಗಿಂತ ಅಧಿಕ ತೇಜೋವಂತರಾಗಿ ರೆಪ್ಪೆ ಹೊಡೆಯುವಷ್ಟು ತೆರಪಿಲ್ಲದೆ ಎರಡು ಸಾಗರ ಕಾಲದಿಂದ ೩೩ ಸಾಗರ ಕಾಲದವರೆಗೆ ದಿವ್ಯಭೋಗಗಳನ್ನು ಅನುಭವಿಸುತ್ತಾರೆ. ಆಟಪಾಟ, ವಿನೋದಗಳಿಂದ ದೇವಿಯರು ಅಪ್ಸರೆಯರೊಂದಿಗೆ ದಿವ್ಯ ಸುಖವನ್ನು ಸವಿದು ಆಮೇಲೆ ಮನುಷ್ಯಗತಿಗೆ ಬರುತ್ತಾರೆ' (ವಡ್ಡಾರಾಧನೆ ಕಥಾಲೋಕ, ಪು. ೮೫)

ಮೇಲಿನ ಲೋಕಗಳನ್ನು ತಲುಪಿದವರು ಸುಖ ಅನುಭವಿಸುವರೆಂಬ ಕಲ್ಪನೆ ಇದೆ. ಮೇಲು ಮೇಲಿನ ಲೋಕಗಳನ್ನು ಯಾರು ತಲುಪುತ್ತಾರೋ ಅಂಥವರು ಪರಮಸುಖಿಗಳಾಗಿರುತ್ತಾರೆಂಬ ನಂಬಿಕೆ, ಕಲ್ಪನೆ ಇದರಿಂದ ಮೂಡುತ್ತದೆ. ಪುಣ್ಯ ಪಾಪ ಎರಡೂ ಮಾಡಿದವರು ಮನುಷ್ಯಗತಿಯನ್ನು ಪಡೆಯುವರೆಂಬ ಕಲ್ಪನೆಗೂ ಇಲ್ಲಿ ಅವಕಾಶವಿದೆ.

ಉಪವಾಸಗೆಯ್ದು ಪಾರಣೆಯ ದಿವಸದಂದು...

(ವಡ್ಡಾ. ಪು. ೧೦೭)

ಉಪವಾಸದ ನಂತರ ಮಾಡುವ ಊಟವನ್ನು ಪಾರಣೆ ಎಂದು ಕರೆಯುತ್ತಾರೆ. ವಡ್ಡಾರಾಧನೆಯ ಕತೆಗಳಲ್ಲಿ ಇದರ ಪ್ರಸ್ತಾಪ ಬರುತ್ತದೆ. 'ಮಾಸೋಪವಾಸದ ಪಾರಣೆಯಂದು ಚರಿಗೆವೊಕ್ಕು ಕಿಱಿಯಮನೆ ಪೆರ್ಮನ್ನೆಯನ್ನದುಣಲ್ ತಕ್ಕ ಮನೆಗಳಂ ಯಥಾಕ್ರಮದಿಂ ಪುಗುತ್ತಂ ಬರುತ್ತಿದ್ದರು.' ಜೈನ ಸನ್ಯಾಸಿಗಳು ಆಹಾರಕ್ಕಾಗಿ ಮಾಡುವ ಸಂಚಾರವನ್ನು ಚರಿಗೆ ಎನ್ನುತ್ತಾರೆ. ಭೈಕ್ಷ, ಬಾವರಿ ಎಂಬಿತ್ಯಾದಿ ಹೆಸರುಗಳಿಂದಲೂ ಕರೆಯುತ್ತಾರೆ. ಊರೆಲ್ಲ ತಿರುಗಿದರೂ ಒಮ್ಮೊಮ್ಮೆ ಭಿಕ್ಷೆ ದೊರಕುತ್ತಿರಲಿಲ್ಲ. ಆಗ ಯತಿಗಳು ಸಂಯಮದಿಂದಲೇ ಹಿಂತಿರುಗಬೇಕು. ಮಾಮೂಲಿಯಂತೆ ತಪಸ್ಸಿನಲ್ಲಿ ಮುಳಗಬೇಕು. ದಿನಕ್ಕೆ ಒಂದು ಸಲ ಮಾತ್ರ ಇಂಥ ಭಿಕ್ಷಾಟನೆ ಜರುಗುತ್ತಿತ್ತು. ಆಗಲೂ ಆಹಾರ ದೊರಕದಿದ್ದರೆ ತುಟಿಪಿಟಿಕ್ಕೆನ್ನದೆ ಆದ ನೋವನ್ನು ಸಂಯಮದಿಂದಲೇ ತಡೆದುಕೊಳ್ಳಬೇಕಿತ್ತು. ಅವರು ಅಡಿಗೆ ಮಾಡಿಕೊಳ್ಳುವಂತಿಲ್ಲ. ರಾತ್ರಿಯ ವೇಳೆಯಲ್ಲಿ ತಿನ್ನುವಂತಿಲ್ಲ. ಸಿಕ್ಕರೆ ಹಗಲಲ್ಲಿ ಮಾತ್ರ ಊಟ ಮಾಡಬೇಕು. ಈ ಎಲ್ಲವನ್ನು ಗಮನಿಸಿದರೆ ಮುನಿಗಳ ಬದುಕು ಅತ್ಯಂತ ಕಷ್ಟಕರವಾಗಿತ್ತೆಂದು ತಿಳಿದುಬರುತ್ತದೆ.

ಉಪವಾಸ ವ್ರತವನ್ನು ಮಾಡಿ ಪಾರಣೆಯ ದಿನ ಭಿಕ್ಷಾಟನೆಗೆಂದು ಧರ್ಮಘೋಷ ಭಟಾರರು ಒಂದು ಗೊಲ್ಲರ ಕೇರಿಯನ್ನು ಪ್ರವೇಶಿಸುತ್ತಾರೆ. ಅವರು ಪ್ರವೇಶಿಸುವ ಮುನ್ನವೇ ಆ ಕೇರಿಯೇ ಪಾಳೆಯವೆತ್ತಿ ಬೇರೊಂದೆಡೆ ಹೋಗಿತ್ತು. ಮುಂದೆ ಹೋಗಲು ಸಾಧ್ಯವಾಗದೆ ಆ ಭಟಾರರು ಅಲ್ಲಿಯೇ ಮೂರ್ಛೆಯಿಂದ ಬಿದ್ದರು. ಧರ್ಮಕೀರ್ತಿ ಭಟಾರರು ಆ ಪಾಳೆಯವನ್ನು ಹುಡುಕಿಕೊಂಡೇ ಹೋಗುತ್ತಾರೆ. ಅದಿರುವ ಜಾಗಕ್ಕೆ ಬರುವಷ್ಟರಲ್ಲಿ ಅದು ಅಲ್ಲಿಂದಲೂ ಬೇರೆಡೆಗೆ ಗುಳೆ ಹೋಗಿ ಬಿಡುತ್ತದೆ. ಇವೆಲ್ಲವನ್ನು ಗಮನಿಸಿದರೆ ಜಿನಮುನಿಗಳ ಕಥೆಗಳು ಬಯಲು ಸೀಮೆಯ ಬರಡು ಭೂಮಿಯಲ್ಲಿ ಜರುಗಿದಂತೆ ತೋರುತ್ತದೆ. ಇಲ್ಲವಾದರೆ ಗೆಡ್ಡೆ ಗೆಣಸು, ಹಣ್ಣು ಕಾಯಿಗಳಾದರೂ ದೊರೆಯುತ್ತಿದ್ದವು.

ಬಾದುಬ್ಬೆಯ ಪರ್ವಮುಂ ಪಗರಣದಾಟ ಪಾಟಮು ಮಾದುವು..

(ವಡ್ಡಾ. ಪು. ೧೧೮)

ಕಾರ್ತೀಕ ಋಷಿಯ ಕಥೆಯಲ್ಲಿ ಬರುವ ಪ್ರಸಂಗ. ಭಟಾರರ ತಂಗಿ ವೀರಶ್ರೀ ತನ್ನ ಅಣ್ಣನನ್ನು ಸ್ಮರಿಸುತ್ತ ಯಾವಾಗಲೂ ಅಳುತ್ತಿದ್ದಳು. ಈಕೆಯ ಅಳುವನ್ನು ನಿಲ್ಲಿಸಿದವರಿಗೆ ಬೇಕಾದ ಹಾಗೆ

ಉಡುಗೊರೆಗಳನ್ನು ಕೊಡುವೆನೆಂದು ಘೋಷಿಸುತ್ತಾನೆ. ಆಗ ಮುಖವಾಡಗಳನ್ನು ಧರಿಸಿದ ಅನೇಕರು ಆಕೆಯ ಮುಂದೆ ತಮ್ಮ ಪ್ರತಿಭೆಯನ್ನು ಪ್ರದರ್ಶಿಸುತ್ತಾರೆ. ಪಗರಣದ ವೇಷಗಾರರೂ ಬಂದು ಪ್ರತಿಭಾ ಪ್ರದರ್ಶನ ಮಾಡುತ್ತಾರೆ. ಅದರಲ್ಲಿ ಒಬ್ಬ ಕರಿಯ ಲಂಗೋಟಿ ತೊಟ್ಟು, ಮೈಯೆಲ್ಲ ಕಪ್ಪು ಬಳಿದುಕೊಂಡು, ತಲೆಬೋಳಿಸಿಕೊಂಡು ಬಾಯಲ್ಲಿ ಕವಡೆಗಳನ್ನು ಜೋಡಿಸಿಕೊಂಡು ಆಕೆಯ ಮುಂದೆ ಬಂದು ಇದೋ ನಿಮ್ಮಣ್ಣ ಬಂದಿದ್ದಾನೆ ಎಂದು ನಗಿಸಿಬಿಡುತ್ತಾನೆ. ತನ್ನ ವಿಚಿತ್ರ ವೇಷದಿಂದ ನಗಿಸಿದ ವೇಷಗಾರನಿಗೆ ಅರಸ ಬಹುಮಾನ ನೀಡುತ್ತಾನೆ. ಅಂದಿನಿಂದ ಅಲ್ಲಿ ಬಾದುಬ್ಬೆಯ ಹಬ್ಬ ಮತ್ತು ಪಗರಣಿಗರ ಆಟಗಳು ರೂಢಿಗೆ ಬರತೊಡಗಿದವು.

ಬಾದುಬ್ಬೆ ಒಂದು ಕ್ಷುದ್ರದೇವತೆ. ವೈಶಾಖ ಮಾಸದ ಅಮಾವಾಸ್ಯೆಯಂದು ಆಚರಿಸುವ ಒಂದು ಹಬ್ಬ ಬಾದುಬ್ಬೆ ಹಬ್ಬ. ವೈಶಾಖದ ಅಮಾವಾಸ್ಯೆಗೆ ಬಾದಾಮಿ ಅಮಾವಾಸ್ಯೆ ಎನ್ನುತ್ತಾರೆ. ಉತ್ತರ ಕರ್ನಾಟಕದಲ್ಲಿ ಇದು ರೂಢಿಯಲ್ಲಿದೆ. ಬಾದುಬ್ಬೆ ದೇವತೆಗೆ ಉಂಬಳಿಯಾಗಿ ಜಮೀನನ್ನು ಬಿಡುತ್ತಿದ್ದರಂತೆ. ಇಂಥ ಭೂದತ್ತಿಗಳಿಗೆ ಬಾದುಂಬೆಯ ಪಾಳು ಎಂದು ಕರೆಯುತ್ತಾರೆ. ಬಾದುಬ್ಬೆ ಪರ್ವ ಮೂಲತಃ ಜೈನರದೆಂದು ಹೇಳುವುದುಂಟು. ರಂಜಾನ್ ಹಬ್ಬದಲ್ಲಿಯಂತೆ ಬಾದುಬ್ಬೆಯ ಹಬ್ಬದಲ್ಲಿಯೂ ವೇಷಗಳನ್ನು ಕಟ್ಟುತ್ತಿದ್ದರು. ಈ ಹಬ್ಬವನ್ನು ಶಾಸನಗಳೂ ಹೆಸರಿಸಿವೆ. (ಕ. ಶಾ. ಅ. ೧೯೩)

'ಸಾಯಿರ ಖಂಡುಗಮಂ ಬೆಳೆದಾವೊಕ್ಕಲ ಮಗನದೊಂದು ಕಂಬಮ ನೊಯಿದಿಟ್ಟಾವೂರಿನ ಬಾದುಂಬೆಗೆ ಸಾಯಿರಮಂ ಬೆಳೆದನೆಂದು ನುಡಿ ಪಮೂರ್ಧರ್' (ಸಮಪ ೯-೪೨), 'ಪೆಜೆಯಂ ಗೋಕುಳಮಂ ಗಿರಿ ಪ್ರಕರಮಂ ಬಾದುಂಬೆಯಂ ಕಾಂತಿಯಂ. . .. ದೈವಂಗಳೆಂದಿಂತು ಕೂರ್ತೆಱಗುತ್ತಿರ್ಪವರೆಂತು ಮುಕ್ತಿವಡೆವರ್' (ಕವಿಚ ೧, ೧೩೪) - ಎಂಬ ಪ್ರಯೋಗಗಳಿವೆ.

ವೇಷ ಹಾಕಿಕೊಂಡು ಮಾಡುವ ಅಭಿನಯದ ನಟನೆಯೇ 'ಪಗರಣದಾಟ' ಅಭಿನಯದ ಮುಖಾಂತರ ಜನರನ್ನು ನಗಿಸುವವನೇ ಪಗರಣಿಗ. 'ಆಗಳಾನಗಿಸಿದ ಪಗರಣಿಗಂಗೆ ಪಿರಿದು ಕಸವರಮನಿತ್ತೊ ಸಂದಿದತ್ತ ಬಾದುಬ್ಬೆಯ ಪರ್ವಮುಂ ಪಗರಣದಾಟ ಪಾಟಮು ಮಾದುವು' ವಡ್ಡಾ (೧೧೮-೨೨) ಪೊಲೆಯರ್ಬಡಿವ ಪಜೆಯೋಜೆಗಾಡುವ ಪಗರಣಿಗರಂ ಕಂಡ ವರ್ಸಗುಂವರಲ್ಲದೆಯವರಾಟಕ್ಕೆ ಲಕ್ಷಣವುಂ ನೋಡರ್ (ಧರ್ಮಾಮೃತ ೫-೧೦೩) 'ನಗೆಗೆಡೆಯಾಗಿರೆ ಸಿಂಗದ ಮೊಗಮುಂ ಧರಿಯಿಸಿ ನಿಶಾಟನಂ ನೀಂ ಕೊಂದ್ಯೆ ಪಗರಣಿಗರಲ್ಲ ದುಟಿದರ್ ಮೊಗಮುಂ ಪೆಱತೊಂದನೆಂತು ಮೇಂ ಧರಿಯಿಪರೇ (ಜಗವಿ ೧೭-೩೭) ಹಗರಣದಾಟವನೆಲ್ಲಿ ಕಲಿತೆಯಯ್ಯ (ಪುರಂದರ) ತಿಪ್ಪೆಯ ನೀರಂತೆ ಬಡವನ ಮಹಿಮೆಯಂತೆ ಪಗರಣದಾನೆಯಂತೆ . . . . ಸನಾ ಗ್ಗವಂ ಬಿಟು.(ದರ್ಮಾ ೮–೯೪) ಎಂಬತೆ ಂಟು ಪವಾದವ

ಮೆಱೆದು ಹಗರಣದ ಚೋಹದಂತಾಯಿತ್ತೆನ್ನ ಭಕ್ತಿ (ಬಸವಣ್ಣ) ಇತ್ಯಾದಿ ಪ್ರಯೋಗಗಳಲ್ಲಿ ಪಗರಣದ ಪ್ರಸ್ತಾಪವಿರುವುದನ್ನು ಕಾಣಬಹುದು.

ನರಕಂಗಳೊಳ್ ಪುಟ್ಟಿ ದುಃಖಂಗಳನೆಯ್ದುವರ್

(ವಡ್ಡಾ. ಪು. ೧೨೬)

ವಿದ್ಯುಚ್ಚೋರರಿಸಿಯ ಕಥೆಯಲ್ಲಿ ಬರುವ ಸನ್ನಿವೇಶ. ಶಿವಗುಪ್ತಾಚಾರ್ಯರು ವರ್ಣಿಸುವ ನರಕದ ವರ್ಣನೆಯ ಸಂದರ್ಭವಿದು. ತಪ್ಪು ಮಾಡಿದವರಿಗೆ ತಕ್ಕ ಶಿಕ್ಷೆ ಇದು ಎಲ್ಲ ಕಾಲದಲ್ಲಿಯೂ ಇದ್ದದ್ದೆ. ಅಪರಾಧಕ್ಕೆ ತಕ್ಕ ದಂಡವನ್ನು ಕಟ್ಟಬೇಕಾಗುತ್ತದೆ. ಇದು ಭಾರತೀಯರಲ್ಲಿರುವ ನಂಬಿಕೆ. ಧಾರ್ಮಿಕ ದಂಡಸಂಹಿತೆಯ ಪ್ರಕಾರ ಪಾಪದ ಪರಿಣಾಮವಾಗಿ ಮಾನವ ನರಕ ಶಿಕ್ಷೆಯನ್ನು ಅನುಭವಿಸಿಯೇ ತೀರುತ್ತಾನೆಂಬುದನ್ನು ಜೈನಧರ್ಮ ನಂಬುತ್ತದೆ. ಶಿವಗುಪ್ತಾಚಾರ್ಯರು ವರ್ಣಿಸಿರುವ ನರಕದ ವರ್ಣನೆ ಹೀಗಿದೆ: ವ್ರತ, ಶೀಲ ಚಾರಿತ್ರ ಗುಣಗಳಿಲ್ಲದವರೂ, ಜೀವಗಳನ್ನು ಕೊಲ್ಲುವವರೂ, ಬೇಟೆಯಾಡುವವರೂ, ರಾಗ ದ್ವೇಷ ಲೋಭಗಳಿಂದಾಗಿ ಸುಳ್ಳು ಹೇಳಿ ಜೀವಗಳಿಗೆ ಸಂತಾಪ ಉಂಟು ಮಾಡುವವರೂ, ಮೋಸ ಮಾಡುವವರೂ, ಕದಿಯುವವರೂ ಪರಸ್ತ್ರೀಯರೊಂದಿಗೆ ಕಳ್ಳತನದ ಬಾಳ್ವೆ ನಡೆಸುವವರೂ, ಇತರರ ಸೊತ್ತನ್ನು ಅಪಹರಿಸಿ ಸಂಗ್ರಹಿಸುವವರೂ, ಮಧು, ಮದ್ಯ, ಮಾಂಸ, ಐದು ನಿಷಿದ್ಧ ಮರದ ಹಣ್ಣುಗಳು, ಅಣಬೆ, ಸೆಣಬಿನ ಹೂವುಗಳನ್ನು ಸೇವಿಸುವವರೂ, ಕುಡಿಯಬಾರದ್ದನ್ನು ಕುಡಿದು, ತಿನ್ನಬಾರದ್ದನ್ನು ತಿನ್ನುವವರೂ ಇವರೆಲ್ಲರೂ ಪಂಚಮಹಾಪಾತಕಗಳನ್ನು ಮಾಡಿದವರೇ ಸರಿ. ಸತ್ತ ಮೇಲೆ ಏಳು ನರಕಗಳಲ್ಲಿ ಹುಟ್ಟಿ ಅಪಾರವಾದ ದುಃಖಗಳನ್ನು ಪಡೆಯುತ್ತಾರೆ. ಹಗಲು ರಾತ್ರಿ ಒಂದೇ ಸಮನೆ ನರಕಗಳಲ್ಲಿ ಬೇಯುವ ಇವರಿಗೆ ರೆಪ್ಪೆ ಹೊಡೆಯುವಷ್ಟು ಹೊತ್ತಾದರೂ ಸುಖವಿಲ್ಲ. ಅವರ ಪಾಲಿಗೆ ದುಃಖವೊಂದೇ. ಉಗುರಗಳಿಗೆ ಕಾದ ಕಬ್ಬಿಣದ ಸಲಾಕಿಗಳನ್ನು ಚುಚ್ಚುತ್ತಾರೆ. ಗರಗಸದಿಂದ ದೇಹವನ್ನು ಸೀಳುತ್ತಾರೆ. ಬಹು ಕಾಲದ ದುಃಖವನ್ನು ಅನುಭವಿಸುತ್ತಾರೆ. ಇರಿ, ಹೊಡೆ, ಚೂರು ಚೂರು ಮಾಡು, ಮೂಳೆಗಳನ್ನು ಮುರಿ, ಮರ್ಮ ಸ್ಥಾನಗಳನ್ನು ತಿವಿದು ಗಾಯಗೊಳಿಸು, ಗಾಯಕ್ಕೆ ಕುದಿಯುವ ಲೋಹದ ರಸವನ್ನು ಸುರಿ, ಸೊಂಟವನ್ನು ಕತ್ತರಿಸು, ತೊಡೆಯನ್ನು ಮುರಿ, ನಡುಗುತ್ತಿರುವ ಈ ದುಷ್ಟನನ್ನು ಹಿಡಿದು ಅಲುಗದಂತೆ ಕಟ್ಟಿ, ಹೆಡತಲೆಗೆ ದೊಣ್ಣೆಯಿಂದ ಹೊಡೆ, ಕೊಲ್ಲು, ಕುಟ್ಟು, ಇರಿ, ಮುರಿ, ಕಡಿ, ಕುತ್ತಿ ಕರುಳುಗಳನ್ನು ಹಿರಿದು ಹಾಕು, ಮುಖವನ್ನು ಸುಡು ಎಂದು ನರಕದವರು ಅವರನ್ನು ಮುತ್ತಿಕೊಂಡು ನಾನಾ ಶಿಕ್ಷೆಗಳನ್ನು ಕೊಡುತ್ತಾರೆ. ಒನಕೆ, ಈಟಿಗಳಿಂದ ತಿವಿದು ಕರುಳು ಮಾಲೆ ಮಾಲೆಯಾಗಿ ಹೊರಕ್ಕೆ ಸುರಿಯುವಂತೆ ಮಾಡುತ್ತಾರೆ. ಕೈ

ಕಾಲುಗಳನ್ನು ಅಗಲಿಸಿ ಕಟ್ಟಿ ಗರಗಸದಿಂದ ಉದ್ದಕ್ಕೆ ಸೀಳುತ್ತಾರೆ. ಹೀಗೆ ನಾನಾ ಪ್ರಕಾರವಾದ ಯಾತನೆಗಳನ್ನು ರೆಪ್ಪೆ ಹೊಡೆಯುವಷ್ಟಾದರೂ ಬಿಡುವಿಲ್ಲದಂತೆ ಮೂವತ್ತು ಮೂರು ಸಾಗರ ಕಾಲ ಅನುಭವಿಸುತ್ತಾರೆ" (ವಡ್ಡಾರಾಧನೆ ಕಥಾಲೋಕ, ಪು. ೧೧೨)

ಇಪ್ಪತ್ತೆಂಟು ನರಕಗಳಿವೆಂಬುದನ್ನು ಪುರಾಣಗಳು ಉಲ್ಲೇಖಿಸುತ್ತವೆ. ತಪ್ಪು ಮಾಡಿದವರನ್ನು ಇವುಗಳಲ್ಲಿ ಯಾವುದಾದರೊಂದಕ್ಕೆ ದಬ್ಬುತ್ತಾರೆಂಬ ಕಲ್ಪನೆಗಳಿವೆ. ಮನುಷ್ಯನ ಅಪರಾಧಗಳನ್ನೆಲ್ಲ ಪಟ್ಟಿ ಮಾಡಿಕೊಂಡಿರುವ ಚಿತ್ರಗುಪ್ತ ತನ್ನ ಕಡತವನ್ನು ತೆಗೆದು ಇಂತಿಂಥ ಅಪರಾಧ ಮಾಡಿರುವೆ. ಇಂತಿಂಥ ಅಪರಾಧಕ್ಕೆ ಇಂತಿಂಥ ಶಿಕ್ಷೆ ಎಂದು ಹೇಳುತ್ತಾನೆ. ಅದರ ಪ್ರಕಾರ ಅಲ್ಲಿಯವರು ಶಿಕ್ಷೆ ವಿಧಿಸುತ್ತಾರೆಂಬ ಕಲ್ಪನೆಗಳು ನಮ್ಮಲ್ಲಿವೆ. ನರಕದ ಭೀತಿಯಿಂದಲಾದರೂ ಮನುಷ್ಯ ಸನ್ನಡತೆಯನ್ನು ನಡೆಯಲಿ ಎಂಬ ಆಶಯವೇ ಇಲ್ಲಿ ಮುಖ್ಯ.

ವರಾಂಗಾಯಿಯೆಂಬೊಳುಗ್ರದೇವತೆ

(ವಡ್ಡಾ. ಪು. ೧೩೪)

ವಿದ್ಯುಚ್ಚೋರನೆಂಬ ಋಷಿಯು ಉಗ್ರ ತಪಸ್ಸು ಮಾಡಿ ಆಚಾರ್ಯರಾದರು. ತಾಮ್ರಲಿಪ್ತಿ ಪಟ್ಟಣದ ಹೊರಗೆ ಇರುವ ಉದ್ಯಾನವನದಲ್ಲಿ ವಾಸವಾಗಿದ್ದರು. ಅಲ್ಲಿ ವರಾಂಗಾಯಿ ಎಂಬ ಹೆಸರಿನ ಉಗ್ರದೇವತೆ ಇದ್ದಳು. ಆರು ತಿಂಗಳಿಗೊಮ್ಮೆ ಆಕೆಗೆ ಜಾತ್ರೆ, ಉತ್ಸವ ಜರುಗಬೇಕು. ಋಷಿಗಳ ಬಳಿಗೆ ಹೋಗಿ ನನ್ನ ಜಾತ್ರೆ ಉತ್ಸವ ಮುಗಿಯುವವರೆಗೆ ಪಟ್ಟಣವನ್ನು ಪ್ರವೇಶಿಸಕೂಡದೆಂದು ವರಾಂಗಾಯಿ ದೇವತೆ ನುಡಿದಳು. ಆದರೂ ಶಿಷ್ಯರು ಪಟ್ಟಣವನ್ನು ಪ್ರವೇಶಿಸಿಯೇ ಬಿಟ್ಟರು. ವಿದ್ಯುಚ್ಚೋರ ಋಷಿಗಳು ರಾತ್ರಿ ಪ್ರತಿಮಾ ಯೋಗದಲ್ಲಿ ನಿಂತರು. ಕುಪಿತಳಾದ ದೇವತೆ ಪಾರಿವಾಳದಷ್ಟು ಗಾತ್ರದ ಸೊಳ್ಳೆಗಳನ್ನು ಸೃಷ್ಟಿ ಮಾಡಿ ಅವರ ಮೇಲೆ ಬಿಟ್ಟಳು. ಕಿತ್ತು ತಿಂದಾಗ ಆ ಋಷಿಗೆ ತೀವ್ರ ವೇದನೆಯುಂಟಾಯಿತು.

ಪೊಱಸುಗಳ ನಿಮಿರಿಯವು ದಂಸ ಮಸ ಕಂಗಳಂ ವಿಗುರ್ವಿಸೆ

(ವಡ್ಡಾ. ಪು. ೧೩೪)

ವಿದ್ಯುಚ್ಚೋರರಿಸಿಯ ಕಥೆಯಲ್ಲಿ ಬರುವ ಸನ್ನಿವೇಶ. ಪಾರಿವಾಳಗಳಷ್ಟು ದೊಡ್ಡದಾದ ಸೊಳ್ಳೆ, ಚಿಕ್ಕಾಡುಗಳನ್ನು ಮಾಯೆಯಿಂದ ಸೃಷ್ಟಿಸಲು ಎಂದು ಈ ಸಾಲಿನ ಅರ್ಥ. ವರಾಂಗಾಯಿ

ಎಂಬ ದೇವತೆ ಈ ರೀತಿ ಸೃಷ್ಟಿ ಮಾಡಿದಳು. ಪಾರಿವಾಳದ ಉಲ್ಲೇಖ ಹಲವಾರು ಕಾವ್ಯಗಳಲ್ಲಿ ಬಂದಿದೆ. ಸೂಕ್ತಿ ಸುಧಾರ್ಣವದ ಚಂದ್ರೋದಯ ವರ್ಣನಾ ಪ್ರಕರಣ ಪದ್ಯದಲ್ಲಿ 'ಬೆಳ್ವೊರಸು' ಪದವಿದೆ. ಬಿಳಿ ಪಾರಿವಾಳ ಎಂದು ಅದರ ಅರ್ಥ. ಪಂಪಭಾರತದಲ್ಲಿ ಶಕುನಿಯನ್ನು ಬಿಳಿ ಪಾರಿವಾಳಕ್ಕೆ ಹೋಲಿಸಿರುವುದುಂಟು. ಹೀಗೆಯೇ ಶಾಂತಿಪುರಾಣ(ix - ೬೦), ಗದಾಯುದ್ಧ (vi - ೩೧), ಧರ್ಮಾಮೃತ (x - ೭೮), ಯಶೋಧರ ಚರಿತೆ (೧೧ - ೮)ಸಮಯ ಪರೀಕ್ಷೆ ಮೊದಲಾದ ಕಾವ್ಯಗಳಲ್ಲಿ ಪಾರಿವಾಳದ ಪ್ರಸ್ತಾಪ ಬಂದಿದೆ. "ಪೊಱಸು ಎಂಬ ಪದಕ್ಕೆ ಪಾರಿವಾಳವೆಂಬ ಅರ್ಥ ಪ್ರಸಿದ್ಧವಾಗಿತ್ತೆಂದೂ ಅದರ ವಿಷಯದಲ್ಲಿ ವಿಪತ್ಕಾರಕವಾದ ಅಪಶಕುನದ ಹಕ್ಕಿಯೆಂಬ ನಂಬಿಕೆ ಕನ್ನಡ ಜನತೆಯಲ್ಲಿ ೧೦ನೇ ಶತಮಾನದಿಂದ ಹಿಡಿದು ೧೩ನೆಯ ಶತಮಾನದವರೆಗೂ ನೆಲೆಸಿತ್ತು. . . ಈಗ ನಮ್ಮ ನಾಡವರಲ್ಲಿ ಗೂಬೆ, ಕಾಗೆ, ಬೆಳವ (ಒಂದು ಬಗೆಯ ಪಾರಿವಾಳ) ಗಳ ವಿಷಯದಲ್ಲಿ ಈ ಮೂಢನಂಬಿಕೆ ಬಂದಿದೆ. . . ಪಾರಿವಾಳ ಅನಿಷ್ಟಕಾರಕ ಪಕ್ಷಿ ಎಂಬ ನಂಬಿಕೆ ಋಗ್ವೇದದ ಕಾಲದಲ್ಲಿಯೂ ಇದ್ದಿತೆಂದು ಹೇಳುವುದಕ್ಕೆ ಆಧಾರವಿದೆ" (ಶಬ್ದ ವಿಹಾರ-೩೨) ಆದರೆ ಈಗ ಶಾಂತಿಯ ಸಂಕೇತವಾಗಿ ಪಾರಿವಾಳಗಳನ್ನು ಹಾರಿ ಬಿಡುವ ಪದ್ಧತಿ ಕಂಡು ಬರುತ್ತಿದೆ.

ಎನ್ನ ಮನೆಯೊಳಿರಲ್ವೇಡೆಂದು ಬಯ್ದು ಪೊಯ್ದಟ್ಟಿ ಕಳೆದೊಂ

(ವಡ್ಡಾ. ಪು. ೧೫೧)

ಮಗು ಹುಟ್ಟಿದ ಕಾಲ ನಕ್ಷತ್ರ ಸರಿ ಇಲ್ಲವೆಂಬ ಕಾರಣಕ್ಕೋ ನಡೆಯಬಾರದ್ದು ನಡೆಯಿತು ಎಂಬ ಕಾರಣಕ್ಕೊ ಮಕ್ಕಳನ್ನು ಮನೆಯಿಂದ ಸಮಾಜದಿಂದ ಬಹಿಷ್ಕರಿಸುತ್ತಿದ್ದ ಪದ್ಧತಿ ಇದ್ದಂತೆ ಹೆಂಡತಿಯನ್ನು ಮನೆಯಿಂದ ದೂರ ಬಿಟ್ಟು ಬರುತ್ತಿದ್ದ ಸಂದರ್ಭಗಳೂ ಇವೆ. ವೊಡ್ಡಾರಾಧನೆಯಕಾರ ಇಂಥ ಪ್ರಸಂಗಗಳನ್ನು ದಾಖಲಿಸಿದ್ದಾನೆ. ಯಜಮಾನ, ಸವತಿ, ನಾದಿನಿಯರಿಂದ ಬೇರೆ ಬೇರೆ ಕಾರಣಗಳಿಗಾಗಿ ದೋಣಿಗಳಲ್ಲಿ ಕಳಿಸುವುದು, ದ್ವೀಪಗಳಲ್ಲಿ ಅರಣ್ಯಗಳಲ್ಲಿ ಬಿಡುವುದು, ಕೆರೆ ಬಾವಿಗಳಿಗೆ ನೂಕುವುದು ಇಂಥ ಆಶಯಗಳಿಗೇನೂ ಜಗತ್ತಿನ ಸಾಹಿತ್ಯದಲ್ಲಿ ಕೊರತೆಯಿಲ್ಲ, ಗರ್ಭಿಣಿ ಸ್ತ್ರೀ ಸೀತೆಯನ್ನು ಕಾಡಿಗಟ್ಟಿದ ಕತೆ ಇದೆ. ಗುರುದತ್ತ ಭಟಾರ ಕಥೆಯಲ್ಲಿ ಗೋಮತಿಯನ್ನು ಆಕೆಯ ಗಂಡ ನನ್ನ ಮನೆಯಲ್ಲಿರಬೇಡವೆಂದು ಬೈಯ್ದು ಕಳಿಸುತ್ತಾನೆ. ವೃಷಭಸೇನ ಭಟಾರರ ಕಥೆಯಲ್ಲಿ ಜಿನದತ್ತೆ ಪುರುಷವ್ರತವನ್ನು ಕೈಗೊಂಡಳೆಂಬ ಕಾರಣಕ್ಕಾಗಿ ಈಗಲೇ ಅವಳನ್ನು ಕೊಂಡೊಯ್ದು ಸ್ಮಶಾನಕ್ಕೆ ನೂಕಿ ಬನ್ನಿರಿ ಎಂದು ಅಪ್ಪಣೆ ಮಾಡುತ್ತಾನೆ. ತನ್ನ ಹೆಂಡತಿ ಮನೆಯ ಕೆಲಸಗಾರನ ಬಗ್ಗೆ ಅನುಕಂಪೆ ತೋರಿಸಿದಳು ಎಂಬ

ಕಾರಣಕ್ಕಾಗಿ ಕಾಷ್ಠ ಕೂಟನೆಂಬಾತ ಕೋಪಿಸಿಕೊಂಡು ಸಾಯುವಂತೆ ಹೆಂಡತಿಯನ್ನು ಬಡಿದು ಓಡಿಸುತ್ತಾನೆ. ಆದರೆ ಇವತ್ತಿನ ದಿನಗಳಲ್ಲಿ ಶೋಷಣೆಯನ್ನು ಸಹಿಸಿಕೊಳ್ಳುವುದು ಮುಂದುವರಿದಿದ್ದರೂ ಸಹ ವಿದ್ಯಾವಂತ ವರ್ಗದಲ್ಲಿ ಸಂಗಾತಿ ಇಷ್ಟವಿಲ್ಲದಿದ್ದರೆ ವಿಚ್ಛೇದನ ಪಡೆಯುವ ಪದ್ಧತಿ ಬೆಳೆದು ಬಿಟ್ಟಿದೆ !

ನಾಲ್ಕು ದಾಡೆವೆರಸು ಪುಟ್ಟಿದೊಡಾತಂಗೆ ತಾಯುಂ ತಂದೆಯು. ಚಾಣಕ್ಯನೆಂಬ ಪೆಸರನಿಟ್ಟರ್. . .

(ವಡ್ಡಾ. ಪು. ೧೮೩)

ಚಾಣಕ್ಯರಿಸಿಯ ಕಥೆಯಲ್ಲಿ ಬರುವ ಪ್ರಸಂಗ. ಸೋಮಶರ್ಮ ಮತ್ತು ಕಪಿಲೆ ಎಂಬ ದಂಪತಿಗಳಿಗೆ ಒಬ್ಬ ಮಗನಿದ್ದ. ನಾಲ್ಕು ಹಲ್ಲಿನೊಂದಿಗೆ ಹುಟ್ಟಿದುದರಿಂದ ಆತನಿಗೆ ಚಾಣಕ್ಯ ಎಂದು ಹೆಸರಿಟ್ಟರು. ಈ ಸುದ್ದಿಯನ್ನು ಕೇಳಿದ ವಸಂತಕನೆಂಬುವವನು "ನಾಲ್ಕು ಹಲ್ಲುಗಳಿಂದ ಹುಟ್ಟಿದ ಇವನಿಂದ ನಂದವಂಶವು ಕ್ಷಯವಾಗುತ್ತದೆ. ಇದರಲ್ಲಿ ಸಂದೇಹವೇ ಇಲ್ಲ" ಎಂದು ಭವಿಷ್ಯ ನುಡಿದ. ಮಗು ಹುಟ್ಟುವಾಗಲೇ ಹಲ್ಲು ಕಾಣಿಸಿಕೊಳ್ಳುವುದು ವಕ್ರಹಲ್ಲು, ಹೆಚ್ಚಿನ ಹಲ್ಲಿನೊಂದಿಗೆ ಹುಟ್ಟುವುದು ಇಂಥ ಆಶಯಗಳು ಕನ್ನಡ ಜನಪದ ಕಥೆಗಳಲ್ಲೇನು ಇಡೀ ಪ್ರಪಂಚ ಜನಪದ ಕಥೆಗಳಲ್ಲಿ ಜಾಗ ಗಿಟ್ಟಿಸಿವೆ. ಕೆಲವು ಸಂಸ್ಕೃತಿಗಳಲ್ಲಿ ಒಳ್ಳೆಯದಾಗುತ್ತದೆಂದು ನಂಬಿಕೆ ಇಟ್ಟರೆ ಹಲವು ಸಂಸ್ಕೃತಿಗಳಲ್ಲಿ ಅಪಶಕುನವೆಂದು ನಂಬಿಕೆ ಬಲವಾಗಿದೆ. ವಡ್ಡಾರಾಧನೆಕಾರನೂ ಸಹ ಹೆಚ್ಚಿನ ಹಲ್ಲು ಕಾಣಿಸುವುದು ಅಪಶಕುನದ ಸೂಚನೆಯೆಂಬಂತೆ ಚಿತ್ರಿಸಿದ್ದಾನೆ.

ಬಟ್ಟಲೊಳ್ ಕಮ್ಮಿತಪ್ಪನೀರಂ ತೀವಿ ಚಂದ್ರಬಿಂಬಮಂ ನೀರೊಳ್ ಕಾಣ್ಬಂತಿರೆಮಾಡಿ

(ವಡ್ಡಾ. ಪು. ೧೮೬)

ಚಾಣಕ್ಯರಿಸಿಯ ಕಥೆಯಲ್ಲಿ ರಾಣಿ ಗರ್ಭವತಿಯಾಗಿರುವಾಗ ಚಂದ್ರನನ್ನು ನುಂಗುವ ಬಯಕೆಯಾಗುತ್ತದೆ. ಆ ಬಯಕೆಯಲ್ಲಿಯೇ ಬಡವಾಗುತ್ತಾಳೆ. ಯಾವ ರೀತಿ ಬಯಕೆ ಈಡೇರಿಸಬೇಕೆಂದು ಅರಸನಿಗೆ ತಿಳಿಯಲಿಲ್ಲ. ಚಾಣಕ್ಯನು ಆಕೆಯ ಹೊಟ್ಟೆಯಲ್ಲಿ ಹುಟ್ಟುವ ಮಗುವನ್ನು ತನಗೆ ಕೊಡುವುದಾದರೆ ಅವಳ ಬಯಕೆಯನ್ನು ಈಡೇರಿಸುವುದಾಗಿ ನುಡಿದ. ಅದಕ್ಕೆ

ರಾಜ ರಾಣಿ ಒಪ್ಪುತ್ತಾರೆ. ಆಗ ಚಾಣಕ್ಯ ದೊಡ್ಡದೊಂದು ಗಾಜಿನ ಬಟ್ಟಲಿನಲ್ಲಿ ನೀರನ್ನು ತುಂಬಿ ಅದರಲ್ಲಿ ಚಂದ್ರನ ಬಿಂಬವು ಕಾಣಿಸುವಂತೆ ವ್ಯವಸ್ಥೆ ಮಾಡುತ್ತಾನೆ. ಆಕೆಗೆ ಬಾಯಾರಿಕೆಯಾಗಿರುವಾಗ ಚಂದ್ರಬಿಂಬವಿರುವ ಪಾತ್ರೆಯ ಬಳಿಗೆ ಕರೆತರುತ್ತಾನೆ ; ಅದನ್ನು ತೋರಿಸುತ್ತಾನೆ. ಸಂತೋಷಗೊಂಡ ಆಕೆ ನೀರನ್ನು ಕುಡಿದೆನೆಂದು ಹೇಳುತ್ತ ಚಂದ್ರನನ್ನು ನುಂಗಿದೆನೆನ್ನುತ್ತಾಳೆ. ಚೀನಿಯರಲ್ಲಿ ಬಳಕೆಯಲ್ಲಿರುವ ತಿಂಗಳ ಹಬ್ಬ ಇದೇ ಆಶಯವನ್ನು ಒಳಗೊಂಡಿದ್ದು ಗರ್ಭಿಣಿ ಸ್ತ್ರೀಯರಿಗೆ ಒಂಭತ್ತು ತಿಂಗಳಲ್ಲಿ ಆಗುವ ಬಯಕೆಗಳು ಹಲವಾರು ಒಂದೊಂದು ತಿಂಗಳಲ್ಲಿಯೂ ಆಕೆ ವ್ಯಕ್ತಪಡಿಸುವ ಬಯಕೆಯನ್ನು ತೋರಿಸುವುದರ ಬಗೆಗಿನ ಮಾಹಿತಿ ಜನಪದ ಸಾಹಿತ್ಯದಲ್ಲಿ ಸಾಕಷ್ಟು ದೊರೆಯುತ್ತದೆ. ಆಹಾರ ಪದಾರ್ಥಗಳನ್ನು ಬಯಸುವುದು. ವಸ್ತ್ರಗಳನ್ನು, ಒಡವೆಗಳನ್ನು ಬಯಸುವುದು, ನೆಂಟರಿಷ್ಟರನ್ನು ನೋಡುವ ಬಯಕೆ ವ್ಯಕ್ತಪಡಿಸುವುದು - ಇತ್ಯಾದಿ. ಆದರೆ ಚಂದ್ರನನ್ನು ನುಂಗುವ ಬಯಕೆ ವಿಶಿಷ್ಟವಾದುದು. ನೀರುತುಂಬಿದ ಪಾತ್ರೆಯಲ್ಲಿ ಪೂರ್ಣಚಂದ್ರನ ಪ್ರತಿಬಿಂಬ ಕಾಣಿಸಿ, ಕಣ್ಣುಮುಚ್ಚಿಕೊಂಡು ಕುಡಿಯುವ ಪದ್ಧತಿ ಮುಸ್ಲಿಂರಲ್ಲಿದೆ. ಚಂದ್ರನನ್ನು ಕುಡಿಯುವ ರೀತಿ ಇದು. ಚಂದ್ರನನ್ನು ಈ ರೀತಿ ಕುಡಿಯುವುದರ ಮೂಲಕ ಭೌದ್ಧಿಕತೆ ಹಾಗೂ ಹೃದಯಕ್ಕೆ ಸಂಬಂಧಿಸಿದ ರೋಗಗಳನ್ನು ಗುಣಪಡಿಸಿಕೊಳ್ಳಬಹುದೆಂದು ಹಿಂದೆಯೇ ವೈದ್ಯರು ಉಲ್ಲೇಖಿಸಿರುವುದುಂಟು. ಒಟ್ಟಾರೆ ಹಲವಾರು ಸಂಸ್ಕೃತಿಗಳಲ್ಲಿ ಸೂರ್ಯ ಮತ್ತು ಚಂದ್ರ ಗಮನಾರ್ಹ ಪಾತ್ರವಹಿಸಿರುವುದನ್ನು ಕಾಣುತ್ತೇವೆ.

ರಾಜ್ಯಾಭಿಷೇಕಂಗೆಯ್ದು ಪಟ್ಟಂಗಟ್ಟಿ ಮಹಾಪದ್ಮನರಸಿ ಚಂದ್ರಮತಿ ಮಹಾದೇವಿಯುಂ ಚಂದ್ರಭುಕ್ತಂಗೆ ಮಹಾದೇವಿ ಮಾಡಿ

(ವಡ್ಡಾ. ಪು. ೧೯೦)

ಚಾಣಕ್ಯರಿಸಿಯ ಕಥೆಯಲ್ಲಿ ಬರುವ ಪ್ರಸಂಗ. ಗಂಡನಿಲ್ಲದ ರಾಣಿಯನ್ನು ಚಂದ್ರಗುಪ್ತ ಮದುವೆಯಾಗುತ್ತಾನೆ. ಈ ವಿಧವಾವಿವಾಹವನ್ನು ಮಾಡಿಸಿದವನು ಚಾಣಕ್ಯ. ಇದರಂತೆ ಪುನರ್ವಿವಾಹ ಪದ್ಧತಿಯೂ ಚಾಲ್ತಿಯಲ್ಲಿತ್ತು. ರಾತ್ರಿಯ ವೇಳೆಯಲ್ಲಿ ಮದುವೆಯಾಗುತ್ತಿದ್ದ ಪದ್ಧತಿಯ ಉಲ್ಲೇಖ ಸನತ್ಕುಮಾರ ಚಕ್ರವರ್ತಿಯ ಕತೆಯಲ್ಲಿ (ರಾತ್ರಿಯೊಳ್ ವಿವಾಹ ಕಲ್ಯಾಣಂ) ಬರುತ್ತದೆ. ಹಾಗೆಯೇ ಸೋದರ ಮಾವನ ಮಗನಿಗೆ ಮಗಳನ್ನು ಕೊಡುವ ಪದ್ಧತಿಯೂ ರೂಢಿಯಲ್ಲಿದ್ದದ್ದನ್ನು ವಡ್ಡಾರಾಧನೆಕಾರ ಸುಕುಮಾರಸ್ವಾಮಿ ಕಥೆಯಲ್ಲಿ ದಾಖಲಿಸಿದ್ದಾನೆ. ರಾಜಕಾರಣಕ್ಕೆ ಸಂಬಂಧಿಸಿದಂತೆ ಇಂಥ ವಿವಾಹಗಳು ಅನಿವಾರ್ಯವಾಗುತ್ತಿದ್ದುವು ಎಂಬುದು ಇದರಿಂದ ತಿಳಿಯುತ್ತದೆ.

ನದಿಯು ದಾರಿಯಂ ಬಿಡಿಸಿ.......

(ಭೈರಕಾ. ಪು ೭)

ಹೇಮಾವತಿ ನದಿಯು ಭೈರವರಾಜನಿಗೆ ಮಾರ್ಗಕೊಟ್ಟ ಸಂದರ್ಭ. ಶಿವನು ಮಾಯೆಯಿಂದ ಮಳೆ ಸುರಿಯುತ್ತದೆ. ಹೇಮಾವತಿಯೆಂಬ ಹೊಳೆ ಹರಿಯುತ್ತದೆ. ಪರನೃಪರ ದಾಳಿಯಿಂದ ಸರ್ವಜನರು ಗುಳೆ ಹೊರಡುತ್ತಾರೆ. ಆಗ ಅಡ್ಡಲಾಗಿ ಹರಿಯುತ್ತಿದ್ದ ನದಿಯನ್ನು ಕಂಡು ನಡುಗುತ್ತಾರೆ. ಆಗ ಭೈರವದೇವ ನದಿಯ ದಾರಿಯನ್ನು ಬಿಡಿಸಿ ಸರ್ವಜನರೊಂದಿಗೆ ನಡೆಯುತ್ತಾನೆ. ಈ ಪವಾಡವನ್ನು ಕಂಡು ಉಳಿದವರು ಆತನನ್ನು ಹೊಗಳುತ್ತಾರೆ.

ಅಯ್ವೆರಳು ಖಂಡಿಸಿ ಬೀಳಲು

(ಭೈರಕಾ, ಪು. ೯)

ಇದೊಂದು ಪವಾಡ. ಭಕ್ತನ ಕತ್ತರಿಸಿಹೋದ ಬೆರಳುಗಳನ್ನು ಭೈರವರಾಜನು ಚಿಗಿಸಿದ ಸಂದರ್ಭ, ಭೈರವದೇವನು ಎಳ್ಳಿನ ಗಾಣವನ್ನು ತಿರುಗಿಸುತ್ತಿರುವಾಗ ಶಿವ ಬಂದು 'ನಾನು ಗಾಣ ತಿರುಗಿಸುವೆ ನೀನು ಎಳ್ಳನ್ನು ನೂಕು' ಎನ್ನುತ್ತಾನೆ, ಅದರಂತೆ ಕೆಲಸ ಮಾಡುವಾಗ ಭೈರವನು ತನ್ನ ಐದು ಬೆರಳುಗಳನ್ನು ಕಳೆದಕೊಳ್ಳುತ್ತಾನೆ. ಭಸ್ಮವನ್ನು ಮುಟ್ಟಿ ಶಿವಸ್ಮರಣೆ ಮಾಡಿದೊಡನೆ ಮತ್ತೆ ಬೆರಳು ಬಂದಿತಂತೆ.

ಸರ್ಪಂಗೆ ಪ್ರಾಣವನಿತ್ತುದೇ ಆಶ್ಚರ್ಯ

(ಭೈರಕಾ, ಪು, ೯)

ಇದೊಂದು ಪವಾಡ. ಸತ್ತಹಾವಿಗೆ ಭೈರವರಾಜನು ಜೀವದಾನ ಮಾಡಿದ್ದು, ಹೂದೋಟದಲ್ಲಿದ್ದಾಗ ಶಿವನಾಜ್ಞೆಯಿಂದ ಬಂದ ಸರ್ಪ ಭೈರವನನ್ನು ಕಚ್ಚಿತು. ಕೂಡಲೇ ಅದು ಮರಣ ಹೊಂದಿದ ಸಂಗತಿಯನ್ನು ಶರಣರು ಬಂದು ಭೈರವನಿಗೆ ಹೇಳಿದರು. ಆತ ಶಿವಸ್ಮರಣೆ ಮಾಡಿ ತನ್ನ ಕೈಯಿಂದ ಅದನ್ನು ನೇವರಿಸಿದ ಕೂಡಲೇ ಅದಕ್ಕೆ ಜೀವ ಬಂತು. ಅದನ್ನು ನೋಡಿದ ಪುರಾತನರು ಸರ್ಪದಿಂದ ಕಚ್ಚಿಸಿಕೊಂಡವರಿಗೆ ಪ್ರಾಣದಾನ ಮಾಡಿದ ಸಂಗತಿಗಳಿವೆ. ಆದರೆ ಸರ್ಪನಿಗೆ ಪ್ರಾಣದಾನ ಮಾಡಿದ ಈ ಸಂಗತಿ ಆಶ್ಚರ್ಯಕರವಾದುದೆಂದರು.

ಅಂತರದಲ್ಲಿ ನಿಂದಿರ್ದ ಒನಕೆಯುಂ ಕಂಡು

(ಭೈರಕಾ, ಪು. ೧೦)

ಇದೊಂದು ಪವಾಡ. ಭೈರವರಾಜನ ಸತಿ ಅಂತರದಲ್ಲಿ ಒನಕೆಯನ್ನು ನಿಲ್ಲಿಸಿದ ಸಂದರ್ಭ. ಮಹಾದೇವಿಯಮ್ಮನು ಅಕ್ಕಿ ಕುಟ್ಟುತ್ತಾ ಹಾಡನ್ನು ಹೇಳುತ್ತಿರುತ್ತಾಳೆ. ಇದನ್ನು ಆಲಿಸಿ ಶಿವನು ಚರಲಿಂಗಮೂರ್ತಿಯಾಗಿ ಬಾಗಿಲಿಗೆ ಬಂದು ಮಹಾದೇವಿ ಎನ್ನುತ್ತಾನೆ. ಆಕೆ ಕೈಯಲ್ಲಿದ್ದ ಒನಕೆಯನ್ನು ಹಾಗೆ ಬಿಟ್ಟು ಆತನಲ್ಲಿಗೆ ಬಂದು ಪಾದಗಳಿಗೆ ನಮಸ್ಕರಿಸಿ ಸತ್ಕರಿಸುತ್ತಾಳೆ. ಆಗ ಅಂತರದಲ್ಲಿ ನಿಂತಿರ್ದ ಒನಕೆಯನ್ನು ಕಂಡು ಎಲ್ಲರೂ ಆಶ್ಚರ್ಯ ಪಡುತ್ತಾರೆ.

ಮಾದನೆಂಬುದರಿಂ ಮಾದೇಶ್ವರನೆಂದು ಪೆಸರಿಟ್ಟು

(ರಾ. ಕಥಾಸಾರ, ಪುಟ ೨೦೩)

ಹತ್ತನೆಯ ಅಧಿಕಾರದಲ್ಲಿ ದೇವಚಂದ್ರ ನೀಡುವ ವಿವರಣೆಯಲ್ಲಿ ಕಂಡು ಬರುವ ಸಾಂಸ್ಕೃತಿಕ ವೀರನ ಪ್ರಸ್ತಾಪ. ಹದಿನಾಡು ಮೊದಲಾದ ಆರು ನಾಡುಗಳನ್ನು ಸೋಮವಂಶದ ಅಭಿಚಂದ್ರನು ಆಳುತ್ತಿದ್ದಾಗ ಕುಂತೂರು ಮಠದಲ್ಲಿ ನುಂಜಯ್ಯನೆಂಬ ಜೋಳಿಗೆ ಒಡೆಯರಿದ್ದರು. ಪೂರ್ವಜನ್ಮದ ಸಂಸ್ಕಾರದಿಂದಲೋ ಏನೊ ಬಡಗ ಸೀಮೆಯಿಂದ ಮಾದಿಗರ ಹುಡುಗನೊಬ್ಬ ಆ ಮಠಕ್ಕೆ ಬಂದು ದನ ಕಾಯ್ದುಕೊಂಡಿದ್ದ, ಹೂವನ್ನ ತರಲು ಹೋದವನು ಆಟದಲ್ಲಿ ತೊಡಗಿದ್ದು ಕರಡಿಗೆಯೊಳು ಸಿಕ್ಕಿದ್ದ ಪ್ರಾಣಿಯನಿಟ್ಟು ತಂದನು. ಅದನ್ನೆ ಹೂವೆಂದು ಶಿಷ್ಯನಲ್ಲಿ ಶ್ರದ್ಧೆಯಿಂದ ನಂಜ ಒಡೆಯನಿಗೆ ದೊರೆತನ ಮಾಡಿಕೊಡುವೆನೆಂದು ನಂಬಿಸಿದ "ಆ ನಾಡಿನ ಅರಸನಾದ ಅಭಿಚಂದ್ರನಲ್ಲಿ ಕಪಟ ಸ್ನೇಹದಿಂದ ಆಪ್ತನಾಗಿ ಮಂತ್ರಿ ಪ್ರಧಾನಿಗಳೆಲ್ಲರನ್ನು ವಶಮಾಡಿ ಕೊಂಡಿದ್ದನು. ಆತನು ಆ ಮಲೆಯನಾಡ ಬೆಟ್ಟದಬೋಳರೆಯಲ್ಲಿ ಅಷ್ಟಾಹ್ನಿಕದ ಅಷ್ಟೋಪವಾಸ ದಿಂದ ಯೋಗದಲ್ಲಿ ನಿರತನಾಗಿ ನಿಂತ ಭಾನುಕೀರ್ತಿಗಳೆಂಬ ಜಿನಮುನಿಗೆ ನಮಸ್ಕರಿಸಿ ಬರೋಣ ಬನ್ನಿ ಎಂದು ರಾಜನನ್ನು ಕರೆದುಕೊಂಡು ಹೋದನು. ರಾಜನಿಗೆ ಲಾಕ್ಷದ ಪಾದುಕೆಯನ್ನು ತೊಡಿಸಿ ಕಾಸಿದರೆಯ ಮೇಲೆ ನಿಲ್ಲಿಸಿ ಅಲ್ಲಿಯೇ ಆತನನ್ನು ಹತಮಾಡಿದ ಆ ಮಾದಿಗರ ಹುಡುಗನು ನಂಜರಾಜ ಒಡೆಯನಿಗೆ ಪಟ್ಟಗಟ್ಟಿದನು. ಅನಂತರ ಆತನು ಗುಡ್ಡನಾಗಿದ್ದು ಪರ್ವತದ ಬೋಳರೆಯಲ್ಲಿ ಯೋಗದಲ್ಲಿದ್ದ ಶ್ರವಣಮುನಿಯನ್ನು ಪಾಪಕ್ಕಂಜದೆ ಕೊಂದು ಆ ನಂಜರಾಜಯ್ಯನ ರಾಜ್ಯಕ್ಕೆ ತಾನೇ ಅರಸನಾಗಿ ಮಾದರಸನೆಂದು ಪ್ರಸಿದ್ಧಿಯಾದನು. ತನ್ನ ಹೆಸರಿನಿಂದ ಅಲ್ಲಿದ್ದ ಹೊಳೆಯ ಮಧ್ಯದಲ್ಲಿ ಕಟ್ಟೆಯನ್ನು ಕಟ್ಟಿಸಲು ಮಂತ್ರಶಕ್ತಿಯಿಂದ ದೊಡ್ಡ ದೊಡ್ಡ ದೈವಗಳಿಂದ

ಕಲ್ಲುಗಳನ್ನು ತರಿಸುತ್ತಿದ್ದನು. ಆ ಕಲ್ಲುಗಳನ್ನು ಅಲ್ಲಿಡಿ ಇಲ್ಲಿಡಿ ಎಂದು ಹೇಳಿ ಬೇಕಾದೆಡೆಗಳಲ್ಲಿ ಇಡಿಸುತ್ತಿರಲು ಒಮ್ಮೆ ಇಲ್ಲಿಡಿ ಎಂದಾಗ ಕಲ್ಲನ್ನು ಆತನ ತಲೆಯ ಮೇಲಿಟ್ಟರು. ಅದರಿಂದ ಆತನು ಸತ್ತು ಬೆಂತರನಾದನು. ಆ ನಾಡಿನಲ್ಲಿ ಎಲ್ಲರಲ್ಲಿಯೂ ಬಹಳ ಖಾಯಿಲೆ ಮೊದಲಾದು ವುಂಟಾಗಿ ಬಹಳ ಜನ ಸಾಯುತ್ತಿದ್ದರು. ಸರಗೂರು ಉಪ್ಪಲಗರು ಗುಡ್ಡರಾಗಿ ಆವೇಶಬಂದು ಏಳುಮಲೆ ಮಧ್ಯದಲ್ಲಿ ಪಶ್ಚಿಮಾಭಿಮುಖರಾಗಿ ಗುಡಿಕಟ್ಟಿಸಿ ಮಾತನಾಡದುದರಿಂದ ಮಾದೇಶ್ವರನೆಂದು ಹೆಸರಿಟ್ಟರು,(ರಾಜಾವಳಿಕಥಾಸಾರ..... ಪುಟ ೧೯೮) ಈತನನ್ನು ಪೂಜಿಸುತ್ತಾ ಬಂದದ್ದರಿಂದ ಲೋಕ ಪ್ರಸಿದ್ದಿ ಹೊಂದಿದನೆಂದು ಸರಗೂರು ಗುಡ್ಡನೇ ಅಲ್ಲಿದ್ದು ಜಾತ್ರೆ ತೇರು ಪ್ರತಿವರ್ಷ ನಡೆಸಲು ಕಾರಣನಾದನೆಂದು, ನಾನಾದೇಶಗಳಿಂದ ಬಂದವರೆಂದು ಕಪ್ಪಕಾಣಿಕೆ ನೀಡುತ್ತಾ ಬಂದರೆಂದು ಆ ಕಾಣಿಕೆಯನ್ನೆಲ್ಲಾ ಅರಮನೆಗೆ ಸ್ವೀಕರಿಸುತ್ತಿದ್ದನೆಂದು ಅನೇಕರು ಆ ಮಾದನಿಗೆ ಗುಡ್ಡರಾಗುತ್ತಿದ್ದರೆಂದು ದೇವಚಂದ್ರ ಬರೆದಿದ್ದಾನೆ. ಈತನಲ್ಲಿ ರಾಜಾಧಿರಾಜರು ಅವರ ಜಯಗಳು ದಂಡಯಾತ್ರೆ, ವಂಶಾವಳಿಗಳು ಇವೆಲ್ಲಾ ಪ್ರಾಧಾನ್ಯ ಪಡೆಯುವುದೇ ಇಲ್ಲ, ಬದಲಾಗಿ ಪ್ರಚಲಿತ ಕತೆಗಳು, ಕಲ್ಪನೆಗಳು ಜಾಗಮಾಡಿಕೊಳ್ಳುತ್ತವೆ. ಹಾಗಾಗಿ ಚಾರಿತ್ರಿಕ ನೆಲೆಗಿಂತ ಅವುಗಳ ಭಾವುಕದ ನೆಲೆ ನಮ್ಮನ್ನು ಕಾಡುತ್ತವೆ. ಫಕೀರನೊಬ್ಬನ ದೆಸೆಯಿಂದ ಕುಂಟ ಕುರುಬ ಹೈದ ದೆಹಲಿಯ ಪಾದಶಾಯಿ ಆದದ್ದು ಬಸವಣ್ಣ ಬಿಜ್ಜಳನ ಭಂಡಾರವನ್ನು ಲೂಟಿ ಮಾಡಿದ್ದು, ಕುರುಬರ ಹೆಂಗಸಿನ ಮಗ ಕೃಷ್ಣದೇವರಾಯನೆಂದದ್ದು, ಮಾದಿಗರ ಹುಡುಗ ಮಲೆ ಮಹದೇಶ್ವರಸ್ವಾಮಿಯಾದದ್ದು ಮುಂತಾದುವು ಚರಿತ್ರೆಕಾರನಿಗೆ ಇವೆಲ್ಲಾ ದಿಕ್ಕುತಪ್ಪಿದಂತೆ ಮಾಡಿದರೂ ಜನಪದರಿಗೆ ಮಾತ್ರ ಸಂತಸವನ್ನುಂಟು ಮಾಡದಿರಲಾರವು. ಯಾಕೆಂದರೆ ಪಟ್ಟದಾನೆ ಹೂಮಾಲೆ ಹಾಕಿದ ಭಿಕ್ಷುಕನೊಬ್ಬ ರಾಜನಾಗುವುದಾದರೆ, ಕುರುಬನೊಬ್ಬ ಕಾಳಿದಾಸ, ಬೇಡನೊಬ್ಬ ವಾಲ್ಮೀಕಿ ಬೆಸ್ತ ವ್ಯಾಸನಾಗುವುದಾದರೆ ಮೇಲಿನ ಸಂಗತಿಗಳೆಲ್ಲಾ ಯಾಕೆ ನಿಜವಾಗಬಾರದು ಎಂಬ ತಾರ್ಕಿಕ ವಾದ ಆಲೋಚನೆ ಮೂಡಲೂ ಸಾಧ್ಯ.

ಕಾಶೀ ಗಂಗಾ ತೀರದಲ್ಲಿ ಶಿವಾಲಯವಂ ರಚಿಸಿ...... ಆ ದೇವಸ್ಥಾನದ ಗೋಪುರ ಕೈಸಾಲೆ ಇವುಗಳಂ ಕಟ್ಟಿಸಿ ನಿಚ್ಚಗಟ್ಲೆಯ ಆರಾಧನೆಗಳಂ ನಡೆಸಿಕೊಂಡು ಬರುವ ಹಾಗೆ ನಾನು ಬರೆದ ಕಾಗದಕ್ಕೆ ಆತನು ಪ್ರತ್ಯುತ್ತರವನ್ನು ಬರೆದು ಇದ್ದಾನೆ

(ಮುದ್ರಾ ೩-ಪು. ೩೯)

ಚಂದ್ರಗುಪ್ತನು ಚಾಣಕ್ಯನ ಆದೇಶದಂತೆ ಭವಿಷ್ಯದಲ್ಲಿ ಬೇಕಾದ ಸಾಕ್ಷಿಗಳನ್ನು ಪಡೆಯಲು ಬಾಗುರಾಯಣನಲ್ಲಿಗೆ ಆತನನ್ನು ಕಳುಹಿಸಿ ಅವರ ಹಸ್ತಾಕ್ಷರಗಳನ್ನು ಪಡೆದ ಸಂದರ್ಭ,

ಚಂದ್ರಗುಪ್ತ ಮೌರ್ಯರ ಕಾಲಕ್ಕೂ ಮೊದಲು ಭಾರತೀಯರು ನದೀ ತೀರಗಳಲ್ಲಿ ಅದೂ ಗಂಗಾನದಿಯ ದಡದಲ್ಲಿ ಶೈವ ದೇವಾಲಯಗಳನ್ನು ನಿರ್ಮಿಸಿರುವುದು. ಮುಖ್ಯವಾಗಿ ಶೈವಸಂಸ್ಕೃತಿಯ ಪ್ರಾಬಲ್ಯವನ್ನು ಸೂಚಿಸುತ್ತದೆ. ದೇವಾಲಯ ಸಂಸ್ಕೃತಿ ಆರಂಭವಾದ ಕಾಲ ಇದು. ಗೋಪುರ , ಕೈಸಾಲೆಗಳ ನಿರ್ಮಾಣವಾಗುತ್ತಿತ್ತು. ದೈವಪೂಜೆಗಾಗಿ ದಾನದತ್ತಿಗಳನ್ನು ಬಿಡುತ್ತಿದ್ದರು. ನಿತ್ಯಗಟ್ಟಲೆ ಆರಾಧನೆ ನಡೆಯುತಿತ್ತು. -ಮುಂತಾದ ವಿಚಾರಗಳು ತಿಳಿದುಬರುತ್ತವೆ. ನ್ಯಾಸವಾಗಿಟ್ಟ ಹಣವನ್ನು ಕೇಶವದಾಸರಂಥ ದೈವಭೀರುಗಳು ದೇವರ ಕಾರ್ಯಕ್ಕೆ ವಿನಿಯೋಗಿಸುತ್ತಿದ್ದರು ಎಂಬುದು ಗಮನಾರ್ಹ.

ಲೋಕದಲ್ಲಿ ಶ್ರೋತ್ರಿಯರಾದಂಥವರು ಯಾವನ ಮನೆಯನ್ನೈದುತ್ತಿದ್ದರೋ ಆತನ ಪಿತೃಗಳೆಲ್ಲಾ ಸಂತೋಷಪಡುತ್ತಿದ್ದಾರೆ.

(ಮುದ್ರಾ, ೪ ಪು ೫೪, ಟೀಕು)

ಚಂದ್ರಗುಪ್ತ ಸಮೇತನಾಗಿ ಚಾಣಕ್ಯ ಪರ್ವತರಾಜನ ಆಸ್ಥಾನಕ್ಕೆ ಬಂದಾಗ ಅವರನ್ನು ಸ್ವಾಗತಿಸುತ್ತ ರಾಜ ಹೀಗೆ ಹೇಳುವನು. ಶ್ರೋತ್ರಿಗಳು ಯಾರ ಮನೆಗೆ ಬರುವರೋ ಆ ಮನೆ ಪಿತೃಗಳು ಸಂತೋಷಪಡುತ್ತಾರೆ. ಪಿತಾಮಹರು ಸಂತೋಷದಿಂದ ವರ್ತಿಸುತ್ತಾರೆ. ಪ್ರಪಿತಾಮಹರು ಹರ್ಷದಿಂದ ಹಾಡುತ್ತಾರಂತೆ, ಅತಿಥಿ ಸತ್ಕಾರ ಮಾಡುವ ಗೃಹಸ್ಥನ ವಂಶಪರಂಪರೆಯೆಲ್ಲವೂ ಪುಣ್ಯಭಾಜ್ಯ ಹೊಂದುತ್ತದೆ. ಎಂಬ ಆದರ್ಶ ಕಲ್ಪನೆ. ನಮ್ಮವರು ಅತಿಥಿ ಸತ್ಕಾರಕ್ಕೆ ಕೊಟ್ಟ ಪ್ರಾಮುಖ್ಯತೆ. ಕುಟುಂಬದಿಂದ ರಾಜ್ಯಕ್ಕೂ ರಾಷ್ಟ್ರಕ್ಕೂ ಇದೇ ಸಂಸ್ಕಾರ ಇದ್ದ ಕಾರಣ ಭಾರತಕ್ಕೆ ಹೊರಗಿನಿಂದ ಬಂದ ಪರ ಪ್ರಾಂತ್ಯದವರಿಗೆ ಮನ್ನಣೆ ದೊರೆಯಿತು. ಅವರು ಸಮಯಾವಕಾಶಗಳನ್ನು ಕಲ್ಪಿಸಿಕೊಂಡು ಇಲ್ಲಿಯೇ ತಮ್ಮ ಬೇರುಗಳನ್ನು ಇಳಿಸಿ ಆಳಲು ಆರಂಭಿಸಿದರು. ಶಕರು, ಹೂಣರು, ಸಿಥಿಯನ್ನರು, ಇತ್ಯಾದಿ. ಇದೇ ಸಂಸ್ಕಾರ ಇಂದಿಗೂ ಇಂಡಿಯಾದಲ್ಲಿದೆ. ಗುಣವೇ ದೌರ್ಬಲ್ಯ ವಾಗುವ ರೀತಿ ಎಂದರೆ ಇದು.

ಜನರಿಗೆ ಕೋಗಿಲೆಯಿಂದ ಉಪಕಾರವೇನು ಕತ್ತೆಯಿಂದ ಅಪಕಾರವೇನು ?

(ಮುದ್ರಾ, ೪, ೬೪, ಟೀಕು)

ಜನರಿಗೆ ಕೋಗಿಲೆಯಿಂದಾಗುವ ಉಪಯೋಗಕ್ಕಿಂತ ಕತ್ತೆಯಿಂದಲೇ ಹೆಚ್ಚು, ಆದರೆ ಜನರು ಕೋಗಿಲೆಯನ್ನು ಎಲ್ಲರೂ ಇಷ್ಟಪಡುತ್ತಾರೆ. ಏಕೆಂದರೆ ಅದರ ಮೃದು ಸ್ವರಕ್ಕಾಗಿ, ಹಾಗೆಯೇ

ಚಂದ್ರಗುಪ್ತನ ಮಾತು ಪರ್ವತ ರಾಜನಿಗೆ ಹೆಚ್ಚು ಪ್ರಿಯವಾಯಿತು. ರಾಜ್ಯ ಸಂಗ್ರಹಕ್ಕೆರಾಜರ ಸಹಾಯವನ್ನು ಪಡೆಯುವ ಬದಲು ಚಾಣಕ್ಯನಂತಹ ಬ್ರಾಹ್ಮಣನನ್ನು ಏಕೆ ಆಶ್ರಯಿಸಿದೆಯೆಂದು ರಾಜನು ಕೇಳಲು ಚಂದ್ರಗುಪ್ತನು ಆಡಿದ ವಿನಯದ ಮಾತುಗಳಿಂದ ಪರ್ವತರಾಜ ಪ್ರಭಾವಿತನಾದನು.

ಕೋಗಿಲೆ ವಸಂತಮಾಸದಲ್ಲಿ ಮಧುರವಾಗಿ ಹಾಡುತ್ತದೆಂದು ಹೇಳುವ ಪಕ್ಷಿ 'ನಾಚಿಕೆಯ ಪಕ್ಷಿ' ಎಂಬ ಹೆಸರೂ ಇದಕ್ಕಿದೆ. ಕೋಗಿಲೆಗಳು ಮರಿಗಳಿಗಾಗಿ ಗೂಡುಕಟ್ಟುವುದಿಲ್ಲ. ಕಾಗೆಯ ಗೂಡಿನಲ್ಲಿ ಮೊಟ್ಟೆ ಇಡುತ್ತವೆ. ತನ್ನವೆಂದು ಭ್ರಮಿಸಿಕೊಂಡ ಕಾಗೆ ಕಾವು ಕೊಟ್ಟು ಮರಿಮಾಡಿಸುತ್ತದೆ. ಅವುಗಳಿಗೆ ಕೂಗಲು, ಹಾರಲು ಶಕ್ತಿ ಬಂದಾಗ ಕಾಗೆಗಳ ಸಹವಾಸ ಬಿಟ್ಟು ಕೋಗಿಲೆಗಳ ಗುಂಪು ಸೇರುತ್ತವೆ. 'ಚಿಕ್ಕವ್ವೆ ಚಿಕ್ಕವ್ವೆ' ಎಂಬ ಕೋಗಿಲೆ ಕೂಗುವುದಂತೆ 'ಕಾಗೆ ಕರಿದಾದರೆ ಕೋಗಿಲೆ ಆದೀತೆ? 'ಕಾಗೆ ಕೋಗಿಲೆಯ ಹಾಗಿದ್ದರೂ ರಾಗದಲ್ಲಿ ಭೇದವಿಲ್ಲವೇ?ಎಂಬ ಗಾದೆಗಳೂ ಇವೆ. ಕತ್ತೆ ಒಂದು ಸಾಕು ಪ್ರಾಣಿ ಎಲ್ಲೆಲ್ಲಿ ಸಾಕು ಪ್ರಾಣಿಯಾಗಿದೆಯೊ ಅಲ್ಲೆಲ್ಲ ಅದರ ಬಗ್ಗೆ ಹೇರಳವಾದ ಜಾನಪದ ಸಾಮಗ್ರಿ ದೊರಕುತ್ತದೆ. ಮಾತಾನಾಡುತ್ತಿರುವಾಗ ಕತ್ತೆ ಕೂಗಿದರೆ ಆ ಮಾತು ನಿಜವಾಗುವುದಂತೆ ಹುಟ್ಟಿದ ಮಗುವಿಗೆ ಕತ್ತೆಯ ಹಾಲು ಕುಡಿಸಿದರೆ ಒಳ್ಳೆಯದಾಗುತ್ತದೆ ಎಂದು ಹೇಳುವುದುಂಟು. ಮಳೆಗಾಗಿ ಕತ್ತೆಯನ್ನು ಆರಾಧಿಸುವ ಪದ್ಧತಿಯೂ ನಮ್ಮಲ್ಲಿದೆ. ವ್ಯಂಗಚಿತ್ರಕಾರರು ಮೂರ್ಖತನವನ್ನು ಸಂಕೇತಿಸಲು ಕತ್ತೆಯ ತಲೆಯನ್ನು ಆಗಾಗ್ಗೆ ಬಳಸಿಕೊಳ್ಳುವುದುಂಟು, 'ಕತ್ತೆ' ಎಂದು ಬಯ್ಯುವುದಂತೂ ಸರ್ವೇ ಸಾಮಾನ್ಯ.

ಈಗಲಾದರೂ ಉಲೂಕನೆಂಬ ಮಂತ್ರಿಗೆ ಈ ಯುದ್ಧವು ಅಭಿಮತವಾದೀತೋ ಇಲ್ಲವೋ

(ಮುದ್ರಾ ೪, ೬೯)

ಪರ್ವತ ರಾಜನ ಮಗ ಮಲಯಕೇತುವಿಗೆ ಕಾಮರೂಪಾಧಿಪತಿಯ ಮಗಳನ್ನು ಮದುವೆ ಮಾಡಿಸುವ ಮುನ್ನ ಅವನು ಪರ್ವತರಾಜನ ವಿರುದ್ಧ ಯುದ್ಧಕ್ಕೆ ಸನ್ನದ್ಧನಾಗಿದ್ದ ಲಂಪಾಕಪತಿಯನ್ನು ನಿಗ್ರಹಿಸುವಂತೆ ಏರ್ಪಡಿಸಿದ ಚಾಣಕ್ಯನ ಯುದ್ಧವನ್ನು ಪರ್ವತರಾಜ ಮೆಚ್ಚಿ ತನ್ನ ಮಂತ್ರಿ ಶಬರವರ್ಮನಿಗೆ ತನ್ನ ಸಂತೋಷವನ್ನು ತಿಳಿಸಿ, ನಮ್ಮ ವೃದ್ಧ ಮಂತ್ರಿ ಉಲೂಕ ಇದಕ್ಕೆ ಏನೆನ್ನುತ್ತಾನೆಂದು ಪ್ರಶ್ನಿಸಲು ಅವನು ಯಾತ್ರಾ ಸಮಯದಲ್ಲಿ 'ಉಲೂಕ' ಎಂಬ ಹೆಸರನ್ನೇ ಆಡಬಾರದು, ಅದು ಅಪಶಕುನವೆಂಬ ಸಂಜ್ಞೆಯನ್ನು ನೀಡುತ್ತಾನೆ. ಉಲೂಕ ಎಂದರೆ ಗೂಬೆ. ಇದು ಮನುಷ್ಯರ ಅವಹೇಳನಕ್ಕೆ ಗುರಿಯಾಗಿರುವ ಒಂದು ಪಕ್ಷಿ, ಆದರೆ ಇದೇ ಹೆಸರಿನ ಮಂತ್ರಿ

ಪರ್ವತರಾಜನ ಆಶ್ರಯದಲ್ಲಿದ್ದನೆಂದು ತಿಳಿದು ಬರುತ್ತದೆ. ಮತ್ತು ಅಂತಹ ಹೆಸರು ಹೊಂದಿರುವ ಗುಡ್ಡಗಾಡಿನ ಜನರ ಸಂಸ್ಕೃತಿಯ ಬಗೆಗೆ ಹೊಸ ತಿಳಿವು ಬರುತ್ತದೆ.

ಪ್ರಯಾಣ ಮಾಡುವಾಗ ಗೂಬೆ ಕೂಗಿದರೆ ಕೂಗುವುದನ್ನು ಬೇಗ ನಿಲ್ಲಿಸಲಿ ಎಂದು ದಾರ ಗಂಟು ಹಾಕುವ ಪದ್ಧತಿ ರೂಢಿಯಲ್ಲಿದೆ. ಎರಡು ಗೂಬೆಗಳು ಜೋಗುಳ ಹಾಡಿದರೆ ಆ ಪ್ರದೇಶ ದಲ್ಲಿ ಜನನವಾಗುತ್ತದೆಂದು ಹೇಳುವುದುಂಟು. ಬಯ್ಗುಳದಲ್ಲಿ ಗೂಬೆ ಎನ್ನುವುದು ಸಾಮಾನ್ಯ.

ಶಿರಸ್ಸಿನ ಮೇಲೆ ಸರ್ಪಬಾಧೆಯೂ ಪರ್ವತ ಪ್ರಾಂತ್ಯದಲ್ಲಿ ವಿಷಹರವಾದ ಔಷಧವೂ ಇದ್ದಂತಾಯಿತು

(ಮುದ್ರಾ, ಪುಟ ೨೪೭)

ರಾಕ್ಷಸನ ಪತ್ನಿ ಪುತ್ರರನ್ನು ಒಪ್ಪಿಸು ಎಂದು ಚಾಣಕ್ಯ ಕೇಳಿಕೊಂಡಾಗ ಮೊದಲು ಕಾಣೆ ಎಂದು ಹೇಳಿದ್ದೂ ಆ ಮೇಲೆ ಎಲ್ಲೋ ಹೋದರು ಎಂದು ಹೇಳಿ ಬಾಯಿ ತಪ್ಪಿದನು. ಅದಕ್ಕೆ ಚಾಣಕ್ಯನು ಇವನು ಸುಳ್ಳುಗಾರನೆಂಬುದನ್ನು ಖಚಿತಪಡಿಸಿಕೊಂಡು ಹೀಗೆ ಹೇಳಿದನು. ರಾಕ್ಷಸನು ಪರ್ವತ ರಾಜ್ಯದಲ್ಲಿದ್ದಾನೆ. ಅವನ ಗೃಹ ಜನರನ್ನು ಉಳಿಸಿಕೊಳ್ಳುವುದು ಎಂದರೆ ಶಿರಸ್ಸಿನಲ್ಲಿ ಸರ್ಪ ಸುತ್ತು ಆಗಿದೆ ಔಷಧ ಎಂದರೆ ಪರ್ವತ ಪ್ರಾಂತ್ಯದಲ್ಲಿದೆ ಎಂಬಂತಾಯಿತು ಎಂದುಕೊಳ್ಳುವನು. ಸರ್ಪಸುತ್ತು ಒಂದು ಭಯಂಕರ ರೋಗ.

•

ಈಗಡೆ ಉಲಿಗಂ ಸಗುಣ ನುಡಿಗುಂ

(ಮುದ್ದಣ ಭಂಡಾರ ಸಂ. ೨ ರಾ ಮೇಧ ಪು ೧೦೪)

ರಾಮಾಶ್ವಮೇಧ ಕಾವ್ಯದ ಆರಂಭದಲ್ಲಿ ಕಂಡು ಬರುವ ವಾಕ್ಯ. ಮಾತನಾಡುತ್ತಿರುವಾಗ ಶಕುನದ ಹಕ್ಕಿ ಶಕುನ ನುಡಿಯುತ್ತಿದೆ ಎನ್ನುತ್ತಾನೆ. ಶಕುನ ಶಬ್ದದ ಮೂಲಾರ್ಥ ಹಕ್ಕಿ ಮತ್ತು ಹಕ್ಕಿಯ ನುಡಿ ಎಂದು ಬೆಳಗಿನ ಜಾವ ಹಕ್ಕಿಯ ನುಡಿ ಕೇಳಿ ಅರ್ಥಮಾಡಿಕೊಂಡು ಭವಿಷ್ಯವನ್ನು ಹೇಳಿಕೊಂಡು ತಿರುಗುವ ಬುಡುಬುಡಿಕೆಯವರು ಈಗಲೂ ಇದ್ದಾರೆ. ಮೊದಲು ಶುಭಾಶುಭಗಳನ್ನು ಹಕ್ಕಿಯ ನಡೆನುಡಿಗಳಿಂದಲೇ ಹೇಳುತ್ತಿದ್ದರೆಂದು ಊಹಿಸಬಹುದು. ನಂತರದ ದಿನಗಳಲ್ಲಿ ಎಲ್ಲಾ ರೀತಿಯ ನಿಮಿತ್ತಗಳಿಗೆ ಶಕುನವೆಂದೇ ಹೇಳುವುದು ರೂಢಿಯಾಗಿದ್ದಿರಬಹುದು. ಹಕ್ಕಿ ಶಕುನ ಹೇಳುವ ಕೇಳುವ ಜನ ಈಗಲೂ ಉಂಟು.

ಕುಳ್ಳಿರಿಸಿ ಅರ್ಘ್ಯಪಾದ್ಯಂಗಳಿಂ ಪೂಜಿಸಿ ಮಧುಪರ್ಕಮಂ ಸಮರ್ಪಿಸಿ

(ಮು. ಭಂಡಾರ , ಸಂ. ೨ ರಾ. ಮೇಧ ೧೧೧)

ರಾಮಲಕ್ಷ್ಮಣರು ಅಗಸ್ತ್ಯರನ್ನು ಉಪಚರಿಸುವ ಸಂದರ್ಭ. ಕೈಕಾಲು ತೊಳೆಯಲು ನೀರನ್ನು ಕೊಟ್ಟು ಕುಡಿಯಲು ಹಾಲು ಮತ್ತು ಜೇನನ್ನು ನೀಡಿ ಉಪಚರಿಸಿದರು. ಇದು ಹಿಂದಿನ ಪದ್ಧತಿ. ಈಗಲೂ ಸಹ ಮನೆಗೆ ಬಂದ ಅತಿಥಿಗಳಿಗೆ ತೊಳೆಯಲು ನೀರನ್ನು ಕುಡಿಯಲು ಹಾಲು, ಕಾಫೀ, ಅಥವಾ ಟೀಗಳನ್ನು ಕೊಡುವ ಪದ್ಧತಿ ಇದೆ. ಮೇಲುವರ್ಗದ ಕುಟುಂಬಗಳಲ್ಲಿ ಮಾದಕ ಪಾನೀಯಗಳನ್ನು ಕೊಡುವುದುಂಟು. ಅನ್ನ ಪಾನೀಯಗಳು ಆಯಾ ಸಂಸ್ಕೃತಿಯನ್ನು ಬಿಂಬಿಸುವ ಸಾಧನಗಳೂ ಹೌದು.

ಜನ್ಮಕ್ಕೆ ಪೇೞ್ದ ಕುದುರೆಯ ಲಕ್ಷಣಮಾವುದೋ ವಿದಿಯೆಂತುಟೋ ?

(ಮು. ಭಂಡಾರ ಸಂ. ೨ ರಾ. ಮೇಧ ೧೧೪)

ಮಾನಸಿಕ ತಳಮಳವನ್ನು ಹೋಗಲಾಡಿಸಬೇಕಾದರೆ ಅಶ್ವಮೇಧಯಾಗವನ್ನು ಮಾಡೆಂದು ಮುನಿವರೇಣ್ಯರು ರಾಮನಿಗೆ ತಿಳಿಸುತ್ತಾರೆ. ಆಗ ರಾಮ ಕೇಳುವ ಪ್ರಶ್ನೆ ಇದು. ವೇದ ಕಾಲದಲ್ಲಿ ಬಹುಮುಖ್ಯನೂ ಪ್ರಭಾವಶಾಲಿಯೂ ಆಗಿದ್ದ ಕುದುರೆಯನ್ನು ಆಹುತಿ ಕೊಡುತ್ತಿದ್ದ ಯಜ್ಞವೇ ಅಶ್ವಮೇಧ. ಭಾರತದಲ್ಲಿ ದೇಶ ವಿಸ್ತಾರ ಮಾಡುವ ಪ್ರತೀಕವಾಗಿ ಈ ಆಚರಣೆ ರೂಢಿಯಲ್ಲಿತ್ತು. "ಸಾಮಾನ್ಯವಾಗಿ ವಸಂತಕಾಲದಲ್ಲಿ ಯಾಗದ ಕುದುರೆಯೊಂದನ್ನು ಆರಿಸಿಕೊಂಡು ಅದನ್ನು ಬಲಿಗಂಭಕ್ಕೆ ಕಟ್ಟಿ ಸ್ನಾನ ಮಾಡಿಸಿದ ನಂತರ ಅದು ಒಂದು ವರ್ಷಕಾಲ ಸ್ವೇಚ್ಛೆಯಾಗಿ ಅಲೆದಾಡಲು ಬಿಡುತ್ತಿದ್ದರು. ರಾಜಕುಮಾರರು, ಅಧಿಕಾರಿಗಳು, ಸಾಕಷ್ಟು ಸೈನ್ಯ ಕುದುರೆಯ ಬೆಂಗಾವಲಾಗಿರುತ್ತಿತ್ತು. ಆ ಕುದುರೆಯನ್ನು ಯಾವ ರಾಜರಾದರೂ ಹಿಡಿದು ಕಟ್ಟಿದಾಗ, ಅಪಹರಿಸಿದಾಗ ಬೆಂಗಾವಲಿನವರು ಅವರೊಡನೆ ಯುದ್ಧ ಮಾಡಿ ಸೋಲಿಸಿ, ಕುದುರೆ ಬಿಡಿಸಿಕೊಂಡು ಮುಂದುವರಿಯಬೇಕಾಗುತ್ತಿತ್ತು. ಕುದುರೆ ಸಂಚರಿಸುವ ಪ್ರದೇಶಗಳನ್ನಾಳುವ ರಾಜರು ಬೆಂಗಾವಲಿನವರಿಗೆ ಕಪ್ಪ ಕಾಣಿಕೆಯಿತ್ತು ತಮ್ಮ ಅಧೀನತ್ವವನ್ನು ತೋರಿಸಿಕೊಳ್ಳಬೇಕಾಗಿತ್ತು. ಕುದುರೆ ಸ್ವೇಚ್ಛೆಯಾಗಿ ಅಲೆದಾಡುತ್ತಿದ್ದಾಗ ಯಾಗ ನಡೆಯಬೇಕಿದ್ದ ಸ್ಥಳದಲ್ಲಿ ಯಾಗ ಸಿದ್ಧತೆಗಳು, ಉತ್ಸವಗಳು, ಆಚರಣೆಗಳು ನಡೆಯುತ್ತಿದ್ದವು. (ಕ.ಜಾ.ವಿ. ಕೋಶ ಪು. ೧೦೩)ಮುನಿ ಹೇಳುವ ಯಜ್ಞ ವಿಧಿ ಈ ರೀತಿಯದು. ಕುದುರೆ ಭೂಮಿಯಲ್ಲಿ ಸಂಚರಿಸುವವರೆಗೆ ಯಜಮಾನನು ಜಿಂಕೆಯ ಕೊಂಬುಗಳನ್ನು ಧರಿಸಿ ಶರೀರವನ್ನು ಬೆಣ್ಣೆಯಿಂದ ಲೇಪಿಸಿಕೊಂಡು ಬ್ರಹ್ಮಚರ್ಯವ್ರತ

ವನ್ನು ತೊಟ್ಟು, ದೀನರು, ಕುರುಡರು, ಕಿವುಡರು ಮುಂತಾದವರಿಗೆ ದಾನಧರ್ಮಗಳನ್ನು ಮಾಡುತ್ತಾ, ಬ್ರಾಹ್ಮಣರನ್ನು ಸಂತೃಪ್ತಿಗೊಳಿಸುತ್ತ, ನಾಗರೀಕರನ್ನು ಗೌರವದಿಂದ ಕಾಣುತ್ತಾ ಮುತ್ತೈದೆಯರನ್ನು ಪೂಜಿಸುತ್ತ, ಕಾಲಕಳೆಯಬೇಕು ಕೊನೆಯಲ್ಲಿ ಹೀಗೆ ವಿಧಿಯಲ್ಲಿ ಹೇಳಿರುವಂತೆ ಯಜ್ಞವನ್ನು ಪೂರೈಸಬೇಕು. ಈ ರೀತಿ ಮಾಡುವುದರಿಂದ ಮಾಡಿದವರಿಗೂ ಜಗತ್ತಿಗೂ ಮಂಗಳವಾಗುವುದೆಂಬ ನಂಬಿಕೆ ಇದೆ.

ಬಂದಳಿವಳಿವಳ್ ! ಬಂಜೆ ! ಕಂದನಂ ಪಿಡಿಯಲ್ಕೀಯದಿರ್

(ಮು. ಭಂಡಾರ, ಸಂ. ೨, ರಾ, ಮೇಧ ೧೧೭)

ಅಂತಃಪುರದಲ್ಲಿ ಮಹಡಿಯ ಮೊಗಸಾಲೆಯಲ್ಲಿ ತನ್ನ ಗೆಳತಿ ಚಂದ್ರಮತಿಯೊಂದಿಗೆ ಕುಳಿತು ಮಾತನಾಡುತ್ತಿರುವಾಗ ಕಿರುಮರಿಗೆ ಗುಟುಕುಕೊಡುತ್ತಿದ್ದ ಗುಬ್ಬಚ್ಚಿಯನ್ನು ಕಂಡು ಸೀತೆ ಹೇಳಿದ ಮಾತುಗಳಿವು : ಆ ಪಕ್ಷಿಗಿರುವ ಆನಂದ ತನಗಿಲ್ಲವಲ್ಲ, ಮಕ್ಕಳಿಲ್ಲದವರ ಪಾಡೆಲ್ಲ ನೋವಿನ ನರಕ, ಯಾವ ಸ್ಥಳಕ್ಕೆ ಹೋದರೂ ಬಂಜೆಗೆ ನಿಂದನೆಗಳು ತಪ್ಪಿದ್ದಲ್ಲ, ಇಡೀ ಲೋಕವೇ ಆಕೆಯನ್ನು ಹೀಯಾಳಿಸುತ್ತದೆ. ಬಂಜೆಯ ಕೈಗೆ ಮಕ್ಕಳನ್ನು ಕೊಡಬಾರದು, ಮಗು ಸೊರಗುತ್ತದೆ. ಮುಟ್ಟಿದರೆ ಕಾಂತಿ ಮಸುಕಾಗಿ ದುರ್ಬಲವಾಗುತ್ತದೆ. ನೋಡಲು ಬಿಟ್ಟರೆ ಮಗುವಿನ ಕಣ್ಣು ಕೊಂಕಾಗುತ್ತದೆ. ಮಾತನಾಡಿಸಲು ಬಿಟ್ಟರೆ ಮಗುವಿನ ಮಾತು ತೊದಲಾಗುತ್ತದೆ. ಒಟ್ಟಾರೆಯಾಗಿ ಜಗತ್ತಿನ ಸ್ತ್ರೀಯರ ಬಿರುನುಡಿಯನ್ನು ಸಹಿಸಿಕೊಂಡು ಬದುಕುವ ಬಂಜೆಯರು ಬದುಕಿಯೂ ಸತ್ತಂತೆಯೇ ಎಂಬ ಅಭಿಪ್ರಾಯವನ್ನು ಸೀತೆ ವ್ಯಕ್ತಪಡಿಸುತ್ತಾಳೆ. ಬಂಜೆಯ ದುಃಖವನ್ನು ಜನಪದ ಸಾಹಿತ್ಯ ಸಾಕಷ್ಟು ವರ್ಣಿಸಿದೆ. ಆಕೆ ಬಾಯಾರಿದೆ ಎಂದು ನೀರು ಕುಡಿಯಲು ಹೋದರೆ ನೀರೇ ಇಂಗಿಹೋಗುವುದು, ಹಣ್ಣುಗಳು ನಾಪತ್ತೆಯಾಗುವುದು. ನಮ್ಮನ್ನು ಮುಟ್ಟಿದರೆ ನಾವೂ ಬಂಜೆಯರಾಗುತ್ತೇವೆಂದು ಪಕ್ಷಿಗಳು ಹಾರಿಹೋಗುವುವು - ಇತ್ಯಾದಿಗಳನ್ನು ಜನಪದಗೀತೆಗಳು ವರ್ಣಿಸುತ್ತವೆ. ಮಕ್ಕಳಿಲ್ಲದವರ ಬಾಳು ಸಂಪೂರ್ಣ ವ್ಯರ್ಥವೆಂದು ಜನಪದರು ಭಾವಿಸಿದ್ದಾರೆ. ಈ ಮಾತನ್ನು ಸಮರ್ಥಿಸುವ ಜನಪದಗೀತೆಯೊಂದಿದೆ :

ಬಾಲಕರಿಲ್ಲದ ಬಾಲೀದ್ಯಾತರ ಜನ್ಮ
ಬಾಡೀಗಿ ಎತ್ತು ದುಡಿಧಾಂಗ ಬಾಳೆಲೆಯ
ಹಾಸ್ಯುಂಡು ಬೀಸಿ ಒಗೆದಾಂಗ

'ಬಂಜೆ ಹೊನ್ನಮ್ಮ' ಎಂಬ ಪ್ರಸಿದ್ಧವಾದ ಜನಪದ ಕಥನ ಕಾವ್ಯವೇ ಇದೆ.

ಮೃಗಲಾಂಛನ ಮೆನಲ್ಕೆಸೆದುಂ

(ಮು. ಭಂಡಾರ ಸಂ ೨ ರಾ. ಮೇಧ ೧೧೯)

ಸೀತೆಯ ಕಣ್ಣುಗಳಲ್ಲಿ ನೀರಹನಿ ಕಂಡಾಗ ರಾಮ ಹೇಳುವ ಸಂದರ್ಭ. ನಿನ್ನ ಈ ಚಂದ್ರಮುಖದಲ್ಲಿಟ್ಟ ಕಸ್ತೂರಿಯ ತಿಲಕವು ಸ್ಥಾನಪಲ್ಲಟಗೊಂಡು ಚಂದ್ರನಲ್ಲಿರುವ ಜಿಂಕೆಯ ಗುರುತೆಂಬಂತೆ ಕಂಡು ನನ್ನ ಮನಸ್ಸಿಗೆ ಅಪಕೀರ್ತಿಯನ್ನುಂಟು ಮಾಡುತ್ತಿದೆಯಲ್ಲ ಎನ್ನುತ್ತಾನೆ. ಜಗತ್ತಿನ ಬೇರೆ ಬೇರೆ ಪ್ರದೇಶಗಳಲ್ಲಿ ಸೂರ್ಯ, ಚಂದ್ರರ ಬಗೆಗೆ ನಾನಾ ರೀತಿಯ ಕಲ್ಪನೆಗಳಿವುದು ಕಂಡುಬಂದಿದೆ. ಜಿಂಕೆಯ ಕೊಂಬುಗಳು ಅದರಲ್ಲಿ ಕಾಣಿಸುತ್ತವೆ ಎಂಬ ಕಲ್ಪನೆಯಂತೆಯೇ ಸೌದೆಹೊರೆಯನ್ನು ಹೊತ್ತ ಹೆಂಗಸಿನ ಚಿತ್ರವಿದೆ ಎಂದೂ ಮೊಲದ ಕೊಂಬುಗಳು ಅದರಲ್ಲಿವೆ ಎಂದೂ ಋಷಿ ಎಸೆದ ಚಪ್ಪಲಿಯ ಗುರುತು ಅದರಲ್ಲಿ ಕಾಣಿಸುತ್ತದೆಂದೂ ಬಗೆಬಗೆಯಾಗಿ ಹೇಳುವುದುಂಟು. ಚಂದ್ರನ ಕಲೆಗಳನ್ನು ಕುರಿತು ಆಕಾಶ ಜಾನಪದವೇ ನಮ್ಮಲ್ಲಿದೆ.

ರಥದೊಳು ಬಿವಿಟ್ಟ ಬಾಯಿನಮನೋರ್ವೆ ಮುತ್ತೈದೆ ಪಾರ್ವಿತಿಗೆ ಕುಡಿಸ್ಯೆ

(ರಾ. ಮೇಧ, ಪು. ೧೩೫)

ರಾಮನ ಆದೇಶದಂತೆ ಲಕ್ಷ್ಮಣ ಸೀತೆಯನ್ನು ಕಾಡಿನಲ್ಲಿ ಬಿಟ್ಟುಬರಲು ಹೋದಾಗ ಆತನಿಗೆ ಸೀತೆ ಹೇಳುವ ಸಂದರ್ಭ. ಮುನಿಪತ್ನಿಯರಿಗೆಂದು ತಂದು ರಥದಲ್ಲಿ ಬಿಟ್ಟಿರುವ ಬಾಗಿನವನ್ನು ಬ್ರಾಹ್ಮಣ ಮುತ್ತೈದೆಗೆ ಕೊಡಿಸು ಎಂದು ಸೀತೆ ವಿನಂತಿಸಿಕೊಳ್ಳುತ್ತಾಳೆ. ವ್ರತದ ಕೊನೆಯಲ್ಲಿ ಮುತ್ತೈದೆಯರಿಗೆ ಕೊಡುವ ಕಾಣಿಕೆಯನ್ನು ಬಾಗಿನ ಎನ್ನುತ್ತಾರೆ. ಉಡುಗೊರೆ ಹಬ್ಬದ ದಿನಗಳಲ್ಲಿ ಕೊಡುವ ತಿಂಡಿ ಎಂಬ ಅರ್ಥಗಳೂ ಇದಕ್ಕಿವೆ. ಗರ್ಭಿಣಿ ಸ್ತ್ರೀಯರಿಂದ ಮುತ್ತೈದೆಯರಿಗೆ ಬಾಯಿನ (ಬಾಗಿನ)ವನ್ನು ಕೊಡಿಸಿದರೆ ಶ್ರೇಯಸ್ಕರ ಎಂಬ ನಂಬಿಕೆ ಇದೆ.

ಪಾರ್ವಂ ಬಂದು ತೀರ್ಥಯಾತ್ರಾ ಫಲಮಂ ತದುಕ್ತ ವಿಧಿಯಂ ನೆಱಿ ತಿಳಿಪಿ ಮಾಯಮಾದೊಂದು ಕನಸಂ ಕಂಡು........

(ರಾ, ಮೇಧ, ಪು ೧೬೬)

ಮಹಾರಾಜನಿಗೆ ಬ್ರಾಹ್ಮಣನೊಬ್ಬ ತೀರ್ಥಯಾತ್ರೆಯಿಂದಾಗುವ ಫಲವನ್ನು ಅದರ ವಿಧಿಗಳನ್ನು ಹೇಳುವ ಸಂದರ್ಭ. ಪವಿತ್ರ ಸ್ಥಳಗಳಿಗೆ ಭಕ್ತರು ಹೋಗುವುದಕ್ಕೆ ತೀರ್ಥಯಾತ್ರೆ ಎನ್ನುವರು. ಇದಕ್ಕೆ ಸಂಬಂಧಿಸಿದ ಜಾನಪದವು ಸ್ಥಳಕ್ಕೆ ಸಂಬಂಧಿಸಿದ ಜಾನಪದದೊಂದಿಗೆ ಹೊಂದಾಣಿಕೆಯನ್ನು ಪಡೆದಿದೆ. ತೀರ್ಥಯಾತ್ರೆ ಮಾಡುವುದರಿಂದ ಕಷ್ಟಗಳು ಪರಿಹಾರವಾಗುತ್ತವೆ, ಪುಣ್ಯ ಲಭಿಸುತ್ತದೆ, ಮೋಕ್ಷ ದೊರಕುತ್ತದೆ - ಇತ್ಯಾದಿ ನಂಬಿಕೆಗಳಿವೆ. ಸಂದಿಗ್ಧ ಪರಿಸ್ಥಿತಿಯಲ್ಲಿ ಮಾಡಿಕೊಂಡ ಹರಕೆಗಳನ್ನು ತೀರಿಸುವ ಸಲುವಾಗಿ ತೀರ್ಥಯಾತ್ರೆಗಳನ್ನು ಕೈಗೊಳ್ಳುವುದುಂಟು. ಒಂದೊಂದು ಸ್ಥಳಕ್ಕೆ ಒಬ್ಬೊಬ್ಬ ದೇವರಿರುತ್ತಾನೆ. ಆತನನ್ನು ಆತನಿರುವ ಸ್ಥಳದಲ್ಲಿಯೇ ಪೂಜಿಸಿದರೆ ವಿಶೇಷ ವರಗಳನ್ನು ಕೊಡುತ್ತಾನೆಂದು ನಂಬಿಕೆ ಇರುವುದರಿಂದ ತೀರ್ಥಯಾತ್ರೆ ಹೋಗುವ ಪದ್ಧತಿ ಬೆಳೆದುಬಂದಿತೆಂದು ಹೇಳುವುದುಂಟು.

ಯಾತ್ರಾರ್ಥಿಗಳ ದಟ್ಟಣೆಯಿಂದ ಪುಣ್ಯಸ್ಥಳಗಳು ತೀರ್ಥಕ್ಷೇತ್ರಗಳು ಈಗೀಗ ಹೊಲಸಾಗುತ್ತಿವೆ.

ಲೋಗರ್ ಕಣ್ಣೆಂಜಲ್ ತಾಗಂದತು ಬೆರ್ಚನಿಟ್ಟು ಪಕ್ಕಿಗಳಂ ಬೆದರ್ಚಲೊಡರ್ಚಿದ ತೋಂಟಿಗ ನೊಂದಾಯತಿಯಂ ಕಂಡನಕ್ಕುಂ

(ರಾ. ಮೇಧ, ಪು. ೧೭೫)

ಆಯುಧವನ್ನು ಹಿಡಿದು ಯುದ್ಧ ಮಾಡಿ ಸೋತವರು ಶತ್ರುಘ್ನನನ್ನು ಕಂಡು ಶರಣಾಗತರಾಗಿ ಕಪ್ಪವನ್ನು ಕೊಟ್ಟು ಸಮಾಧಾನದಿಂದ ಹಿಂಬಾಲಿಸಿ ಬದುಕಬಹುದು ಎಂಬ ರಾಮನ ಒಕ್ಕಣೆಯನ್ನು ಗಮನಿಸಿದ ದಮನನು ಹೇಳುವ ಸಂದರ್ಭವಿದು. ಲೋಕದ ಜನರ ಕಣ್ಣೆಂಜಲು ತಗುಲದಂತೆ ಬೆರ್ಚುಬೊಂಬೆಯನ್ನಿಟ್ಟು ಹಕ್ಕಿಗಳನ್ನು ಹೆದರಿಸಿ ಓಡಿಸಲು ಪ್ರಯತ್ನಿಸುವ ತೋಟಗಾರನ ಸಾಮರ್ಥ್ಯವನ್ನು ಈ ರಾಮ ಕಂಡುಕೊಂಡಿರುವಂತಿದೆ ಎಂದು ಆತ ಅಭಿಪ್ರಾಯಪಡುತ್ತಾನೆ.ಬೆರ್ಚು ಎಂದರೆ ಬೆದರಿಸುವ ಬೊಂಬೆ. ಬೆಳೆಯನ್ನು ರಕ್ಷಿಸಿಕೊಳ್ಳುವ ಸಲುವಾಗಿ ಹಕ್ಕಿಗಳನ್ನು ಪ್ರಾಣಿಗಳನ್ನು ಓಡಿಸಲು ವ್ಯವಸಾಯಗಾರರು ತಮ್ಮ ಹೊಲಗಳಲ್ಲಿ ಅವು ಭಯಪಡುವ ರೀತಿಯಲ್ಲಿ ಬೆದರು ಬೊಂಬೆಗಳನ್ನು ನೇತುಹಾಕಿರುತ್ತಾರೆ. ಶರ್ಟು ಪ್ಯಾಂಟುಗಳನ್ನು ಒಂದು ಕಟ್ಟಿಗೆಗೆ ಸಿಕ್ಕಿಸುವುದರ

ಮೂಲಕ ಮನುಷ್ಯ ನಿಂತಿರುವನೆಂಬಂತೆ ಮಾಡುತ್ತಿದ್ದರು. ಇತ್ತೀಚೆಗೆ ಹೆಣ್ಣು ಮಕ್ಕಳ ಉಡುಪುಗಳಲ್ಲಿ ಹುಲ್ಲನ್ನು ತುಂಬಿ ಇಡುವುದು ಅಥವಾ ಕಟ್ಟಿಗೆಯಲ್ಲಿ ನೇತುಹಾಕುವುದರ ಮೂಲಕ ಬೆದರಿಸುವ ಗೊಂಬೆಗಳನ್ನು ಇಡುವ ಪದ್ಧತಿ ಬಂದಿದೆ. ಹೊಸದಾಗಿ ಕಟ್ಟುವ ಮನೆಗಳ ಮೇಲೂ ದೃಷ್ಟಿ ತಾಗದಿರಲೆಂದು ಅನಿಷ್ಟಗಳು ಒಳ ಪ್ರವೇಶಿಸಬಾರದೆಂದೂ ಬೆದರಿಸುವ ಬೊಂಬೆಗಳನ್ನು ಮನೆಯ ಮೇಲ್ಭಾಗದ ನಾಲ್ಕು ಮೂಲೆಗಳಲ್ಲಿ ಇಡುವ ಪದ್ಧತಿ ಇದೆ.

ಗೋಪೂಜಾ ಫಲದತ್ತಣಿಂ ಸಂತಾನಮಂ ಪಡೆದ...

(ರಾ, ಮೇಧ, ಪು ೧೯೧)

ಸುಂದರವಾದ ನಗರವನ್ನು ಕಂಡ ಶತ್ರುಘ್ನನು ತನ್ನ ಮಂತ್ರಿಯನ್ನು ಇದು ಯಾವ ನಾಡು ಎಂದು ಕೇಳಿದ. ಅದಕ್ಕೆ ಮಂತ್ರಿ ಇದು ಗೋವಿನ ಪೂಜೆಯ ಫಲದಿಂದ ಮಗನನ್ನು ಪಡೆದ ಋತಂಭರರಾಜನು ಆಳುವ ತೇಜಃಪುರ ಎಂದು ಹೇಳಿದ ಸಂದರ್ಭ. ಹಸು ನಮ್ಮಲ್ಲಿ ಪೂಜನೀಯ ಪ್ರಾಣಿ. ಜಾಬಾಲಿಗಳು ಗೋಮಹಾತ್ಮೆಯನ್ನು ಹೇಳಿದ ವಿವರ ಪುರಾಣಗಳಲ್ಲಿ ಕಂಡುಬರುತ್ತದೆ. ಅದರಲ್ಲಿ ಗೋವಿನ ದೇಹದ ಕೂದಲಿನ ರಂಧ್ರಗಳೆಲ್ಲ ದೇವತೆಗಳ ಒಂದೊಂದು ನೆಲೆಯಾಗಿವೆ. ಹೊಟ್ಟೆಯಲ್ಲಿ ದೇಹದಲ್ಲಿ ಎಲ್ಲ ವಿಶ್ವದ ಒಂದೊಂದು ಸ್ಥಲ ಅಡಗಿದೆ. ಬಿಸಿಲಿನಲ್ಲಿ ಬಾಯಾರಿದ ಹಸುವಿಗೆ ಪ್ರತಿನಿತ್ಯವೂ ನೀರನ್ನು ಎರೆಯುತ್ತಾನೋ ಅವನಿಗೆ ಐಶ್ವರ್ಯ ಒದಗುತ್ತದೆ. ಮೇವನ್ನು ಕೊಟ್ಟು ಕಾಪಾಡುವವನಿಗೆ ಹಾಲೂ ಮೊಸರು ಸಮೃದ್ಧವಾಗಿ ದೊರಕುವ ಪುಣ್ಯಲೋಕ ಸಿಗುತ್ತದೆ– ಇತ್ಯಾದಿ ವಿವರಗಳು ದೊರಕುತ್ತವೆ. ಗೃಹ ಪ್ರವೇಶದ ಸಂದರ್ಭದಲ್ಲಿ ಹಸುವಿಗೆ ವಿಶೇಷ ಪೂಜೆಯೇ ಜರುಗುತ್ತದೆ. ಪುಣ್ಯ ಬರಲೆಂದು ಬ್ರಾಹ್ಮಣರಿಗೆ ಹಸುವನ್ನು ದಾನವಾಗಿ ಕೊಡುವುದುಂಟು.

ಕಾಮನ ಕಟ್ಟಾಯದ ಹಬ್ಬಂ...

(ರಾ. ಮೇಧ, ಪು ೨೧೭)

ಕಾಮನ ಬಗೆಗಿನ ಮುದ್ದಣನ ವರ್ಣನೆಯನ್ನು ಕಂಡು ಮನೋರಮೆ ಹೇಳುವ ಸಂದರ್ಭವಿದು. ನಾಳೆಯಲ್ಲವೆ ತುಂಬ ನೇಮದ ಕಾಮನಹಬ್ಬ ಎನ್ನುತ್ತಾಳೆ. ಇದೊಂದು ವಸಂತಕಾಲದ ಬೆಂಕಿಯಹಬ್ಬ, ಯಾವಾಗಲೂ ಹಬ್ಬಹರಿದಿನಗಳಲ್ಲಿ ಹೆಣ್ಣು ಆನಂದ ಪಡುವುದನ್ನು ಕಂಡ

ಗಂಡು ತನಗೆ ಅಂಥ ಅವಕಾಶವಿಲ್ಲವೆಂದು ಕೊರಗಿದನಂತೆ. ಆನಂದಕ್ಕಾಗಿ ದೇವರಲ್ಲಿ ಮೊರೆ ಇಟ್ಟನಂತೆ. ಒಂದುಸಲವಾದರೂ ಗಂಡು ಆನಂದಪಡಲಿ ಎಂದು ಹೋಳಿಹಬ್ಬವನ್ನು ಆತನ ಮೊರೆ ಕೇಳಿದ ದೇವರು ನಿರ್ಮಿಸಿದನಂತೆ. ಆ ಹಬ್ಬದಂದು ಕಾಮನ ಪ್ರತಿಮೆ ಮಾಡಿ ಶೃಂಗರಿಸಿ ಊರ ಕಾಮನ ಕಟ್ಟೆಯ ಮೇಲೆ ಇಡುತ್ತಾರೆ. ಕೆಲವು ಕಡೆ ಅದರ ಎಡಭಾಗದಲ್ಲಿ ರತಿಯ ವಿಗ್ರಹವನ್ನು ಇಡುತ್ತಾರೆ. ಕೆಲವು ಕಡೆ ಸರಕಾರಿ ಕಾಮಣ್ಣ, ದೈವದ ಕಾಮಣ್ಣ, ಓಣಿಯ ಕಾಮಣ್ಣ, ಎಂಬುದಾಗಿ ಮೂರು ಕಾಮಣ್ಣರನ್ನಿಡುತ್ತಾರೆ. ಆ ಸಂದರ್ಭದಲ್ಲಿ ಜನ ಹಾಡಿ ಕುಣಿದು ಕುಪ್ಪಳಿಸುತ್ತಾರೆ. ನಾನಾ ರೀತಿಯ ಹಾಡು ಹಾಡುತ್ತಾರೆ. ಪರಸ್ಪರ ಬೈಯ್ದಾಡುವುದು, ಬಣ್ಣ ಎರಚುವುದು, ಗೇಲಿ ಮಾಡಿಕೊಳ್ಳುವುದು ಇತ್ಯಾದಿಗಳೆಲ್ಲಾ ಜರುಗುತ್ತವೆ. ಕೊನೆಗೆ ಕಾಮನ ಗೊಂಬೆಯನ್ನು ಸುಟ್ಟು ಬಾಯಿಬಡಿದುಕೊಳ್ಳುತ್ತಾರೆ. ತುಂಬಿದ ಸಭೆಯಲ್ಲಿ ಶಿವ ಪಾರ್ವತಿಯನ್ನು ಲೋಕದಲ್ಲಿ ಸುಂದರನಾರು ಎಂದು ಕೇಳಿದಾಗ ಪಾರ್ವತಿ ಕಾಮ ಎನ್ನುತ್ತಾಳೆ. ಆಗ ಕೋಪಿಸಿಕೊಂಡ ಶಿವ ಕಾಮನನ್ನು ಸುಟ್ಟುಬಿಡುತ್ತಾನೆ. ರತಿ ದುಃಖತಪ್ತಗಳಾಗುತ್ತಾಳೆ. ಅದನ್ನು ಗಮನಿಸಿದ ಶಿವ ಎಲ್ಲರ ಮನಸ್ಸಿನಲ್ಲಿ ನೆನೆದಾಗ ಕಾಮ ಮತ್ತೆ ಹುಟ್ಟಿ ಬರುತ್ತಾನೆ ಎಂದು ಹೇಳುವ ಜನಪದ ಕತೆಯೊಂದಿದೆ.

ಪಿಡಿ ಈ ಚೂತಫಲವ ನಿನ್ನ ಮಡದಿರನ್ನೆ ಸವಿಯಲವಳು ಪಡೆವಳೋರ್ವ ಸುತೆಯನೆಂದು ..

(ರ. ಕಲ್ಯಾಣ. ಪುಟ ೫)

ದೃಢವರ್ಮನೆಂಬ ಶೂರರಾಜನ ಬಾಡಿದ ಮುಖವನ್ನು ಕಂಡ ನಾರದನು ಸಮಾಧಾನದ ಮಾತುಗಳನ್ನು ಹೇಳುವ ಸನ್ನಿವೇಶ. ರಾಜನಿಗೆ ಸಂತಾನವಿಲ್ಲ. ಅಂಥ ಸಂದರ್ಭದಲ್ಲಿ ಮಹರ್ಷಿಯು ಈ ಮೇಲಿನ ಮಾವಿನ ಹಣ್ಣನ್ನು ನಿನ್ನ ಹೆಂಡತಿ ತಿಂದರೆ ಒಬ್ಬ ಮಗಳು ಹುಟ್ಟುತ್ತಾಳೆ ಎಂದು ಒಂದು ಹಣ್ಣನ್ನು ಮಂತ್ರಿಸಿಕೊಟ್ಟು ಹೊರಡುತ್ತಾನೆ. ಕಾಲಕ್ರಮದಲ್ಲಿ ಆತ ಹೇಳಿದಂತೆಯೇ ಆಗುತ್ತದೆ. ಸಮಾಜದ ನಿಂದೆಯನ್ನು ಸಹಿಸಲು ಸಾಧ್ಯವಾಗದ ಮಕ್ಕಳಿಲ್ಲದ ದಂಪತಿಗಳ ಪಾಡು ಹೇಳತೀರದು. ಕಂಡ ಕಂಡ ದೇವರುಗಳಿಗೆಲ್ಲಾ ಹರಕೆಹೊರುತ್ತಾರೆ. ಆಚಾರ ವಿಚಾರಗಳನ್ನು ಮಾಡುತ್ತಾರೆ. ಜನಪದ ಕತೆಗಳಲ್ಲಿ ಮಂತ್ರಿಸಿದ ಮಾವಿನ ಹಣ್ಣಿನಿಂದ ಸಂತಾನ ಪ್ರಾಪ್ತಿಯಾಗಿರುವ ಉದಾಹರಣೆಗಳು ಸಾಕಷ್ಟು ಸಿಗುತ್ತವೆ.

ಮಾನೌಮಿಯೊಸಗೆ

(ಚಿ. ವಂಶಾವಳಿ, ಪು. ೧೪)

ಮಹಾನವಮಿ ಹಬ್ಬ : ವಿಜಯನಗರದ ರಾಜರು ಪರಂಪರೆಯಿಂದ ಆಚರಿಸುತ್ತಿದ್ದ ಬಹು ಪ್ರಸಿದ್ಧವಾದ ಹಬ್ಬ. ಇದಕ್ಕಾಗಿ ಹೊರದೇಶದಿಂದ ಆಮಂತ್ರಿತರು ನೋಡುವವರು ಬರುತ್ತಿದ್ದರು. ದಸರಾ ಸಂದರ್ಭದಲ್ಲಿ ಈಗಲೂ ಮೈಸೂರಿನಲ್ಲಿ ಈ ಹಬ್ಬ ಅತ್ಯಂತ ವೈಭವದಿಂದಲೇ ಜರುಗುತ್ತದೆ.

ಆಚಾಮ್ಲವರ್ದನ

(ಚಾ,ಪು. ಪು ೨೭)

ಒಂದು ಬಗೆಯ ಉಪವಾಸವ್ರತ 'ಸೌವೀರಭುಕ್ತಿ' ಎಂಬ ಹೆಸರೂ ಇದಕ್ಕಿದೆ. ದಿನಕ್ಕೆ ಒಂದು ಸಲ ಊಟಕ್ಕೆ ಬದಲಾಗಿ ಒಂದು ಸಲ ಬರೀ ಗಂಜಿಯನ್ನು ಕುಡಿದಿರುವುದಕ್ಕೆ 'ಆಚಾಮ್ಲ' ವೆಂದು ಕರೆಯುತ್ತಾರೆ. "ಒಂದು ಆಚಾಮ್ಲ ಒಂದು ಉಪವಾಸ, ಮರುದಿನ ಒಂದು ಆಚಾಮ್ಲ (ಮೊದಲ ದಿನಕ್ಕಿಂತ ಒಂದು ಗ್ರಾಸ ಹೆಚ್ಚು) ಮತ್ತೆ ಮರುದಿನ ಉಪವಾಸ ಈ ಕ್ರಮದಲ್ಲಿ ಹತ್ತು ಗ್ರಾಸ ಆಚಾಮ್ಲ ಆಗುವವರೆಗೆ ಏರುತ್ತ ಹೋಗಿ ಅಲ್ಲಿಂದ ಕ್ರಮವಾಗಿ ಒಂದೊಂದೇ ಗ್ರಾಸ ಕಡಿಮೆ ಮಾಡುತ್ತ ಒಂದು ಆಚಾಮ್ಲದವರೆಗೆ ಇಳಿಸುತ್ತಾ ಬರಬೇಕು. ಇದು ಆಚಾಮ್ಲ ವರ್ದನ ತಪವೆನಿಸುತ್ತದೆ. ಇದು ಸೌಂದರ್ಯವರ್ದಕವೆಂದು ಹೇಳಲಾಗುತ್ತದೆ."

ಜಂಬೂ ಕುಮಾರ ಹೇಳಿದ ದಾಹಜ್ವರವುಳ್ಳವನ ಕಥೆ

(ಚಾ,ಪು. ಪು ೪೨೯)

ಜಂಬೂಸ್ವಾಮಿ ಕಥೆಯಲ್ಲಿ ಜಂಬೂ ಕುಮಾರನಿಗೂ ಚೋರನಿಗೂ ನಡೆದ ಸಂಭಾಷಣೆಯ ಸಂದರ್ಭ. ಮನುಷ್ಯನೊಬ್ಬ ದಾಹ ಜ್ವರದಿಂದ ಪೀಡಿತನಾಗಿದ್ದ. ನದಿ, ಸರೋವರ, ತಟಾಕಗಳ ನೀರನ್ನು ಕುಡಿದರೂ ಆತನ ದಾಹ ತಣಿಯಲಿಲ್ಲ, ಇಂಥವನು ಹುಲ್ಲಿನ ಮೇಲಿನ ನೀರಹನಿಯನ್ನು ನೆಕ್ಕಿದರೆ ದಣಿವು ಹೋಗುವುದೇ ? ಸ್ವರ್ಗದ ಸುಖದಿಂದಲೂ ಸುಖ ಲಭಿಸದಿರುವಾಗ ಇಹಲೋಕದ ಸುಖದಿಂದ ತೃಪ್ತಿ ಲಭಿಸುತ್ತದೆಯೇ ಎಂಬ ಅಭಿಪ್ರಾಯಕ್ಕೆ ಇದು ಮಾದರಿಯಾಗಿದೆ. ಮಾನವನ ಕೊನೆ ಇಲ್ಲದ ಆಸೆಯನ್ನು ಪ್ರತಿಮಿಸುವ ಕಥೆ ಇದು.

ಓದಲಾರ್ಪೊಡೆನಿಮ್ಮ ಓದಿಸಲಕ್ಕುಂ

(ವಡ್ಡಾ. ಪು. ೩)

ಶಿಕ್ಷಣ ವ್ಯವಸ್ಥೆ ಮತ್ತು ವಿದ್ಯಾರ್ಥಿಜೀವನದ ಬಗ್ಗೆ ವಡ್ಡಾರಾಧನೆ ಅಮೂಲ್ಯ ವಿಚಾರಗಳನ್ನು ಒದಗಿಸುತ್ತದೆ. ವಿದ್ಯಾಭ್ಯಾಸದ ಜೀವನ ಅತ್ಯಂತ ಅನುಶಾಸನ. ಸಂಯಮ ಹಾಗೂ ಶ್ರಮದಿಂದ ಕೂಡಿದುದಾಗಿತ್ತು. ವಿದ್ಯೆ ಕಲಿಸುವವರಿಗೆ ಕಲಿಯು[illegible] ಮೇಲೆ ಯಾವ ಸಲಿಗೆಯೂ ಇರಲಿಲ್ಲ. ಸುಖಾರ್ಥೀ ಚೇತ್ ತ್ಯಜೇದ್ವಿದ್ಯಾಂ ವಿದ್ಯಾರ್ಥೀ ಚೇತ್ ತ್ಯಜೇತ್ಸುಖಂ ಎಂಬ ಸುಭಾಷಿತದಂತೆ ಕಲಿಯುವವನ ಬದುಕು ಇದ್ದಿತೆಂದು ಸುಕುಮಾರಸ್ವಾಮಿಯ ಕತೆಯಿಂದ ಗೋಚರವಾಗುತ್ತದೆ.

ಮಂತ್ರಿ ಮಕ್ಕಳಾದ ಅಗ್ನಿಭೂತಿ ವಾಯುಭೂತಿಯರು ತಂದೆ ತಾಯಂದಿರ ಮಾತು ಕೇಳದೆ ಸಂಪಾದಿಸಿದ್ದನ್ನೆಲ್ಲ ಖರ್ಚುಮಾಡಿ ಸಪ್ತವ್ಯಸನಾಭಿಭೂತರಾದುದರಿಂದ ಅವರಿಗೆ ರಾಜನ ಆಸ್ಥಾನದಲ್ಲಿ ಸ್ಥಾನ ದೊರಕಲಿಲ್ಲ. ನೊಂದ ಮಕ್ಕಳು ತಿರಿದು ತಿಂದಾದರೂ ವಿದ್ಯೆಕಲಿಯಬೇಕೆಂದು ಭಾವಿಸಿ ತಾಯಿಯ ಆಶೀರ್ವಾದ ಪಡೆದು ಆಕೆಯಿಂದ ಪತ್ರ ತೆಗೆದುಕೊಂಡು ಮಾವ ಸೂರ್ಯಮಿತ್ರನಲ್ಲಿಗೆ ಬರುತ್ತಾರೆ. ಆಗ ಸಂಬಂಧಿಕನಲ್ಲವೆಂದು ಸೂರ್ಯಮಿತ್ರ ನಟಿಸುತ್ತಾನೆ. ಆದರೆ ನೀವು ಯಾರಾದರೇನು ವಿದ್ಯೆ ಕಲಿಯಲು ಬಂದಿರುವಿರಾದ್ದರಿಂದ ನಾನು ನಿಮಗೆ ಸಹಾಯ ಮಾಡುವೆನೆಂದು ಹೇಳುತ್ತಾನೆ. ಭಿಕ್ಷಾಟನೆ ಮಾಡುತ್ತಲೇ ಏಳೆಂಟು ವರ್ಷಗಳಲ್ಲಿ ಅಶ್ವಶಾಸ್ತ್ರ, ಗಜಶಾಸ್ತ್ರ, ವೈದ್ಯ, ದೇವವೈದ್ಯ, ವಾಗ್ಭಟನ ಅಷ್ಟಾಂಗಹೃದಯ, ಬಿಡುಲವಣ ಅಥವಾ ಕೃಷ್ಣಲವಣದ ಪಾನಕ್ಕೆ ಸಂಬಂಧಿಸಿದ ವೈದ್ಯ, ಮೊದಲಾದ ಶಾಸ್ತ್ರ ವಿದ್ಯೆಗಳನ್ನು ಕಲಿಯುತ್ತಾರೆ. ಈ ಎಲ್ಲಾ ವಿದ್ಯೆಗಳನ್ನು ಗುರುಕುಲದಲ್ಲಿ ಹೇಳಿಕೊಡಲಾಗುತ್ತಿತ್ತೆಂದು ತಿಳಿದುಬರುತ್ತದೆ. ಆಗ ಕಷ್ಟಪಟ್ಟು ಜೀವನ ನಡೆಸಿ ವಿದ್ಯಾಭ್ಯಾಸ ಮಾಡಬೇಕಿತ್ತು. ಕಠಿಣ ಬದುಕಿನ ವಿವರಗಳನ್ನು ವಡ್ಡಾರಾಧನೆಕಾರ ದಾಖಲಿಸಿದ್ದಾನೆ.

ಪಾಠ ಹೇಳಿಕೊಡುವವನು ಸಲಿಗೆ ತೋರಿಸಿದರೆ ಕಲಿಯುವುದಿಲ್ಲವೆಂದು ಇದರಿಂದ ಗೋಚರವಾಗುತ್ತದೆ. ಕಲಿಸುವವನು ಸಂಬಂಧಿಕನೆಂದು ಗೊತ್ತಾದ ನಂತರ ವಿದ್ಯಾರ್ಥಿಗಳು ಗುರುವನ್ನು ಹೇಗೆ ಆಕ್ಷೇಪಿಸುತ್ತಿದ್ದರೆಂಬುದು ಸೂರ್ಯಮಿತ್ರನನ್ನು ಮಹಾ ಅಪರಾಧಿ ಎಂದು ಹೇಳುವ ವಾಯುಭೂತಿಯ ಮಾತಿನಿಂದ ತಿಳಿದುಬರುತ್ತದೆ. ರಕ್ತಸಂಬಂಧ, ಆತ್ಮೀಯತೆ ಇವೆರಡೂ ಇದ್ದಾಗ ಕಲಿಯುವವರಲ್ಲಿ ಆಸಕ್ತಿ ಮೂಡುವುದಿಲ್ಲ. ಶ್ರದ್ಧೆ ಬರುವುದಿಲ್ಲ. ಇದನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದ ಶಿಕ್ಷಣ ವ್ಯವಸ್ಥೆಯನ್ನು ವಡ್ಡಾರಾಧನೆಕಾರ ಅದ್ಭುತವಾಗಿ ಚಿತ್ರಿಸಿದ್ದಾನೆ. ನೆಪೋಟಿಸಂ ಇದ್ದಲ್ಲಿ ಗುಣಮಟ್ಟ ಕುಂದುತ್ತದೆ ಎಂಬ ತಿಳುವಳಿಕೆ ಈ ಪ್ರಸಂಗದಿಂದ ತಿಳಿದು ಬರುತ್ತದೆ.

ಎಮ್ಮಂತಪ್ಪ ರೂಪಿನ ಋಷಿಯರ್ಗಲ್ಲದೆ ಪೇೞಲುಂ ಕಲಲುಂ ಆಗದು

(ವಡ್ಡಾ. ಪು ೫)

ಗುರುಕುಲದ ಪಾಠ ಪ್ರವಚನಗಳು ಮತ್ತು ವಿದ್ಯಾರ್ಥಿಯ ಶ್ರಮದ ಬದುಕು ಇವುಗಳಿಗಿಂತ ಮುಂಚಿನ ವಿವರಗಳು ಗಮನಾರ್ಹವಾಗಿ ಕಾಣಿಸುತ್ತವೆ. ದೀಕ್ಷೆಯನ್ನು ಸ್ವೀಕರಿಸಿ ಮೇಧಾವಿಯಾಗಿ ಭಟಾರನಾಗಬೇಕಾದವನು ಅವಧಿ ಜ್ಞಾನಿಗಳೆನಿಸಿದ ಭಟಾರರ ಬಳಿ ಇದ್ದು ಸುಮಾರು ಹನ್ನೆರಡು ವರ್ಷಗಳ ಕಾಲ ಅನೇಕ ಅಂಶಗಳನ್ನು ಕಲಿಯಬೇಕಾಗಿತ್ತು. ಸುಕುಮಾರಸ್ವಾಮಿ ಕಥೆಯಲ್ಲಿ ಸೂರ್ಯಮಿತ್ರನು ಸುಧರ್ಮಾಚಾರ್ಯರಲ್ಲಿ ಜ್ಯೋತಿಷ್ಯವನ್ನು ಕಲಿಯಲು ಬರುತ್ತಾನೆ. ಆಗ ಅವರು ತಮ್ಮಂತಹ ಋಷಿಗಳಿಗಲ್ಲದೆ ಅನ್ಯರಿಗೆ ಜ್ಯೋತಿಷ್ಯವನ್ನು ಹೇಳಿಕೊಡಲಾಗುವುದಿಲ್ಲವೆಂದು ನಿರಾಕರಿಸುತ್ತಾರೆ ಜ್ಯೋತಿಷ್ಯವೆಂಬುದು ಜನಸಾಮಾನ್ಯರ ಸೊತ್ತಾಗಿರಲಿಲ್ಲ. ಅದನ್ನು ಕರಗತ ಮಾಡಿಕೊಳ್ಳಬೇಕಾದರೆ ಕೆಲವು ಅರ್ಹತೆಗಳನ್ನು ಹೊಂದಿರಬೇಕಾಗಿತ್ತು. ಆದ್ದರಿಂದ ಸೂರ್ಯಮಿತ್ರ ಭಟಾರರಲ್ಲಿ ದೀಕ್ಷೆಯನ್ನು ಪಡೆದು ಪಂಚಾಣುವ್ರತಗಳನ್ನು ಕೈಕೊಂಡು ಮಾಡಿದ ಅಪರಾಧಿಗಳಿಗೆ ಪಶ್ಚಾತ್ತಾಪಪಟ್ಟು, ಅರ್ಹಂತರು, ಸಿದ್ಧರು, ಆಚಾರ್ಯರು,ಉಪಾಧ್ಯಾಯರು, ಸಾಧುಗಳು, ಇವರುಗಳಿಗೆಲ್ಲಾ ನಮಸ್ಕಾರ ಮಾಡಿ ತನ್ನ ದೋಷಗಳನ್ನು ಗುರುವಿಗೆ ತಿಳಿಸಿ, "ತ್ರಿಷಷ್ಠಿಶಲಾಕಾ ಪುರುಷರ ಚರಿತ್ರೆಗಳನ್ನು ಜೈನ ಶ್ರಾವಕರ ಹಾಗೂ ಯತಿಗಳ ಆಚಾರಗಳನ್ನು ನಿರೂಪಿಸುವ ಚರಣ ಗ್ರಂಥಗಳನ್ನು ಕಲಿತು, ದ್ರವ್ಯಾನುಯೋಗವನ್ನು ತಿಳಿದು ಆದ ನಂತರ ಅವಧಿ ಜ್ಞಾನಕ್ಕೆ ಸಾಧನವಾದ ಜ್ಯೋತಿಷ್ಯವನ್ನು ಕಲಿಯುತ್ತಾನೆ."

ಪನ್ನೆರಡು ವರ್ಷಂಬರಂ ಗುರುಗಳನಗಲದೆ ತಪಂಗೆಯ್ದು.....

(ವಡ್ಡಾ. ಪು ೬)

ಸುಕುಮಾರಸ್ವಾಮಿ ಕಥೆಯಲ್ಲಿ ಬರುವ ಸನ್ನಿವೇಶ. ಸೂರ್ಯಮಿತ್ರನು ಸುಧರ್ಮಾಚಾರ್ಯ ರಲ್ಲಿಗೆ ಜ್ಯೋತಿಷ್ಯವನ್ನು ಕಲಿಯುಲು ಬರುತ್ತಾನೆ. ಗುರುಗಳ ಆದೇಶದಂತೆ ಸಕಲ ವಿಧದ ಆಚಾರವಿಚಾರಗಳನ್ನು ಚರಿತ್ರೆಗಳನ್ನು ಕಲಿಯುತ್ತಾನೆ. ಕೊನೆಗೆ ಗುರುಗಳನ್ನು ವಂಚಿಸಿ ತಪಸ್ಸು ಮಾಡಿದುದಕ್ಕಾಗಿ ಪ್ರಾಯಶ್ಚಿತ್ತ ಮಾಡಿಕೊಳ್ಳುತ್ತಾನೆ. ನಂತರ ಪರಮಾರ್ಥಯತಿಯಾಗಿ ಹನ್ನೆರಡುವರ್ಷಗಳ ಕಾಲ ಗುರುಗಳ ಬಳಿಯೇ ಇದ್ದುಕೊಂಡು ತಪಸ್ಸು ಮಾಡಿ ಆಚಾರ್ಯನಾಗಿ ಬಿಡುತ್ತಾನೆ. ಗುರುಗಳ ಮಾತಿನಂತೆಯೇ ನಂತರವೂ ನಡೆದುಕೊಳ್ಳುತ್ತಾನೆ.

ಶಿಷ್ಯ ಗುರುಗಳನ್ನು ಅಗಲುವಂತಿರಲಿಲ್ಲ. ಮುನಿಗಳ ಜೀವನ ಕ್ಲಿಷ್ಟಕರವಾದುದು. ಕಠಿಣ ನಿಯಮಗಳಿಂದ ಕೂಡಿದುದಾಗಿತ್ತು. ಶುಭಮುಹೂರ್ತದಲ್ಲಿ ದೀಕ್ಷೆಯನ್ನು ಪಡೆಯಬೇಕಾಗಿತ್ತು ಅಲ್ಲದೆ ಅವರನ್ನು ಅಗಲುವಂತೆಯೂ ಇರಲಿಲ್ಲ. ಅವರೊಂದಿಗೆ ವಿಹರಿಸಬೇಕಿತ್ತು. ಪಂಚಮಹಾವ್ರತಗಳನ್ನು ಸ್ವೀಕರಿಸಿ ತ್ರಿಷಷ್ಠಿಶಲಾಕಾ ಪುರುಷರ ಚರಿತ್ರೆಗಳನ್ನು, ಆರಾಧನೆ, ಮೊದಲಾದ ಚರಣ ಗ್ರಂಥಗಳನ್ನು ಕರಣ ಗ್ರಂಥಗಳನ್ನು ದ್ರವ್ಯಾನುಯೋಗವನ್ನು ಮತ್ತಿತರ ಸಿದ್ಧಾಂತಗಳನ್ನು ಕುರಿತ ಗ್ರಂಥಗಳನ್ನು ಅಭ್ಯಾಸ ಮಾಡಬೇಕಿತ್ತು. ಗುರುಗಳ ಅಪ್ಪಣೆಯಂತೆ ಏಕವಿಹಾರಿಯಾಗಿ ಸಂಚರಿಸಬೇಕಿತ್ತು. ಭಿಕ್ಷೆಗೆ ಮಾತ್ರ ಊರೊಳಕ್ಕೆ ಬಂದು ಉಳಿದ ಸಂದರ್ಭಗಳಲ್ಲಿ ಊರ ಹೊರಗಡೆ ಇರುವ ಜಿನಾಲಯ, ಚೈತ್ಯಾಲಯ, ಉದ್ಯಾನವನಗಳಲ್ಲಿ ವಾಸಮಾಡಬೇಕಿತ್ತು. ಭಿಕ್ಷಾಟನೆ ಮಾಡುವಾಗ ತಾರತಮ್ಯ ಭಾವನೆ ಇಲ್ಲದೆ ಸರ್ವರ ಮನೆಯ ಮುಂದೂ ಹೋಗಿ ಬೇಡಬೇಕು. ನಿರ್ದಿಷ್ಟ ವೇಳೆಯಲ್ಲಿಯೇ ಭಿಕ್ಷೆ ಬೇಡಬೇಕಿತ್ತು ಯಾರಾದರೂ ದಾರಿಯಲ್ಲಿ ಎದುರಾಗಿ ಭಿಕ್ಷೆನೀಡಿದರೆ ಅದನ್ನು ಸ್ವೀಕರಿಸಿ ದಾನ ವೃದ್ಧಿಯಾಗಲಿ ಎಂದು ಹರಸಬೇಕಿತ್ತು. ಈ ರೀತಿ ಭಿಕ್ಷೆಗೆ ಬರುವ ಸಂದರ್ಭದಲ್ಲಿ ಗೋಚಾರ ನಿಯಮವನ್ನು ಪಾಲಿಸಬೇಕಿತ್ತು. ಹಿಂತಿರುಗಿದ ನಂತರ ಪಡಿಕಮಣವನ್ನು ಹೇಳಬೇಕಿತ್ತು. ಯಾವಾಗಲೂ ಇವರಿಗೆ ಆಹಾರ ಸಿಕ್ಕೇ ಸಿಕ್ಕುತ್ತದೆಂದು ಹೇಳಲಾಗುವುದಿಲ್ಲ ಆಹಾರಕ್ಕೆ ಬದಲಾಗಿ ನಷ್ಟಗಳೂ ಅವರಿಗೆ ಸಂಭವಿಸಿರುವುದುಂಟು.

ಮನೆಮಾರುಗಳನ್ನು ಬಿಟ್ಟವನು ಸನ್ಯಾಸಿ. ಯಾವುದೇ ತಾಪಸಿಗೆ ಅಥವಾ ಭಿಕ್ಷುವಿಗೆ 'ಸನ್ಯಾಸಿ'ಎಂಬ ಪದವನ್ನು ಬಳಸುತ್ತಾರೆ. ಬ್ರಾಹ್ಮಣರ ನಾಲ್ಕನೇ ಆಶ್ರಮ ಸನ್ಯಾಸವೇ. ಸನ್ಯಾಸಿಯು ರುದ್ರಾಕ್ಷಿಮಾಲೆ ಧರಿಸುತ್ತಾನೆ. ಕೇಸರಿಬಣ್ಣದ ಬಟ್ಟೆ ಧರಿಸುತ್ತಾನೆ. ಮಾದಕ ಪಾನೀಯಗಳನ್ನು ಸೇವಿಸುವುದಿಲ್ಲ. ಕನ್ನಡ ಜನಪದ ಕಥೆಗಳಲ್ಲಿ ಸನ್ಯಾಸಿ ಒಂದು ಪಾತ್ರವಾಗಿ ಕಾಣಿಸಿಕೊಳ್ಳುತ್ತಾನೆ. ಕೆಲವೊಮ್ಮೆ ಶಿವನೇ ಸನ್ಯಾಸಿ ವೇಷ ಧರಿಸಿ ಭೂಲೋಕಕ್ಕೆ ಬಂದಿರುತ್ತಾನೆ. ಇಲ್ಲವೆ ಸನ್ಯಾಸಿ ಭಿಕ್ಷೆಬೇಡುತ್ತಾ ಕಥಾನಾಯಕನ ಮನೆಗೆ ಬರುತ್ತಾನೆ. ಬಂಜೆಯರ ಕೈಯಿಂದ ಸನ್ಯಾಸಿ ಭಿಕ್ಷೆ ಸ್ವೀಕರಿಸುವುದಿಲ್ಲ. ಹೀಗಾಗಿ ಮಕ್ಕಳಾಗಲು ಅವನೇ ಯಾವುದಾದರೂ ಉಪಾಯವನ್ನು ಸೂಚಿಸುತ್ತಾನೆ. ಇಲ್ಲವೇ ಫಲವನ್ನೋ ಇನ್ನಾವುದಾದರು ವಸ್ತುವನ್ನೊ ಕೊಡುತ್ತಾನೆ. ಕಪಟ ಸನ್ಯಾಸಿಗಳ ಬಗ್ಗೆಯೂ ಜನಪದ ಕಥೆಗಳಿವೆ. ಕತೆಯ ಕೊನೆಯಲ್ಲಿ ಅವನ ಕಪಟ ಹೊರ ಬೀಳುತ್ತದೆ. ಬ್ರಾಹ್ಮಣ ಸನ್ಯಾಸಿಯೊಬ್ಬ ನೀರಿಗೆ ಬಂದ ಮಾದಿಗರ ಚೆಲುವೆಯನ್ನು ಮದುವೆಯಾಗೆಂದು ಒತ್ತಾಯಿಸುವ ಜನಪದಗೀತೆಯಿದೆ. ಮಕ್ಕಳ ಬಗ್ಗೆ ಹೇಳುವಾಗ

ನನ್ನಯ್ಯನಂಥೋರು ಹನ್ನೆರಡುಮಂದಿ
ಹೊನ್ನೆಯ ಮರದ ನೆರಳಲ್ಲಿ ಆಡುವಾಗ
ಸನ್ಯಾಸಿ ಜಪವ ಮರೆತಾನು

ಎಂಬ ತ್ರಿಪದಿ ಇದೆ. ಆದರೆ ಸನ್ಯಾಸಿಗಳು ಇಂದು ಕಳ್ಳ ವ್ಯವಹಾರಗಳಿಗೂ ಮೂಲವಾಗಿರುತ್ತಾರೆ. ಕನ್ನಡದಲ್ಲಿ 'ಸನ್ಯಾಸಿ ನನ್ಮಗ'ಎಂಬ ಬೈಗಳು ಅವರ ಮೇಲಿನ ತಿರಸ್ಕಾರವನ್ನು ಸೂಚಿಸುತ್ತದೆ.

ಗ್ರಾಮೇಕ ರಾತ್ರಂ ನಗರೇ ಪಂಚರಾತ್ರಮಟವ್ಯಾಂ ದಶರಾತ್ರಮೆಂಬೀತೆಱದಿಂದಂ...

(ವಡ್ಡಾ. ಪು.೭)

ಮುನಿಗಳ ಬದುಕು ಅತ್ಯಂತ ಕಷ್ಟಕರವಾದುದು. ಅವರ ಸಂಚಾರವಂತೂ ತುಂಬ ಕ್ಲಿಷ್ಟಕರ. ಒಂದು ಗ್ರಾಮದಲ್ಲಿ ಒಂದು ರಾತ್ರಿ ನಗರದಲ್ಲಿ ಅಯ್ದು ರಾತ್ರಿ ಅಡವಿಯಲ್ಲಿ ಹತ್ತು ರಾತ್ರಿ ಈ ನಿಯಮದಿಂದಲೇ ಮುನಿಗಳು ಒಂದೆಡೆಯಿಂದ ಮತ್ತೊಂದೆಡೆಗೆ ಸಂಚರಿಸುತ್ತಿದ್ದದ್ದು, ಅವರ ಪ್ರಯಾಣವೆಲ್ಲಾ ಕಾಲುನಡಿಗೆಯಿಂದಲೇ ಸಾಗುತ್ತಿದ್ದುದರಿಂದ ಕಷ್ಟಕರವಾಗಿತ್ತು. ನಿರ್ದಿಷ್ಟ ಗುರಿ ಇಟ್ಟುಕೊಂಡು ಪ್ರಯಾಣ ಮಾಡುತ್ತಿದ್ದ ಇವರಿಗೆ ಯಾನದ ಸಂದರ್ಭದಲ್ಲಿ ಹಲವಾರು ತೊಂದರೆಗಳು ಸಂಭವಿಸುತ್ತಿದ್ದವು. ದಾರಿಯೇ ಸುಗಮವಾಗಿರದಿದ್ದಾಗ, ಕಳ್ಳ ಕಾಕರ ತೊಂದರೆಗಳಿದ್ದಾಗ ಪ್ರಾಕೃತಿಕ ತೊಂದರೆಗಳು ಕಾಡು ಮೃಗಗಳ ತೊಂದರೆ ಅಧಿಕವಾಗಿದ್ದಾಗ ಈ ಮುನಿಗಳ ಸಂಚಾರ ಹೇಗಿತ್ತೆಂಬುದನ್ನು ನೆನೆಸಿಕೊಂಡರೆ ದಿಗಿಲಾಗುತ್ತದೆ.

ತಪಸ್ಸಿಗೆ ಕೂತಾಗಲೂ ಹಲವಾರು ತೊಂದರೆಗಳನ್ನು ಅನುಭವಿಸುತ್ತಿದ್ದರು. ನಾಯಿಗಳು ಅವರ ಭಿಕ್ಷಾ ಪಾತ್ರೆಯನ್ನು ಕಚ್ಚಿಕೊಂಡು ಹೋಗುತ್ತಿದ್ದವಂತೆ. ಕಳ್ಳರು ಗೇಲಿಮಾಡುತ್ತಿದ್ದರಂತೆ ಕುಡುಕರು, ಕಾಮುಕರ ತೊಂದರೆಗಳಿಗೂ ಸಿಲುಕುತ್ತಿದ್ದರಂತೆ, "ಒಟ್ಟಿನಲ್ಲಿ ಮುನಿಗಳ ಚಿತ್ತೈಕಾಗ್ರತೆಯನ್ನು ಕಲಕುವ ಮನಸ್ಸನ್ನು ಮಲಿನಗೊಳಿಸುವ ಸಂದರ್ಭಗಳು ಇದ್ದೇ ಇರುತ್ತಿದ್ದವು. ರಾಜ್ಯದಲ್ಲಿ ಕಾಣಿಸಿಕೊಳ್ಳುವ ರಾಜಕೀಯ ಏರುಪೇರುಗಳ ಕಾಲದಲ್ಲಿ (ವಿರುದ್ಧರಜ್ಯ) ಇವರು ಓಡಾಡುವಾಗ ಗೂಢಚಾರಿಗಳೆಂದು ಶಂಕಿಸಿ ಸೆರೆಮನೆಗೆ ತಳ್ಳುವ ಸಂದರ್ಭಗಳೂ ಎದುರಾಗುತ್ತಿದ್ದವು. ಈ ಸಂಚಾರ ಕಾಲದಲ್ಲಿ ನಾನಾಸ್ಥಳ, ನಾನಾಜನರ ಪರಿಚಯ, ಹಲವು ಸ್ವಭಾವದ ಜನ, ವಾತಾವರಣ ಬೇರೆ ಬೇರೆ, ಆಹಾರ ವಿಧಾನ, ಭಿನ್ನ ಭಾಷೆ, ಬೇರೆ ವೇಷ ಭೂಷಣ, ಜೀವನ ವಿಧಾನ ಎಲ್ಲ ಪ್ರತ್ಯೇಕ, ಆಹಾರ ಹೊತ್ತಿಗೆ ಸರಿಯಾಗಿ

ಸಿಕ್ಕರುಂಟು, ಇಲ್ಲವಾದರೆ ಆದಿನ ಉಪವಾಸವೇ ಗತಿ. ಲಾಭದ ಅಂತರಾಯ ಬೇರೆ. ಜತೆಗೆ ಸಂಚಾರದಿಂದಾದ ಹಿಂಸೆಗೆ ಆಹಾರದಲ್ಲಾಗಿರಬಹುದಾದ ಹೆಚ್ಚು ಕಡಿಮೆಗೆ ವ್ರತನಿಯಮ ಉಲ್ಲಂಘನೆಗೆ ಪ್ರಾಯಶ್ಚಿತ್ತವೂ ಆಗಬೇಕು. ಇಷ್ಟು ಕಷ್ಟ ನಷ್ಟಗಳಿದ್ದರೂ ಸಂಸ್ಕಾರ ಸಂಪನ್ನರೇ ಅಲ್ಲದೆ ಸಾಮಾನ್ಯರೂ ಮುನಿಗಳಾಗುತ್ತಿದ್ದುದು ಆಶ್ಚರ್ಯವೆನಿಸಬಹುದು" (ವಡ್ಡಾರಾಧನೆ ಸಮಗ್ರ ಅಧ್ಯಯನ, ಪು. ೧೪೨)

ಎನ್ನ ಮಗಳ್ಗೆ ನಿಮ್ಮ ಬ್ರತಂಗಳಂ ಏಕೆ ಕೊಟ್ಟಿರ್

(ವಡ್ಡಾ. ಪು)

ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸುವುದು ತಂದೆ ತಾಯಿಗಳ ಕರ್ತವ್ಯ. ಹಾಗೊಮ್ಮೆ ಮಾಡಿಸದಿದ್ದರೆ ಮಕ್ಕಳ ದೃಷ್ಟಿಯಲ್ಲಿ ತಂದೆ ತಾಯಿಗಳು ನಿಜವಾಗಿಯೂ ಶತ್ರುಗಳಾಗಿ ಬಿಡುತ್ತಾರೆ. 'ಮಾತಾಶತ್ರು:ಪಿತಾ ವೈರೀ ಯೇನ ಬಾಲೋ ನಪಾಠಿತ'ಎಂಬ ಶ್ಲೋಕವೇ ಇದೆ. ಸುಕುಮಾರ ಸ್ವಾಮಿಯ ಕತೆಯಲ್ಲಿ ಬರುವ ಪ್ರಸಂಗವೊಂದು ಮೇಲಿನ ಆಶಯವನ್ನು ಒಳಗೊಂಡಿದೆ. ಸೂರ್ಯಮಿತ್ರ ಭಟಾರರ ಹತ್ತಿರ ನಾಗಶ್ರೀ ವಿದ್ಯೆಕಲಿತದ್ದು ಅವಳ ತಂದೆ ಸೋಮಶರ್ಮನಿಗೆ ಇಷ್ಟವಾಗಲಿಲ್ಲ. ನನ್ನ ಮಗಳಿಗೇಕೆ ವಿದ್ಯೆ ಕಲಿಸಿದಿರಿ ಎಂದು ಕೇಳಿದ. ನನ್ನ ಮಗಳಿಗೆ ನಾನು ಕಲಸಿದೆನೇ ಹೊರತು ನಿನ್ನ ಮಗಳಿಗಲ್ಲವಲ್ಲ ಎಂದರು ಭಟಾರರು. ಸೋಮಶರ್ಮ ಅರಸನಿಗೆ ದೂರಿದ. ಅರಸ ಇಬ್ಬರನ್ನು ಸೇರಿಸಿ ಕೇಳಿದ. ಇಬ್ಬರೂ ನನ್ನ ಮಗಳು, ನನ್ನ ಮಗಳ್ಳು ಎಂದು ಪೈಪೋಟಿ ನಡೆಸಿದರು. ನಾನು ಓದಿಸಿರುವುದರಿಂದ ನನ್ನ ಮಗಳು ನಿನ್ನ ಮಗಳಲ್ಲ ಎಂದರು ಭಟಾರರು, ಅರಸನ ಅಪೇಕ್ಷೆಯಂತೆ ನಾಗಶ್ರೀ ಓದುತ್ತಾಳೆ. ಆಗ ಅಲ್ಲಿದ್ದವರಿಗೆ ನಾಗಶ್ರೀ ಭಟಾರರ ಮಗಳಲ್ಲವೆಂದು ಹೇಳಿಲಿಕ್ಕೆ ಸಾಧ್ಯವಾಗಲಿಲ್ಲ.

ಅಕ್ಷರ ಸಹಿತ ವಿದ್ಯೆ ಕಲಿಯುವುದರ ಬಗ್ಗೆ ಅನೇಕರು ಮಾತನಾಡಿದ್ದಾರೆ. ಎಲ್ಲೂ ಕಾಲದಲ್ಲೂ ವಿದ್ಯೆ ಅನಿವಾರ್ಯವಾಗಿತ್ತು. ವಡ್ಡಾರಾಧನೆಯಕಾರ ಇದನ್ನು ಸೊಗಸಾಗಿ ದಾಖಲಿಸಿದ್ದಾನೆ. ಸರ್ವಜ್ಞ ಕವಿ 'ವಿದ್ಯೆ ಕಲಿಸದ ತಂದೆ ಬುದ್ಧಿ ಹೇಳದಾ ಗುರುವು ಬಿದ್ದಿರಲು ಬಂದು ನೋಡದಾ ತಾಯಿ'ಇವು ಮೂರು ಶುದ್ಧ ವೈರಿಗಳೆಂದಿರುವುದನ್ನು ಈ ಸಂದರ್ಭದಲ್ಲಿ ಸ್ಮರಿಸಬಹುದು. ಜೈನಧರ್ಮ ಸ್ತ್ರೀ ಶಿಕ್ಷಣದತ್ತ ವಿಶೇಷ ಗಮನ ಕೊಟ್ಟಿತು ಎಂಬ ಮಾತೂ ಈ ಸಂದರ್ಭದಿಂದ ಸಾಬೀತಾಗುತ್ತದೆ.

ತಳಾಱಂ ಕಂಡೀ ಪೋೞ್ತಿತ್ತ ಪೋದಪ್ಪಯ್

(ವಡ್ಡಾ. ಪು.೧೬)

ಸುಕುಮಾರಸ್ವಾಮಿ ಕಥೆಯಲ್ಲಿ ಬರುವ ಸನ್ನಿವೇಶ. ಸುಧಾಮೆಯನ್ನು ಅಡ್ಡಗಟ್ಟಿದ ತಳವಾರನು ಇಷ್ಟು ಹೊತ್ತಿನಲ್ಲಿ ಎಲ್ಲಿಗೆ ಹೋಗುತ್ತಿದ್ದೀಯ ಕೆಟ್ಟ ಹೆಂಗಸೆ ಎಂದು ಗದರಿಕೊಳ್ಳುತ್ತಾನೆ. ಈತ ಊರಿನ ಕಾವಲುಗಾರ. ಗ್ರಾಮರಕ್ಷಕ ಅಥವಾ ನಗರ ರಕ್ಷಕ ಎಂಬ ಹೆಸರೂ ಈತನಿಗಿದೆ. ಆಯಗಾರರಲ್ಲಿ ಒಬ್ಬ . ಕಾನೂನಿನ ಪಾಲನೆ ನೋಡಿಕೊಂಡು ರಾಜನಿಗೆ ನೆರವಾಗುತ್ತಿದ್ದವರಲ್ಲಿ ಈತನೂ ಒಬ್ಬನಾಗಿದ್ದನೆಂಬಂತೆ ವೊಡ್ಡಾರಾಧನೆಯಕಾರ ಚಿತ್ರಿಸಿದ್ದಾನೆ. ಚಾಮರವನ್ನು ಬಿಟ್ಟು ರಾಜನಿಗೆ ಸಲ್ಲುವ ಇತರ ಗೌರವಗಳು ತಳವಾರನಿಗೆ ಸಲ್ಲುತ್ತಿದ್ದುವೆಂದು ಹೇಳುತ್ತಾರೆ. ಕೋಟೆಯನ್ನು ರಕ್ಷಿಸುತ್ತಿದ್ದನೆಂದು ಹೇಳಲಾಗುವ 'ಕೊತವಾಲ'ನೂ ಈ ತಳವಾರನೂ ಒಂದೇ ಇರಬಹುದೆಂದು ಅಭಿಪ್ರಾಯಪಡುವುದುಂಟು, ಈಗಿನ ಆರಕ್ಷಕ ಠಾಣೆ ಮಾಡುತ್ತಿರುವ ಕಾರ್ಯವನ್ನು ಹಿಂದೆ ತಳವಾರ ಮಾಡುತ್ತಿದ್ದ 'ತಳಾಱನ ಮಗನ ಪ್ಪುದಱಿಂ ತನಗೆ ತಕ್ಕ ಕಳ್ಳರನಾರಯ್ಯ ತೆರನಂ ಪೇೞ್ವ ಸುರಖಿಮೆಂಬೋದಂ ಕಲ್ತೊನ್' (೧೨೮)ಎಂಬ ಪ್ರಯೋಗವಿದೆ. ವೃತ್ತಿ ಶಿಕ್ಷಣಕ್ಕೆ ಸಂಬಂಧಿಸಿದ ಅಪರೂಪದ ದಾಖಲೆ ಇದು. ಪ್ರಾಮಾಣಿಕವಾಗಿ ರಾಜ್ಯಭಾರ ಮಾಡಬೇಕಾದ ರಾಜನೇ ಅಪ್ರಾಮಾಣಿಕನಾಗುತ್ತಾನೆ. ಕಳ್ಳತನ ಮಾಡಿದಾಗ ಅಂತ ರಾಜ್ಯದಲ್ಲಿ ತಾನಿರಬಾರದೆಂದು ಆ ನಗರವನ್ನು ತ್ಯಜಿಸಿ ಬೇರೊಂದು ಕಡೆ ಹೋಗುವ ಪ್ರಾಮಾಣಿಕ ತಳವಾರನ ಪ್ರಸ್ತಾಪ ವಿದ್ಯುಚ್ಚೋರ ರಿಸಿಯ ಕಥೆಯಲ್ಲಿ ಬರುತ್ತದೆ. ಕಾನೂನು ಪಾಲನೆ ಮಾಡುವುದರ ಜೊತೆಗೆ ಕಾನೂನು ಮಾಡುವ ದೊರೆಯೇ ಕೆಟ್ಟಹಾದಿ ಹಿಡಿದಾಗ ಅದನ್ನು ದಿಕ್ಕರಿಸಿ ಆ ವ್ಯವಸ್ಥೆಯಿಂದ ತಳವಾರನಾದವನು ದೂರವಿರುತ್ತಿದ್ದ ಎಂಬುದು ಈ ಘಟನೆಯಿಂದ ತಿಳಿಯುತ್ತದೆ.

ಕಳ್ಳರ್ ವಂದಾಕೆಯಲುಂದಿದ ಮನೆಯೊಳ್ ಕನ್ನಮಿಕ್ಕಿದೊಡೆ

(ವಡ್ಡಾ, ಪು. ೧೯)

ಸುಕುಮಾರಸ್ವಾಮಿ ಕಥೆಯಲ್ಲಿ ಬರುವ ಪ್ರಸಂಗ. ಹರಿಪುರಿ ಎಂಬ ಪಟ್ಟಣದ ಮುದುಕಿ ರಾತ್ರಿ ಕಳ್ಳರು ಬರುತ್ತಾರೆಂದು ಊಹಿಸಿ ಹರಿತವಾದ ಕತ್ತಿಯನ್ನು ಸಿದ್ಧವಾಗಿಟ್ಟುಕೊಂಡಿದ್ದಳು. ಊಹಿಸಿದಂತೆ ಆಗಮಿಸಿದ ಕಳ್ಳರು ಅವಳ ಕೋಣೆಗೆ ಕನ್ನಹಾಕಿದರು, ಒಳಕ್ಕೆ ನುಗ್ಗಿದ ಒಬ್ಬನ

ಮೂಗನ್ನು ಕತ್ತರಿಸಿದಳು. ಹೀಗೆ ಕಳ್ಳತನಕ್ಕೆ ಸಂಬಂಧಿಸಿದ ಅನೇಕ ಮಾಹಿತಿ ವಡ್ಡರಾಧನೆಯಲ್ಲಿ ದೊರಕುತ್ತದೆ. 'ಬತ್ತಮಂ ಕಳ್ದೊನ್ (೨೦) ಆಬತ್ತಂಗಳಂ ಕಳ್ದುಕೊಳ್ವರ್, ಅರಸಂ ಕಳವಿನ ಪುನಿಯ ದೋಷಂ ಕಾರಣಮಾಗಿ ಮೂವರುಮಂ ಕೊಲಲ್ ಪೇಟ್ದೊಡೆ (೨೦)ಇತ್ಯಾದಿಗಳು ಕಳ್ಳರ ಬಗೆಗಿವೆ. ಕಳ್ಳರಲ್ಲಿ ಕಳ್ಳರಿದ್ದ (ನುರಿತ)ದ್ದು, ಮತ್ತು ಅಂಥವರ ಖದೀಮತನಗಳ ವಿವರಣೆಯೂ (೧೯)ದೊರಕುತ್ತದೆ. ಅರಸನನ್ನು ಅರಮನೆಯನ್ನು ಬಿಡದ (೧೨೩)ಚಿತ್ರಕತೆಗಳನ್ನು ತೋರಿಸಿ ಜನರಿಗೆ ಮೋಸ ಮಾಡುವ ಕಳ್ಳರೂ (೧೭)ನಾನಾರೀತೀಯ ವೇಷಗಳನ್ನು ಹಾಕಿ ಲೂಟಿ ಮಾಡುವ ಕಳ್ಳರು ಇಲ್ಲಿ ಸಿಗುತ್ತಾರೆ. ಒಟ್ಟಾರೆ ಕಳ್ಳತನ ಹಾಗೂ ಈ ವೃತ್ತಿಗೆ ಸಂಬಂಧಿಸಿದ ಹಲವಾರು ವಿವರಗಳು ವಡ್ಡಾರಾಧನೆಯಲ್ಲಿ ವ್ಯಾಪಕವಾಗಿವೆ. ಜಾನಪದರಿಗೆ ಕಳ್ಳತನದ ಬಗ್ಗೆ ಹೇಳುವುದರಲ್ಲಿ ಕೇಳುವುದರಲ್ಲಿ ವಿಶೇಷ ಆಸಕ್ತಿ. ಈಗಲೂ ಕಳ್ಳರಿದ್ದಾರೆ. ಸಾಕಷ್ಟು ಲೂಟಿಯೂ ಆಗುತ್ತಿದೆ. ಮುಂಚಿತವಾಗಿಯೇ ಸೂಚನೆ ನೀಡಿ ಕಳ್ಳತನ ಮಾಡುವ ಭಯಂಕರ ಕಾಲ ಇದಾಗಿದೆ. ಮನೆಗಳಲ್ಲಿ ಕಳ್ಳತನ ಮಾಡುವುದು ಹಳೆಯ ಕಾಲದ್ದು, ಇತ್ತೀಚಿನ ದಿನಗಳಲ್ಲಿ ಬಸ್ಸು, ರೈಲುಗಳಲ್ಲಿ ಲೂಟಿ ಮಾಡುವುದು, ವಿಮಾನಗಳನ್ನೇ ಕದಿಯುತ್ತಿರುವುದು ಕಂಡುಬರುತ್ತದೆ.

ಮಹಾಲೋಭಾಭಿಭೂತನಸಂತುಷ್ಟಚಿತ್ತನಿವನಂ ಕೊಲ್ಲಿಂ

(ವಡ್ಡಾ. ಪು, ೨೨)

ಸುಕುಮಾರಸ್ವಾಮಿ ಕಥೆಯಲ್ಲಿ ಬರುವ ಪ್ರಸಂಗ. ವೀರಪೂರ್ಣನಿಗೆ ಸಂಬಂಧಿಸಿದ್ದು. ರಾಜನು ಒಮ್ಮೆ ಸಂತೋಷದಿಂದ ಆತ್ತನಿಗೆ ಹತ್ತು ಹಸುಗಳನ್ನು ಮೂರುಸಾವಿರ ಖಂಡುಗ ಭತ್ತವನ್ನು ಉಡುಗೊರೆಯಾಗಿ ಕೊಡುತ್ತಾನೆ. ರಾಜರು, ಸಾಮಂತರು ಮತ್ತು ಅರಸಿಯರ ಬಳಿ ಇರುವ ಹಸು, ಎಮ್ಮೆಗಳನ್ನು ರಾಜನು ಕೊಟ್ಟಿರುವನೆಂದು ಪಡೆಯುತ್ತಾನೆ. ಅಲ್ಲದೆ ಜನಸಾಮಾನ್ಯರ ಹಸುಗಳನ್ನು ಗೋಮಂದೆಗೆ ಸೇರಿಸಿಕೊಂಡು ರಾಜನ ಭಂಡಾರಕ್ಕೆ ಸೇರಿದವೆಂದು ಹೇಳಿ ಮೋಸದಿಂದ ಅವನ್ನು ಪಡೆಯತೊಡಗಿದ. ಕೊನೆಗೆ ಮಹಾರಾಣಿಯ ಕಾಮಧೇನುವನ್ನು ಪಡೆಯಲು ಪ್ರಯತ್ನಿಸುತ್ತಾನೆ. ಆಗ ರಾಜನಿಗೆ ದೂರುಹೋಗುತ್ತದೆ. ಜನಸಾಮಾನ್ಯರಿಂದಲೂ ದೂರುಗಳು ಬರುತ್ತವೆ. ವಿಚಾರಣೆ ನಡೆಸಿದ ರಾಜ ಈತನನ್ನು ಕೊಲ್ಲಿರಿ ಎಂದು ಆಜ್ಞೆ ಮಾಡುತ್ತಾನೆ. ದುರಾಸೆ ಮನುಷ್ಯನನ್ನು ಹಾಳುಮಾಡುತ್ತದೆ. ಇರುವುದರಲ್ಲಿ ತೃಪ್ತಿ ಪಡದೆ ದುರಾಸೆಪಡುವವರ ಗತಿ ಆಶಾದಾಯಕವಾಗಿರುವುದಿಲ್ಲ ಎಂಬುದನ್ನು ವಡ್ಡಾರಾಧನೆಕಾರ ಈ ಪ್ರಸಂಗದ ಹಿನ್ನೆಲೆಯಲ್ಲಿ ವಿವರಿಸಿದ್ದಾನೆ.

'ಭೋಅಬ್ರಹ್ಮಣ್ಯಂ ಭೋ' ಎಂದ ಬಿತ್ತ

(ವಡ್ಡ, ಪು ೨೩)

ಸುಕುಮಾರಸ್ವಾಮಿ ಕಥೆಯಲ್ಲಿ ನಾಗಶ್ರೀಗೆ ಋಷಿಗಳು ವ್ರತಗಳನ್ನು ಕೊಟ್ಟ ಸಂದರ್ಭದಲ್ಲಿ ಸೋಮಶರ್ಮ ಈ ಮಾತನ್ನು ಬಳಸುತ್ತಾನೆ. ಈ ಮಾತಿಗೆ 'ಬ್ರಾಹ್ಮಣನು ಕಷ್ಟಕ್ಕೆ ಸಿಕ್ಕಿದಾಗ ಸಹಾಯಕ್ಕಾಗಿ ಕೂಗಿಕೊಳ್ಳುವುದು" ಎಂಬ ಅರ್ಥವಿದೆ. ತನ್ನ ಮಗಳಾದ ನಾಗಶ್ರೀಯನ್ನು ಋಷಿಗಳು ತಮ್ಮ ಮಗಳೆಂದಾಗ ಸೋಮಶರ್ಮ ಸೊಪ್ಪಿನಗೊಂಚಲನ್ನು ಹಿಡಿದುಕೊಂಡು ನ್ಯಾಯಕ್ಕಾಗಿ ಅಬ್ರಹ್ಮಣ್ಯ ಅಬ್ರಹ್ಮಣ್ಯ ಎಂದು ಅರಚುತ್ತ ಅರಸನ ಬಳಿಗೆ ನ್ಯಾಯಕ್ಕಾಗಿ ಬರುತ್ತಾನೆ. ಅನ್ಯಾಯಕ್ಕೆ ಒಳಗಾಗಿರುವವರು ನ್ಯಾಯ ಪಡೆಯುವ ಸಂದರ್ಭದಲ್ಲಿ ಅಸಹಾಯಕತೆಯ ಸಂಕೇತವಾಗಿ ಕೈಯಲ್ಲಿ ಹುಲ್ಲುಗರಿಕೆಯನ್ನು ಸೊಪ್ಪಿನ ಗೊಂಚಲನ್ನು ಹಿಡಿದು ನ್ಯಾಯಾಸ್ಥಾನಕ್ಕೆ ಬರುವುದು ಒಂದು ಪದ್ಧತಿಯಾಗಿತ್ತು. ಹಳಗನ್ನಡ ಕವಿಗಳು ಇಂಥ ಪದ್ಧತಿಯನ್ನು ದಾಖಲಿಸಿರುವುದುಂಟು. ಹುಲ್ಲು ಅಥವಾ ಸೊಪ್ಪು ಕೈಯಲ್ಲಿ ಹಿಡಿದಿದ್ದರೆ ಏನೋ ತೊಂದರೆಯಲ್ಲಿದ್ದಾರೆಂದು ಭಾವಿಸಿ ನ್ಯಾಯ ದೊರಕಿಸಿಕೊಡುತ್ತಿದ್ದರು, ಹಸಿರು ಶಾಂತಿಯ ಸಮೃದ್ಧಿಯ ಸಂಕೇತವೂ ಹೌದು.

ಕಾಮಮುದ್ರಿಕೆಯಂ ಸ್ವೇಪ್ಸಿತ ಕಾರ್ಯಸಿದ್ಧಿಯಂ ಮಾಡುವ ವಿದ್ಯೆಯಂ...

(ವಡ್ಡಾ. ಪು ೩೯)

ಸುಕೌಶಳಸ್ವಾಮಿ ಕಥೆಯಲ್ಲಿ ಚಿತ್ರಾಂಗದನೆಂಬ ವಿದ್ಯಾಧರನು ತನ್ನಲ್ಲಿರುವ ವಿದ್ಯೆಯನ್ನು ಕುಬೇರಕಾಂತನಿಗೆ ನೀಡಿದ ಸಂದರ್ಭ. ಅವನ ಮೇಲಿನ ಕರುಣೆಯಿಂದ ತನ್ನಲ್ಲಿದ್ದ ಕಾಮಮುದ್ರಿಕೆಯನ್ನು ಇಷ್ಟಬಂದ ಕಾರ್ಯವನ್ನು ಸಿದ್ಧಿಸಿಕೊಡುವ ವಿದ್ಯೆಯನ್ನು ಕುಬೇರಕಾಂತನಿಗೆ ನೀಡುತ್ತಾನೆ.

ಮಾಯಾಮಂತ್ರ ಶಕ್ತಿ ಇರುವ ಕೆಲವು ವಿಶಿಷ್ಟವಾದ ವಸ್ತುಗಳಿಂದ ಸಹಾಯವಾಗುತ್ತದೆಂದು ವಿವರಿಸುವ ಜನಪದ ಕತೆಗಳಿವೆ. ಪಾದರಕ್ಷೆ, ಕೊಡೆ, ಹಾರುವತಟ್ಟೆ, ಹಾರುವ ಚಾಪೆ, ಕೋಲು, ಮಂತ್ರದ ದಂಡ ಇತ್ಯಾದಿಗಳನ್ನು ಹಿಡಿದುಕೊಂಡು ಮನಬಂದಂತೆ ಅನ್ಯರ ಕಣ್ಣಿಗೆ ಗೋಚರವಾಗದ ರೀತಿಯಲ್ಲಿ ಕಣ್ಮರೆಯಾಗಿ ಬಿಡಬಹುದು. ಎಲ್ಲಿಗೆಂದರಲ್ಲಿ ಹೋಗಬಹುದು, ಬಯಸಿದ್ದನ್ನು ಪಡೆಯಬಹುದು. ನೋಡಲೂಬಹುದು, ಚಿತ್ರಾಂಗದ ನೀಡಿದ ವಿದ್ಯೆ ಈ ಬಗೆಯದು.

ಅಹೋ ಕಷ್ಟಂ ಸಂಸಾರಂ......

(ವಡ್ಡಾ. ಪು ೪೮)

ಸುಕೌಶಳಸ್ವಾಮಿ ಕಥೆಯಲ್ಲಿ ಹುಲಿಯನ್ನು ಕಂಡು ಸಿದ್ಧಾರ್ಥ ಋಷಿ ಹೇಳುವ ಸಂದರ್ಭ. ಧರ್ಮೋಽಧ್ಯಾನದಲ್ಲಿ ನಿರತರಾದ ಸುಕೌಶಳಸ್ವಾಮಿಯ ದೇಹವನ್ನು ಹುಲಿ ಕಿತ್ತು ತಿನ್ನುತ್ತಿತ್ತು. ಆ ದೃಶ್ಯವನ್ನು ಕಂಡು ಸಿದ್ಧಾರ್ಥ ಋಷಿ 'ಸಂಸಾರ ಕಷ್ಟ ಕಷ್ಟ'ಎಂದು ಆಶ್ಚರ್ಯ ವ್ಯಕ್ತಪಡಿಸುತ್ತಾರೆ ಸಂಸಾರದ ಹೊಣೆಗಾರಿಕೆಯನ್ನು ಅನಿತ್ಯತೆಯನ್ನು ತ್ಯಜಿಸಿ ವೈರಾಗ್ಯಪರರಾಗಬೇಕು,ಲೌಕಿಕದ ಕಷ್ಟಗಳಿಂದ ಬಿಡುಗಡೆ ಪಡೆಯಬೇಕು, ಸುರಲೋಕಸುಖವನ್ನು ಅನುಭವಿಸಬೇಕು ಎಂಬತ್ಯಾದಿ ಆಶಯಗಳು ಕಂಡುಬರುತ್ತವೆ. ಸಂಸಾರವೆಂಬುದು ಕಷ್ಟದ ಸಂಕೇತ ಅದಕ್ಕೆ ಅದನ್ನು ಸಾಗರಕ್ಕೆ ಹೋಲಿಸಿರುವುದುಂಟು.

ಇದರಿಂದ ಈ 'ಸಂಸಾರಾರ್ಣವದತ್ತಣಿಂದೆತ್ತಿಮ್' ಎಂಬ ಬೇಡಿಕೆ ಗೋಚರವಾಗುತ್ತದೆ. ಸಂಸಾರ ಸಾಗರವೆಂಬುದು ಉರದುದ್ದವೇ ನೋಡ ಎಂಬ ಬಸವಣ್ಣನ ವಚನವನ್ನು ಈ ಸಂದರ್ಭದಲ್ಲಿ ನೆನೆಯಬಹುದು.

ಪಲಂಕಾಲಂ ತಪಂಬಟ್ಟು ಮೊಗ್ಗಳಗಿರಿಯೆಂಬ ಪರ್ವತಕ್ಕೆ ವಂದು.....

(ವಡ್ಡಾ. ಪು. ೪೮)

ಸುಕೌಶಳಸ್ವಾಮಿ ಕಥೆಯ ಸನ್ನಿವೇಶ, ಎಲ್ಲ ಆಗಮಗಳನ್ನು ಕಲಿತ ಸುಕೌಶಳಸ್ವಾಮಿ ಗುರುಗಳೊಂದಿಗೆ ಸಂಚರಿಸುತ್ತ ಮೊಗ್ಗಳಗಿರಿ ಎಂಬ ಪರ್ವತಕ್ಕೆ ಬಂದು ಮಳೆಗಾಲವಾದ್ದರಿಂದ ಗುಹೆಯೊಂದರಲ್ಲಿ ಯೋಗದಲ್ಲಿ ತೊಡಗಿದರು.

ಮುನಿಗಳು ತಪಸ್ಸು ಮಾಡಲು ಅನುಕೂಲವಾಗಿರಲೆಂದು ಏಕಾಂತ ಸ್ಥಳಗಳನ್ನು ಹುಡುಕಿ ಕೊಳ್ಳುತ್ತಿದ್ದರು. ಬೆಟ್ಟಗಳ ಮೇಲ್ಭಾಗದಲ್ಲಿ ಗುಹೆಗಳಲ್ಲಿ ಸಾಮಾನ್ಯವಾಗಿ ತಪಸ್ಸಿಗೆ ತೊಡಗು ತ್ತಿದ್ದುದುಂಟು, ಮಹಿಷಗಿರಿಯೆಂಬ ಪರ್ವತದೊಳ್... ಕಾಯೋತ್ಸರ್ಗದಿಂ ನಿಂದೊನ್ (೬೪) ಪಳಿಕುಂತಳೆಯೆಂಬ ಪರ್ವತದ ಮೇಗಿರ್ದು (೪೯) ಭಟ್ಟಾರರೊಡನೆ ಉದಯಾವತ ಪರ್ವತಕ್ಕೆ ಹೋಗಿ (೮) ಉದಯಾವತ ಪರ್ವತಮೆಂಬ ಪರ್ವತ ಮಂಟದರಮೇಗೆ (೧೧೪) ಮೂಡಣದೆಸೆಯ ಪರ್ವತದ ಕೊಳದ ತಡಿಯೊಳ್ (೧೧೮) ಬೆಟ್ಟದ ಮೇಗಾತಪಮಿರ್ದ ಋಷಿಯರಂ ಕಂಡು (೧೬೦) ಇತ್ಯಾದಿ ವಡ್ಡಾರಾಧನೆಯ ಪ್ರಯೋಗಗಳನ್ನು ಕಂಡರೆ ಮೇಲಿನ ಮಾತು ಸತ್ಯವೆನಿಸುತ್ತದೆ.

ಕುಡುವೆನೆಂದು ತೊಳಲ್ವ ಗೋಸಣೆಯಂ...

(ವಡ್ಡಾ. ಪು ೫೦)

ಗಜಕುಮಾರ ಕಥೆಯಲ್ಲಿ ಬರುವ ಸನ್ನಿವೇಶ. ಸುರಟನಾಡಿನ ದ್ವಾರಾವತಿಯ ರಾಜವಿಷ್ಣು, ಈತ ಸೂರದತ್ತ ನಾಡಿನ ಪೌದನಪುರದ ಅಪರಾಜಿತನನ್ನು ಗೆದ್ದುತಂದವನಿಗೆ ಕೇಳಿದ್ದನ್ನು ಕೊಡುತ್ತೇನೆಂದು ಡಂಗೂರ ಹೊಡೆಸುತ್ತಾನೆ.ಪ್ರಾಚೀನ ಕಾಲದ ಆಡಳಿತ ವ್ಯವಸ್ಥೆಯ ವಿಚಾರಗಳು ಜನಸಾಮಾನ್ಯರಿಗೆ ತಲುಪಬೇಕಾದ ಸಂದರ್ಭದಲ್ಲಿ ಡಂಗೂರ ಸಾರುವ ಮಾಧ್ಯಮವನ್ನು ಅನುಸರಿಸುತ್ತಿದ್ದರು. ತಮಟೆ, ಡೋಲು, ಜಾಗಟೆ – ಮುಂತಾದುವನ್ನು ಹೊಡೆದುಕೊಂಡು ವಿಷಯವನ್ನು ಬಹಿರಂಗಪಡಿಸುವುದು. ಈ ಕ್ರಿಯೆಗೆ ಡಂಗೂರ ಸಾರುವುದು ಎಂದು ಕರೆಯುತ್ತಾರೆ. ಊರ ಜನತೆಗೆಲ್ಲಾ ವಿಷಯ ತಿಳಿಸಬೇಕಾದ ಸಂದರ್ಭದಲ್ಲಿ ಡಂಗೂರ ಸಾರುತ್ತಾರೆ. ರಹಸ್ಯವನ್ನು ಸಾರ್ವಜನಿಕಗೊಳಿಸಿದಾಗಲೂ ಡಂಗೂರ ಸಾರಿಬಿಟ್ಟ ಎಂದು ವ್ಯಂಗ್ಯವಾಗಿ ಮಾತನಾಡುವುದುಂಟು, ಡಂಗೂರ ಸಾರುವವರು ಸಾಮಾನ್ಯವಾಗಿ ಕೆಳಜಾತಿಯವರಾಗಿರುತ್ತಾರೆ. ಮಾಡಿದೆನೆಂಬುದು ಮನದಲ್ಲಿ ಹೊಳೆದರೆ ಏಡಿಸಿ ಕಾಡಿತ್ತು ಶಿವನಡಂಗುರ (ಬಸವ) 'ನೃಪಾಲಕಂ ಸ್ವಯಂವರ ಶುಭವಾರ್ತೆಯುತ್ಸವದ ಡಂಗುರವಂ ಪುರದೊಳ್ ನಿಮಿರ್ಚಿದಂ (ನಳಚಂಪು) 'ನರಕದ ದುಃಖಮನೆಯ್ದಲ್ ಪರಿಯುತ್ತಂ ಬನ್ನಿಮಿಾಗಳೆಂದೋವದೆ ಡಂಗೂರಮಂ ಪೋಯ್ಯುವ ತೆಱದಿಂ (ಸಮಯ ಪರೀಕ್ಷೆ) 'ಏಳಿಭುಜಬಲವುಳ್ಳವರು....ಬಿಲುವಿಡಿದು ಯಂತ್ರದ ಕೋಲುಗಳ ಕೀವಣಿಪುದೆಂದರು ಹೊಯ್ದು ಡಂಗುರವ' (ಕುಮಾರವ್ಯಾಸ) ಇತ್ಯಾದಿ ಪ್ರಯೋಗಗಳಿರುವುದನ್ನು ಗಮನಿಸಬಹುದು.

ಮಲರ್ಚಿ ಪಟ್ಟರಿಸಿಯರಃ ಸ್ಥಲಮಂ ನಾಭಿವರೆಗಂ ವಿದಾರಿಸಿ ಪಂದೋವಲ್ ಪೊರೆತಾಪಿನೆಗಂ.....

(ವಡ್ಡಾ. ಪು ೫೧)

ಗಜಕುಮಾರನ ಕಥೆಯಲ್ಲಿ ಬರುವ ಪ್ರಸಂಗ, ಪಂಗುಳನ ಮಡದಿ ವಸುಂಧರೆ. ಈಕೆಯನ್ನು ಗಜಕುಮಾರನು ವಶಪಡಿಸಿಕೊಂಡು ಆಳುತ್ತಿದ್ದ. ಆತ ದೀಕ್ಷೆಯನ್ನು ಪಡೆದು ಭಟಾರನಾಗಿ ಪ್ರತಿಮಾ ಯೋಗದಲ್ಲಿದ್ದಾಗ ದ್ವೇಷ ಸಾಧಿಸುವುದಕ್ಕೆಂದು ಅಲ್ಲಿಗೆ ಪಂಗುಳನು ಬರುತ್ತಾನೆ. ಆ ಮುನಿಯನ್ನು ಪಂಗುಳನು ಮಗುಚಿ ಮಲಗಿಸಿ ಎದೆಯಿಂದ ಹೊಕ್ಕುಳವರೆಗೆ ಸೀಳುತ್ತಾನೆ. ತೋರಗಿರುವ ಕಬ್ಬಿಣದ ಮೊಳೆಗಳನ್ನು ನೆಲ ಮುಟ್ಟುವತನಕ ಆವನ ಮೈಗೆ ಹೊಡೆಯುತ್ತಾನೆ.

ಕೊನೆಗೆ ಕ್ಷಮೆ ಯಾಚಿಸಿ ಗಜಕುಮಾರ ಸಮಾಧಿ ಮರಣದಿಂದ ಅಹಮಿಂದ್ರನಾಗುತ್ತಾನೆ. ಮಹೇಂದ್ರದತ್ತಾಚಾರ್ಯರ್ ಅಯ್ನೂರ್ವರ್ ರಿಸಿಯರ್ಕಳ ಕಥೆಯಲ್ಲಿಯೂ ಇದೇ ರೀತಿಯ ಕ್ರೌರ್ಯವನ್ನು ಆ ಸಂದರ್ಭದ ಸಂಯಮವನ್ನು ಕಾಣುತ್ತೇವೆ. ಋಷಿಗಳು ಕುಂಭಕಾರಘಟ ಪಟ್ಟಣಕ್ಕೆ ಬಂದಾಗ ರಾಜನ ಅಪ್ಪಣೆಪಡೆದು ಸುಳ್ಳು ಆರೋಪಗಳನ್ನು ಹೊರಿಸಿ ಎಳ್ಳುಗಾಣದಲ್ಲಿ ಅವರನ್ನು ಹಿಳಿದು ಕೊಲ್ಲುವುದುಂಟು, ಆ ವೇದನೆಯನ್ನು ಸಹಿಸಿಕೊಂಡು ಸ್ವರ್ಗವಾಸಿ ಗಳಾಗುತ್ತಾರೆ. ಹೀಗೆ ಕ್ರೌರ್ಯದ ವರ್ಣನೆಗಳು ವಡ್ಡಾರಾಧನೆಯ ಕಥೆಗಳಲ್ಲಿ ಅಲ್ಲಲ್ಲಿ ಬರುತ್ತವೆ. ಆದರೆ ಹೀಗೆ ಅಹಿಂಸಾಧರ್ಮಿಗಳಾದ ಜೈನಯತಿಗಳು ಹಿಂಸೆಗೆ ಒಳಪಡುವುದನ್ನು ಪರಭಾವಿಸುವುದೇ ಹಿಂಸೆ ಎನಿಸಿಬಿಡುತ್ತದೆ. ಹಿಂಸೆ ಮತ್ತು ಅಹಿಂಸೆಗಳ ನಡುವಿನ ಪರಾಕಾಷ್ಠೆಯ ಪರಿಕಲ್ಪನೆಯನ್ನು ಜೈನಧರ್ಮ ವೈಭವೀಕರಿಸಿ ನೋಡಿದ ರೀತಿ ಇದು.

ಕಂಡೆನ್ನನೆತ್ತಿಕೊಂಡು ಪುಯ್ಯಲಿಡೆಯಿಡೆ ಬಂದ ನಿಂದಿಂಗೇಟು ದಿವಸಮುಂಟು

(ವಡ್ಡಾ. ಪು,೫೯)

ಸನತ್ಕುಮಾರ ಚಕ್ರವರ್ತಿಯ ಕಥೆಯಲ್ಲಿ ಸುನಂದೆ ಕುಮಾರನಿಗೆ ಹೇಳುವ ಸಂದರ್ಭ. "ಗರ್ಭದಲ್ಲಿದ್ದಾಗಲೇ ನನ್ನನ್ನು ಸನತ್ಕುಮಾರನಿಗೆ ಒಪ್ಪಿಸಿದ್ದರು. ಒಂದು ದಿನ ಮದನೋದ್ಯಾನ ದಲ್ಲಿ ಉಯ್ಯಾಲೆಯಾಡುತ್ತಿರುವಾಗ ವಜ್ರವೇಗನೆಂಬ ವಿದ್ಯಾಧರನು ಕಂಡು ನನ್ನನ್ನು ಎತ್ತಿಕೊಂಡು ಬಂದುಬಿಟ್ಟನು. ಇಂದಿಗೆ ಏಳುದಿನಗಳಾದುವು."ಎಂದು ಹೇಳಿಕೊಂಡು ಸುನಂದೆ ಅಳುತ್ತಾಳೆ. ದ್ವೇಷಾಸೂಯೆಗಳಿಂದಲೂ ಇಂಥ ಅಪಹರಣ ಸಾಧ್ಯ. ಖೇಚರ ವಿದ್ಯಾಧರ ಮೊದಲಾದ ಅತಿಮಾನವರು, ಸುಂದರಿಯರನ್ನೂ ಅಪಹರಿಸುವುದು ಜೈನಪುರಾಣ ಕಥೆಗಳಲ್ಲಿ ಒಂದು ಸಾಮಾನ್ಯ ಘಟನೆ. ವಡ್ಡಾರಾಧನೆಯಲ್ಲಿ ಅಲ್ಲಲ್ಲಿ ಬರುವ ಭೌಮವಿಹಾರ ಕಾಲದಲ್ಲಿ (೫೬, ೧೩೭)ಈ ರೀತಿಯ ಅಪಹರಣವಾಗುವುದು ವಾಡಿಕೆ." (ಹಂಪನಾ) ಗುರುದತ್ತ ಭಟಾರರ ಕಥೆಯಲ್ಲೂ ಅಪಹರಣದ (೧೪೫) ಸಂಗತಿ ಇದೆ.

ಹೆಣ್ಣಿನ ಅಪಹರಣದ ಬಗ್ಗೆ ಹೇರಳವಾದ ಮಾಹಿತಿ ದೊರಕುತ್ತಿದೆ. ಗಂಡಿನ ಅಪಹರಣದ ಸಂಗತಿಯೂ ಜಗತ್ತಿನಾದ್ಯಂತ ಒಂದು ಆಶಯವಾಗಿ ಕಂಡು ಬರುತ್ತದೆ. ಮಕ್ಕಳ ಅಪರಹಣದ ಸಂಗತಿಗಳಿಗೇನೂ ನಮ್ಮಲ್ಲಿ ಕಡಿಮೆ ಇಲ್ಲ. ಕನ್ನಡ ಜನಪದ ಕಥೆಗಳು ಇಂಥ ಹಲವನ್ನು ಒಳಗೊಂಡಿವೆ. ಇದನ್ನೇ 'ಹೊತ್ಕೊಂಡೋದ' 'ಹಾರಿಸಿಕೊಂಡು ಹೋದ' ಎಂದು ಗ್ರಾಮೀಣರು

ಕರೆಯುತ್ತಾರೆ. ಈ ಅಪಹರಣ ಪ್ರಕ್ರಿಯೆ ಮೂಲನಿವಾಸಿಗಳಲ್ಲಿ ರೂಢಿಯಲ್ಲಿದ್ದ ಒಂದು ವಿವಾಹಪದ್ಧತಿ ಎನ್ನುತ್ತಾರೆ. ಸುಂದರ ಸ್ತ್ರೀಯರನ್ನು ಅಪಹರಿಸುವ ಕಥೆಗಳಿವೆ. ರಾವಣ ಸೀತೆಯನ್ನು ಅಪಹರಿಸಿದ್ದು ಇದಕ್ಕೆ ಉದಾಹರಣೆಯಾಗಿದೆ.

ಪ್ರಥಮದಿವಸದೊಳೆ ಪಾರಕಿನ ಕೂಬಿಮ್

(ವಡ್ಡಾ. ೬೮)

ಸನತ್ಕುಮಾರ ಚಕ್ರವರ್ತಿಯ ಕಥೆಯಲ್ಲಿ ಬರುವ ಸನ್ನಿವೇಶ, ವೈರಾಗ್ಯ ಪಡೆದ ಸನತ್ಕುಮಾರ ಚಕ್ರವರ್ತಿ ತನ್ನ ಮಗನಿಗೆ ಪಟ್ಟಕಟ್ಟಿ ವಿನಯಂಧರ ಭಟಾರರಿಂದ ದೀಕ್ಷೆ ಪಡೆದನು. ತಪಸ್ಸು ಮಾಡಿ ಮೂರು ದಿನಗಳ ಉಪವಾಸದ ನಂತರ ಭಿಕ್ಷೆಗೆಂದು ಹೋದರು. ಆಗ ಒಬ್ಬ ಬಡಮುದುಕಿ ಅವರನ್ನು ಆಹ್ವಾನಿಸಿ ಹಾರಕದ ಅಕ್ಕಿಯಅನ್ನ, ಮೇಕೆಯ ಮಜ್ಜಿಗೆ, ಅವರೆ ಎಣ್ಣೆಗಳನ್ನು ಕೊಟ್ಟು ಸತ್ಕರಿಸುತ್ತಾಳೆ. ಅದನ್ನು ಅಮೃತವೆಂಬಂತೆ ಅವರು ಸ್ವೀಕರಿಸುತ್ತಾರೆ.ಹಾರಕ ಒಂದು ಸಣ್ಣ ಧಾನ್ಯ, ಬಡವರ ಧಾನ್ಯವೆಂದೇ ಇದಕ್ಕೆ ಹೆಸರಿದೆ. ಭತ್ತಕ್ಕೆ ಮುಂಚೆ ಹಾರಕವನ್ನು ಹೆಚ್ಚಿನ ಮಟ್ಟದಲ್ಲಿ ಬೆಳೆಯುತ್ತಿದ್ದರು. ಉಳ್ಳವರು ನಾಗರೀಕಸ್ತರು ಮನೆಗೆ ಬಂದಾಗ ಭತ್ತದ ಅಕ್ಕಿಯ ಅನ್ನವನ್ನು ಮಾಡಿ ಉಣಬಡಿಸುತ್ತಿದ್ದರೇ ಹೊರತು ಹಾರಕದಕ್ಕಿಯ ಅನ್ನವನ್ನಲ್ಲ, ಅಂದರೆ ಹಾರಕದಕ್ಕಿಯ ಅನ್ನ ಬಡವರ ಆಹಾರ. ಗ್ರಾಮೀಣ ಪ್ರದೇಶಗಳಲ್ಲಿ ಕೂಲಿಕಾರರಿಗೆ ಕೂಲಿಯ ರೂಪದಲ್ಲಿ ಹಾರಕವನ್ನು ಕೊಡುವ ರೂಢಿ ಇದೆ. ಹಾರಕದಕ್ಕಿಯ ಅನ್ನ ಕೆನೆಮೊಸರು ತಿಂದರೆ ಜೀವಕ್ಕೆ ತಂಪು ಎಂಬ ಅಭಿಪ್ರಾಯವಿರುವುದರಿಂದ ಕೂಲಿಕಾರರೂ ಇದನ್ನು ಇಷ್ಟಪಟ್ಟಿರಬೇಕು, ಇಂದಿನ ಕೃಷಿ ಪದ್ಧತಿಯಲ್ಲಿ ಈ ಧಾನ್ಯ ಕಣ್ಮರೆಯಾಗಿಬಿಟ್ಟದೆ.ಪ್ರಾಚೀನ ಕಾಲದ ಇಂಥ ಎಷ್ಟೋ ಧಾನ್ಯಗಳು ನಾಪತ್ತೆಯಾಗಿವೆ.

ಚೇತನೋಪಸರ್ಗಂ ಮೊದಲಾಗೊಡೆಯ ಉಪಸರ್ಗಂಗಳುಮಂ ನೀರಟ್ಕೆ ಮೊದಲಾಗೊಡೆಯ ಪರೀಷಹಂಗಳುಮಂ ಸೈರಿಸಿ...

(ವಡ್ಡಾ. ಪು, ೭೨)

ತಪಸ್ಸಿಗೆ ಒದಗುವ ತೊಂದರೆಯನ್ನು ಉಪಸರ್ಗ ಎನ್ನುತ್ತಾರೆ. ವಡ್ಡಾರಾಧನೆಯ ಕತೆಗಳಲ್ಲಿ ಮತ್ತೆ ಮತ್ತೆ ಇದರ ಪ್ರಸ್ತಾಪ ಬರುತ್ತದೆ. ಯತಿಗಳಿಗೆ ಇದೊಂದು ಸವಾಲು ಎನ್ನಬಹುದು. ಅವರ ಧೈರ್ಯ, ಮಾನಸಿಕ ಸ್ಥಿರತೆ, ಇಂದ್ರಿಯ ನಿಗ್ರಹಗಳಿಗೆ ಒಡ್ಡಿದ ಪರೀಕ್ಷೆ ಇದು. ಉಪಸರ್ಗದಲ್ಲಿ ನಾಲ್ಕು ವಿಧ : ೧) ತಿರಿಕೋಪಸರ್ಗ: ಪ್ರಾಣಿರೂಪದಿಂದ ಬಂದ ತೊಂದರೆಗಳು

ಈ ಭಾಗದಲ್ಲಿ ಬರುತ್ತವೆ. ಮೂರು ಹಗಲು ಮೂರು ರಾತ್ರಿ ಸುಕುಮಾರಸ್ವಾಮಿಯ ಶರೀರವನ್ನು ನರಿಗಳು ಕಿತ್ತುತಿನ್ನುತ್ತವೆ.

೨. ಮನುಷ್ಯೋಪಸರ್ಗ:ಮನುಷ್ಯರೂಪದಿಂದ ಬಂದ ತೊಂದರೆ ಇದು, ಪ್ರತಿಮಾ ಯೋಗದಲ್ಲಿದ್ದ ಗಜಕುಮಾರನನ್ನು ಅಕ್ಕಸಾಲಿಗ ಪಂಗುಳನು ತನ್ನ ದ್ವೇಷವನ್ನು ತೀರಿಸಿಕೊಳ್ಳಲು ಆತನ ಶರೀರವನ್ನು ಸೀಳಿ, ನೆಲಕ್ಕೆ ಸೇರಿಸಿ ದಪ್ಪ ಮೊಳೆಗಳನ್ನು ಹೊಡೆದು ಸಾಯಿಸುತ್ತಾನೆ.

೩. ಅಚೇತನೋಪಸರ್ಗ:ಏಳುನೂರು ರೀತಿಯ ಭಯಂಕರ ರೋಗಗಳ ರೂಪದಿಂದ ಸನತ್ಕುಮಾರ ಮುನಿಯು ಸೈರಿಸಕೊಳ್ಳುತ್ತಾನೆ.

೪. ದೇವೋಪಸರ್ಗ:ವಿದ್ಯುಚ್ಚೋರನಿಗೆ ವರಾಂಗಾಯಿ ಎಂಬ ದೇವತೆ ಪಾರಿವಾಳಗಾತ್ರದ ಸೊಳ್ಳೆಗಳನ್ನು ಬಿಟ್ಟು ಕಚ್ಚಿಸಿ ತೊಂದರೆ ಕೊಡುತ್ತಾಳೆ. ಚಿಲಾತಪುತ್ರ ಮುನಿಯ ಕಣ್ಣುಗಳನ್ನು ವ್ಯಂತರದೇವತೆಯು ಹದ್ದಿನ ರೂಪದಲ್ಲಿ ಕುಕ್ಕಿ ತೋಡಿ ತಿನ್ನುತ್ತಾಳೆ.

ಪರೀಷಹಗಳು ಸಾಧಕನಿಗೆ ಒದಗುವ ತೊಂದರೆಗಳು. ಆ ತೊಂದರೆಗಳು ಇಪ್ಪತ್ತೆರಡು : ಅನ್ನ, ಹಸಿವು, ಬಾಯಾರಿಕೆ, ಚಳಿ, ಬಿಸಿ, ಕ್ರಿಮಿ-ಕೀಟಗಳ ಕಡಿತ, ನಗ್ನವಾಗಿ ಇರುವುದರಿಂದ ಆಗುವ ತೊಂದರೆ, ಬೈಗುಳ ಮೊದಲಾದುವು. ವಡ್ಡಾರಾಧನೆಕಾರ ತಮ್ಮ ಎಲ್ಲ ಕತೆಗಳಲ್ಲಿಯೂ ಇವುಗಳ ಪ್ರಸ್ತಾಪ ಮಾಡಿದ್ದಾನೆ. ಈ ಇಪ್ಪತ್ತೆರಡು ಪರೀಷಹಗಳನ್ನು ಗೆಲ್ಲುವುದನ್ನೇ ಮುಖ್ಯ ಗುರಿಯಾಗಿರುವುದನ್ನು ಇಲ್ಲಿ ವಿವರಿಸಲಾಗಿದೆ. "ಎಲ್ಲ ಧರ್ಮಗಳಿಗೂ, ಎಲ್ಲ ಕಾಲಗಳಿಗೂ ಅನ್ವಯವಾಗಬಲ್ಲ ತತ್ವ ಇದು. ಒಂದಿಲ್ಲೊಂದು ರೀತಿಯ ಕಾಯಕಷ್ಟ ಇಂದ್ರಿಯ ನಿಗ್ರಹ ಇವಿಲ್ಲದೆ ಯಾವ ಧರ್ಮವೂ ಸಿದ್ಧಿಯನ್ನು ಹೇಳುವುದಿಲ್ಲ. ಈ ದೃಷ್ಟಿಯಿಂದ ವಡ್ಡಾರಾಧನೆಯ ನಾಯಕರು ಆದರಣೀಯರು, ಗೌರವಾರ್ಹರು, ಸಾಧನಕ್ರಮ, ಅಧ್ಯಯನ, ಸಂಚಾರ, ವ್ರತೋಪವಾಸಗಳ ಕಟ್ಟುನಿಟ್ಟು ಇವೆಲ್ಲ ಒಂದು ಧರ್ಮಕ್ಕೆ ಸೀಮಿತವಾದುವು. ಆದರೆ ಅವುಗಳ ಹಿಂದಿರುವ ಮನೋಧರ್ಮ ಸಾರ್ವಕಾಲಿಕ ಸಾರ್ವತ್ರಿಕ"(ವೊಡ್ಡಾರಾಧನೆ ಕಥಾಲೋಕ, ಪು. ೧೯೦).

ಉಪಾಧ್ಯಾಯಂಗೆ ಕಲಿಮೆಯ ಕೂೞುಂ ತುಪ್ಪಮುಂ ತೊವೆಯುಮಂ ಉಣಲ್ಕೊಟ್ಟು ಕುಮಾರನನೋದಿಸುಗೆ....

(ವಡ್ಡಾ. ಪು ೭೫)

ಭದ್ರಬಾಹುಭಟಾರರ ಕಥೆಯಲ್ಲಿ ಬರುವ ಪ್ರಸಂಗ, ರಾಜಭಕ್ತಿ ಹೇಗಿತ್ತು ಎಂಬುದನ್ನು ಪ್ರತಿಪಾದಿಸುವ ಸನ್ನಿವೇಶವಿದು. ಅಶೋಕಚಕ್ರವರ್ತಿಯ ಮಗ ಕುಣಾಳನಿಗೆ ಸಂಬಂಧಿಸಿದ್ದು,

ಉಪಾಧ್ಯಾಯನಿಗೆ ಅಕ್ಕಿಯ ಅನ್ನ ತುಪ್ಪ ತೋವೆಗಳನ್ನು, ಉಣ್ಣಲು ಕೊಡಬೇಕೆಂದು ಮತ್ತು ಆತನಿಗೆ ಕುಣಾಳನಿಗೆ ಅಧ್ಯಾಪನ ಮಾಡಿಸಬೇಕೆಂದು ಅಶೋಕರಾಜ ಪತ್ರವನ್ನು ಬರೆದು ಕಳಿಸುತ್ತಾನೆ ಅದನ್ನು ವಾಚಕನು ತಪ್ಪಾಗಿ ಅರ್ಥೈಸಿಕೊಳ್ಳುತ್ತಾನೆ. ಅದರ ಪರಿಣಾಮವಾಗಿ ಮಂತ್ರಿ ಮುಂತಾದವರು ರಾಜಕುಮಾರನ ಕಣ್ಣನ್ನೇ ಕೀಳಿಸುತ್ತಾರೆ.

ಗುರುಗಳಿಗೆ ಹಿಂದಿನ ಕಾಲದಲ್ಲಿ ಎಂಥ ಮಾನ್ಯತೆ ಇತ್ತು ಗೌರವವಿತ್ತು ಎಂಬುದನ್ನು ಇಲ್ಲಿ ತಿಳಿಯಬಹುದು. ಪುರಾಣ ಕಾಲದಲ್ಲಿ ಆಶ್ರಮಗಳಲ್ಲಿ ಇತಿಹಾಸಕಾಲದಲ್ಲಿ ರಾಜಭವನಗಳಲ್ಲೂ ಮಧ್ಯಯುಗದಲ್ಲಿ ಗುರುಮಠಗಳಲ್ಲೂ, ಬ್ರಿಟಿಷರ ಕಾಲದಲ್ಲಿ ಸರಕಾರಿ ಶಾಲೆಗಳಲ್ಲೂ ವಿದ್ಯಾಭ್ಯಾಸ ನಡೆಯಿತು ಎಂದು ಹೇಳಬಹುದು.

ಚಂದ್ರಗುಪ್ತನೆಂಬೊನಂ ನಿಱಿಸಿದೊಡಾತನುಂ ಪಲಕಾಲಮರಸುಗೆಯ್ದು ಕೞಿದೊಡಾತನ ಮಗಂ ಬಿಂದುಸಾಗರನೆಂಬೊನರಸುಗೆಯ್ದು ಕೞಿದ ಬೞಿಕ್ಕಾತನ ಮಗನಶೋಕನೆಂಬೊನ್

(ವಡ್ಡಾ. ಪು. ೭೫)

ಅಶೋಕನ ಕಾಲ ಕ್ರಿ.ಪೂ. ೨೭೩ರಿಂದ ೨೩೨. ಭಾರತೀಯ ಇತಿಹಾಸದಲ್ಲಿ ಅಶೋಕನ ಹೆಸರು ಅಚ್ಚಳಿಯದೆ ಉಳಿದಿದೆ. ಮೌರ್ಯ ಸಾಮ್ರಾಜ್ಯವನ್ನು ಆಳಿದ ದೊರೆ, ಬೌದ್ಧಧರ್ಮದ ಅನುಯಾಯಿ. ಬಾವಿತೋಡಿಸುವುದು, ಕೆರೆಕಟ್ಟೆಗಳನ್ನು ಕಟ್ಟಿಸುವುದು, ಸಾಲುಮರಗಳನ್ನು ನೆಡಿಸುವುದು ಮೊದಲಾದ ಜನಪರವಾದ ಕಾರ್ಯಗಳಿಂದ ಅಶೋಕ ಚಕ್ರವರ್ತಿ ಜನಮನ್ನಣೆಯನ್ನು ಗಳಿಸಿದ್ದಾನೆ. ಈ ದೃಷ್ಟಿಯಿಂದ ಈತ ಜಗತ್ತಿನ ಚರಿತ್ರೆಯಲ್ಲಿ ಆದರ್ಶರಾಜ ಎನಿಸಿದ. ಈತ ಕೆತ್ತಿಸಿದ ಶಾಸನಗಳು ಹಲವಾರು ಅವುಗಳಲ್ಲಿ ಕೆಲವು ಕರ್ನಾಟಕದಲ್ಲಿಯೂ ಕಂಡುಬರುತ್ತವೆ. ಬ್ರಾಹ್ಮಿ ಲಿಪಿಯ ಶಾಸನಕಾಲದಿಂದ ಇಂಡಿಯಾದ ಇತಿಹಾಸದ ಸ್ಪಷ್ಟರೇಖೆಗಳು ಸಿಗುತ್ತವೆ. ಅಶೋಕಚಕ್ರ ನಮ್ಮ ರಾಷ್ಟ್ರದ ಲಾಂಛನಗಳಲ್ಲಿ ಒಂದು. ಬೌದ್ಧಕತೆಗಳಲ್ಲಿ ಅಶೋಕನಿಗೆ ಸಂಬಂಧಿಸಿದ ವಿವರಗಳು ದೊರಕುತ್ತವೆ. ಕನ್ನಡ ಕಥಾಕೋಶದಲ್ಲಿ ಈತನ ಬಗೆಗೆ ಸಿಗುವ ವಿವರಗಳ ಬಗ್ಗೆ ಹಂಪನಾ ಕೊಡುವ ಮಾಹಿತಿ ಹೀಗಿದೆ: "ಅಶೋಕನ ತಾತ ಚಂದ್ರಗುಪ್ತ ತಂದೆ ಬಿಂದುಸಾರನ ಮಗ ಕುಣಾಳ ಮತ್ತು ಮೊಮ್ಮಗ ಸಂಪ್ರತಿಚಂದ್ರಗುಪ್ತ ಇಷ್ಟು ಜನರ ಪ್ರಸ್ತಾಪವಿದೆ. ಜತೆಗೆ ಸಂಪ್ರತಿಯ ಮಗ ಸಿಂಹಸೇನನ ಹೆಸರೂ ಬಂದಿದೆ. ಹೀಗೆ ಆರು ತಲೆಮಾರಿನ ಕಥೆ ಬಂದಿದೆ. ಮನಃ ಕ್ಲೇಶದಿಂದ ನೊಂದು ಆತ ರಾಜ್ಯತ್ಯಾಗ ಮಾಡಿದ್ದುದಾಗಿ ಸಂಗತಿಗಳು ಸಾರಿವೆ."

ಕಾಷ್ಠಕೂಟನೆಂಬ ಬೆಸದವಂ ಪುಳ್ಳಿಯ ಪೊಱೆಯಂ ಪೊತ್ತು ಪೋಟಲ್ಗೆ ವರ್ಪೊನಂ ಕಂಡು.....

(ವಡ್ಡಾ. ಪು ೭೬)

ಭದ್ರಬಾಹುಭಟಾರರ ಕಥೆಯಲ್ಲಿ ಬರುವ ಸನ್ನಿವೇಶ. ನಂದಿಮಿತ್ರನ ಸೇವೆಯ ಕಷ್ಟದ ವರ್ಣನೆಯ ಸಂದರ್ಭ, ಈತ ಹುಟ್ಟಿದ್ದರ ಫಲವಾಗಿ ನೆಂಟರಿಷ್ಟರು ಸಾಯುತ್ತಾರೆ, ಅಪಶಕುನದವ ನೆಂದು ನಂದಿಮಿತ್ರನನ್ನು ಅಟ್ಟುತ್ತಾರೆ. ನಂತರ ಕಾಷ್ಠಕೂಟನೊಂದಿಗೆ ಸೇರುತ್ತಾನೆ. ಕೆಲವು ದಿನಗಳು ಹೀಗೆ ಕಳೆಯುತ್ತಿರಲು ಕಾಷ್ಠಕೂಟನು ತನ್ನ ಪತ್ನಿಯಾದ ಜಯಘಂಟೆಗೆ 'ಇವನಿಗೆ ಹೊಟ್ಟೆ ತುಂಬ ಬಡಿಸಬೇಡ, ಎಣ್ಣೆಯನ್ನು ಕೊಡಬೇಡ, ಸ್ನಾನಕ್ಕೆ ನೀರು ಕೊಡಬೇಡ' ಎಂದು ಆಜ್ಞೆ ಮಾಡುತ್ತಾನೆ. ಒಮ್ಮೆ ಹೆಂಡತಿ ಕರುಣೆಯಿಂದ ತೃಪ್ತಿಯಾಗುವಂತೆ ಆತನಿಗೆ ಉಣಲಿಕ್ಕುತ್ತಾಳೆ. ಇಬ್ಬರೂ ಸೌದೆತರಲು ಹೋದಾಗ ನಂದಿಮಿತ್ರ ಉಡಲು ನನಗೆ ಬಟ್ಟೆಯಿಲ್ಲ ಒಂದು ದಮ್ಮಕ್ಕಾದರು ಬಟ್ಟೆಯನ್ನು ಕೊಡಿ ಎಂದು ಕೇಳುತ್ತಾನೆ. ಇಬ್ಬರೂ ಸೌದೆಯನ್ನು ತಂದಮೇಲೆ ತನ್ನ ಮಾತಿಗೆ ಹೆಂಡತಿ ವಿರುದ್ಧವಾಗಿ ನಡೆದುಕೊಂಡಿರುವ ವಿಷಯ ತಿಳಿಯುತ್ತದೆ. ಆಗ ಕಾಷ್ಠಕೂಟನು ಆಕೆಯನ್ನು ಚೆನ್ನಾಗಿ ಹೊಡೆದು ಮನೆಯಿಂದ ಓಡಿಸುತ್ತಾನೆ. ಹೆಣ್ಣನ್ನು ಸೇವಕರನ್ನು ಗಂಡ ಹಾಗೂ ದಣಿಗಳು ನಡೆಸಿಕೊಳ್ಳುತ್ತಿದ್ದ ರೀತಿಗೆ ನಿದರ್ಶನ. ದಿನವೂ ಸೌದೆ ತಂದು ಮಾರಾಟ ಮಾಡಿ ಜೀವನ ಸಾಗಿಸುತ್ತಿದ್ದ ರೀತಿ ತನ್ನ ಸೇವಕನನ್ನು ಕಾಣುತ್ತಿದ್ದ ಕ್ರೂರ ದೃಷ್ಟಿ ಇವು ಇಲ್ಲಿ ಗೋಚರವಾಗುತ್ತವೆ. ಇವತ್ತು ಸಹ ಕಷ್ಟಪಟ್ಟು ಸೌದೆ ತಂದು ಮಾರಾಟ ಮಾಡಿ ಜೀವನ ಮಾಡುವವರಿದ್ದಾರೆ. ತಂದಿರುವ ಸೌದೆಯನ್ನು ಒಡೆದು ಹಣ ಸಂಪಾದಿಸುವವರಿದ್ದಾರೆ. ಸೌದೆ ವ್ಯಾಪಾರ ಮಾಡುವ ಮಂಡಿಗಳೇ ಇವೆ. ಅದರಲ್ಲಿ ಕೆಲಸ ಮಾಡುವ ಸಾಕಷ್ಟು ಕೂಲಿ ಆಳುಗಳೂ ಇರುವುದನ್ನು ಕಾಣಬಹುದು. ಕಾಷ್ಠಕೂಟನ ಗೃಹಜೀವನ ಯಾವ ರೀತಿ ಇತ್ತು ಎಂಬುದರ ಜೊತೆಗೆ ನಂದಿಮಿತ್ರನ ಬದುಕನ್ನು ನೋಡಿದರೆ ಮೊದಲು ಹೊಟ್ಟೆಗೆ ಆಹಾರ ನಂತರ ಮೈಗೆ ಬಟ್ಟೆ ಎಂಬ ಬಡವರ ಆಸೆಯ ನಿಜವಾದ ಸ್ವರೂಪ ಎಂಥದ್ದು ಎಂಬುದು ಇಲ್ಲಿ ಗೋಚರವಾಗುತ್ತದೆ.

ಭಟಾರರ ಕಾಲಂ ಮಹಾದೇವಿ ನೀರ್ವೊಯ್ಯೆ ಅರಸಂ ತಾನೆ ಪ್ರಕ್ಷಾಳಿಸಿ.....

(ವಡ್ಡಾ. ಪು ೭೮)

ಋಷಿಗಳು, ಭಟಾರರು, ಬ್ರಹ್ಮಚಾರಿಗಳು ಸಮಾಜದಲ್ಲಿ ಹಿಂದಿನಿಂದಲೂ ಗೌರವ ಮನ್ನಣೆಗಳನ್ನು ಪಡೆಯುತ್ತಲೇ ಬಂದಿದ್ದಾರೆ. ಆಳುವ ವರ್ಗವೂ ಅವರನ್ನು ಆರಾಧಿಸುತ್ತಲೇ

ಬಂದಿದೆ. ಭದ್ರಬಾಹುಭಟಾರರ ಕಥೆಯಲ್ಲಿ ಬರುವ ನಂದಿಮಿತ್ರನು ಶಿವಗುಪ್ತ ಭಟಾರರ ಜೊತೆಯಲ್ಲಿ ರಾಜಾತಿಥ್ಯ ಪಡೆಯುತ್ತಾನೆ. ಆ ಸಂದರ್ಭದಲ್ಲಿ ಇಂಥ ಗೌರವವನ್ನು ಗುರುತಿಸಬಹುದು. ಋಷಿ ರೂಪವನ್ನು ತಾಳಿದರೆ ಜಗತ್ತಿನಲ್ಲಿ ಮನ್ನಣೆ ದೊರಕುತ್ತದೆಂದು ಕೆಲವರು ಭಾವಿಸುತ್ತಾರೆ. ಈ ಕತೆಯ ನಂದಿಮಿತ್ರ ಇದಕ್ಕೆ ಉದಾಹರಣೆಯಾಗಿದ್ದಾನೆ. ಮಹಾದೇವಿ ಶಿವಗುಪ್ತಾಚಾರ್ಯರ ಪಾದಗಳಿಗೆ ನೀರು ಹಾಕಿ ತೊಳೆಯುತ್ತಾಳೆ. ಅರಸನು ಹಾಗೆ ಮಾಡುತ್ತಾನೆ. ನಂತರ ಅವರನ್ನು ಊಟಕ್ಕೆ ಕುಳ್ಳಿರಿಸುತ್ತಾರೆ. ಅವರು ಬಡಿಸಿದ ಊಟ ವೈವಿಧ್ಯಮಯವಾದುದು : "ರಾಜಾನ್ನದ ಕೂಳು, ಹೆಸರು ತೊವ್ವೆ, ಬೆಣ್ಣೆ ಕಾಸಿದ ಪರಿಮಳ ಬೀರುವ ತುಪ್ಪ ಹಲವು ಕಾಯಿ ಪಲ್ಯಗಳು, ಪಾಯಸ, ಪೂರಿ, ಇಡ್ಡಲಿ, ಸೋದಿಗೆ, ಲಾವಣಿಗೆ ಘೃತಪೂರ, ಲಡ್ಡುಗೆ, ಮಂಡಿಗೆ, ಮೊದಲಾದ ಹದಿನೆಂಟು ಬಗೆಯ ಭಕ್ಷ್ಯಗಳು, ನಾನಾತೆರನಾದ ಪಾನೀಯಗಳು "ಇತ್ಯಾದಿಗಳನ್ನು ಬಡಿಸಿದರು. ಇವುಗಳನ್ನು ಸ್ವೀಕರಿಸಿದ ಮೇಲೆ ರಾಜ ರಾಣಿಯರನ್ನು ಭಟಾರರು ಆಶೀರ್ವದಿಸಿದರು. ಹತ್ತನೆಯ ಶತಮಾನದಲ್ಲಿ ಕನ್ನಡನಾಡಿನಲ್ಲಿ ಪ್ರಚಲಿತವಿದ್ದ ತಿನ್ನುವ ಪದಾರ್ಥಗಳಲ್ಲಿ ಕೆಲವು ಇವತ್ತಿಗೂ ಜನಪ್ರಿಯವೆನಿಸಿವೆ. ಭಟಾರರೊಂದಿಗೆ ಬಂದವರಿಗೆ ಮರ್ಯಾದೆ ದೊರಕುತ್ತಿತ್ತು. ತಪಸ್ವಿಗಳಿಗೆ ಯೋಗಿಗಳಿಗೆ ಈಗಲೂ ಜನ ಗೌರವಿಸುವುದರ ಜೊತೆಗೆ ಅವರುಗಳ ಪಾದ ತೊಳೆದ ನೀರನ್ನು ಕುಡಿಯುವಂಥ ಅವೈಜ್ಞಾನಿಕ ಮೂಢ ಸಂಪ್ರದಾಯಗಳೂ ಸಮಾಜದಲ್ಲಿ ಕಂಡುಬರುತ್ತಿವೆ.

ಯಥಾ ರಾಜಾ ತಥಾ ಪ್ರಜಾ :

(ವಡ್ಡಾ. ೧೧೮)

ಕಾರ್ತಿಕ ಋಷಿಯ ಕಥೆಯಲ್ಲಿ ಬರುವ ಸನ್ನಿವೇಶ. ಕೃತ್ತಿಕೆ ನಗರದ ರಾಜ ಅಗ್ನಿರಾಜನು ತನ್ನ ಮಗಳನ್ನು ತಾನೆ ಮದುವೆಯಾಗಿ ಬಿಡುತ್ತಾನೆ. ಇದನ್ನು ಗಮನಿಸಿದ ಪ್ರಜೆಗಳೂ ಧರ್ಮ, ನೀತಿಗೆ ವಿರುದ್ಧವಾಗಿ ರಾಜನಂತೆಯೇ ನಡೆದುಕೊಳ್ಳುತ್ತಾರೆ. ರಾಜನು ಹೇಗೋ ಪ್ರಜೆಗಳು ಹಾಗೇ ವರ್ತಿಸತೊಡಗುತ್ತಾರೆ. ಹೀಗಾಗಿ ಊರಿಗೆ ಊರೇ ಕೆಡುತ್ತದೆ. ಪರಿಣಾಮವಾಗಿ ಆ ಊರಿಗೆ 'ಭೋಗಂಕಾರೋಹಣ'ಎಂಬ ಹೆಸರು ಬರುತ್ತದೆ.ಹಿರಿಯರು ತಮ್ಮನ್ನು ಆಳುವವರು ಹೇಗೆ ಇರುತ್ತಾರೊ ಹಾಗೆಯೆ ಜನರ ಬದುಕು ಇರುತ್ತದೆ ಎಂಬುದಕ್ಕೆ ಈ ಶ್ಲೋಕ ಉದಾಹರಣೆಯಾಗಿದೆ. ನಾನು ಕೆಟ್ಟರೆ ನಮ್ಮ ಪ್ರಜೆಗಳೂ ಕೆಡುತ್ತಾರೆಂಬ ಭಯವಿದ್ದುದರಿಂದಲೇ ಕೆಲವು ರಾಜರು ನೀತಿ ನಿಯಮಗಳಿಗೆ ಹತ್ತಿರವಿದ್ದುಕೊಂಡೇ ರಾಜ್ಯಭಾರ ನಡೆಸಿದರು. ಇವತ್ತಿನ ಸಂದರ್ಭದಲ್ಲಿ ಆಳುವ ಮಂತ್ರಿಗಳು ಅಧಿಕಾರ ನಡೆಸುವವರೇ ತಪ್ಪು

ದಾರಿಯಲ್ಲಿ ಹೋಗುತ್ತಿರುವುದರಿಂದ, ಆದರ್ಶಗಳಿಗೆ ಮಸಿ ಬಳಿಯುತ್ತಿರುವುದರಿಂದ ಅಂಥವರ ಆಡಳಿತಕ್ಕೆ ಒಳಪಟ್ಟಿರುವ ನಾಡೂ ಭ್ರಷ್ಟತೆಯಿಂದ ಕೂಡಿರುವುದಕ್ಕೆ ಸಾಧ್ಯವಿದೆ. ಇಂಥ ಸಂದರ್ಭದಲ್ಲಿ ಪ್ರಾಮಾಣಿಕವಾಗಿ ಸರಳವಾಗಿ, ಆದರ್ಶಪಾಲಿಸುವ ಕೆಲವೇ ಕೆಲವರು 'ನಾಯಕ'ರಂತೆ ಕಾಣಿಸಿಬಿಡುತ್ತಾರೆ. ಆದರೆ ಬಹುಸಂಖ್ಯಾತ ಭ್ರಷ್ಟರ ನಡುವೆ ಪ್ರಾಮಾಣಿಕ ನಾಯಕರ ವ್ಯಕ್ತಿತ್ವ ಕರಗಿಹೋಗಿ ಬಿಡುತ್ತದೆ.

ಚಂದ್ರಗ್ರಹಣ ಮಾದುದನರಸಂ ಕಂಡುನಿತ್ಯಮಂಭಾವಿಸಿ ಅದುವೆ ವೈರಾಗ್ಯಕ್ಕೆ ಕಾರಣಮಾಗಿ

(ವಡ್ಡಾ. ಪು. ೧೨೦)

ಅಭಯಘೋಷರೆಂಬ ಮುನಿಯ ಕಥೆಯಲ್ಲಿ ಬರುವ ಸನ್ನಿವೇಶ. ಚಂದ್ರಗ್ರಹಣವನ್ನು ನೋಡಿದ ಅರಸ ವೈರಾಗ್ಯ ಪಡೆಯುತ್ತಾನೆ. ಧರ್ಮದ ವಿಚಾರಗಳನ್ನು ಕೇಳಿದಾಗ ಜನ್ಮಾಂತರದ ವಿಚಾರಗಳನ್ನು ತಿಳಿದುಕೊಂಡಾಗ ಕೆಲವರು (೧೩೩)ವೈರಾಗ್ಯ ದೀಕ್ಷೆ ಪಡೆಯುತ್ತಾರೆ, ಅಂತೂ ಜೈನಧರ್ಮದಲ್ಲಿ ವೈರಾಗ್ಯ ಪಡೆಯುವುದಕ್ಕೆ ನಿರ್ದಿಷ್ಟವಾದ ಇಂತದ್ದೇ ಕಾರಣ ಎಂಬುದಿಲ್ಲ. ತಾಯಿ ಕೃತ್ತಿಕೆ, ಮಗನ ಪ್ರಶ್ನೆಗೆ ಉತ್ತರಿಸುತ್ತ ನಿನಗೆ ತಂದೆಯಾದವರೇ ನನಗೂ ತಂದೆ ಎನ್ನುತ್ತಾಳೆ. ಈ ಮಾತೇ ಕಾರ್ತೀಕನ ವೈರಾಗ್ಯಕ್ಕೆ ಕಾರಣವಾಗುತ್ತದೆ. ಹಲಗೆಯ ಮೇಲೆ ಬಿಡಿಸಿದ ಗೆರೆಗಳು ಇದ್ದಕ್ಕಿದ್ದಂತೆ ಕಣ್ಮರೆಯಾದುದನ್ನು ಕಂಡು ಸಿರಿದಿಣ್ಣ ವೈರಾಗ್ಯ ತಾಳುತ್ತಾನೆ. ಮನುಷ್ಯನ ಆಯಸ್ಸು, ತೇಜಸ್ಸು, ಲಾವಣ್ಯ, ಕಾಂತಿ, ಯೌವ್ವನಗಳು ಪ್ರತಿಗಳಿಗೆಯಲ್ಲೂ ಬದಲಾಗುತ್ತಿರುತ್ತವೆಂಬ ಸಂಗತಿಯೇ ಸನತ್ಕುಮಾರ ಚಕ್ರವರ್ತಿಯ ವೈರಾಗ್ಯಕ್ಕೆ ಕಾರಣವಾಗುತ್ತದೆ. 'ಶ್ಮಶಾನಕ್ಕಾಕೆಯ ದೇಹಮಂ ನೋಡಲೆಂದು ಪೋಗಿಯದಱ ಭೀಭತ್ಸಮಂ ಕಂಡಾದ ಮಾನುಂ ಪೇಸಿ ಶರೀರ ವೈರಾಗ್ಯಮನೊಡೆಯಾಗಿ (೬೩) 'ಕಿಱಿದೆ ನಿನಗಾಯುಷ್ಯವೆಂದು ಪೇಟ್ಠೊಡೆ ವೈರಾಗ್ಯ ಪರಾಯಣನಾಗಿ (೭೨) ತಮ್ಮ ಮಗನಿಗೆ ಪಟ್ಟಕಟ್ಟಿ ರಾಜರು ವೈರಾಗ್ಯ ತಾಳುವುದು ತಲೆ ಕೂದಲು ಬೆಳ್ಳಗಾಗಿರುವುದು ಹೀಗೆ ನಾನಾ ಕಾರಣಗಳಿರುವುದು ಕಂಡುಬರುತ್ತದೆ. ಇಲ್ಲಿ ವಿಶೇಷವೇನೆಂದರೆ ಗಂಡು ಹೀಗೆ ಕ್ಷುಲ್ಲಕ ಎಂಬಂತಹ ವಿಚಾರಗಳಿಗೆಲ್ಲ ವೈರಾಗ್ಯ ಭಾವನೆಯಿಂದ ಜಿನದೀಕ್ಷೆ ಪಡೆದು ಅತ್ತ ಹೋದರೆ ಮಕ್ಕಳು ಮರಿಗಳನ್ನು ಸಾಕಿ ಪೋಷಿಸುವ ಹೆಣ್ಣಿನ ಜವಾಬ್ದಾರಿ ಹೇಗಿತ್ತೆಂಬುದರ ಬಗ್ಗೆ ಮತಧರ್ಮಗಳು ಯಾವ ಕಾಳಜಿ ತಾಳದೆ ಇರುತ್ತವೆ. ಇದಕ್ಕೆ ಜೈನಧರ್ಮವೂ ಹೊರತಾಗಿಲ್ಲ.

ಚೂರ್ಣ ಯೋಗ ಘುಟಿಕಾಂಜನ ಮೆಂದಿವು ಮೊದಲಾಗೊಡೆಯ.....

(ವಡ್ಡಾ. ಪು ೧೨೨)

ವಿದ್ಯುಚ್ಚೋರನೆಂಬ ಕಳ್ಳನಿದ್ದ. ಆತ ತಸ್ಕರಶಾಸ್ತ್ರದಲ್ಲಿ ನಿಪುಣನಾಗಿದ್ದ. ಅವನಿಗೆ ಗೊತ್ತಿದ್ದ ವಿದ್ಯೆಗಳಲ್ಲಿ ಅಂಜನವಿದ್ಯೆಯೂ ಒಂದು. ಜಾನಪದದಲ್ಲಿ ಇದರ ಪ್ರಸ್ತಾವ ಬರುತ್ತದೆ. ಏಳು ಆಂಜನೇಯನ ಗುಡಿಗಳಲ್ಲಿರುವ ಕಪ್ಪನ್ನು ಒಂದೆಡೆ ಕಲೆಹಾಕಿ ಮಿಶ್ರಣ ಮಾಡಿದರೆ ಅದನ್ನು ಅಂಜನಕಪ್ಪು ಎಂದು ಕರೆಯುತ್ತಾರೆ. ಆ ಕಪ್ಪಿನ ಸ್ವಲ್ಪ ಭಾಗವನ್ನು ಬೆರಳಿನ ಉಗುರಿನ ಮೇಲಿಟ್ಟು ಕೊಂಡು ರೆಪ್ಪೆ ಹೊಡೆಯದೆ ಸ್ವಲ್ಪ ಹೊತ್ತು ಒಂದೇ ಮನಸ್ಸಿನಿಂದ ನೋಡಿದರೆ ರಹಸ್ಯವಾಗಿರುವ ಸಂಪತ್ತು ಇರುವ ಜಾಗ ತಿಳಿಯುತ್ತದಂತೆ. ಸಾಮಾನ್ಯವಾಗಿ ಕಳ್ಳರಿಗೆ ಈ ವಿದ್ಯೆ ತಿಳಿದಿರುತ್ತದಂತೆ. ಕಳ್ಳತನಕ್ಕೆ ಹೋಗುವ ಮುಂಚೆ ಆಂಜನೇಯನನ್ನು ಆರಾಧಿಸಿ ಅಂಜನಕಪ್ಪನ್ನು ಬೆರಳಿನ ಉಗುರಿಗೆ ಹಾಕಿ ನೋಡುತ್ತಾರೆ. ಆನಂತರ ಸಂಬಂಧಿಸಿದ ಸ್ಥಳಕ್ಕೆ ಕನ್ನಹಾಕಿ ಸಂಪತ್ತನ್ನು ಕೊಳ್ಳೆ ಹೊಡೆಯುತ್ತಾರೆಂದು ಜನಾಭಿಪ್ರಾಯವಿದೆ. ವಡ್ಡಾರಾಧನೆಯಲ್ಲಿ ಬರುವ ವಿದ್ಯುಚ್ಚೋರನಿಗೂ ಅಂಜನವಿದ್ಯೆ ತಿಳಿದಿತ್ತು. ಈತ ಕದ್ದು ಮಿಂಚಿನಂತೆ ಮಾಯವಾಗುತ್ತಿದ್ದವನಿರಬೇಕು.

ಪಿರಿದೊಂದು ಪರ್ವತಮುಂಟದಲ್ಲಿಯೊಂದು ವಿಸ್ತೀರ್ಣ ಗುಹೆಯುಂಟದರ ಬಾಗಿಲಂ ಮುಚ್ಚಿರ್ದ ಪಿರಿಯ ಸಿಲೆಯಂ.......

(ವಡ್ಡಾ. ಪು. ೧೨೫,೧೨೬)

ವಿದ್ಯುಚ್ಚೋರರಿಸಿಯ ಕಥೆಯಲ್ಲಿ ಗುಹೆಯಲ್ಲಿ ಐಶ್ವರ್ಯ ಬಚ್ಚಿಡುವ ವಿಷಯ ಬರುತ್ತದೆ. ವಿದ್ಯುಚ್ಚೋರನೆಂಬ ಕಳ್ಳ ತಸ್ಕರಶಾಸ್ತ್ರದಲ್ಲಿ ನಿಪುಣ. ರಾತ್ರಿಯವೇಳೆ ನಗರದಲ್ಲಿ ಕಳ್ಳತನ ಮಾಡಿ ಕದ್ದ ವಸ್ತುಗಳನ್ನು ನಗರದ ಹೊರಗೆ ಪರ್ವತವೊಂದರ ಗುಹೆಯಲ್ಲಿ ಬಚ್ಚಿಟ್ಟು ಅದರ ಬಾಗಿಲಿಗೆ ದೊಡ್ಡ ಕಲ್ಲನ್ನು ಅಡ್ಡವಾಗಿ ಇಟ್ಟುಬರುತ್ತಿದ್ದ. ಕದ್ದ ವಸ್ತುಗಳನ್ನು ಕಳ್ಳರು ಜನರಿಗೆ ತಿಳಿಯದಂತೆ ಗುಹೆಗಳಲ್ಲಿ ಬಚ್ಚಿಡುವುದು ಸಾಮಾನ್ಯವಾದ ಸಂಗತಿಯಾಗಿದೆ. ಜನಪದ ಕಥೆಗಳಲ್ಲಿಯೂ ಇದರ ಪ್ರಸ್ತಾಪ ಬರುತ್ತದೆ. ಆಲಿಬಾಬಾ ಮತ್ತು ನಲವತ್ತುಮಂದಿ ಕಳ್ಳರ ಕಥೆಯಲ್ಲಿ, ಪ್ಯಾಂಟಮನ ಸಾಹಸದ ಕಥೆಗಳಲ್ಲಿಯೂ ಗುಹೆಗಳಲ್ಲಿ ಸಂಪತ್ತನ್ನು ಅಡಗಿಸಿಡುವ ಆಶಯ ಅಭಿವ್ಯಕ್ತ ವಾಗುವುದನ್ನು ಕಾಣುತ್ತೇವೆ.

ತನ್ನ ಪಿರಿಯ ಮಗಂ ತನ್ನೊಡನೆ ತೋಱೆಯಲ್ ಬಗೆದಿರ್ದೊನಂ ಬಾರಿಸಿ ಬಲ್ಲಾಳ್ತನದಿಂ ರಾಜ್ಯ ಪಟ್ಟಂಗಟ್ಟಿ ಸಂಕ್ಷೇಪದಿಂ ರಾಜ್ಯನೀತಿಯ ನಿಂತೆಂದು ಕಲ್ಪಿಸಿದಂ

(ವಡ್ಡಾ. ಪು ೧೪೪)

ಗುರುದತ್ತ ಭಟಾರರ ಕಥೆಯಲ್ಲಿ ಬರುವ ಪ್ರಸಂಗ. ರಾಜಪದವಿ ಎಂಬುದು ವಂಶ ಪಾರಂಪರ್ಯವಾಗಿ ಬರುತ್ತಿತ್ತು. ಒಬ್ಬನೇ ಮಗ ಇರುವಾಗಲಂತೂ ಇದು ಇನ್ನೂ ಸುಲಭ. ಉತ್ತರಾಧಿಕಾರತ್ವ, ಯುವರಾಜಪದವಿ, ಸಿಂಹಾಸನಾರೋಹಣ–ಇವೆಲ್ಲ ಬಹುಸುಲಭವಾಗಿ ನೆರವೇರಿಬಿಡುತ್ತವೆ. ಇಂಥದ್ದೊಂದು ವಿವರ ಈ ಕತೆಯಲ್ಲಿ ಬರುತ್ತದೆ. ಅನೇಕ ಮಕ್ಕಳು ಇದ್ದಾಗ ಬೇರೆ ಬೇರೆ ವಿಚಿತ್ರ ವಿಧಾನಗಳನ್ನು ಅನುಸರಿಸುತ್ತಿದ್ದರು. ೫೦೦ ಮಂದಿಯನ್ನು ಒದು ಪಂಕ್ತಿಯಲ್ಲಿ ಕುಳ್ಳಿರಿಸಿ ಪಾಯಸವನ್ನು ಬಡಿಸಿ ಅವರ ಮೇಲೆ ೫೦೦ ನಾಯಿಗಳನ್ನು ಬಿಟ್ಟರೆ ಯಾರು ಸ್ವಲ್ಪವೂ ಹೆದರದೆ ಊಟ ಮಾಡುತ್ತಾರೊ ಅಂಥವನು ಅರ್ಹನಾಗುತ್ತಾನೆ. ಸಿಂಹಾಸನಕ್ಕೆ ಅರ್ಹನಾದವನನ್ನು ಪರೀಕ್ಷಿಸುವ ಒಂದು ವಿಚಿತ್ರವೂ, ಅಪೂರ್ವವೂ ಆದ ವಿಧಾನವಿದು.

ಶಂಖಚಕ್ರ ಪದ್ಮಾಂಕುಶ ಚಾಮರ ತೋರಣ ಪತಾಕಾದಿ ಶುಭಲಕ್ಷಣಾಂಕಿತಮಾಗಿ...

(ವಡ್ಡಾ. ಪು.೧೪೮)

ರಾಜನಾದವನ ಶರೀರ ಶುಭಲಕ್ಷಣಗಳಿಂದ ಕೂಡಿರುತ್ತದೆಂಬ ಕಲ್ಪನೆಯನ್ನು ಗುರುದತ್ತ ಭಟಾರರ ಕಥೆ ಬಲಪಡಿಸುತ್ತದೆ. ಕೆಳಗೆ ಬಿದ್ದಿದ್ದ ಮುಂಗೈಯನ್ನುಅಭಯಮತಿ ಕಾಣುತ್ತಾಳೆ. "ವಜ್ರವೈಡೂರ್ಯ ಪದ್ಮರಾಗ ಪುಷ್ಯರಾಗ ಸಸ್ಯ ಕರ್ಕೇತನ ಇಂದ್ರನೀಲಂ ಮೊದಲಾಗೊಡೆ ಅನರ್ಘಮಪ್ಪ ಮಾಣಿಕ್ಯದಿಂ ಸಮೆದ ಪಲವುಂ ನಾನಾಪ್ರಕಾರದಳ್ಗ ಕಂಕಣಂಗಳುಮಂ ತೊಟ್ಟ ಮುಂಗೈಯ್ಯುಂ ಬೆರಲ್ಗೊಳುಂ ಶಂಖ ಚಕ್ರ ಪದ್ಮಾಂಕುಶ ಚಾಮರ ತೋರಣ ಪತಾಕಾದಿ ಶುಭಲಕ್ಷಣಾಂಕಿತಮಾಗಿ ಕೆಂದಾವರೆಯ ಬಣ್ಣದಂತಪ್ಪ ತಳಮುಮಂ ಕಂಡೀ ತಳಮನೊಡೆಯಾತಂ ಸಾಮಾನ್ಯ ಪುರುಷನಲ್ಲಂ ಪಿರಿಯರಸನಾಗಲೆವೇಳ್ಕುಮೆಂದು"ಆಕೆ ಅಭಿಪ್ರಾಯಪಡುತ್ತಾಳೆ, ದುರ್ಯೋಧನನಿಗೂ ಶಂಖಚಕ್ರ ಮುಂತಾದ ರಾಜ ಚಿಹ್ನೆಗಳು ಇದ್ದುವು ಎಂಬ ವಿಚಾರವನ್ನು ಅವನು ವೈಶಂಪಾಯನ ಕೊಳವನ್ನು ಹೊಕ್ಕ ಸಂದರ್ಭದಲ್ಲಿ ವರ್ಣಿಸಲಾಗಿದೆ.

ನೋಂಪಿಗಳಿಂದಂ ಗಿಡಿಗಿಡಿ ಜಂತ್ರಂ ಮಿಳಿಮಿಳಿನೇತ್ರಮಾಗಿ ತಮ್ಮ ಮೆಯ್ಯಂ ತವಿಸಿ.....

(ವಡ್ಡಾ. ಪು. ೧೫೨)

ಗುರುದತ್ತಭಟಾರರ ಕತೆಯಲ್ಲಿ ಬರುವ ಸನ್ನಿವೇಶ. ಗುರುದತ್ತ ಅಭಯಮತಿಯರು ವೈರಾಗ್ಯಹೊಂದಿ ಅಮೃತಾಸ್ರವಭಟಾರರ ಬಳಿ ದೀಕ್ಷೆ ಪಡೆಯುತ್ತಾರೆ. 'ಸುವ್ರತೆ ಎಂಬ ಕಂತಿಯರೆ ಕಂತಿಯರಾದರು.' ಹಲವು ಕಾಲ ಉಗ್ರವಾದ ತಪಸ್ಸು ವ್ರತಗಳನ್ನು ಮಾಡಿದರು. ಅದರ ಪರಿಣಾಮವಾಗಿ ಅವರು 'ಗಿಡಿಗಿಡಿಜಂತ್ರಂಮಿಳಿಮಿಳಿನೇತ್ರಂ'ಆಗಿಬಿಟ್ಟರೆಂದು ವಡ್ಡಾರಾಧನೆಕಾರ ವರ್ಣಿಸಿದ್ದಾನೆ.

ಸನ್ಯಾಸಿಗಳ ಬದುಕೇ ಕ್ಲಿಷ್ಟಕರ. ಇನ್ನು ಸನ್ಯಾಸಿನಿಯರ ಬದುಕು ಅಯೋಮಯವಾಗಿತ್ತೆನ್ನ ಬಹುದು. ಅವರು ತುಂಬ ಕಷ್ಟಗಳನ್ನು ಅನುಭವಿಸಿರಬೇಕು ಕಮಳಶ್ರೀ ಕಂತಿಯರ್ (೩೦) ಗುಣಮತಿಕಂತಿಯರ್ (೪೪) ಬ್ರಹ್ಮಿಲೆ ಕಂತಿಯರ್ (೨೪) ವಿಜಯಮತಿ ಕಂತಿಯರ್ (೧೩೪) ಪದ್ಮಾವತಿಕಂತಿಯರ್ (೪೯) ಸುವ್ರಾತೆ ಕಂತಿಯರ್ (೧೫೧) ಇವರುಗಳು ಉಲ್ಲೇಖ ವೊಡ್ಡಾರಾಧನೆಯಲ್ಲಿ ಬರುತ್ತದೆ. ಇವರುಗಳ ತಪಸ್ಸನ್ನಾಚರಿಸಿ ಆದ ಪರಿಣಾಮವನ್ನು 'ಗಿಡಿಗಿಡಿಜಂತ್ರ ಮಿಳಿಮಿಳಿನೇತ್ರಂ' ಎಂದು ವಡ್ಡಾರಾಧನೆಕಾರ ವರ್ಣಿಸಿರುವುದು ಗಮನಾರ್ಹವೆನಿಸುತ್ತದೆ. ಬಹಳ ಸಣ್ಣಗೂ ಶಕ್ತಿಹೀನನೂ ಆಗಿರುವ ವ್ಯಕ್ತಿಯನ್ನು ಕುರಿತು ಗಿಡಿಗಿಡಿ ಜಂತ್ರಂ ಮಿಳಿಮಿಳಿನೇತ್ರಂ ಎಂದು ಗೇಲಿ ಮಾಡುವುದುಂಟು, ಮಂತ್ರವಾದಿಯ ಇಷ್ಟಕ್ಕೆ ಕುಣಿಯುವ ಅಸ್ತಿಪಂಜರದಂತೆ ಇರುವ ವ್ಯಕ್ತಿಗಳೂ ಉಂಟು.

ಎನ್ನ ಪೆಂಡಿತಿ ಕೂಟನಿಲ್ಲಿಗೆ ಕೊಂಡು ಬಂದೊಡೆ ಪಡುವಣ ಕೆಯ್ಗೆವೋದನೆಂದು ಪೇೞ್ದಿಟ್ಟಂ

(ವಡ್ಡಾ. ೧೫೨)

ಗುರುದತ್ತಭಟಾರರ ಕತೆಯಲ್ಲಿ ಬರುವ ಪ್ರಸಂಗ. ಹಳಮುಖನೆಂಬ ಬ್ರಾಹ್ಮಣನು ಹೊಲ ಉಳಲು ಬಂದ. ಹೊಲ ಕೆಸರಾಗಿತ್ತು. ಅಲ್ಲಿ ಬೆಟ್ಟದ ಪಶ್ಚಿಮದಲ್ಲಿ ಆತನ ಇನ್ನೊಂದು ಹೊಲವಿತ್ತು. ಅಲ್ಲಿಗಾದರೂ ಹೋಗಿ ಉಳೋಣವೆಂದು ಹೊರಟ. ಪ್ರತಿಮಾಯೋಗದಲ್ಲಿದ್ದ ಗುರುದತ್ತಭಟಾರರಿಗೆ ನನ್ನ ಹೆಂಡತಿ ಊಟ ತರುತ್ತಾಳೆ ಆಕೆಯನ್ನು ಅಲ್ಲಿಗೆ ಕಳಿಸಿ ಎಂದು ಹೇಳಿ ಹೊರಟ. ಮಧ್ಯಾಹ್ನದ ಸಮಯದಲ್ಲಿ ಹೆಂಡತಿ ಊಟ ತಂದಳು. ಆದರೆ ಗಂಡನ ಗೈರು ಹಾಜರಿಯ

ಬಗ್ಗೆ ಭಟಾರರನ್ನು ಕೇಳಿದಳು. ಯೋಗದಲ್ಲಿದ್ದ ಭಟಾರರು ಉತ್ತರಿಸದ ಕಾರಣ ಆಕೆ ವಿಧಿಯಿಲ್ಲದೆ ಊಟವನ್ನು ಮನೆಗೆ ತಂದುಬಿಟ್ಟಳು, ಕಾದು ಬೇಸತ್ತು ಹಸಿವಿನೊಂದಿಗೆ ಮನೆಗೆ ಹೋದ ಹಳಮುಖ ಹೆಂಡತಿಯನ್ನು ಹೊಡೆದ. ಆಮೇಲೆ ನಿಜಾಂಶ ತಿಳಿಯಿತು.

ವ್ಯವಸಾಯ ಕಸುಬು ಒಕ್ಕಲಿಗರಿಗೆ ಮಾತ್ರ ಇರಲಿಲ್ಲ, ಬ್ರಾಹ್ಮಣರೂ ವ್ಯವಸಾಯ ಮಾಡುತ್ತಿದ್ದರೆಂಬುದು ಇದರಿಂದ ತಿಳಿದುಬರುತ್ತದೆ. ಹೊಲ ಉಳಲು ಹೋದವರಿಗೆ ಮನೆಯಿಂದ ಊಟವನ್ನು(ಬುತ್ತಿ)ತೆಗೆದುಕೊಂಡು ಹೋಗುವುದುಂಟು. ಪ್ರಾದೇಶಿಕವಾದ ಅನ್ನಾಹಾರ ಪದ್ಧತಿಯಂತೆ ಪದಾರ್ಥಗಳಿರುತ್ತವೆ. ಉದಾ. ದಕ್ಷಿಣ ಕರ್ನಾಟಕದಲ್ಲಿ ಬಿದಿರಿನ ಗೂಡೆಯಲ್ಲಿ ಚೆಂಬಿನ ತುಂಬ ನೀರು, ಹಾಸಿದ ಬಟ್ಟೆಯಲ್ಲಿ ಮುದ್ದೆ, ಅನ್ನ, ಕುಡಿಕೆಯಲ್ಲಿ ಸಾರು, ಮತ್ತೊಂದು ಪಾತ್ರೆಯಲ್ಲಿ ಮಜ್ಜಿಗೆ, ಬಟ್ಟೆಗಂಟಿನಲ್ಲಿ ಉಪ್ಪುಸಾರಿಗೆ ಕಾರ ಸಾಲದೇ ಇದ್ದರೆ ಒಂದೆರಡು ಮೆಣಸಿನ ಕಾಯಿ ಇತ್ಯಾದಿಗಳನ್ನು ತೆಗೆದುಕೊಂಡು ಹೋಗುವುದುಂಟು. ಇದು ಬಡರೈತರ ದಿನನಿತ್ಯದ ಆಹಾರ. ಬುತ್ತಿ ಬರುವ ಸಮಯವನ್ನು 'ಉಂಬೋಹೊತ್ತು' 'ದೊಡ್ಡುಂಬೋಹೊತ್ತು' ಎಂದು ಕರೆಯುವುದುಂಟು. ಕೆಲಸ ಮಾಡುವವರಿಗೆ ಮನೆಯಿಂದ ಊಟ ತರುವ ಪದ್ಧತಿ ಈಗಲೂ ಇದೆ. ಇದಕ್ಕೆ ಮರದ ಗೂಡೆ ಹಾಗೂ ಕ್ಯಾರಿಯರ್‌ಗಳನ್ನು ಬಳಸುತ್ತಾರೆ.

ಅರಸನಾತಂಗೆ ಜಯಾವತಿ ಮಹಾದೇವಿ ಮೊದಲಾಗಿ ಮೂಸಾಸಿರರಸಿಯರ್ಕಳ್

(ವಡ್ಡಾ. ಪು.೧೬೨)

ಚಿಲಾತ ಪುತ್ರನ ಕತೆಯಲ್ಲಿ ಬರುವ ಸನ್ನಿವೇಶ. ರಾಜಗೃಹವೆಂಬ ಪಟ್ಟಣದ ಅರಸನಿಗೆ ಜಯವತಿ, ಮಹಾದೇವಿಯೇ ಮೊದಲಾದ ಮೂರುಸಾವಿರ ರಾಣಿಯರಿದ್ದರು. ಯಾವುದೇ ಸಂಕೋಚವಿಲ್ಲದೆ ಹಲವು ಹೆಂಡತಿಯರ ಸಂಪರ್ಕ ಬೆಳೆಸುತ್ತಿದ್ದರು. ಬಹುಪತ್ನಿತ್ವ ಪದ್ಧತಿಯನ್ನು ಒಪ್ಪಿಕೊಂಡಿದ್ದ ಸಮಾಜ ಅದಾಗಿತ್ತು. ರಾಜರೆನಿಸಿದವರಿಗೆ ಸಾವಿರಗಟ್ಟಲೆ ರಾಣಿಯರಿದ್ದರೆಂದು ಕವಿಗಳು ವರ್ಣಿಸಿರುವುದುಂಟು. ಹೆಚ್ಚಿನ ಹೆಣ್ಣುಗಳನ್ನು ಕಟ್ಟಿಕೊಳ್ಳುವುದು ಪ್ರತಿಷ್ಠೆಯ ವಿಷಯವಾಗಿತ್ತು. ರಾಣಿಯರನ್ನು ಒಳಗೊಂಡ ಅಂತಃಪುರವಂತೂ ವಿಶೇಷ ಆಕರ್ಷಣೆಯ ಕೇಂದ್ರವಾಗಿತ್ತು. ಹೆಚ್ಚು ಜನರಿರುವಾಗ ಪರಸ್ಪರ ದ್ವೇಷ ಅಸೂಯೆಗಳು ಕಾಣಿಸಿಕೊಳ್ಳುತ್ತಿದ್ದುದು ಸಹಜ. ಹಾಗಾಗಿ ಸವತಿ ಮತ್ಸರದ ವಿವರಗಳೂ ಇಲ್ಲಿ (೫೯.೭೦) ದೊರಕುತ್ತವೆ. ಇದೇ

ಸಂದರ್ಭದಲ್ಲಿ ಕೃಷ್ಣನಿಗೆ ೧೬ ಸಾವಿರ,ಭರತೇಶನಿಗೆ ೯೬ ಸಾವಿರ ಪತ್ನಿಯರಿದ್ದರು ಎಂಬ ಮಾತನ್ನು ನೆನೆಯಬಹುದು. ಆದರೆ ಈ ಅಂತಃಪುರ ಸ್ತ್ರೀಯರ ಸ್ಥಿತಿಗತಿಗಳ ಬಗ್ಗೆ ವಡ್ಡಾರಾಧನೆಯಲ್ಲಿ ಹೇಳಿರುವ ಹಾಗೆ ವಸ್ತು ಚಿತ್ರಗಳು ಎಲ್ಲೂ ಕಂಡುಬರುವುದಿಲ್ಲ. ಉದಾಹರಣೆಗೆ ವೃಷಭದೇವನ ಕಥೆಯ ರಾಜನೊಬ್ಬನಿಗೆ ೫೦೦ ಜನ ಹೆಂಡತಿಯರಿದ್ದು ಅವರಲ್ಲಿ ಕೆಲವರು ತಮ್ಮ 'ಪುರಷನ ಸೂಳು ಪಾಳೆಯವನ್ನೇ ಕಾಣದ ನಮಗೆ ಎಲ್ಲಿಯ ಮಕ್ಕಳು' ಎಂದು ನಿಟ್ಟುಸಿರು ಬಿಡುವ ಪ್ರಸಂಗ ಉಲ್ಲೇಖಿತವಾಗಿದೆ.

ಮತ್ತಿತ್ತಾ ನಾಡೊಳ್ ಸಾರ್ಥಾಧಿಪತಿ ನಂದಿಮಿತ್ರನೆಂಬೊಂಸೆಟ್ಟಿ ಸಾರ್ಥಂ ಬೆರಸು ಪರದಿಂಗೆ ಪೋಗುತ್ತಿರ್ದಾತ ನೆಡೆಯೊಳೊಂದೂರೊಳ್ ಬಿಟ್ಟಿರ್ದನ್

(ವಡ್ಡಾ. ಪು, ೧೬೩)

ಚಿಲಾತ ಪುತ್ರನ ಕತೆಯಲ್ಲಿ ಬರುವ ಸನ್ನಿವೇಶ. ನಂದಿಮಿತ್ರನೆಂಬ ಸೆಟ್ಟಿ ಸಾಕಷ್ಟು ಹಣವನ್ನು ತೆಗೆದುಕೊಂಡು ವ್ಯಾಪಾರಕ್ಕೆ ಹೋಗುತ್ತಿದ್ದ. ಮಧ್ಯೆ ಒಂದು ಊರಲ್ಲಿ ನೆಲೆಸಿದ್ದನು. ವ್ಯಾಪಾರಸ್ತರು ಅಲ್ಲಲ್ಲಿ ತಂಗಿ ಹೋಗುತ್ತಿದ್ದುದುಂಟು. ಅನುಕೂಲವಿರುವ ಕಡೆಗಳಲ್ಲಿ ಬಿಡಾರಗಳನ್ನು ಹೂಡಿ ನೆಲೆಸುತ್ತಿದ್ದರು. ಒಂದು ಕಡೆಯಿಂದ ನಿರ್ದಿಷ್ಟ ಪ್ರದೇಶಕ್ಕೆ ಗುಂಪುಗುಂಪಾಗಿ ಪ್ರಯಾಣ ಮಾಡುತ್ತಿದ್ದ ವ್ಯಾಪಾರಸ್ತರಲ್ಲಿ ಗುಂಪಿಗೆ ಪ್ರಮುಖ ಯಜಮಾನನೊಬ್ಬ ಇರುತ್ತಿದ್ದ, ಈ ಯಜಮಾನನ್ನೆ 'ಸಾರ್ಥಾಧಿಪತಿ' ಎಂದು ಕರೆಯುತಿದ್ದರು. ನಾಡಿನ ಪ್ರಮುಖ ಅಧಿಕಾರಿಗಳಲ್ಲಿ ಈತನೂ ಒಬ್ಬನಾಗಿದ್ದನೆಂದು ಹೇಳುವುದುಂಟು. ಆಡಳಿತ ನಡೆಸುವುದರಲ್ಲಿಯೂ ಬಿಲ್ಲುವಿದ್ಯೆಯಲ್ಲಿಯೂ ಈತ ಪಳಗಿದವನಾಗಿದ್ದನೆಂದೂ ಮಾಹಿತಿ ದೊರಕುತ್ತದೆ. ಬಂಡಿಗಳಲ್ಲಿ ಧವಸಧಾನ್ಯಗಳನ್ನು ತುಂಬಿಕೊಂಡು ಪಟ್ಟಣಕ್ಕೆ ಮಾರಲೆಂದು ಹೋಗುವಾಗ ಅಡವಿಗಳಲ್ಲಿ ಕಳ್ಳರು ಅಡ್ಡಗಟ್ಟಿ ವರ್ತಕರನ್ನು ಸದೆಬಡಿದು ಮಾರಾಟದ ಸರಕುಗಳನ್ನು ಲಪಟಾಯಿಸುತ್ತಿದ್ದರು, ಈ ರೀತಿ ಜೀವನಕ್ಕೆ ಅಪಾಯ ಬಂದೊದಗುತ್ತಿದ್ದುದರಿಂದ ತಂಡದ ನಾಯಕನಿಗೆ ಬಿಲ್ವಿದ್ಯೆಯ ಅಗತ್ಯವಿತ್ತೆಂದು ತೋರುತ್ತದೆ. ಸಮುದ್ರಕಳ್ಳರಿಂದಲೂ ವರ್ತಕರಿಗೆ ಅಪಾಯವಿತ್ತು. ಜೊತೆಗೆ ಸಮುದ್ರದ ಉಬ್ಬರವಿಳಿತಗಳು, ಚಂಡಮಾರುತ ಕ್ರೂರಪ್ರಾಣಿಗಳ ಕಾಟ ಇತ್ಯಾದಿಗಳಿಂದಲೂ ಇವರಿಗೆ ತೊಂದರೆಗಳಾಗುತ್ತಿದ್ದವು. ಸಾರ್ಥಾಧಿಪತಿ ಉಳಿದುಕೊಂಡಿದ್ದ ಊರಿಗೆ ಬಂದು ಋಷಿಗಳೂ ಸಹ ಆಹಾರ ಪಡೆಯುತ್ತಿದ್ದರೆಂಬ ಉಲ್ಲೇಖವಿದೆ.

ಎಮ್ಮ ನುಱಿದಿರ್ಪೊರ್ನಾತನಂ ಪಿಡಿದು ಕಟ್ಟಿಕೊಂಡು ಬರ್ಕುಂ.......

(ವಡ್ಡಾ. ೧೬೫)

ಚಿಲಾತಪುತ್ರನ ಕಥೆಯಲ್ಲಿ ಒಡ್ಡಾಯನ ಎಂಬ ಅರಸನನ್ನು ಉಪಶ್ರೇಣಿಕನು ಕರೆದು ತನಗೆ ವಿರೋಧಿಯಾಗಿದ್ದ ಉಜ್ಜಯಿನಿಯ ಮಹಾಸಾಮಂತ ಪ್ರದ್ಯೋತನನ್ನು ಸೆರೆಹಿಡಿದು ತರುವಂತೆ ಹೇಳುವ ಸಂದರ್ಭ. ರಾಜನೊಬ್ಬನನ್ನು ಕಡೆಗಣಿಸಿದ ಭೂಪತಿಗಳೂ ಇದ್ದರೆಂಬುದು ಇದರಿಂದ ತಿಳಿದು ಬರುತ್ತದೆ. ಅಂಥ ಸಂದರ್ಭದಲ್ಲಿ ಕೊಬ್ಬಿರುವವರನ್ನು ಸದೆಬಡಿಯುವ ಪ್ರಯತ್ನಗಳು ಜರುಗುತ್ತವೆ. ತನ್ನ ಪ್ರಾಂತ್ಯವನ್ನು ನಾಶಪಡಿಸುತ್ತಿದ್ದವರ ವಿರುದ್ಧವೂ ಸಮರ ಸಾರುತ್ತಿದ್ದ ಪ್ರಸಂಗಗಳಿವೆ. ತನಗೆ ಅಡಿಯಾಳಾಗದೇ ಇದ್ದಾಗ ಸಮರ ಅನಿವಾರ್ಯವಾಗುತ್ತಿತ್ತು. ವಿರೋಧಿಯನ್ನು ಸೋಲಿಸುವಲ್ಲಿ ತಾನು ಅಶಕ್ತನಾದರೆ ಆಗ ಬೇರೆ ಯಾರಾದರೂ ಗೆದ್ದುಕೊಟ್ಟರೆ ಅಂಥವರಿಗೆ ಬೇಡಿದುದನ್ನು ಕೊಡುತ್ತಿದ್ದ. ವಿಷ್ಣುವಿನ ಆಣತಿಯಂತೆ ಗಜಕುಮಾರನು ಅಪರಾಜಿತನನ್ನು ಸೋಲಿಸಿ ಆತನ ಹಿಂಗಟ್ಟು ಮುರಿಕಟ್ಟಿ ಅನೇಕ ಆನೆ, ಕುದುರೆ, ವಸ್ತು, ವಾಹನಗಳೊಂದಿಗೆ ತಂದು ವಿಷ್ಣುವಿಗೆ ಒಪ್ಪಿಸುತ್ತಾನೆ. ತನ್ನ ಇಚ್ಛೆಯನ್ನು ಈಡೇರಿಸಿದ್ದಕ್ಕೆ 'ಏನುಬೇಕೋ ಕೇಳಿಕೋ' ಎನ್ನುತ್ತಾನೆ. ಅದಕ್ಕೆ ಗಜಕುಮಾರ "ನಿಮ್ಮ ಅಂತಃಪುರವನ್ನು ಬಿಟ್ಟು ಈ ಪಟ್ಟಣದಲ್ಲಿ ನನಗೆ ಇಷ್ಟಬಂದ ಸ್ತ್ರೀಯರನ್ನು ಆರಿಸಿಕೊಂಡು ನನ್ನ ಆಸೆ ಪೂರೈಸುವಂತೆ ಬದುಕುತ್ತೇನೆ." ಎಂದು ಕೇಳಿಕೊಳ್ಳುತ್ತಾನೆ. ಅರಸ ಅದಕ್ಕೆ ಒಪ್ಪುತ್ತಾನೆ. ಕಂಡ ಕಂಡ ಹೆಣ್ಣುಗಳನ್ನು ಬಯಸುತ್ತ ಸಮಾಜದಲ್ಲಿ ಹೊಲಸು ಮಾಡುತ್ತಿರುವಾಗ ಯಾರಿಗೆ ದೂರು ಕೊಡಬೇಕೆಂಬುದರ ಬಗ್ಗೆ ಪ್ರಜೆಗಳಲ್ಲಿಯೇ ಅನುಮಾನ ಅಸಹಾಯಕತೆ ಮೂಡಿಬಿಡುತ್ತದೆ. ಗಜಕುಮಾರ ಕಥೆಯಲ್ಲಿ ಬರುವ ಪಂಗುಳ ಈ ಮಾತಿಗೆ ಉದಾರಹಣೆಯಾಗಿದ್ದಾನೆ.

ಮಹಾರಾಜಂಗೆ ಪುಯ್ಯಲಿಟ್ಟೊಡಾತನುಮಾ ಪುಯ್ಯಲಂ ಕೇಳ್ದು

(ವಡ್ಡಾ. ಪು ೧೬೭)

ಚಿಲಾತಪುತ್ರನ ಕಥೆಯಲ್ಲಿ ಬರುವ ಪ್ರಸಂಗ , ರುದ್ರಮಿತ್ರನು ತನ್ನ ಮಗಳು ಸುಭದ್ರೆಯನ್ನು ಭಟ್ಟಿಮಿತ್ರನಿಗೆ ಕೊಡದೆ ಬೇರೆಯವರಿಗೆ ಮದುವೆ ಮಾಡಿಕೊಡಲು ಮುನ್ನುಗ್ಗಿದ್ದನ್ನು ಕಂಡು ಭಟ್ಟಿಮಿತ್ರ ಅರಸ ಚಿಲಾತಪುತ್ರನಿಗೆ "ಮಗಳನ್ನು ತನಗೆ ಕೊಡುತ್ತೇನೆಂದು ಹೇಳಿ ಬೇರೆಯವರಿಗೆ

ಮದುವೆ ಮಾಡಿ ಕೊಡುತ್ತಿದ್ದಾನೆಂದು"ತಮಗೆ ಅನ್ಯಾಯವಾದಾಗ ತೊಂದರೆಗಳುಂಟಾದಾಗ ಜನತೆ ಪ್ರಭುಗಳಿಗೆ ದೂರು ಕೊಡುತ್ತಿದ್ದರೆಂಬುದು ಇದರಿಂದ ತಿಳಿಯುತ್ತದೆ. ಪ್ರಭುವು ಸಹ ಅಹವಾಲನ್ನು ಸರಿಯಾಗಿ ಖಚಿತಪಡಿಸಿಕೊಂಡು ತೀರ್ಪುನೀಡುತ್ತಿದ್ದ (೧೨೪) ಸುಳ್ಳು ದೂರುಗಳನ್ನು ಕಡೆಗಣಿಸುತ್ತಿದ್ದ "ಖುಷಿಯರ್ ಶ್ರಾವಕರ್ಗೆ ಕಳ್ಳದಿರಿಂ ಪೆಱರ ವಸ್ತುವಂ ಕೊಳ್ಳದಿರಿಮೆಂದು ಬ್ರತಂಗಳ ಕುಡುವರ್ ತಾಮೆ ಕಳ್ವರ್ ಆರಾನುಮವರ್ಗೆ ಮುಳಿವರಿದಂ ಮಾಡಿದೆರೆಂದದುವಂ ಕಡೆಗಣಿಸಿ ಕೆಮ್ಮಗಿರ್ದಂ(೧೭೭) ಯಾರೇ ಆಗಲಿ ಕೆಟ್ಟದ್ದನ್ನು ಮಾಡಿದರೆ ಶಿಕ್ಷೆಯನ್ನು ಅನುಭವಿಸಬೇಕಾಗಿತ್ತು, ಅಪರಾಧಕ್ಕೆ ತಕ್ಕ ಶಿಕ್ಷೆಯನ್ನು ವಿಧಿಸಲಾಗುತ್ತಿತ್ತು. ಮರಣದಂಡನೆ, ಕಾದ ಕಬ್ಬಿಣದ ಪ್ರತಿಮೆಗಳನ್ನು ತಬ್ಬಿಕೊಳ್ಳುವುದು, ಕೊಲ್ಲುವುದು, ಶೂಲಕ್ಕೇರಿಸುವುದು ಇತ್ಯಾದಿ. ಒಳ್ಳೆಯವರನ್ನು ರಕ್ಷಿಸುವುದು ಕೆಟ್ಟವರನ್ನು ಶಿಕ್ಷಿಸುತ್ತಿದ್ದ (೬೦) ಗಡೀಪಾರು ಮಾಡಲಾಗುತ್ತಿತ್ತು (೧೬೬) ನಿಷ್ಪಕ್ಷಪಾತ ನ್ಯಾಯ ನಿರ್ಣಯವಾಗಬೇಕೆಂಬ ಬಯಕೆಯನ್ನು ಜನಪದರು ಅಪೇಕ್ಷಿಸುತ್ತಿದ್ದರೆಂಬುದಕ್ಕೆ ವಡ್ಡಾರಾಧನೆಯ ಕಥೆಗಳು ನಿದರ್ಶನಗಳನ್ನು ಒದಗಿಸುತ್ತವೆ.

ಕಾಪಿ ಎಂಬ ಮಂತ್ರಿ ಸುಂದರಿ ಮಹಾದೇವಿಗೆ ಕಣ್ಬೇಟಂಗೊಂಡು ಅರಸನಂ ಕೊಂದರಸಿಯೊಳ್ ಬಾೞ್ವೆನ್

(ವಡ್ಡಾ. ಪು. ೧೮೦)

ಚಾಣಕ್ಯ ರಿಸಿಯ ಕಥೆಯಲ್ಲಿ ಬರುವ ಪ್ರಸಂಗ.ಕಾಪಿ ಎಂಬ ಮಂತ್ರಿ ಅರಸನನ್ನು ಕೊಂದು ಮಹಾರಾಣಿಯೊಂದಿಗೆ ಬದುಕು ನಡೆಸುತ್ತೇನೆಂದು ಭಾವಿಸಿ ಅದೇ ರೀತಿ ಮಾಡುತ್ತಾನೆ. ರಾಜನಲ್ಲಿ ವಿಶ್ವಾಸ ಮೂಡಿಸುವ ಮಂತ್ರಿಗಳೂ ವೊಡ್ಡಾರಾಧನೆಯ ಕತೆಗಳಲ್ಲಿ ಕಾಣಸಿಕೊಳ್ಳುತ್ತಾರೆ. ಕಾಪಿ ಮಾಡಿದ ಕ್ರೌರ್ಯ ಬಯಲಾಗುತ್ತದೆ. ಅರಸನ ಮಗ ಮಂತ್ರಿ ಸಹಿತ ಸಂಬಂಧಿಕರನ್ನೆಲ್ಲಾ ನೆಲಮಾಳಿಗೆಯಲ್ಲಿ ಕೂಡಿಹಾಕಿಸುತ್ತಾನೆ.

ಮಂತ್ರಿ ಪದವಿ ವಂಶಪಾರಂಪರ್ಯವಾಗಿ ಬರುತ್ತಿತ್ತು. ಒಂದೊಂದು ಸಲ ಈ ಕ್ರಮ ತಪ್ಪಿ ಹುದ್ದೆ ಬೇರಯವರ ಪಾಲಾಗಿ ಬಿಡುತ್ತಿತ್ತು. ಮಂತ್ರಿಗಳ ಸಂಖ್ಯೆಗೆ ಮಿತಿ ಇರುತ್ತಿರಲಿಲ್ಲ. ಮಂತ್ರಿಗಳ ಆಸೆ ಆಕಾಂಕ್ಷೆಗಳನ್ನು ಈಡೇರಿಸಲು ಸೇನಾಪತಿಗಳು, ಪರಿವಾರ, ಪೆರ್ಗಡೆಗಳು, ಸಾಮಂತರು, ಮಹಾಸಾಮಂತರು, ಮೊದಲಾದವರು ಇರುತ್ತಿದ್ದರೆಂದು ವಡ್ಡಾರಾಧನೆಕಾರ ದಾಖಲಿಸಿದ್ದಾನೆ.

ಬಂಧುಸತ್ಕಾರದಕ್ಷರುಂಟೆ

(ರಾ. ಕಥಾಸಾರ, ಪುಟ, ೨೩೬)

ಬಂಧು ಸತ್ಕಾರವನ್ನು ದೇವಚಂದ್ರ ಹೇಳುವ ಪರಿ ಸೊಗಸಾಗಿದೆ. ಎಡಶೃತಿ ಮತ್ತು ಬಂಧಕಿ ಇವರಿಬ್ಬರು ಜೊತೆಯಲ್ಲಿದ್ದು ಬಂಧುಗಳನ್ನು ಬರಿ ಬಾಯಿ ಮಾತಿನಲ್ಲೆ ಉಪಚರಿಸಿ ಕಳುಹಿಸುತ್ತಿದ್ದರು. ಅಲ್ಲದೆ ಬಂದವರಲ್ಲಿದ್ದ ವಸ್ತುವನ್ನು ಪಡೆದು ಕೊಳ್ಳುತ್ತಿದ್ದರು. ಕುಡಿಯಲು ನೀರೂ ಕೊಡದಂಥವರು. ಇಂಥವರ ಮನೆಗೆ ಹಶವಾದಿ ಯೊಬ್ಬ ಬಂದ. ಹೊರಕಳುಹಿಸಲು ಇವರಿಗೆ ಸಾಧ್ಯವಾಗಲಿಲ್ಲ. ಅತಿಥಿ ಊಟಕ್ಕೆ ಒತ್ತಾಯಿಸಿದ. ಎಡಶೃತಿ ಅಡಿಗೆ ಮಾಡಲು ಹೆಂಡತಿಗೆ ಹೇಳಿದ. ಮನೆಯಲ್ಲಿ ಮಡಿಕೆ ಕುಡಿಕೆ ಇಲ್ಲ ಏನು ಮಾಡಲಿ ಎಂದಳು. ಆತ ಕೋಪದಿಂದ 'ನೀನಟ್ಟು ಇಕ್ಕದಿರುವೆ'ಇಂದು ಎಂದೂ ಬಾರದ ನಂಟನು ಬಂದು ಹೋಗದಿರುವನು ಈತನು ನನ್ನ ಶಿಶ್ನವನ್ನುಂಡು ಹೋಗುವನೇ ? ಎಂದು ಗದರಿಸಿದ್ದಲ್ಲದೇ ಮನೆಯಲ್ಲಿ ಅನುಕೂಲವಿಲ್ಲ ಮುಂದಕ್ಕೆ ನಡೆಯಿರಿ ಎಂದನು. ಅತಿಥಿ ಹೋಗದಿರುವುದನ್ನು ಕಂಡ ಎಡಶೃತಿ ಎರಡು ರೊಟ್ಟಿಯನ್ನಾದರೂ ತಟ್ಟಿ ಹಾಕು ಎಂದು ಹೆಂಡತಿಗೆ ಹೇಳಿದ. 'ಸೌದೆಯಿಲ್ಲ ನನ್ನ ಕಾಲನ್ನಿಕ್ಕಿ ಬೇಯಿಸಲೇ' ಎಂದಳು. ಆಕೆ ಮನೆಯ ಗಳುವನ್ನು ಕಿತ್ತು ಕೊಡಲು ಅತಿಥಿ ಹೋದಾಗ ಎಡಶೃತಿ 'ಸೌದೆಯಿದೆ' ಎಂದು ಹೇಳಿ ಹೆಂಡತಿಯನ್ನು ಬಡಿಯುವ ನಟನೆ ಮಾಡಿದ. ಆಕೆ ಓಡಿಹೋದಳು, ಆಕೆಯನ್ನು ನೋಡಿಕೊಂಡು ಬರಲು ಗಂಡ ಹೊರ ಹೋಗಲು ಅಲ್ಲಿದ್ದ ಅತಿಥಿ ಮನೆಯ ಅಟ್ಟವನ್ನೇರಿ ಕುಳಿತುಕೊಂಡ. ಅತಿಥಿ ಹೊರಹೋದನೆಂದು ತಿಳಿದು ಎಡಶೃತಿ ಮನೆಗೆ ಬೀಗ ಹಾಕಿ ತಾನೂ ಹೊರಹೋದ.

ಬಂದವನು ಸದ್ಯ ತೊಲಗಿದನೆಂದು ದಂಪತಿಗಳಿಬ್ಬರೂ ಮನೆಯನ್ನು ಸೇರಿ ಎರಡು ಎಲೆಯನ್ನಾಕಿಕೊಂಡು ಊಟ ಮಾಡುತ್ತಿರುವಾಗ 'ನಾವು ಈದಿನ ನಂಟನಿಗೆ ಮಾಡಿದ ಕೆಲಸ ಹೇಗಿತ್ತು' ಎಂದು ಗಂಡ ಹೆಂಡತಿಯನ್ನು ಕೇಳಿದ 'ನಾ ಮಾಡಿದ ಕೆಲಸ ಹೇಗಿತ್ತುನಿಮಗೆ ಗೊತ್ತಲ್ಲಾ' ಎಂದಳು. ಅದೇ ಸಮಯಕ್ಕೆ ಅಟ್ಟದಲ್ಲಿದ್ದ ಅತಿಥಿ ಕೆಳಗಿಳಿದು 'ನಾನು ಮಾಡಿದ ಕೆಲಸ ಹ್ಯಾಗೆ'ಎಂದಾಗ ನಾಚಿಕೊಂಡ ದಂಪತಿಗಳು ಆತನಿಗೆ ಊಟಕ್ಕಿಟ್ಟು ಕಳುಹಿಸಿದರು.

ಅಂತಪ್ಪ ದುರ್ಬುದ್ಧಿವಂತನೆಂದು......

(ರಾ,ಕಥಾಸಾರ, ಪು. ೨೩೮)

ಜಗತ್ತಿನಲ್ಲಿ ಎಂತೆಂಥ ಬುದ್ಧಿಗೇಡಿಗಳಿರುತ್ತಾರೆಂಬುದಕ್ಕೆ ದೇವಚಂದ್ರ ನೀಡುವ ದೃಷ್ಟಾಂತವಿದು. ಗೌಡನಿಗೆ ಒಬ್ಬ ದಡ್ಡ ಮಗನಿದ್ದ. ಈ ಮಗ ತನ್ನ ಹೆಂಡತಿಯನ್ನು ತವರಿನಿಂದ ಕರೆತರುವಾಗ ಮಳೆಯಲ್ಲಿ ತೊಯ್ದರು. ಆಕೆಯ ಹಣೆಯ ಕುಂಕುಮವೆಲ್ಲ ಹರಿದುಹೋಯಿತು. ಇದನ್ನು ನೋಡಿ ಎಲ್ಲೋ ತನ್ನ ಹೆಂಡತಿಗೆ ದೊಡ್ಡ ಗಾಯವಾಗಿ ಹುಣ್ಣಾಗಿದೆ ಈಕೆ ಉಳಿಯುವುದಿಲ್ಲವೆಂದು ಭಾವಿಸಿದ ಗಂಡ ಆಕೆಯನ್ನುಕೊಟ್ಟು ಒಂದು ಎತ್ತನ್ನು ಕೊಂಡು ಬಂದ. ದಾರಿಯಲ್ಲಿ ಗಂಜಲ ಹೊಯ್ದ ಎತ್ತನ್ನು ಕಂಡು ಇದರ ಹೊಟ್ಟೆ ತೂತಾಗಿದೆ ಎಂದು ಭಾವಿಸಿ ಅದರ ಬದಲಿಗೆ ಟಗರನ್ನು ತಂದ. ಅದು ತನ್ನನ್ನು ಗುದ್ದಿದ್ದರಿಂದ ಅದನ್ನು ಕೊಟ್ಟು ಹಲಸಿನಹಣ್ಣನ್ನು ತಲೆಯಮೇಲಿಟ್ಟುಕೊಂಡು ಬಂದ. ಅದರ ಅಂಟು ಕೂದಲಿಗೆ ಅಂಟಿಕೊಂಡಿದ್ದರಿಂದ ಕೆಲಸಿಗನ ಹತ್ತಿರ ಹೋಗಿ ಜುಟ್ಟನ್ನು ಬೋಳಿಸಿಕೊಂಡು ಹಣ್ಣನ್ನು ಕೊಟ್ಟು ಬೋಳುತಲೆಯವನಾಗಿ ಮನೆಗೆ ಬಂದ. ಬುದ್ಧಿಗೇಡಿಗಳಿಗೆ ಇದೊಂದು ಮಾದರಿ.

ಆಭರಣದ ಹೆಮ್ಮೆಯೆಂಬುದು

(ರಾ, ಕಥಾಸಾರ, ಪುಟ ೨೩೮)

ಆಭರಣಗಳನ್ನು ಕುರಿತ ಹೆಮ್ಮೆಯ ಬಗೆಗೆ ದೇವಚಂದ್ರ ಹೇಳುವ ಕತೆ ಇದು. ಬಡ ಬ್ರಾಹ್ಮಣನೊಬ್ಬ ಭಿಕ್ಷೆ ಎತ್ತುತ್ತಿದ್ದ. ಆತನಿಗೆ ಮದುವೆ ಬಟ್ಟೆಗಳೊಂದಿಗೆ ಎರಡು ಹಣ ಬಂದಿತ್ತು. ಸಂತಸಗೊಂಡ ಆತ ಮನೆಯಲ್ಲಿದ್ದ ಮಡದಿಮಕ್ಕಳಿಗೆಲ್ಲಾ ತೋರಿಸಿ ಇದಕ್ಕೇನು ಬೇಕು ಎಂದು ಕೇಳಿದ. ಹೆಂಡತಿ ಮೂಗುತಿಯನ್ನು ಮಗಳು ತಾಲಿಯನ್ನು ಗವುಡಿಯು ಹಲ್ಲಿಗೆ ಕಪ್ಪನ್ನು ಬೇಡಿದರು. ಆತ ಒಂದು ಗುರವನ್ನು ಸುಲಭವಾಗಿ ಮಾಡಿಸಿಕೊಂಡು ಅವರವರು ಕೇಳಿದ ಹಾಗೆ ಮಾಡಿಸಿಕೊಟ್ಟ. ಮಗಳು ತಾನು ಹಾಕಿರುವ ತಾಲಿ ನೋಡಲೆಂದು ತೋರಿಸುತ್ತಿದ್ದಳು. ಆತನೂ ಸಹ ಕಿರುಬೆರಳಿನ ಉಂಗುರ ತೋರಿಸಲು ಸದಾ ಬೆರಳನ್ನು ಅಲ್ಲಾಡಿಸುತ್ತಿದ್ದ, ಆತನ ಹೆಂಡತಿಯು ಮೂಗುತಿಯನ್ನು ತೋರಿಸಲೆಂದು ಮುಖವನ್ನು ಅತ್ತಿತ್ತ ಒಲಿಯುತ್ತಿದ್ದಳು. ಗವುಡಿ ಹಲ್ಲು ಕಪ್ಪನ್ನು ತೋರಿಸಲು ಹಲ್ಲುಕಿರಿದು ಸನ್ನೆ ಮಾಡುತ್ತಿದ್ದಳು. ಇವೆಲ್ಲವೂ ಆಭರಣಗಳನ್ನು ಹಾಕಿದ್ದೇವೆಂದು ಹೆಮ್ಮೆಪಡುವವರ ಸ್ವಾಭಾವದ ಉದಾಹರಣೆಗಳು.

ಸರ್ವಜಾತಿಯವರ್ ಬಂದು ತಂತಮ್ಮ ಕುಲಶ್ರೇಷ್ಠ ಪುರಾಣಮಂ ಪೇಳ್ದರು....

(ರಾ. ಕಥಾಸಾರ. ಪು. ೨೯೨)

ಚಿಕ್ಕದೇವರಾಜರಸನು ಎಲ್ಲ ಜಾತಿಗಳವರನ್ನು ಬರಮಾಡಿಕೊಂಡು ಜಾತಿಯಲ್ಲಿ ಯಾವುದು ಶ್ರೇಷ್ಠ ಎಂಬುದನ್ನು ತಿಳಿಯಬೇಕೆಂದು ಆಸೆಪಟ್ಟಾಗ ಎಲ್ಲ ಕುಲದವರೂ ತಮ್ಮ ತಮ್ಮ ಜಾತಿಯೇ ಸರ್ವ ಶ್ರೇಷ್ಠವೆಂದು ಸಾದರಪಡಿಸುವ ಸಂದರ್ಭವಿದು. ಪಾಂಚಾಳದವನು ತನ್ನ ಜಾತಿ ಮೂಲದ ಬಗ್ಗೆ ಕೊಟ್ಟ ವಿವರ ಹೀಗಿದೆ : ಈ ಜಗತ್ತಿಗೇ ನಾನು ಮೊದಲಿಗ, ಬ್ರಹ್ಮಾಂಡ ಸೃಷ್ಟಿಸಿ ಲೋಕ ನಿರ್ಮಾಣಕ್ಕೆ ಕಾರಣನಾದನು. ಸಕಲ ಪದಾರ್ಥಗಳನ್ನು ತುಂಬಿಡಲು ಅವರವರ ಕಾರಣಗಳಿಗೆ ನೀನಿಲ್ಲದಾಗದೆಂದು ದೇವಾದಿ ತ್ರೈಮೂರ್ತಿಗಳು ವಿಶ್ವಬ್ರಹ್ಮನನ್ನು ಪ್ರಾರ್ಥಿಸಿದರು. ಸ್ಪಂದಿಸಿದ ವಿಶ್ವಬ್ರಹ್ಮನು ತನ್ನ ಅಂಶವಾದ ವಿಶ್ವಕರ್ಮನನ್ನು ಕಳುಹಿಸಿದನು. ಆತ ಬಂದವನೇ ಸಕಲ ಉಪಕರಣಗಳನ್ನು ಸೃಷ್ಟಿಸಿ ಬ್ರಹ್ಮನಿಗೆ ದಂಡುಕೋಲು, ಕಮಂಡಲ, ಅಕ್ಷಮೂರ್ತಿಗಳನ್ನು ಮಾಡಿಕೊಟ್ಟನು. ವಿಷ್ಣುವಿಗೆ ಶಂಖ, ಚಕ್ರ, ಗದೆ, ಅಸಿ, ಮುಂತಾದುವನ್ನು ಶಿವನಿಗೆ ಕಟ್ವಾಂಗ ತ್ರಿಶೂಲ ಪಿನಾಕಾದಿ ಇತ್ಯಾದಿಗಳನ್ನು ನೀಡಿ ಅವರವರ ಚಿಹ್ನೆಗಳನ್ನು ಮಾಡಿದನು. ಅಲ್ಲದೆ ದೇವ ದಾನವರ ಕಾರ್ಯಕಾರಣಗಳನ್ನು ನಿರ್ಮಿಸಿಕೊಟ್ಟನು. ಈ ವಿಶ್ವಕರ್ಮನ ಸಂತತಿಯಲ್ಲಿ ಚರಾಚರ ಜೀವರಾಶಿಗಳು ಜನನವಾದವು."ವಿಶ್ವಕರ್ಮ ಕೃತಂ ಲೋಕಂ ತ್ರಿಮೂರ್ತೀನ್ ದೇವದಾನವಾನ್, ಸರ್ವೋಪಕರಣಂ ಚೈವ ವಿಶ್ವಕರ್ಮ ವಿನಾ ನಹೀ" ಎಂದು ಹೇಳಿ ಹೊರಟನು.

ನಂತರ ಕುಂಭಕಾರನು ಹೇಳಿದ್ದು ಹೀಗೆ : ಲೋಕಕ್ಕೆಲ್ಲಾ ನಾನೇ ಹಿರಿಯ ನಂತರ ಪಂಚಭೂತಗಳು ಹುಟ್ಟಿದವೆಂದು ಹೇಳುವ ಈತ ಆಕಾಶ ಹುಟ್ಟಬೇಕಾದರೆ ಕುಂಬಾರನು ಮಣ್ಣನ್ನು ನೀರಲ್ಲಿ ಕಲಸಿ ಸಕಲ ಪ್ರಪಂಚವನ್ನು, ಸ್ವರ್ಗ, ಮರ್ತ್ಯ ಪಾತಾಳಗಳನ್ನು ಮಾಡಿದನೆಂದ. 'ನಡುವೆ ಸುತ್ತಿದ್ದ ಛಾಯೆಯೆಂಬ ಯಮನರಸಿಯು ಅಗ್ನಿಯನ್ನು ನುಂಗಿರಲು ಸಕಲವೂ ಜಲಸ್ಪರ್ಶದಿಂದ ನಾಶವಾಗುತ್ತಿದ್ದಿತು. ಆಗ ಈಶ್ವರನ ಉರಿಗಣ್ಣನ್ನು ಕೀಳಲು ಆತನು ಕೋಪಿಸಿ ನೀನು ಸರ್ವಸೃಷ್ಟಿಯುಳ್ಳವನಾಗಿಯೂ ಜಾತಿಯೋಗ್ಯನಾಗಬೇಡವೆಂದು ಶಾಪವಿತ್ತನು. ಆತನು ಯಜ್ಞೇಶ್ವರನನ್ನು ಪ್ರಾರ್ಥಿಸಲು ಆತನು ದಕ್ಷಬ್ರಹ್ಮನನ್ನು ಕೊಲ್ಲಬಯಸಿದನು.ಆ ಸಮಯದಲ್ಲಿ ಶಿವನು ತನ್ನ ಶಕ್ತಿಯಿಂದ ಪಾರ್ವತಿಯ ವರದಿಂದ ಮತ್ತು ವಿಷ್ಣುವಿನ ಚಕ್ರದಿಂದ ದಕ್ಷಬ್ರಹ್ಮನನ್ನು ಅಪಹರಿಸಬಂದನು. ಕುಂಭಕಾರನು ಬ್ರಹ್ಮನನ್ನು ಮರೆಹೋಗಲು ಆತನು ಮೃತ್ತಿಕೆಯಿಂದ ಚತುರಂಗ ಬಲವನ್ನು ನಿರ್ಮಿಸಿ ಪಾರ್ವತಿಯ ವರವನ್ನು ವಿಷ್ಣು ಚಕ್ರವನ್ನು ಗೆದ್ದು ಯಜ್ಞವನ್ನು ಮಾಡಿದನು. ವೀರಭದ್ರನು ಬಂದು ಯಜ್ಞವನ್ನು ತಡೆಯಲು ಆತನನ್ನು ಗೆದ್ದು ಬ್ರಹ್ಮವಶನಾದುದರಿಂದ

ಯಜ್ಞಸೂತ್ರವನ್ನು ಭಾಂಡದಲ್ಲಿ ಕಲ್ಪಿಸಲು ಕುಂಭ ಹಾರುವನೆಂದು ಹೆಸರಾಯಿತು. ಕಡೆಯಲ್ಲಿ ಶಾಲಿವಾಹನನು ರಾಜ್ಯವಾಳಿದನು. ಆತನ ಶಕೆಯೇ ನಡೆಯುವುದಲ್ಲದೆ ಮತ್ತೊಂದಿಲ್ಲವು. ಅದರಿಂದ ಕುಂಭಕಾರನೆ ಶ್ರೇಷ್ಠನೆಂದನು." (ದೇವಚಂದ್ರನ ರಾಜಾವಳೀ ಕಥಾಸಾರ ಹೊಸಗನ್ನಡ ಗದ್ಯಾನುವಾದ, ಪುಟ ೨೮೯)

ಆಮೇಲೆ ಕಿರಾತನ ಸರದಿ ಬಂತು. ಆತನು ಪೂರ್ವದಲ್ಲಿ ಶಿವನಿಗೆ ಆಹಾರವಿಲ್ಲದೆ ಹೊಟ್ಟೆಯುರಿಯಿಂದ ಆಯಾಸಗೊಂಡು ತನ್ನ ಕಂಕುಳ ಬೆವರನ್ನು ತೆಗೆದಿಟ್ಟನಂತೆ. ಆಗ ಶೂರನಾದ ಗಂಡಸು ಹುಟ್ಟಿ ಪರಿಜನರನ್ನು ಹೊಂದಿ ಶೂಲಿಯೊಂದಿಗೆ ಸೇರಿಕೊಂಡು ಅರಣ್ಯಪ್ರವೇಶಿಸಿ ಪ್ರಾಣಿ ಪಕ್ಷಿಗಳನ್ನು ಬೇಟೆಯಾಡಲು ತೊಡಗಿದ. ಇದನ್ನು ಗಮನಿಸಿದ ಕೃಷ್ಣ ಪರಿವಾರದೊಂದಿಗೆ ಬಂದು ಮೃಗಪಕ್ಷಿಗಳನ್ನೆಲ್ಲ ಕೊಂದು ಶಿವನಿಗೆ ತಿನ್ನಲು ಇಟ್ಟನು. ಆತಿಥ್ಯ ಕಂಡ ಶಿವ ನೀನಿಕ್ಕಿದಾಗಲೇ ತೃಪ್ತಿಯಾಯಿತು. ಬೇಡರಸನೇ ಎಂದ ಹಾಗಾಗಿ ಆ ಪುರುಷನಿಗೆ ಬೇಡನೆಂಬ ಹೆಸರು ಬಂತು. ಕೃಷ್ಣನು ಆತನಿಗೆ ಮೆಚ್ಚಿ ಅರ್ಧರಾಜ್ಯವನ್ನು ಕೊಟ್ಟು ಆತನೊಂದಿಗೆ ಬೇಟೆಯಾಡುತ್ತಿದ್ದನು. ತುಂಬಾ ಪರಾಕ್ರಮಶಾಲಿಯಾದ ಬ್ರಹ್ಮನನ್ನು ಲೆಕ್ಕಿಸದಾದ. ಆ ವಂಶದಲ್ಲಿ ಹಲವು ಜಾತಿಗಳಾದವು. ಅರ್ಜುನನು ಬೇಟೆಯಾಡಲು ಬಂದಾಗ ಆತನೊಂದಿಗೆ ಯುದ್ಧ ಮಾಡಿ ಎಲ್ಲವನ್ನು ಸುಲಿದುಕೊಂಡರು. ಅಲ್ಲದೆ ಪೂರ್ವದಲ್ಲಿ ಕಿರಾತನ ಮಗಳಾದ ಸತ್ಯವತಿಯು ವ್ಯಾಸನನ್ನು ಹಡೆದಳು. ಆ ವ್ಯಾಸನಿಂದ ಪಾಂಡವರ ವಂಶ ಬೆಳೆಯಿತು. ಅದರಿಂದಾಗಿ ಬೇಡರ ಕುಲವೇ ಶ್ರೇಷ್ಠವೆಂದು ಹೇಳಿದನು.

ಆಮೇಲೆ ಬಂದ ಕುರುಬ ಹೇಳಿದ್ದು ಹೀಗೆ : ಪೂರ್ವದಲ್ಲಿ ತಾನು ಬ್ರಹ್ಮನ ಕೈಯಲ್ಲಿ ಹುಟ್ಟಿ ವೀರ್ಕನೆಂಬ ಹೆಸರು ಹೊಂದಿ ಬ್ರಹ್ಮನೊಂದಿಗೆ ಬೇಟೆಗೆ ಹೋಗಲಾಯಿತು.ವನವನ್ನು ಪ್ರವೇಶಿಸಲು ಕಿರಾತರು ಅಡ್ಡಿಪಡಿಸಿದರು. ಕೊಡಲಿಯನ್ನು ಹಿಡಿದ ಬೀರನು ಮೃಗಪಕ್ಷಿಗಳನ್ನು ಬೇಟೆಯಾಡಲು ಬಿಡಲಿಲ್ಲ. ಪಚ್ಚಂಗಿದಡಿಯಿಂದ ಅಟ್ಟಿತಂದು ಪುರದಲ್ಲಿಟ್ಟು ಸಲಹುತ್ತಿದ್ದನು. ಮರುದಿನ ಜಿಂಕೆಗಳನ್ನು ಹಿಡಿಯಲು ಬೇಟೆಗಾರರು ಬಂದದ್ದನ್ನು ಕಂಡು ಅದಕ್ಕೆ ಅವಕಾಶ ಕೊಡದೆ ಜಿಂಕೆಯ ಚರ್ಮಗಳನ್ನು ಸುಲಿದು ಬ್ರಹ್ಮನಿಗೆ ಕೊಡಲು ಆತ ಕೃಷ್ಣಾಂಜಿರಧರನಾದನು. ಮತ್ತೆ ಮಾಂಸವನ್ನು ಭಕ್ಷಿಸಲು ಪ್ರೀತನಾಗಿ ಯಜ್ಞವೆಂದು ವೇದ ಸೂತ್ರವನ್ನು ನಿರ್ಮಿಸಿ ಆ ಆಡು ಕುರಿಗಳಿಗೆ ಅಜನೆಂದು ತನ್ನ ಹೆಸರಿಟ್ಟನು. ಆತನು ಯಜ್ಞ ಮುಖದಿಂದ ಆಡುಗಳನ್ನು ಮಂತ್ರಪೂರ್ವಕಕೊಂದು ಸೇವಿಸುತ್ತಿದ್ದನು.ಆ ಬೀರನ ವಂಶದಲ್ಲಿ ಅನೇಕ ಜಾತಿಗಳಾದುವು. ಅವರ ಬೇರೇ ದೇವರಿಗೆ ಕಂಬಳಿ ಗದ್ದುಗೆ ಮೊದಲಾದ ಬಿರುದುಗಳಾದುವು. ಆ ಕುರುಬರಲ್ಲಿ ಸಾದುಗುರುಬರು ಚೆಟ್ಟಿಗುರುಬರು ಹಂಡೆಗುರುಬರು ಮೊದಲಾದ ಅನೇಕ ಭೇದಗಳಾದವು. ಅದರಿಂದ ಎಲ್ಲಾ ಕೈವಾಡಕ್ಕು ಕುರುಬಜಾತಿ ಶ್ರೇಷ್ಠ ಎಂದನು. (ಅದೇ ಪು. ೨೯೦)

ತಂತುವಾಯನು ತಮ್ಮ ಮೂಲದ ಬಗ್ಗೆ ಹೇಳಿದ್ದು ಹೀಗೆ : ಪೂರ್ವದಲ್ಲಿ ಶಿವ ಲೋಕ ಸೃಷ್ಟಿ ಮಾಡುವಾಗ ಎಲ್ಲರೂ ಬೆತ್ತಲೆಯಾಗಿದ್ದರು, ಚರ್ಮ ಮತ್ತಿತರ ಹೊದಿಕೆಗಳಿಂದ ತಮ್ಮ ಮಾನ ಕಾಪಾಡಿಕೊಳ್ಳುತ್ತಿದ್ದದ್ದನ್ನು ಕಂಡ ಅಂಬಿಕೆ ಉಪಾವೊಂದನ್ನು ಮಾಡಿದಳು. ಆಕೆಯು ತನ್ನ ಅಂಗುಷ್ಠ ತರ್ಜನಿ ಎಂಬ ಎರಡಂಗುಲ ಸ್ಪರ್ಶದಿಂದ ಕುಮಾರರಿಬ್ಬರು ಹುಟ್ಟಿದರು. ಬ್ರಹ್ಮನಿಂದ ವರವನ್ನು ಪಡೆದ ಅವರು ಮರದ ದಾರದಿಂದ ಬಟ್ಟೆಯನ್ನು ನಿರ್ಮಿಸಿ ಸ್ತ್ರೀಪುರುಷರಿಗೆ ಅವರ ಯೋಗ್ಯತಾನುಸಾರವಾಗಿ ನೀಡಿದರು. ಚೀನಿ ಚೀನಾಂಬರ ದುಕೂಲ ದೇವಾಂಗ ವಸ್ತ್ರಗಳನ್ನು ನಿರ್ಮಿಸಿ ಬರಿ ಮೈಯಲ್ಲಿದ್ದ ದೇವತೆಗಳಿಗೆ ನೀಡಿದರು. ಸಂತಸ ಗೊಂಡ ತ್ರಿಮೂರ್ತಿಗಳು ದೇವಾಂಗದವರೆಂದು ನಾಮಕರಣ ಮಾಡಿದರು. ಈ ಹೆಸರಿನವನು ಮಾನ ಮನ್ನಣೆಯನ್ನು ಪಡೆದದುಲ್ಲದೆ ಆತನ ವಂಶದಲ್ಲಿ ಅನೇಕ ಭೇದಗಳಾದುವು ಎಂದನು.

ಒಕ್ಕಲಿಗನ ವಿವರಣೆ ಹೀಗಿದೆ:ಭೂಮಿ ಹುಟ್ಟಿದ ಏಳುದಿನಗಳಿಗೆ ಮಳೆಯಾಯಿತು. ಅರಣ್ಯದಲ್ಲಿ ಬೆಳೆದಿದ್ದ ಧಾನ್ಯವನ್ನು ವಿಂಗಡಿಸಲು ತಿಳಿಯದೆ ಜೀವರಾಶಿಗಳೆಲ್ಲ ನರಳಿದವು. ಮಾರ್ಗವಾಗಿ ಬಂದ ಬ್ರಹ್ಮ ಅದನ್ನು ವಿಂಗಡಿಸಲು ತಿಳಿಯದೆ ಬಲಕಾಲಿನಿಂದ ತುಳಿದ ಆ ಕಾಲಿನಲ್ಲಿ ಅರುಗಡಿ ಮೆರೆಗೋಲು ಕುಕ್ಕೆಗಳು ಸಹಿತವಾಗಿ ಹುಟ್ಟಿದವು. ಅವುಗಳಿಂದ ಧಾನ್ಯವನ್ನು ಸಂಸ್ಕರಿಸಿ ಅಷ್ಟಸಿದ್ಧಾನ್ನವನ್ನು ಮಾಡಲು ದೇವತೆಗಳೆಲ್ಲ ಅದನ್ನು ತಿಂದು ಸಂತೋಷಪಟ್ಟರು, ಇದರಿಂದ ಶಕ್ತಿವಂತರಾದ ದೇವತೆಗಳು ಸಮುದ್ರಮಥನ ಕಾರ್ಯದಲ್ಲಿ ತೊಡಗಿದರು, ಕಾಡಿನಲ್ಲಿ ಶಿವನಿಗೆ ತನ್ನಿಂದ ಉತ್ತುಬಿತ್ತಿ ಬೆಳೆಯಲು ಸಾಧ್ಯವಾಗದೆ ಆ ಕೆಲಸಕ್ಕೆ ವೃಷಭನನ್ನು ನೇಮಿಸಿದನು. ಅದೇ ರೀತಿ ಒಕ್ಕಲು ಮಾಡಿ ಜೀವರಾಶಿಗಳನ್ನೆಲ್ಲಾ ಸಾಕಿದ ಆತನನ್ನು ದೇವತೆಗಳೆಲ್ಲಾ ಕೊಂಡಾಡಿದರು. ಆ ವಂಶದಲ್ಲೂ ಸಾದ ಗುಡಿಹರೆಡ್ಡಿ ನೊಣಬ ಗಂಗಡಿಗಾರ ಕಂಚುಗ ದಾಸ ತೆಲುಗ ಮೊದಲಾದ ಭೇದಗಳಾದುವು. ಅದರಿಂದ ಒಕ್ಕಲಿಗನೇ ಶ್ರೇಷ್ಠ ಎಂದನು. ತ್ರಿಮೂರ್ತಿಗಳೂ ದೇವತೆಗಳೂ ಮನುಷ್ಯರು ಎಲ್ಲರೂ ಗೊಲ್ಲರೇ. ಗೊಲ್ಲನೇ ಮೊದಲಿಗ. ಭಾಗವತದಲ್ಲಿ ಹೇಳಿರುವ ಗೊಲ್ಲ ಕಥೆಯೇ ಉದಾಹರಣೆ. ಆದ್ದರಿಂದ ಗೊಲ್ಲ ಕುಲವೇ ಶ್ರೇಷ್ಠವೆಂದು ಗೊಲ್ಲ ಅಭಿಪ್ರಾಯಪಟ್ಟ. ಹಾಗೆಯೇ ಗಾಣಿಗ, ಉಪ್ಪಲಿಗ, ಕೆಲಸಿಗ, ಅಗಸ, ವಡ್ಡ, ದೊಂಬ, ಹೊಲೆಯ, ಮಾದಿಗ ಈ ಎಲ್ಲರೂ ತಮ್ಮದೇ ಆದ ಮೂಲಕತೆ ಪುರಾಣಗಳನ್ನು ಹೇಳಿಕೊಂಡು ತಮ್ಮ ಕುಲವೇ ಶ್ರೇಷ್ಠವೆಂದು ವಾದಿಸಿದರು.

ಇದನ್ನೆಲ್ಲಾ ಗಮನಿಸಿ ದೇವರಾಜರಸನು 'ಎಲ್ಲರೂ ತನ್ನ ದೇಶ ಕುಲ ಮೊದಲಾದುವು ಶ್ರೇಷ್ಠ ಎಂಬ ನಂಬಿಕೆಯಿಂದ ಅನೇಕ ದೃಷ್ಟಾಂತಗಳನ್ನು ಒದಗಿಸಿ ಶಾಸ್ತ್ರಗಳನ್ನು ಕಲ್ಪಿಸಿದ್ದಾರೆ. ಅದರಿಂದ ಒಳ್ಳೆಯದೆನ್ನುತ್ತಾರೇ ಹೊರತು ಅಪಾಯವೆನ್ನುವುದಿಲ್ಲ, ಅವರೆಲ್ಲ ಅದ್ಭುತಗಳನ್ನು ಹೇಳಿ ಜನರನ್ನು ಮೆಚ್ಚಿಸುವವರೇ ಆಗಿದ್ದಾರೆ ಎಂದರು. ಕುಲವಾದಿಗಳಲ್ಲಿ ರಾಜಸ್ಥಾನಕ್ಕೆ ಬಂದು

ತಮ್ಮ ಕುಲದ ಶ್ರೇಷ್ಠತೆಯನ್ನು ಸಾದರಪಡಿಸುವ ದೃಶ್ಯವಂತೂ ಅತ್ಯದ್ಭುತ. ಪ್ರತಿಸಂಸ್ಕೃತಿಗಳ ಮೌಲ್ಯವನ್ನು ಮನ್ನಿಸುವ ದೊಡ್ಡತನವಿದು. "ನಮ್ಮ ಕಾಲದಲ್ಲಿ ಕಂಡಂತೆ ರಿಜರ್ವೇಷನ್ನಿಗಾಗಿ ಕ್ಯಾಸ್ಟ್ ಸರ್ಟಿಫಿಕೇಟ್‌ಗಳನ್ನು ಸಾಮಾಜಿಕ ಸ್ಥಾನಮಾನಕ್ಕಾಗಿ ಕುಲಪುರಾಣಗಳನ್ನು ಹೊತ್ತು ತಿರುಗುವ ಪ್ರಜಾಜನರ ಸಾಲುದೃಶ್ಯಗಳು ರಾಜಾವಳಿ ಕಥಾಸಾರದಲ್ಲಿ ಎಂದೋ ಮುಂಗಾಣ್ಕೆಯಾಗಿ ಬಂದಿವೆ."

ವಚನಕಾರರ ಚಳವಳಿಯ ನಂತರದಲ್ಲೂ ಕರ್ನಾಟಕದಲ್ಲಿ ಜಾತಿವ್ಯವಸ್ಥೆಯನ್ನು ಅವಲಂಬಿಸಿಕೊಂಡು ಬಂದ ಜನ ಸಮುದಾಯಗಳು ನಡೆಸಿದ ಬಡಿದಾಟವನ್ನು ದೇವಚಂದ್ರ ಮುಚ್ಚುಮರೆ ಇಲ್ಲದೆ ಮುಗ್ಧ ಮನಸ್ಸಿನಂದಲೇ ನಿರೂಪಿಸ ತೊಡಗಿದ್ದಾನೆ. "ಇಷ್ಟೆಲ್ಲ ಆಗಿ ದೇವಚಂದ್ರ ಸ್ವಾನುಭವದಿಂದಲೋ ಆರ್ಜಿತ ವಿದ್ಯೆ ಮತ್ತು ಸಂಸ್ಕಾರದಿಂದಲೋ ತನ್ನ ಬಡತನದ ಬದುಕಿನ ಬವಣೆಯ ಹಿನ್ನೆಲೆಯಿಂದಲೋ ಮನುಷ್ಯಧರ್ಮವೊಂದೇ ದೊಡ್ಡದು ಎಂಬುದರ ನಿಲುವು ಆತನಿಗಿದ್ದಂತೆ ತೋರುತ್ತದೆ. ಈ ಕಾರಣವಾಗಿ ಸಕಲೆಂಟು ಜಾತಿಯ ವಿವರಗಳನ್ನು ಪ್ರಸ್ತಾಪ ಮಾಡುತ್ತಲೇ ದೇವಚಂದ್ರ ಇವೆಲ್ಲವೂ ಮನುಷ್ಯನ ಬದುಕಿಗೆ ಮೂಲಭೂತವಾದುವಲ್ಲ ಇವು ಯಾವುದೋ ಒಂದು ಸಂದರ್ಭದ ಅಹಂಕಾರಜನ್ಯ ಸಂಗತಿಗಳು, ಅಜ್ಞಾನ ಮೂಲವಾದವು ಅಥವಾ ಲಾಭದ ಆಸೆಗೆ ಸೃಷ್ಟಿಯಾದವೆಂಬುದನ್ನು ವ್ಯಂಗ್ಯವಾಗಿ ಸೂಚಿಸಿರುವಂತೆ ಕಾಣುತ್ತದೆ. ಇದಕ್ಕೆ ಸ್ಪಷ್ಟ ಉದಾಹರಣೆ ಬೇರೆ ಬೇರೆ ಜಾತಿಗಳ ಅದರ ಸೃಷ್ಟಿ ಹಿನ್ನೆಲೆಯಲ್ಲಿ ಆ ಸಮೂಹಕ್ಕಿರುವ ಹೆಮ್ಮೆ, ಅಲ್ಲದೆ ಜಾತಿಯ ಹಿಂದೆ ಕಥೆ ಕಟ್ಟಿಕೊಂಡು ಆ ಮೂಲಕ ತಂತಮ್ಮ ಹಿರಿಮೆ ಸಾಧಿಸುವುದನ್ನು ದೇವಚಂದ್ರ ಮಾರ್ಮಿಕವಾಗಿ ವಿವರಿಸುವುದು ಅರ್ಥಪೂರ್ಣವೆನಿಸುತ್ತದೆ. (ದೇವಚಂದ್ರ ರಾಜಾವಳಿ ಕಥೆ ಸಾಂಸ್ಕೃತಿಕ ಮುಖಾಮುಖಿ (ಪು. ೮೭,೮೮.)

ಸ್ವಸ್ತಿ ಸಮಸ್ತ..... ಬಿರುದ(ದೆ)ಂತೆಂಬರ ಗಂಡ

(ಚಿ, ವಂಶಾವಳಿ, ಪು, ೧೮)

ಮೈಸೂರು **ದೊರೆಗಳಿಗಿದ್ದ** ಬಿರುದಾವಳಿ ಇದು. ಸಾಮಂತರಾಜರ ಶಿರಸಮೂಹದಿಂದ ಶೋಭಿಸುವಪಾದಕಮಲವುಳ್ಳವನು(ಸಾಮಂತರಾಜರಿಂದ ನಮಸ್ಕರಿಸಲ್ಪಡುವವನು)ಸೂರ್ಯನ ಗರ್ವವೆಲ್ಲವನ್ನು ದೂರಗೊಳಿಸಬಲ್ಲ ಸಾಮರ್ಥ್ಯವುಳ್ಳಂಥ ಮಹಾತೇಜಸ್ಸುಳ್ಳವನು. ದಯಾರಸದ ತೆರೆಯೆಬ್ಬಿಸುವ ಕಡೆಗಣ್ಣ ನೋಟದಿಂದ ಕರ್ನಾಟಕ ದೇಶವನ್ನು ಆನಂದಪಡಿಸುವವನು. ಖಡ್ಗಧಾರೆಯಿಂದ ಕತ್ತರಿಸಲಾದ ವೈರಿರಾಜರ ಕೊರಳೆಂಬ ಕಾಂಡದಿಂದ ಚಿಮ್ಮುವ ರಕ್ತ ಧಾರೆಯಿಂದ

ತನ್ನ ಬಿರುದನ್ನು ತೊಳೆದು ಶುಚಿಗೊಳಿಸುವವನು (ಮೇಲಿಂದ ಮೇಲೆ ವಿಜಯ ಯಾತ್ರೆ ಮಾಡುವವನು) ನಿಮ್ಮ ಬಿರುದು ಅಂತಹದೇ ? ಅಥವಾ ನಿಮ್ಮ ಬಿರುದು ಎಂಥದು ? ಎಂದು ಪ್ರಶ್ನಿಸುವವರಿಗೇ ಗಂಡನಾಗಿರುವವನು ಅಂದರೆ ಪ್ರಶ್ನಾತೀತವಾದ ಅಧಿಕಾರವುಳ್ಳವನು ಎಂದು ಅರ್ಥ.

ಕೆಯ್ಯೊಲನೊಳ್ ಬೆಳೆದ ಕುಱುಂಬುಲ್ಲಂ ಕಿಱ್ತು ಬಿಸುಡುವಂತೆ

(ಮು. ಭಂಡಾರ, ಸಂ.೨ ರಾ. ಮೇಧ, ಪು. ೧೨೩)

ಬಿಟ್ಟ ಹೆಂಡತಿಯನ್ನು ಕಟ್ಟಿಕೊಳ್ಳಲು ನಾನೇನು ಶ್ರೀರಾಮಚಂದ್ರನಲ್ಲ ಎಂದ ಅಗಸನ ನಡೆವಳಿಕೆಯ ಪರಿಣಾಮವಾಗಿ ರಾಮನಲ್ಲಾದ ಬದಲಾವಣೆಯನ್ನು ಸೂಚಿಸುವ ಸಂದರ್ಭ, ಗದ್ದೆ ಹೊಲಗಳಲ್ಲಿ ಕಳೆಹುಲ್ಲನ್ನು ಕಿತ್ತು ಬಿಸುಡುವಂತೆ ಸೀತೆಯನ್ನು ಬಿಡುತ್ತೇನೆಂದು ರಾಮ ಭಾವಿಸುತ್ತಾನೆ. ಹೊಲಗದ್ದೆಗಳಲ್ಲಿ ಕಳೆಹುಲ್ಲು ಇದ್ದರೆ ಬೆಳೆಯುವ ಪೈರು ಸಮೃದ್ಧಿಯಾಗಿ ಮೂಡಿಬರುವುದಿಲ್ಲ. ಅದರ ಸಾರವನ್ನೆಲ್ಲ ಕಳೆಹುಲ್ಲೇ ಹೀರುತ್ತಿರುತ್ತದೆ. ಆದ್ದರಿಂದ ಬೆಳೆ ಪೈರಿನ ನಡುವೆ ಇರುವ ಕೆಲಸಕ್ಕೆ ಬಾರದ ಹುಲ್ಲನ್ನು ಕಿತ್ತು ಬಿಸಾಡುವುದು ಕೃಷಿಪದ್ಧತಿಗಳಲ್ಲಿ ಒಂದೆನ್ನಬಹುದು. ಸ್ತ್ರೀಯ ಬಗೆಗಿನ ಕನಿಷ್ಟ ತಿರಸ್ಕಾರ ಇಲ್ಲಿ ಕಂಡು ಬರುತ್ತದೆ.

ಜಾನಕಿಯ ದೂಸಱಿ ನಾಕೆಯಂ ಕಾನನಕ್ಕುಯ್ದು ತೊಱೆದು ಬಾರಾ

(ಮು. ಭಂಡಾರ ಸಂ,೨, ರಾ. ಮೇಧ, ೧೨೪)

ಅಗಸನ ಮಾತು ಕೇಳಿ ಜನಸಾಮಾನ್ಯರ ಮಾತುಗಳಿಗೆ ಬೆಲೆ ನೀಡಿದ ರಾಮನು ಲಕ್ಷ್ಮಣನಿಗೆ ಹೇಳುವ ಮಾತುಗಳಿವು. ಸೀತೆಯನ್ನು ಕಾಡಿಗೆ ಬಿಟ್ಟು ಬಾ ಎಂದು ಹೇಳುತ್ತಾನೆ. ತಪ್ಪಿತಸ್ತರನ್ನು ಕಾಡಿಗೆ ಕಳಿಸುವುದು. ಅದರಲ್ಲಿ ಬಿಟ್ಟು ಬರುವುದೆ, ಇವೆಲ್ಲ ಅಂದಿನ ಶಿಕ್ಷಾಪದ್ಧತಿಗಳಾಗಿದ್ದವು. ಕಾಡುಗಳಲ್ಲಿ ವಾಸಮಾಡುವ ಬುಡಕಟ್ಟು ಜನರೂ ಇದ್ದಾರೆ. ಅವರ ಬದುಕೂ ಸಹ ಒಂದು ರೀತಿಯಲ್ಲಿ ಶಿಕ್ಷೆಯ ರೀತಿಯಲ್ಲಿಯೇ ಇದೆ ಎಂಬುದನ್ನು ಗಮನಿಸಬೇಕು.

ಪಂಜರದ ಪರೀಕ್ಷೆ

(ಮುದ್ರಾ ೨,ಪುಟ ೨೨-೨೪)

ಪಂಜರದ ಪರೀಕ್ಷೆಮಾಡಿ ಕಪಟಸಿಂಹವೆಂದು ನಿರ್ಣಯಿಸಿದ ಚಂದ್ರಗುಪ್ತನಿಗೆ ಸೆರೆಯಿಂದ ಮುಕ್ತಿ ದೊರೆತ ಸನ್ನಿವೇಶ. ಪಂಜರದೊಳಗಿದ್ದ ಸಿಂಹವು ಪೋಷಕನು ಕೊಟ್ಟ ಮಾಂಸಕ್ಕೆ ಎರಗುತ್ತ ಹೊರಗಡೆಯಲ್ಲಿ ಅವನು ಬಳಸಿಬಂದರೆ ಅವನು ಬಂದ ಕಡೆಯಲ್ಲೆಲ್ಲಾ ಮಾಂಸಾಪೇಕ್ಷೆಯಿಂದ ಒಳಗೆ ತಾನೂ ಬಳಸಿ ಬರುತ್ತದೆ. ಪಂಜರವು ಅಖಂಡವಾಗಿಯೂ ಒಳಗಿನ ಸಿಂಹವು ಮಾಂಸಾಭಿಲಾಷಿಯಾಗಿಯೂ ಆಗಿದ್ದಿತು. ಚಂದ್ರಗುಪ್ತ ಮಾಂಸವನ್ನು ಕೊಡಲು ಅದು ಸುಮ್ಮನಿರುವುದನ್ನು ಕಂಡು ಅದು ಕೃತಕ ಸಿಂಹವೆಂದು ನಿಶ್ಚಯಿಸಿದನು. ಅದು ಅರಗುಮೇಣ ಈ ಮುಖ್ಯವಾದ ಸರಿಗಳಿಂದ ತೊಡೆಯಲ್ಪಟ್ಟ ಬಟ್ಟೆಗೆ ಸಿಂಹದ ರೋಮಗಳನ್ನು ಅಂಟಿಸಿ ಅದನ್ನು ಚರ್ಮದಂತೆ ಮಾಡಿ ಹೊರಗಿದ್ದ ಪುರುಷನ ಕೌಶಲ್ಯದಿಂದ ಮಾಂಸವನ್ನು ಕೊಡುವ ರಂಧ್ರಮುಖವನ್ನು ಹಿಡಿದು ಅದರ ಅಸ್ಥಿಸ್ಥಾನಕ್ಕೆ ಕಬ್ಬಿಣದ ಸಲಾಕಿಗಳನ್ನು ಜೋಡಿಸಿ ಬಾಲ ಕತ್ತುಗಳಿಗೆ ರೋಮ ಸಹಿತವಾದ ಉಕ್ಕಿನ ತಂತಿಗಳನ್ನು ಜತೆಗೊಳಿಸಿ ಅಲ್ಲಿಗಲ್ಲಿಗೆ ಬಣ್ಣವನ್ನು ಬರೆದು ತಯಾರಿಸಿದ ಕೃತ್ರಿಮ ಸಿಂಹವಾಗಿತ್ತು. ಪುರುಷನ ಕೈಯಲ್ಲಿದ್ದ ಸಲಾಕೆಯು ಸೂಜಿಗಲ್ಲಿನಿಂದ ತಯಾರಿಸಲ್ಪಟ್ಟಿತು. ಕಬ್ಬಿಣವನ್ನು ಹಿಡಿಯುವ ಧರ್ಮವು ಸೂಜಿಗಲ್ಲಿನ ಸ್ವಭಾವ. ಆದ ಪ್ರಯುಕ್ತ ಪ್ರಿಯನೆದುರಿಗೆ ವಿಲಾಸವನ್ನು ತೋರುವ ಜಾರ ಸ್ತ್ರೀಯಂತೆ ಸೂಜಿಗಲ್ಲಿನೆದುರಿಗೆ ಉಕ್ಕು ಕಬ್ಬಿಣ ಸಲಾಕೆಗಳಿಂದ ತಯಾರಿಸಿದ ಕಪಟ ಸಿಂಹವು ಹಲವು ಪರಿಯಿಂದ ಚಲಿಸುತ್ತಿತ್ತು.

ಇದರಿಂದ ವ್ಯಕ್ತವಾಗುವುದೇನೆಂದರೆ ಕ್ರಿ.ಪೂ ಮೂರನೇ ಶತಮಾನದಲ್ಲಿ ಚಂದ್ರಗುಪ್ತ ಮೌರ್ಯನ ಕಾಲಕ್ಕಾಗಲೇ ಸೂಜಿಗಲ್ಲಿನ ಅನ್ವೇಷಣೆ ಆಗಿತ್ತೆಂಬುದು, ಅಲ್ಲದೆ ಕಪಟ ಸಿಂಹದ ತಂತ್ರಗಾರಿಕೆಯೂ ತಿಳಿಸಿದಿದ್ದಿತು. ತಮ್ಮ ಕಾಲದ ತಂತ್ರ ವಿಜ್ಞಾನವನ್ನು ರಾಜಕಾರಣದಲ್ಲಿ, ಮನರಂಜನೆಯಲ್ಲಿ ಈಗಿನಂತೆಯೆ ಬಳಸುತ್ತಿದ್ದರು ಎಂಬುದಕ್ಕೆ ಪಂಜರದ ಪರೀಕ್ಷೆಯ ಸಂದರ್ಭ ನಿದರ್ಶನವಾಗಿದೆ. ಕಡೆಗೆ ಚಂದ್ರಗುಪ್ತನ ಬುದ್ಧಿವಂತಿಕೆಗೆ ಮೆಚ್ಚಿದ ನವನಂದರು ಅವನನ್ನು ಸೆರೆಯಿಂದ ಮುಕ್ತಿಗೊಳಿಸಿ ಅನ್ನಸತ್ರಕ್ಕೆ ಅಧಿಕಾರಿಯನ್ನು ನೇಮಿಸಿದರು. ಚಂದ್ರಗುಪ್ತನ ಕಾಲದಲ್ಲಿ ಅನ್ನ ಸತ್ರಗಳನ್ನು ಅರಮನೆಯ ಹೊರವಲಯದಲ್ಲಿದ್ದು ಅವುಗಳಲ್ಲಿ ದಾರಿಹೋಕ ಬ್ರಾಹ್ಮಣರಿಗೆ ಆತಿಥ್ಯ ಮಾಡುವ ಏರ್ಪಾಟಿತ್ತು.

ಬ್ರಾಹ್ಮಣರು ಮಾಡುವ ವೇದಾಧ್ಯಯನಮಂ ಮನಮುಟ್ಟಿ ಕೇಳುತ್ತಿರುವ ಶೂದ್ರನಿಗೆ ಪ್ರಾಪ್ತವಾಗುವ ಪರಲೋಕದಂಡನೆಯು ಎನಾಗಲಿ ಇದಲ್ಲದೆ ವೇದಮಂ ಶೂದ್ರನಿಗೆ ಉಪದೇಶಮಂಲ್ಲ ಮಾಡಿದ ಬ್ರಾಹ್ಮಣನ ಗತಿಗೆ ನಾನು ಪೋಗುವೆನು

(ಮುದ್ರಾ ೩. ಪುಟ ೩೦)

ಚಾಣಕ್ಯ ಪ್ರತಿಜ್ಞೆ. ವೇದವಿದ್ಯೆಯು ಶೂದ್ರನಿಗೆ ಕೂಡದು ಎಂಬ ಮನುಧರ್ಮಶಾಸ್ತ್ರದ ನಿಯಮವನ್ನು ಜಾರಿಗೆ ತರುವ ವಿಧಾನ, ಬಹುಷಃ ಕೆಲವು ಉದಾರಿ ವೇದವಿದ್ಯ ಬ್ರಾಹ್ಮಣರು ಆ ವಿದ್ಯೆಯನ್ನು ಶೂದ್ರರಿಗೆ ಹೇಳಿಕೊಟ್ಟಿದ್ದರೆಂದೂ ತುಂಬ ಬುದ್ಧಿವಂತ ಶೂದ್ರರು ಅದನ್ನು ಮನಮುಟ್ಟಿ ಕೇಳಿ ತಿಳಿಯುತ್ತಿದ್ದರೆಂದೂ ಇದರಿಂದ ತಿಳಿದು ಬರುತ್ತದೆ. ಆರ್ಯರು ಇಂಡಿಯಾಕ್ಕೆ ಬರುವ ಸಂದರ್ಭದಲ್ಲಿ ಅವರಿಗೆ ವೇದಾಧಿಗಳ ವಿದ್ಯೆ ಪರಿಚಯವಿದ್ದು ಅದನ್ನು ಕಲಿಯಲು ಶೂದ್ರರು ಇಚ್ಚಿಸುತ್ತಿದ್ದುದು ಸಹಜವೇ. ಆದರೆ ವಸಾಹತುಗಳಾಗಿ ಆಕ್ರಮಣಶೀಲರಾದ ಆರ್ಯಕುಲ ತಮ್ಮ ವಿದ್ಯೆಯನ್ನು ಬಿಟ್ಟುಕೊಡಕೂಡದು ಅವರಿಗೆ ತಿಳಿದರೆ ನಾವು ಸಮ ನಿಮಗೆಂದು ಬೀಗುವ ಪ್ರಸಂಗ ಬರಬಹುದು. ಆಗ ತಮ್ಮ ಹೆಚ್ಚುಗಾರಿಕೆ ಉಳಿಯಲಾರದು. ಅವರು ತಮ್ಮ ಮಾತನ್ನು ಕೇಳಲಾರರು ಎಂದು ಅಕ್ಷರವಿದ್ಯೆ ಎಂಬ ಅಸ್ತ್ರವನ್ನು ಮೇಲ್ಜಾತಿ ನಿಗೂಢಗೊಳಿಸಿರ ಬೇಕು. ಹೀಗೆ ಶೂದ್ರರಿಗೆ, ಸ್ತ್ರೀಯರಿಗೆ ವೇದಾಧ್ಯಯನದ ಹಕ್ಕನ್ನು ಕ್ರಿ.ಪೂ, ದಿಂದಲೂ ನಿರಾಕರಿಸಿದರು. ಶೂದ್ರನು ಸಂಸ್ಕೃತ ಕಲಿಯುವುದನ್ನು ೨೦ ನೇ ಶತಮಾನದಲ್ಲೂ ನಿರಾಕರಿಸಿದ ಸಂದರ್ಭಗಳನ್ನು ಅಂಬೇಡ್ಕರ್ ಹಾಗೂ ಕುವೆಂಪು ಅವರೂ ಕೂಡ ಎದುರಿಸಬೇಕಾಗಿ ಬಂತು ಎಂಬುದು ಲೋಕ ಸತ್ಯ. ವಿದ್ಯೆಯ ಬಗ್ಗೆ ಮಡಿ ಮೈಲಿಗೆ ಮಾತುಗಳು ಇನ್ನೂ ಇದ್ದದ್ದೇ, ವಿಜ್ಞಾನದ ತಂತ್ರಜ್ಞಾನದ ಅನೇಕ ರಹಸ್ಯಗಳನ್ನು ಪಾಶ್ಚಾತ್ಯ ರಾಷ್ಟ್ರಗಳು ಹಿಂದುಳಿದ ರಾಷ್ಟ್ರಗಳಿಗೆ ಈಗಲೂ ಬಿಟ್ಟು ಕೊಟ್ಟಿಲ್ಲ ಎಂಬುದನ್ನು ಇಲ್ಲಿ ಉಲ್ಲೇಖಿಸಬಹುದು.

ಪ್ರಥಮ ವಯಸಿಪೀತಂ ತೋಯಮಲ್ಪಂಸ್ಮರಂತಃ ಶಿರಸಿನಿಹಿತ ಭಾರಾ ನಾರಿಕೇಳಾನರಾಣಾಂ||ಸಲಿಲಮಮೃತ ಕಲ್ಪಂದದ್ಯು ರಾಜೀವಿತಾಂತಂನಹಿಕೃತಮುಪಕಾರಂ ಸಾಧವೋವಿಸ್ಮರಂತಿ||

(ಮುದ್ರಾ ೩ ಪು. ೪೧)

ಕ್ರಿ.ಪೂ.ದಲ್ಲಿಯ ತೆಂಗಿನ ಮರ ಬೆಳೆಯುವ ಮತ್ತುಅದು ಫಸಲು ಬಿಡುವ ವೈಜ್ಞಾನಿಕ ವಿಚಾರಗಳ ಬಗ್ಗೆ ಕೌಟಿಲ್ಯನಿಗೆ ಅರಿವಿತ್ತು. ಕಲ್ಪವೃಕ್ಷವೆಂದು ಕರೆಯುವ ತೆಂಗಿನ ಮರ ಇಲ್ಲಿ

ಪುರಾತನ ಕಾಲದಿಂದಲೂ ಇರುವ ಸಸ್ಯಜಾತಿ ಎಂಬುದು ತಿಳಿದ ಸಂಗತಿಯೇ "ಲೋಕದಲ್ಲಿ ತೆಂಗಿನ ಮರಗಳು ತಾವು ಸಸಿಯಾಗಿರುವ ಕಾಲದಲ್ಲಿ ಜನರಿಂದ ಎರೆಯಲ್ಪಟ್ಟು ಅಲ್ಪವಾಗಿಯೂ ಚೌಳಾಗಿಯೂ ಇರುವ ಉದಕಗಳನ್ನು ಸ್ಮರಿಸಿಕೊಂಡು ತಮ್ಮ ಶಿರಸ್ಸಿನಲ್ಲಿ ಭಾರವುಳ್ಳವುಗಳಾಗಿ ತಮ್ಮನ್ನು ಬೆಳೆಸಿದಂಥ ಮನುಷ್ಯರಿಗೆ ತಾವು ಸಾಯುವ ಪರ್ಯಂತರವು ಅಮೃತಸಮಾನವಾದ ಉದಕವನ್ನು ಕೊಡುತ್ತವೆ. ಹಾಗೆ ಸತ್ಪುರುಷರಾದಂಥವರು ಪರರು ತಮಗೆ ಮಾಡಿದಂಥ ಉಪಕಾರವನ್ನು ಎಂದಿಗೂ ಮರೆಯುವುದಿಲ್ಲ ಎಂದು ನೀತಿಶಾಸ್ತ್ರವುಂಟು". ತೆಂಗಿನ ಬೆಳೆ ದಕ್ಷಿಣ ಭಾರತದ ಒಂದು ಮುಖ್ಯ ವಾಣಿಜ್ಯ ಬೆಳೆ. ತೆಂಗಿನ ಮರದ ಸೌಂದರ್ಯ ಆಸ್ವಾದನೀಯ .ಕೇರಳ ಕರ್ನಾಟಕ, ಇಂಡೋನೇಷಿಯಾ ಮುಂತಾದ ಕಡೆಯ ಸಾಗರ ತೀರದ ತೆಂಗಿನ ತೋಟಗಳ ರಮಣೀಯತೆ ಯಾರನ್ನು ತಾನೆ ಮೋಹಿಸುವುದಿಲ್ಲ.

ದನವಿನ ಚರ್ಮದಿಂದ (ತಿದಿ) ಹೊರಡುವ ಉಸಿರುಗಳು ಪಂಚಲೋಹಗಳನ್ನು ದರಿಸುತ್ತಿವೆ.

(ಮುದ್ರಾ ೪.೪೮ ಟೀಕು)

ಪರ್ವತರಾಜನ ಮಂತ್ರಿ ಶಬರವರ್ಮನು ಬ್ರಾಹ್ಮಣನಿಗೆ ಅವಮಾನ ಮಾಡಿದ ನಂದನರ ಬಗ್ಗೆ ಹೇಳುವ ಮಾತು. ಲೋಕದಲ್ಲಿ ಸಾಧು ಸಜ್ಜನರ ಸಂತಾಪಯುಕ್ತವಾದ ನಿಟ್ಟುಸುರುಗಳು ಕುಲಕ್ಷಯಮಂ ಮಾಡುವುದರಲ್ಲಿ ಸಂದೇಹವಿಲ್ಲವೆಂಬ ನೀತಿಶಾಸ್ತ್ರವುಂಟು. ಅನ್ನಸತ್ರದಲ್ಲಿ ಆಗ್ರಸ್ಥಾನದಲ್ಲಿ ರಾಜರನ್ನು ಲೆಕ್ಕಿಸದೆ ಕುಳಿತಿದ್ದ ಬಡ ಬ್ರಾಹ್ಮಣನನ್ನು ನಂದನರು ಅವಮಾನಗೊಳಿಸಿ ಹೊರ ಹಾಕಿದ ಸುದ್ದಿ ಪರ್ವತರಾಜನಿಗೆ ತಲುಪಿತ್ತು. ಪಂಚಲೋಹಗಳೆಂದರೆ ತಾಮ್ರ, ಹಿತ್ತಾಳೆ, ತವರ, ಸೀಸ, ಕಬ್ಬಿಣ. 'ತಿದಿ' ಎಂದರೆ ಚರ್ಮದ ಊದುಚೀಲ. ಅಕ್ಕಸಾಲಿ, ಕಮ್ಮಾರರು ತಿದಿಯನ್ನು ಬಳಸುತ್ತಾರೆ. ಪಂಪನ ಕರ್ಣ ಇಂದ್ರನಿಗೆ ತನ್ನ ಕವಚವನ್ನು 'ತಿದಿಯುಗಿದಂತೆ' ಸೀಳಿ ದಾನಕೊಟ್ಟನಂತೆ.

ಶುದ್ಧ ಕ್ಷತ್ರಿಯ ಸಂತತಿಯ ಶಿಶಿರಾಂತದ ವೃಕ್ಷಪರ್ಣದಂತೆ ವಿರಳವಾಗಿರುವುದು

(ಮುದ್ರಾ ೪-೫೮)

ಶಬರನ ಮಾನೆಯು ಮಂತ್ರಿಯು ಪರ್ವತರಾಜನಿಗೆ ಹೇಳುವ ಮಾತು. ಉಲೂಕನೆಂಬ ವೃದ್ಧ ಮಂತ್ರಿಯು ಶೂದ್ರನಾದ ಚಂದ್ರಗುಪ್ತಗೆ ಸಹಾಯ ಮಾಡಿ

ಸ್ನೇಹಿತರಾಗಿರುವ ನಂದನರನ್ನು ಹಗೆಗಳನ್ನಾಗಿ ಮಾಡಿಕೊಳ್ಳುವುದು ಸರಿಯಲ್ಲವೆನ್ನುತ್ತಾನೆ. ಶೂದ್ರಜನನು ಪ್ರಜಾಪಾಲನೆಗೆ ಅರ್ಹನಲ್ಲವೆಂದಾಗ ಶಬರವರ್ಮನ ಪ್ರತಿಕ್ರಿಯೆ ಇದು. No rare is pure ಎಂಬಂತೆ ಯಾವ ಜಾತಿಯೂ ಪರಿಶುದ್ಧವಲ್ಲ. ಅದು ಜೈವಿಕವಾದ ಸತ್ಯ. ಹೀಗಿರುವಾಗ ಚತುರ್ ವರ್ಣಗಳು ವೃತ್ತಿ ಆಧಾರಿತವಾದ ಅದೇ ಪವಿತ್ರವೆಂದು ಮೊದ ಮೊದಲು ಹೇಳಲಾಯಿತು. ಆದರೆ ವಿಜ್ಞಾನ ಇದನ್ನು ಈಗ ಸುಳ್ಳು ಮಾಡಿದೆ. ವರ್ಣ ಸಂಕರದ ವಿಚಾರ ಮೂರು ಸಾವಿರ ವರ್ಷಕ್ಕೆ ಮೊದಲೇ ನಡೆದಿತ್ತು ಹಾಗೂ ಅದನ್ನು ತಡೆಗಟ್ಟಲು ಶಾಸ್ತ್ರಗಳು ಹುಟ್ಟಿದವು. ಅವುಗಳನ್ನು ಮಿರಲಾಯಿತು. ಕೆಲವರು ವ್ಯಕ್ತಿಯ ಸಾಮರ್ಥ್ಯದ ಆಧಾರದ ಮೇಲೆ ವ್ಯಕ್ತಿಯ ವರ್ಣವನ್ನು ನಿರ್ಣಯಿಸ ಬೇಕೆಂದು ಹೇಳಿದರು. ಶಬರ ಶರ್ಮನು ಚಂದ್ರಗುಪ್ತನ ಬಗೆಗೆ ಹೇಳುವ ಈ ಉದಾರವಾದಿ ನೆಲೆಯಿಂದ ಬಂದ ಮಾತಾಗಿದೆ. ಲೋಕ ಸಂಗ್ರಹಕ್ಕೆ ಗುಣಗಳು ಮುಖ್ಯವೇ ಹೊರತು ಕುಲೀನತ್ವವು ಮುಖ್ಯವಲ್ಲವೆಂದು ಪರ್ವತರಾಜನ ಮಂತ್ರಿ ಹೇಳುವನು.

ವರ್ಣಾಶ್ರಮ ಧರ್ಮ ವ್ಯತ್ಯಾಸವು ಇನ್ನೂ ಸಂಭವಿಸಲಿಲ್ಲ

(ಮುದ್ರಾಚ-೭೮)

ಅಮಾತ್ಯ ರಾಕ್ಷಸನು ಆಡುವ ಮಾತಿದು. ಪರ್ವತರಾಜನ ಕಡೆ ಸೇರಿದ ಚಾಣಕ್ಯ ಚಂದ್ರಗುಪ್ತರು ನಂದರಾಜ್ಯದ ಗಡಿ ಪ್ರದೇಶವನ್ನು ಉಪಾಯಾಂತರದ ಮೇರೆಗೆ ಸಡಿಲಗೊಳಿಸಿ ಗಡಿ ರಕ್ಷಕರು ನೆವವೊಡ್ಡಿ ಓಡಿಹೋಗುವಂತೆ ಏರ್ಪಡಿಸಿದರು. ಆಗ ರಾಕ್ಷಸನಿಗೆ ಏನೊ ಲೋಪವಾಯಿತೆಂಬ ಬಗ್ಗೆ ಚಿಂತೆ ಮೂಡಿತು. ಎಲ್ಲವೂ ವರ್ಣಾಶ್ರಮ ಧರ್ಮದ ಪ್ರಕಾರವೇ ಜರುಗುತ್ತಿದೆ. ಕ್ಷತ್ರಿಯರು ಆಳುತ್ತಿದ್ದಾರೆ. ಬ್ರಾಹ್ಮಣ ಮಂತ್ರಿಯಾಗಿದ್ದಾನೆ. ಉಳಿದ ವೈಶ್ಯ, ಶೂದ್ರರು ತಮ್ಮ ತಮ್ಮ ವೃತ್ತಿಯನ್ನು ನಡೆಸಿಕೊಂಡು ಹೋಗುತ್ತಿದ್ದಾರೆ. ಮತ್ತೇಕೆ ರಾಷ್ಟ್ರದ ಗಡಿಗಳಲ್ಲಿ ಹಲ್ಲೆಗಳಾಗುತ್ತಿವೆ ಎಂದುಕೊಳ್ಳುತ್ತಾನೆ. ಎಂದರೆ ವರ್ಣಾಶ್ರಮ ಕಟ್ಟಳೆಯನ್ನು ಮೀರದಿದ್ದರೆ ದೇಶವು ಯಾವ ವಿಪತ್ತಿಗೂ ಈಡಾಗುವುದಿಲ್ಲವೆಂಬ ನಂಬಿಕೆಯನ್ನು ಬಿತ್ತರಿಸಲಾಗಿತ್ತು. ಪ್ರಜಾಪ್ರಭುತ್ವದಲ್ಲಿ ಈಗ ಎಲ್ಲವೂ ಏರುಪೇರಾಗಿ ಹೋಗಿದೆ.

೧. ನಮ್ಮ ಹೊನ್ನಗಟ್ಟದಲ್ಲಿದ್ದ ಮದಗಜ ಸಮೂಹಮಂ ನಿನ್ನೆ ಬುಧವಾರದ ರಾತ್ರಿಯಲ್ಲಿ ಕುಲೂತಪತಿಯ ಭಟರು. . . ಹಿಡಿದುಕೊಂಡು ಹೋದ (ರು)

(ಮುದ್ರಾ, ಪುಟ ೭೯)

೨. ಸರಯೂ ತೀರದ ಸುರಭಿವಾಪಿಯಲ್ಲಿದ್ದ ಗೋಲಕ್ಷಂಗಳಂ ಹಿಡಿದುಕೊಂಡು. . . ಗೋಪರಂ ಪ್ರಹರಿಸಿ ಹೋದ (ರು)

(ಪುಟ. ೮೦)

ಹೀಗೆ ನಂದರಾಜ್ಯದ ಆನೆ ಮತ್ತು ಗೋವುಗಳನ್ನು ಸುತ್ತಣ ಗಣ ರಾಜ್ಯಗಳಾದ ಕುಲೂತ ಹಾಗೂ ಗಾಂಧಾರ ಪತಿಗಳು ನಂದರ ದೌರ್ಬಲ್ಯವನ್ನು ನೋಡಿ ಆಕ್ರಮಿಸಲು ಬರುತ್ತಿದ್ದರು. ಇವರಿಗೆಲ್ಲ ಪರ್ವತರಾಜನ ಬೆಂಬಲವಿತ್ತು. ಆನೆಗಳನ್ನು ಮತ್ತು ಗೋವುಗಳನ್ನು ಕಾಡಿನಲ್ಲಿ ಸಂರಕ್ಷಿಸುತ್ತಿದ್ದರು. ಅವು ರಾಷ್ಟ್ರದ ಸಂಪತ್ತು ಆಗಿದ್ದವು. ವೇದಗಳ ಕಾಲದಲ್ಲಿ ಕೇವಲ ಗೋಸಂಪತ್ತಿನ ವಿಚಾರ ಮೇಲಿಂದ ಮೇಲೆ ಬರುತ್ತದೆ. ಆನೆಗಳನ್ನು ಸಂಪತ್ತು ಎಂದು ಗ್ರಹಿಸಿದ್ದು ಆರ್ಯರು ಇಂಡಿಯಾಕ್ಕೆ ಬಂದ ಮೇಲೆ ಆರ್ಯರ ಮೊದಲ ನಿವಾಸ ಸ್ಥಳದಲ್ಲಿ ಆನೆಗಳು ವಾಸಿಸುತ್ತಿರಲಿಲ್ಲ ವಾದ ಕಾರಣ ಅವುಗಳ ಪ್ರಸ್ತಾಪವಿಲ್ಲ. ಕಾಲಕ್ರಮದಲ್ಲಿ ಕೃಷಿ ಪ್ರಧಾನ ದೇಶವಾದ ಇಂಡಿಯಾದಲ್ಲಿ ಗೋವಿನ ಪ್ರಾಮುಖ್ಯತೆ ಹೆಚ್ಚಾಗಿ ಗೋವಧೆಯನ್ನು ನಿಷೇಧಿಸಿ ಅದನ್ನು ಪವಿತ್ರ ಪ್ರಾಣಿ ಎಂದು ಪರಿಗಣಿಸಿ ವೈಭವೀಕರಿಸಲಾಯಿತು. ವ್ಯಾವಹಾರಿಕ ದೃಷ್ಟಿಯಲ್ಲಿ ನೋಡಿದರೆ ಗೋ ಸಂತತಿ ನಶಿಸಿ ಹೋಗಬಾರದು ಅದರಿಂದ ಆರ್ಥಿಕ ನಷ್ಟ ಎಂಬ ಪರಿಕಲ್ಪನೆ ಇದೆ. ಆನೆಗಳಿಗೆ ಅಂಥ ಪಾವಿತ್ರತೆ ಇಲ್ಲ. ಏಕೆಂದರೆ ಕೃಷಿ ಸಂದರ್ಭದಲ್ಲಿ ಅವುಗಳ ಉಪಯೋಗ ಕಡಿಮೆ ಹಾಗೂ ಅವುಗಳನ್ನು ಸಾಕಲು ಕಷ್ಟ, ವ್ಯಾವಹಾರಿಕವಾಗಿ ದುಬಾರಿ ಇತ್ಯಾದಿ.

೧.ಶತ್ರುಗಳೊಡನೆಯುದ್ಧಮಂ ಮಾಡುತ್ತ ಅವರಿಗೆನೀರು ದೊರಕದಂತೆ ಮಾರ್ಗದಲ್ಲಿದ್ದ ಉದಕಗಳಂ ಕೆಡಿಸುತ್ತ...ಶತ್ರುಗಳಂ ಸಂಹರಿಸುತ್ತ ಮಾರ್ಗದಲ್ಲಿ ಇರುವವರಾಗಿರಿ

(ಮುದ್ರಾ. ಪು. ೯೧)

೨. ಬೌದ್ಧರು ಶೂನ್ಯಲಲಾಟರು

(ಪು. ೧೦೮)

ಜೈನನಾದ ಕ್ಷಪಣಕನ ವೇಷದಿಂದ ಗೂಢಾಚಾರಿ ವೃತ್ತಿಯನ್ನು ಕೈಗೊಂಡಿದ್ದ ಚಾಣಕ್ಯನ

ಶಿಷ್ಯ ರಾಕ್ಷಸನ ಚಾರನನ್ನು ಪರೀಕ್ಷಿಸುವ ರೀತಿ. ಬೌದ್ಧರು ಹಣೆಗೆ ತಿಲಕಾದಿಗಳನ್ನು ಇಡುವುದಿಲ್ಲ. ಈತ ತಿಲಕದ ಕಲೆ ಇರುವ ಪ್ರಯುಕ್ತ ಏನೋ ಮೋಸ ಇರಬೇಕೆಂದು ಗುಮಾನಿ ಮಾಡುವನು. ಅವನನ್ನು ನಾನಾ ರೀತಿ ಧರ್ಮ ಪರೀಕ್ಷೆ ಮಾಡಿ ಮುಡಿ ವಸ್ತ್ರಗಳನ್ನು ತೆಗಿಸಿ ದಿಗಂಬರ ಸನ್ಯಾಸಿಯನ್ನಾಗಿ ಮಾಡಿ ದೀಕ್ಷೆ ಕೊಟ್ಟು ಭಿಕ್ಷಾಪಾತ್ರೆ - ಪಿಂಛಾತ ಪತ್ರಗಳ್ನು ಕೊಟ್ಟನು. ಆದರೆ ಆಚಾರನು ತನ್ನ ಸ್ಥಿತಿಗೆ ಲಜ್ಜಿತನಾಗಿ ಸನ್ಯಾಸಿಯ ಸೇವೆಯನ್ನು ಬಿಟ್ಟು ಕಣ್ಣು ತಪ್ಪಿಸಿಕೊಂಡು ಕಾಡಿಗೆ ಸೇರಿ ಅಲ್ಲಿ ವಲ್ಕಲ ಕೌಪೀನ ಉಟ್ಟು ರಾತ್ರಿ ವೇಳೆಯಲ್ಲಿ ಬಂದು ರಾಕ್ಷಸನಿಗೆ ಆದ ವಿಚಾರವನ್ನು ಹೇಳಿದನು. ಎಂದರೆ, ಕೆಲವರು ದೀಕ್ಷೆಯನ್ನು ವಹಿಸಿಕೊಂಡ ಇತರ ಧರ್ಮದವರು ಲಜ್ಜಿತರಾಗಿ ತಮ್ಮ ಪೂರ್ವಧರ್ಮಕ್ಕೆ ಹಿಂತಿರುಗುತ್ತಿದ್ದರು ಎಂಬ ಸೂಚನೆ ಇಲ್ಲಿ ಕಂಡು ಬರುತ್ತದೆ.

ವಿಷಕನ್ಯಾಗಮನವು

(ಮುದ್ರಾ ಪುಟ ೧೭೬)

ಸಾಮ, ದಾನ, ಭೇದ, ದಂಡವೆಂಬ ನಾಲ್ಕು ಉಪಾಯಗಳ ಪ್ರಕಾರ ಜೈಸಲಸಾಧ್ಯವಾದ ಹಗೆಯನ್ನು ವಿಷಕನ್ಯೆಯ ಮೂಲಕ ಜೈಸಲು ಹೂಡುವ ತಂತ್ರ ಇದು. ವಿಷ ಮತ್ಸ್ಯಾಹಾರದಿಂದ ಪೋಷಿಸಲ್ಪಟ್ಟ ತಂದೆ ತಾಯಿಗಳಿಗೆ ಜನಿಸಿದ ಹೆಣ್ಣು ಶಿಶುವಿಗೆ ವಯೋಗುಣಕ್ಕನು ಗುಣವಾಗಿ ವಿಷ ಸೇವನೆಯನ್ನು ಮಾಡಿಸಿದ್ದು ಹನ್ನೆರಡು ವರ್ಷಗಳ ವಯಸ್ಸಾದ ಮೇಲೆ ಆ ಬಾಲೆಯ ಅಂಗ ಸ್ಪರ್ಶವಾದರೆ ಆ ಪ್ರಾಣಿಗಳು ಆಗಲೇ ಹತವಾಗುವವು, ಚಂದ್ರಗುಪ್ತನು ಚಾಣಕ್ಯನ ಸಹಾಯದಿಂದ ನಂದರನ್ನು ನಾಶಮಾಡಿದ ಮೇಲೆ ಅಮಾತ್ಯರಾಕ್ಷಸನು ತನ್ನ ದೊರೆಗಳ ಮೇಲಿನ ನಿಷ್ಠೆಯಿಂದ ಚಂದ್ರಗುಪ್ತನನ್ನು ಕೊಲ್ಲಲು ಈ ವಿಷಕನ್ಯೆಯನ್ನು ಅವನಲ್ಲಿಗೆ ಕಳುಹಿಸಲು ಏರ್ಪಾಡು ಮಾಡುವನು. ಆದರೆ ಚಾಣಕ್ಯನ ಉಪಾಯಾಂತರಗಳಿಂದ ಪರ್ವತ ರಾಜನು ಅವಳ ಅಂಗ ಸ್ಪರ್ಶದಿಂದ ಮೃತ್ಯುವಿಗೀಡಾಗುವನು. ಚಂದ್ರಗುಪ್ತನಿಗೆ ಅಖಂಡ ಸಾಮ್ರಾಜ್ಯ ಕೈ ಸಾರುವುದು. ವಿಷಕನ್ಯೆಯರನ್ನು ವೈರಿಗಳನ್ನು ನಾಶಗೊಳಿಸಲು ಹೀಗೆ ಸಾಕಿ ಬೆಳೆಸುತ್ತಿದ್ದ ಪರಿಪಾಠ ಚಂದ್ರಗುಪ್ತನ ಕಾಲದಲ್ಲಿ ಇತ್ತೆಂದು ತಿಳಿದು ಬರುತ್ತದೆ. ರಾಜಕೀಯಕ್ಕೆ ಹೆಣ್ಣನ್ನು ಬಳಸಿಕೊಳ್ಳುತ್ತಿದ್ದ ಮಾದರಿಗಳಲ್ಲಿ ಇದೂ ಒಂದು. ಬೇಹುಗಾರಿಕೆಯ ಜಾಲದಲ್ಲಿ ವಿದೇಶಗಳು ಸ್ತ್ರೀಯರನ್ನು ಬಳಸುವುದು ಈಗ ಸಾಮಾನ್ಯವಾಗಿ ಬಿಟ್ಟಿದೆ.

ಗುಪ್ತಚಾರ ಪದ್ಧತಿಯ ಬಗ್ಗೆ ಚಾಣಕ್ಯನ 'ಅರ್ಥಶಾಸ್ತ್ರ'ದಲ್ಲಿ ಸಾಕಷ್ಟು ಮಾಹಿತಿ ದೊರಕುತ್ತದೆ. ರಾಮಾಯಣ ಮಹಾಭಾರತಗಳಲ್ಲಿ ಗುಪ್ತಚಾರ ಪದ್ಧತಿಯ ಬಗ್ಗೆ ಪ್ರಸ್ತಾಪವಿದ್ದರೂ ಅದನ್ನು ಶಾಸ್ತ್ರೀಯವಾಗಿ ಪರಿಶೀಲಿಸಿ, ಪರಿಪೂರ್ಣಗೊಳಿಸಿದ ಶ್ರೇಯಸ್ಸು ಚಾಣಕ್ಯನದೇ : "ರಾಜ್ಯದ

ಸುವ್ಯವಸ್ಥೆಯಲ್ಲಿ ಗುಪ್ತಚಾರರ ಪಾತ್ರ ಪ್ರಮುಖ. ಮಂತ್ರಿಗಳಾದವರು ಸರ್ವಯೋಗ್ಯರಾದ ವ್ಯಕ್ತಿಗಳನ್ನು ಗೂಢಚಾರರನ್ನಾಗಿ ನಿಯಮಿಸಬೇಕು" ಎಂದು ಹೇಳುವ ಚಾಣಕ್ಯನ ಗುಪ್ತಚಾರ ಪದ್ಧತಿಯಲ್ಲಿ ಐದು ಗುಪ್ತಚಾರ ಸಂಸ್ಥೆಗಳು ಹಾಗೂ ನಾಲ್ಕು ಸಂಚಾರಿ ಗುಂಪುಗಳಿವೆ. ಅವು ಇಂತಿವೆ :

೧. ಕಾಪಟಿಕ : ಇವನು ಕಪಟ ವೇಷಧಾರಿ. ಜನ ಹಾಗೂ ಪರಿಸ್ಥಿತಿಗಳ ಬಗ್ಗೆ ಪರೀಕ್ಷಿಸಬಲ್ಲವನೂ, ತತ್ಕಾಲಕ್ಕೆ ಉಪಾಯ ಸೂಚಿಸುವಂತಹ ಬುದ್ಧಿವಂತನೂ ಆಗಿರುತ್ತಾನೆ. ಸಾಮಾನ್ಯವಾಗಿ ವಿದ್ಯಾರ್ಥಿಗಳು ಇದಕ್ಕೆ ಸೂಕ್ತ. ಪ್ರಜೆಗಳಲ್ಲಿ, ಅಧಿಕಾರ ವರ್ಗದಲ್ಲಿ ಕಂಡು ಬರುವ ಲೋಪ ದೋಷಗಳನ್ನು ವರದಿ ಮಾಡುವುದು ಕಾಪಟಿಕನ ಕರ್ತವ್ಯ.

೨. ಉದಾಸ್ಥಿತ : ಬುದ್ಧಿವಂತ, ಪರಿಶುದ್ಧ ಹೃದಯಿ ಮತ್ತು ಸನ್ಯಾಸಿಯಂತೆ ವೇಷ ಧರಿಸಿದ ಗುಪ್ತಚಾರನೇ ಉದಾಸ್ಥಿತ. ಮಾಹಿತಿ ಸಂಗ್ರಹಿಸಬೇಕಿರುವ ಸ್ಥಳದಲ್ಲಿ ನೆಲೆಸಿ, ವ್ಯವಹಾರ, ವ್ಯವಸಾಯ, ಪಶುಸಂಗೋಪನೆ ಮುಂತಾದವುಗಳನ್ನು ಕೈಗೊಂಡಿರುವಂತೆ ನಟಿಸಿ, ಸ್ಥಳೀಯರಿಂದ ಮಾಹಿತಿ ಸಂಗ್ರಹಿಸುವಂತಹವನು. ಆಧುನಿಕ ಬೇಹುಗಾರಿಕೆ ಭಾಷೆಯಲ್ಲಿ ಹೇಳುವುದಾದರೆ 'ಬ್ಯಾಗ್ - ಮನ್'.

೩. ಗೃಹಪತಿ ವ್ಯಂಜನ : ಇವನ ಕಾರ್ಯವೂ ಹೆಚ್ಚು ಕಡಿಮೆ ಉದಾಸ್ಥಿತನಂತಹುದೇ. ಕೃಷಿಕಾರ್ಯ ಕೈಗೊಂಡಿರುವವನಂತೆ ನಟಿಸುವ, ಸ್ವಾಮಿನಿಷ್ಠ ಗುಪ್ತಚಾರ.

೪. ವೈದೇಹಿಕ ವ್ಯಂಜನ : ಇವನ ಕಾರ್ಯವಿಧಾನ ಮೇಲಿನೆರಡು ಕಾರ್ಯ ವಿಧಾನಗಳನ್ನು ಹೋಲುತ್ತದೆ. ಸಾಮಾನ್ಯವಾಗಿ ಇವನು ವೈಶ್ಯನಾಗಿದ್ದು ಹೊರನೋಟಕ್ಕೆ ವ್ಯಾಪಾರ ವೃತ್ತಿಯನ್ನು ಕೈಗೊಂಡಿರುತ್ತಾನೆ.

೫. ತಾಪಸವ್ಯಂಜನ : ಸಾಧು ಸನ್ಯಾಸಿಗಳನ್ನು ಗುಪ್ತಚಾರರನ್ನಾಗಿ ನೇಮಿಸಿಕೊಳ್ಳಬಹುದು. ಇವರೇ ತಾಪಸವ್ಯಂಜನರು. ಆಶ್ರಮ, ಶಿಷ್ಯಗಣ - ಮುಂತಾದವನ್ನು ಏರ್ಪಡಿಸಿಕೊಂಡಿದ್ದು, ಬರುವ ಜನರಿಂದ ಗುಪ್ತವಾಗಿ ಮಾಹಿತಿ ಸಂಗ್ರಹಿಸಿ, ರಾಜನಿಗೆ ತಿಳಿಯಪಡಿಸುವುದು ಇವರ ಕರ್ತವ್ಯ, ಈ ಐದು ಸಂಸ್ಥೆಗಳಲ್ಲದೆ, ಇನ್ನೂ ನಾಲ್ಕು ಸಂಚಾರಿ ಗುಂಪುಗಳಿವೆ. ಅವು ಇಂತಿವೆ : ೧. ಸತ್ರಿ : ಈ ಗುಂಪಿನಲ್ಲಿ ಇವರು ಅತ್ಯಂತ ಬುದ್ಧಿವಂತರು ಹಾಗೂ ಧೂರ್ತರು. ಹಲವಾರು ವಿದ್ಯೆಗಳನ್ನು ಬಲ್ಲವರು. ಇವರಿಗೆ ಸಾಮುದ್ರಿಕಲಕ್ಷಣಶಾಸ್ತ್ರ, ವಶೀಕರಣ ವಿದ್ಯೆ, ಶಕುನಶಾಸ್ತ್ರ, ಸಂಗೀತ, ಕಾಮಶಾಸ್ತ್ರ, ಮುಖ ಲಕ್ಷಣದಿಂದ ಮನೋಭಾವ ಅಳೆಯುವ ಕಲೆ ಇತ್ಯಾದಿಗಳ ಪರಿಚಯವಿರುತ್ತಿದ್ದವೆನ್ನಲಾಗಿದೆ. ೨. ತೀಕ್ಷ್ಣ : ಈ ಗುಂಪಿನ ಗುಪ್ತಚಾರರು ದೈಹಿಕವಾಗಿ ಬಲಾಢ್ಯರು. ಸ್ವಭಾವತ ಧೈರ್ಯಶಾಲಿಗಳು. ಹುಲಿ, ಆನೆಗಳಂತಹ ಹಿಂಸ್ರ ಪ್ರಾಣಿಗಳೊಂದಿಗೆ ಹೊಡೆದಾಡಬಲ್ಲರು. ಶಾರೀರಿಕ ಶ್ರಮ ಲೆಕ್ಕಸದಂತಹವರು.

೩. **ರಸದ :** ಈ ಗುಂಪಿನ ಗೂಢಚಾರಿಗಳು ಸ್ವಭಾವತಃ ಕ್ರೂರಿಗಳು. ಬಂಧು ಬಾಂಧವರಿಗೆ ಬೇಕಾದರೂ ನಿರ್ದಯೆಯಿಂದ ವಿಷ ಹಾಕಿ ಕೊಲ್ಲಬಲ್ಲಂತಹವರು.

೪. **ಪರಿವ್ರಾಜಿಕಾ :** ಈ ಗುಂಪಿನಲ್ಲಿ ಸ್ತ್ರೀಯರಿರುತ್ತಾರೆ. ವಿಧವೆಯರು, ಬ್ರಾಹ್ಮಣೆಯರು, ಸನ್ಯಾಸಿನಿಯರು, ಬೌದ್ಧ ಭಿಕ್ಷುಕಿ, ಶೂದ್ರ ಸ್ತ್ರೀ ಇವರೆಲ್ಲ ಪರಿವ್ರಾಜಿಕಾ ಗುಂಪಿಗೆ ಸೇರುತ್ತಾರೆ. ರಾಣಿ ವಾಸದವರ ವಿಶ್ವಾಸಗಳಿಸುವ, ಅಮಾತ್ಯರಂತಹ ಅಧಿಕಾರ ವರ್ಗದವರೊಂದಿಗೆ ಸಂಬಂಧವಿಟ್ಟುಕೊಂಡು ಮಾಹಿತಿ ಸಂಗ್ರಹಿಸುವುದು ಇವರ ಕೆಲಸ. ಈ ಗೂಢಚಾರಿಣಿಯರನ್ನು ಆಂತರಿಕ ಬೇಹುಗಾರಿಕೆಗೆ ಬಳಸಿಕೊಳ್ಳುವುದೇ ಹೆಚ್ಚು.

ಇವಿಷ್ಟೇ ಅಲ್ಲದೆ 'ಅಪಸರ್ಪ' ಎನ್ನುವ ಗುಪ್ತಚಾರ ವರ್ಗವೊಂದನ್ನು ಚಾಣಕ್ಯ ಉಲ್ಲೇಖಿಸುತ್ತಾನೆ. ಈ ಗುಂಪಿನವರು ಒಂದು ರಾಜ್ಯದ ಅರಸನ ಅವಕೃಪೆಗೆ ಒಳಗಾಗಿ ದೇಶದಿಂದ ಬಹಿಷ್ಕೃತರಾದವರೆಂದು ಹೊರನೋಟಕ್ಕೆ ತೋರಿಸಿಕೊಳ್ಳುತ್ತಿರುತ್ತಾರೆ. ಬೇರೊಂದು (ಶತ್ರು) ರಾಜ್ಯದಲ್ಲಿ ನೆಲೆಸಿ, ಅಲ್ಲಿನ ಗುಪ್ತ ಮಾಹಿತಿ ವರದಿ ಮಾಡುವ ಹೊಣೆ ಇವರದು. ಆಧುನಿಕ ಪರಿಭಾಷೆಯಲ್ಲಿ ಇಂತಹವರು 'ಇಮ್ಮಡಿ ಬೇಹುಗಾರ' ಎನಿಸಿಕೊಳ್ಳುತ್ತಾರೆ! ಆ ಕಾಲದಲ್ಲಿ ಗುಪ್ತಚಾರರ ಮೇಲೆ ಗುಪ್ತಚಾರರನ್ನು ನೇಮಿಸುವ ವ್ಯವಸ್ಥೆ ಇತ್ತೆಂದು ಚಾಣಕ್ಯನ ಬರಹದಿಂದ ತಿಳಿದು ಬರುತ್ತದೆ!

'ಮುದ್ರಾರಾಕ್ಷಸ' ನಾಟಕದಲ್ಲಿ ಚಾಣಕ್ಯನ ಗುಪ್ತಚಾರ ಪದ್ಧತಿಯ ಸ್ಪಷ್ಟ ಪರಿಕಲ್ಪನೆ ಕಂಡು ಬರುತ್ತದೆ. ಜೀವನ ಸಿದ್ಧಿ, ಭಾಗುರಾಯಣ, ಸಿದ್ಧಾರ್ಥಕ, ಸಮಿದ್ಧಾರ್ಥಕ - ಮುಂತಾದ ಹೆಸರುಗಳ ಉಲ್ಲೇಖವಿದೆ. ಇವರೆಲ್ಲ ಅಮಾತ್ಯ ರಾಕ್ಷಸ ಹಾಗೂ ಮಲಯ ಕೇತುವಿನ ಮೇಲೆ ನಿಗಾ ಇಟ್ಟಿದ್ದ ಚಾಣಕ್ಯನ ಗೂಢಚಾರರು ಮಹಾ ಮೇಧಾವಿಯಾಗಿದ್ದ ಅಮಾತ್ಯ ರಾಕ್ಷಸನಿಗೇ ಈ ಗುಪ್ತಚಾರರ ಸುಳಿವು ಸಿಕ್ಕಿರಲಿಲ್ಲವೆಂದರೆ, ಚಾಣಕ್ಯ ಎಂತಹ ಚತುರ ಗೂಢಚಾರರನ್ನಿಟ್ಟಿರಬೇಕು? ! ಇಂತಹ ಚತುರ ಗೂಢಚಾರರು ಹಾಗೂ ಚಾಣಕ್ಯನಂತಹ ಮೇಧಾವಿ ಮಂತ್ರಿಯ ಮೇಲ್ವಿಚಾರಣೆಯಲ್ಲಿ ಚಂದ್ರಗುಪ್ತ ಮೌರ್ಯ ಶತ್ರು ಭೀತಿಯಿಲ್ಲದೆ ಹಾಯಾಗಿದ್ದಿರಬೇಕು. . .!

ಎಲೈ ಮಂತ್ರ ಸಾನಿಯೇ, ನಿನ್ನಿಂದ ನಮಗೆ ಕೆಲಸಮುಂಟು ಅನ್ಯತ್ರ ಹೋಗಬೇಡ

(ಮುದ್ರಾ, ಪು. ೨೪೧)

ನಂದರು ನಾಶವಾದ ಮೇಲೆ ಪರ್ವತರಾಜ್ಯಕ್ಕೆ ಹೋಗುವ ಮುನ್ನ ಅಮಾತ್ಯರಾಕ್ಷಸನ ಪತ್ನಿ ಪುತ್ರರನ್ನು ಚಂದನದಾಸನೆಂಬ ವರ್ತಕನ ಮನೆಯಲ್ಲಿರಿಸಲಾಗಿತ್ತು. ಅವರನ್ನು ಪತ್ತೆ ಹಚ್ಚುವ

ಕಾರ್ಯವನ್ನು ಚಾಣಕ್ಯ ಕೈಗೊಂಡನು. ಅಮಾತ್ಯ ರಾಕ್ಷಸನನ್ನು ಹಿಂದೆ ಕರೆಸಬೇಕಾದರೆ ಚಂದನದಾಸನನ್ನು ಶೂಲಕ್ಕೇರಿಸುವ ಶಿಕ್ಷೆ ವಿಧಿಸಬೇಕಾಗಿತ್ತು. ಬಳೆಗಾರ ಶೆಟ್ಟಿ ಚಂದನದಾಸನನ್ನು ತಪ್ಪಿತಸ್ಥನನ್ನಾಗಿ ಮಾಡಲು ರಾಕ್ಷಸ ಮುದ್ರಿಕೆ ಬೇಕಾಗಿತ್ತು. ಅದನ್ನು ಪಡೆಯಲು ಸೂಲಗಿತ್ತಿಯನ್ನು ಬಳಸಿಕೊಳ್ಳಲಾಯಿತು. ರಾಕ್ಷಸ ಪತ್ನಿಯ ಹೆರಿಗೆ ಸಂದರ್ಭದಲ್ಲಿ ಆ ಮುದ್ರಿಕೆಯನ್ನು ಪಡೆದುಕೊಳ್ಳಲಾಯಿತು. ಹಿಂದೆ ಹೆರಿಗೆ ಮಾಡಿಸುತ್ತಿದ್ದವರು ಸೂಲಗಿತ್ತಿಯರು. ಸೂಳ್ ಎಂದರೆ ಸರದಿ. ಹೆರಿಗೆ ಎಂದರೆ ಕಾಲಾವಧಿ ಇತ್ಯಾದಿ ಅರ್ಥಗಳುಂಟು. ಮಂತ್ರಸಾನಿ, ಸೂಲಗಿತ್ತಿ, ಬೇರೆ ಬೇರೆ ಹೆಸರುಗಳು. ಆಧುನಿಕ ಆಸ್ಪತ್ರೆ, ವಿಜ್ಞಾನ ಔಷಧಿಗಳು ಸಂಶೋಧನೆಯಾದ ಮೇಲೆ ಗ್ರಾಮಾಂತರದಲ್ಲೂ ಇವರು ಕಾಣೆಯಾಗುತ್ತಿದ್ದಾರೆ.

ಗ್ರಾಮೀಣ ಐತಿಹ್ಯ ಮತ್ತು ಪುರಾಣಗಳು

ಪ್ರಯತ್ನ ದೊಡ್ಡದೋ ಪುಣ್ಯ ದೊಡ್ಡದೋ

(ರಾ. ಕಥಾಸಾರ)

ಧನದತ್ತ ಪ್ರಯತ್ನ ದೊಡ್ಡದು ಎನ್ನುತ್ತಾನೆ. ವಸುಮಿತ್ರ ಪುಣ್ಯವೇ ದೊಡ್ಡದು ಎನ್ನುತ್ತಾನೆ. ಧರ್ಮಾಧಿಕರಣರಿಗೂ ಈ ಸಮಸ್ಯೆಯನ್ನು ಬಿಡಿಸಲಾಗಲಿಲ್ಲ. ಅಭಯಕುಮಾರನ ಮುಂದೆ ಈ ಸಮಸ್ಯೆ ಬಂತು. "ಈತ ಒಂದು ದೊಡ್ಡ ಮನೆಯಲ್ಲಿ ಅಡಿಗೆಯ ವಸ್ತುವನ್ನೆಲ್ಲ ತುಂಬಿಸಿಟ್ಟ. ಜೊತೆಗೆ ನಾಲ್ಕಾರು ಬುತ್ತಿಯನ್ನು ಕಟ್ಟಿಸಿದ. ಅವುಗಳೊಂದರಲ್ಲಿ ಕೆಲವು ರತ್ನಗಳನ್ನು ಇರಿಸಿದ. ಆ ಮನೆಯನ್ನು ಗಾಢಾಂಧಕಾರ ಮಾಡಿ ಅದರೊಳಗೆ ಇವರಿಬ್ಬರನ್ನು ಕಳುಹಿಸಿ ಬಾಗಿಲನ್ನು ಭದ್ರಪಡಿಸಿದ. ವಸುಮಿತ್ರ 'ಪುಣ್ಯಮೇ ಶರಣೆಂದು' ಒಂದು ಪ್ರದೇಶದಲ್ಲಿ ತೆಪ್ಪಗೆ ಕುಳಿತ. ಆದರೆ ಧನದತ್ತ 'ಪ್ರಯತ್ನಕಾರ್ಯಮೆಂದು' ಕೈಯಿಂದಲೇ ಮನೆಯಲ್ಲಿದ್ದ ವಸ್ತುಗಳನ್ನು ಪರಿಚಯ ಮಾಡಿಕೊಳ್ಳುತ್ತ ಚಕಮುಕಿಯಿಂದ ಬೆಂಕಿ ಹೊತ್ತಿಸಿ, ದೀಪ ಬೆಳಗಿಸಿ, ಅಡುಗೆಯ ಪದಾರ್ಥಗಳನ್ನು ಕಂಡು ಬುತ್ತಿಯನ್ನು ಮೆಚ್ಚದೆ ನಾಲಗೆಗೆ ರುಚಿಯಾದುದನ್ನು ಮಾಡಿಕೊಂಡು ಊಟ ಮಾಡಿದ. ಕಡೆಗೆ ವಸುಮಿತ್ರನನ್ನು ಮೂದಲಿಸಿ ಅಲ್ಲಿದ್ದ ಒಂದು ಬುತ್ತಿಯನ್ನು ಕೊಟ್ಟು ಬೆಳಕನ್ನು ಮಾಡಿ ನೀರನ್ನು ನೀಡಿದ. ಇದೇ ನನ್ನ ಪುಣ್ಯವೆಂದು ಬುತ್ತಿ ಉಣ್ಣುವಾಗ ರತ್ನಗಳು ಸಿಕ್ಕಿದವು, ಅವನ್ನು ಎತ್ತಿಕೊಂಡ. ಮಾರನೇ ದಿನ ಸಭೆಯಲ್ಲಿ ವಿಚಾರಿಸಿದಾಗ ಇಬ್ಬರೂ ತಮ್ಮ ತಮ್ಮ ವರದಿ ಒಪ್ಪಿಸಿದರು. ಆಗ ಎಲ್ಲರು ಪುಣ್ಯ ಉತ್ಕೃಷ್ಟವೆಂದರು. ಆಗ ಅಭಯಕುಮಾರ 'ಪುಣ್ಯ ಅನುಸಾರಂ ಪ್ರಯತ್ನಮೆಂದುಂ ಕಾರ್ಯಾನು ರೂಪಂ ಕಾರಣವೆಂಬುದಲ್ಲ. ಆ ಕಾರ್ಯಸಿದ್ಧಿಗೆ ಕಾರಣಂಗಳಪ್ಪುವು' ಎಂದು ಅವರಿಗೆ ತಿಳಿಸಿ ಅವರ ಸಂವಾದವನ್ನು ಬಿಡಿಸಿ ಕಳಿಸುತ್ತಾನೆ" (ಪ್ರಾಚೀನ ಕ. ಜೈ. ಸಾ. ಜಾನಪದ ಕಥೆಗಳು ಒಂದು ಅಧ್ಯಯನ, ಪು.೯೭) ಒಂದು ಕಾರ್ಯವನ್ನು ನೆರವೇರಿಸಬೇಕಾದರೆ ಪ್ರಯತ್ನ ಮತ್ತು ಪುಣ್ಯ ಎರಡೂ ಮುಖ್ಯ. ಪುಣ್ಯದಿಂದ ಹೆಚ್ಚು ಲಾಭ ಎಂಬುದನ್ನು ಈ ಕಥೆ ಪ್ರತಿಪಾದಿಸುತ್ತದೆ. ಇದೇ ಮಾದರಿಯ 'ಯಾರು ಹೆಚ್ಚು' ಎಂಬ ಜನಪದ ಕಥೆಯೂ ಚಾಲ್ತಿಯಲ್ಲಿದೆ (ಜನಪದ ಕಥಾಮೃತ, ಪು. ೭೯)

ಚಾಮುಂಡಿ ಎಂಬ ಪೆಸರಿಟ್ಟು ಮಹಾ ಘೋರಾರಣ್ಯದೊಳ್ ಪರ್ವತದ ಮೇಲೆ ಸ್ಥಾಪಿಸಿ

(ರಾ. ಕಥಾಸಾರ ೧೮೮)

ಶಬರರಲ್ಲಿ ಒಬ್ಬರಾದ ಕರಿಬಂಟನು ರಕ್ಕಸಿಯೊಬ್ಬಳಿಂದ ಹತನಾದ ನಂತರ ಬಲ್ಲಾಳ ಸಂತತಿಯ ಕೆಲವರು ವಿಜಯ ನಗರಕ್ಕೆ ಹೋದರು. ಕೆಲವರು ಕೇರಳ ಸೇರಿದರು. ಕಾರುಗಹಳ್ಳಿಯ

ವೀರಸೂರನೆಂಬುವನು ಕೆಲವು ರಾಜ್ಯವನ್ನು ಸಾಧಿಸಿ ವಾಸಂತಿಕಾದೇವಿಗೆ ಚಾಮುಂಡಿ ಎಂಬ ಹೆಸರನ್ನಿಟ್ಟು ಪರ್ವತದ ಮೇಲೆ ಸ್ಥಾಪಿಸಿ ಆಕೆಯ ವರದಿಂದ ಮಹಿಷಾಸುರನನ್ನು ಕೊಂದು ಮಹಿಷಾಸುರ ಎಂಬ ಪಟ್ಟಣ ನಿರ್ಮಿಸಿದನು. ಈ ಮಹಿಷಪುರವೇ ಈಗಿನ ಮೈಸೂರು. ಚಾಮುಂಡಿ ಇರುವ ಸ್ಥಳವೇ ಚಾಮುಂಡಿ ಬೆಟ್ಟ. ಚಾಮುಂಡಿ ಮೈಸೂರು ನಗರದ ದೇವತೆಯಾಗಿದ್ದಾಳೆ. ಆರಂಭದಲ್ಲಿ ಈಕೆ ಜೈನಯಕ್ಷಿ ಎಂದು ಹೇಳುವುದುಂಟು. 'ಆ ಮಹಾದೇವಿಗೆ ಚಾಮುಂಡೇಶ್ವರಿ ಎಂಬ ಅಭಿದಾನಮನಿಟ್ಟು ಬೆಟ್ಟದೊಳ್ ಗುಡಿಗೋಪುರಮಂ ಮಾಡಿಸಿ ಪೂಜಿಸುತ್ತ ಮೈಸೂರಿಗೆ ಕೋಟೆಯಂ ಕಟ್ಟಿಸಿ ಸುಖಮಿರಲ್ ಇತ್ತ ಕಾರುಗೆ ಹಳ್ಳಿಯ ಶಾಂತೊಡೆಯರ್ ಆ ಬೆಟ್ಟದ ಮೇಲೆ ಮಹಾಬಲೇಶ್ವರನ ಗುಡಿಯಂ ನಿರ್ಮಿಸಿ ಚಾಮುಂಡೇಶ್ವರಿಯಂ ಸ್ಥಾಪಿಸಿದಂ' ಎಂದು ಪ್ರಯೋಗವಿದೆ.

ನಾರದನ ವಿವೇಕ

ಚಾವುಂಡರಾಯ ಪುರಾಣದ ಮುನಿಸು ವ್ರತ ತೀರ್ಥಂಕರ ಕಥಾಭಾಗದಲ್ಲಿ ಈ ಸನ್ನಿವೇಶ ವಿದೆ. ಹಿಟ್ಟಿನಿಂದ ಎರಡು ಮೇಕೆಯನ್ನು ಮಾಡಿದ ಗುರುಕ್ಷೀರಕದಂಬನು ಒಂದನ್ನು ತನ್ನ ಮಗನಾದ ಪರ್ವತನಿಗೂ ಮತ್ತೊಂದನ್ನು ಶಿಷ್ಯ ನಾರದನಿಗೂ ಕೊಟ್ಟು ಯಾರೂ ಇಲ್ಲದ ಸ್ಥಳದಲ್ಲಿ ಇದನ್ನು ಪೂಜೆ ಮಾಡಿ ಇದರ ಕಿವಿಯನ್ನು ಕತ್ತರಿಸಿ ತೆಗೆದುಕೊಂಡು ಬನ್ನಿ ಎಂದು ಹೇಳಿದ. ಪರ್ವತನು ಜನವಿಲ್ಲದ ಅರಣ್ಯದಲ್ಲಿ ಅದರ ಕಿವಿಯನ್ನು ಕತ್ತರಿಸಿ ತರುತ್ತೇನೆ. ಆದರೆ ನಾರದನು ಜನರಿಲ್ಲದ ಸ್ಥಳವೇ ಇಲ್ಲವೆಂದು ಗುರುವಿಗೆ ಹೇಳಿ ಅವರ ಮುಂದೆ ಹಿಟ್ಟಿನ ಮೇಕೆಯನ್ನು ಇಟ್ಟನು. ಇದೇ ಮಾದರಿಯ ಕತೆ ಕನಕದಾಸರಿಗೆ ಸಂಬಂಧಿಸಿದಂತೆ ಪ್ರಚಲಿತ ದಲ್ಲಿದೆ. ಈತನ ಗುರು ಯಾರೂ ಇಲ್ಲದ ಜಾಗದಲ್ಲಿ ತಿಂದು ಬನ್ನಿರೆಂದು ತನ್ನ ಶಿಷ್ಯರಿಗೆಲ್ಲ ಬಾಳೇಹಣ್ಣುಗಳನ್ನು ಕೊಟ್ಟರು. ಎಲ್ಲರೂ ಜನರಿಲ್ಲದ ಪ್ರದೇಶಗಳನ್ನು ಹುಡುಕಿ ಅಲ್ಲಿ ತಿಂದು ಬರುತ್ತಾರೆ. ಆದರೆ ಕನಕ ಮಾತ್ರ ಯಾರೂ ಇಲ್ಲದ ಸ್ಥಳ ಜಗತ್ತಿನಲ್ಲಿ ಇಲ್ಲವೇ ಇಲ್ಲವೆಂದು ನಿರ್ಧರಿಸಿ ಹಣ್ಣನ್ನು ಹಾಗೆಯೇ ತಂದು ತನ್ನ ಗುರುವಿಗೆ ಒಪ್ಪಿಸುತ್ತಾನೆ. ಈ ಮುಖಾಂತರ ತನ್ನ ಶ್ರೇಷ್ಠತೆಯನ್ನು ಕನಕದಾಸರು ಸಾಬೀತು ಪಡಿಸುತ್ತಾರೆ. ಇದು ಹೆಚ್ಚು ಪ್ರಚಲಿತದಲ್ಲಿರುವ ಕಥೆ.

ನಾರದನ ಜಾಣ್ಮೆ

ಚಾವುಂಡರಾಯ ಪುರಾಣದಲ್ಲಿ ಮುನಿಸುವ್ರತ ತೀರ್ಥಂಕರ ಪುರಾಣ ಭಾಗದಲ್ಲಿ ಬರುವ ಒಂದು ಬುದ್ಧಿವಂತಿಕೆಯ ಕಥೆ. ಗುರು ಕ್ಷೀರ ಕದಂಬನ ಪುತ್ರ ಪರ್ವತ, ನಾರದ ಶಿಷ್ಯ ಇಬ್ಬರಿಗೂ ವಿದ್ಯಾಭ್ಯಾಸ ಮಾಡಿಸುತ್ತಿದ್ದ. ಸಮಿತ್ತು ಪುಷ್ಪಗಳನ್ನು ತರುವುದಕ್ಕಾಗಿ ಇಬ್ಬರೂ

ವನಕ್ಕೆ ಹೋದರು. ಕ್ಷಮಾಷೆಗಾಗಿ ನಾರದ ಈಗ ನೀರು ಕುಡಿದು ಹೋಗಿರುವ ನವಿಲುಗಳಲ್ಲಿ ಒಂದು ಗಂಡು ಏಳು ಹೆಣ್ಣು ಎಂದು ಹೇಳಿಬಿಟ್ಟ, ಪರೀಕ್ಷಿಸಿ ನೋಡಿದ ಪರ್ವತನಿಗೆ ನಿಜ ಸ್ಥಿತಿಯನ್ನು ಕಂಡು ನಾರದನ ಬಗ್ಗೆ ಆಶ್ಚರ್ಯಗೊಂಡ. ಅದೇ ರೀತಿ ಆನೆ ಹೋದ ಹಾದಿಯನ್ನು ಗಮನಿಸಿ 'ಹೆಣ್ಣಾನೆ ಈ ದಾರಿಯಲ್ಲಿ ಹೋಗಿದೆ ಎಡಗಡೆಯ ಕಣ್ಣು ಅದಕ್ಕಿಲ್ಲ. ಗರ್ಭಿಣಿ ಅದರ ಮೇಲೆ ಕುಳಿತಿದ್ದಾಳೆ. ಬಿಳಿಯ ಮೇಲು ಹೊದಿಕೆಯನ್ನು ಆಕೆ ಧರಿಸಿದ್ದಾಳೆ' ಆಕೆಗೆ ಈದಿನ ಮಗುವಾಯಿತು ಎಂದೂ ಹೇಳಿದ ಇದೂ ಸಹ ನಿಜವೆನಿಸಿತು. ಪರ್ವತನಿಗೆ ನಾರದನ ಬಗೆಗೆ ಆತನಲ್ಲಿ ಅಸೂಯೆ ಮೂಡಿತು. ತನಗೆ ತಂದೆ ಸರಿಯಾದ ರೀತಿಯಲ್ಲಿ ವಿದ್ಯಾಭ್ಯಾಸ ಮಾಡಿಸಲಿಲ್ಲವೆಂದು ತಾಯಿಗೆ ಹೇಳಿದ. ಮಗನ ಈ ದೂರನ್ನು ತಾಯಿ ಅವನ ತಂದೆಯ ಗಮನಕ್ಕೆ ತಂದಳು. ತಾಯಿ ಮತ್ತು ಮಗನ ಸಮ್ಮುಖದಲ್ಲಿ ಕ್ಷೀರ ಕದಂಬನು ನಾರದನನ್ನು ವಿಚಾರಿಸಿದ. ಅದಕ್ಕೆ ಆತ ಈ ರೀತಿ ಉತ್ತರಿಸಿದ: "ನೀರು ಕುಡಿಯಲು ಹೋದ ನವಿಲುಗಳಲ್ಲಿ ಒಂದು ತನ್ನ ಸೋಗೆ (ಗರಿ) ನೆನೆಯುವುದೆಂದು ನೆನೆದರೆ ನಡೆಯಲು ಕಷ್ಟವೆಂದು ಹಿಂದು ಹಿಂದಕ್ಕೆ ಹೆಜ್ಜೆ ಇಟ್ಟಿರುವುದನ್ನು ಕಂಡು ಒಂದು ಗಂಡು ನವಿಲು ಉಳಿದ ಏಳು ಹೆಣ್ಣು ಎಂದು ಊಹಿಸಿ ಹೇಳಿದೆ ಎಂದ. ಆನೆ ಹೋದ ಮಾರ್ಗದಲ್ಲಿ ಹಿಂದಿನ ಕಾಲುಗಳ ಮೂಲಕ ಮೂತ್ರ ಹರಿದಿರುವುದನ್ನು ಕಂಡು ಹೆಣ್ಣಾನೆ ಎಂದೂ ಅದು ಬಲಭಾಗದಲ್ಲಿ ಮಾತ್ರ ಗಿಡ ಬಳ್ಳಿಗಳನ್ನು ತಿಂದಿದ್ದುದರಿಂದ ಅದಕ್ಕೆ ಎಡಗಣ್ಣಿಲ್ಲವೆಂದೂ ನದಿಯ ಮರಳಿನ ಮೇಲೆ ಮಲಗಿದ್ದ ಹೆಣ್ಣಿನ ಉದರ ಸ್ಪರ್ಶನ ಲಾಂಛನಗಳಿಂದ ಆಕೆ ಗರ್ಭಿಣಿ ಎಂದೂ ಮುಳ್ಳು ಮರಗಳಲ್ಲಿ ಸಿಕ್ಕಿಕೊಂಡಿದ್ದ ಬಟ್ಟೆಯ ಎಳೆಗಳಿಂದ ಬಿಳಿಯದನ್ನು ಹೊಂದಿದ್ದಾಳೆಂದು, ಹೆಣ್ಣಾನೆಯನ್ನು ಕಟ್ಟಿ ಹಾಕಿದ್ದ ಮನೆಯಲ್ಲಿ ಬಾವುಟವಿದ್ದುದರಿಂದಲೂ, ಬದ್ದವಣ ಕೇಳಿ ಬಂದುದರಿಂದಲೂ ಆಕೆ ಮಗನನ್ನು ಪಡೆದಳೆಂದು ಊಹಿಸಿ ಹೇಳಿದೆ ಎಂದನು" (ಪ್ರಾಚೀನ ಕನ್ನಡ ಜೈನ ಸಾಹಿತ್ಯದಲ್ಲಿ ಜಾನಪದ ಕಥೆಗಳು ಒಂದು ಅಧ್ಯಯನ, ಪುಟ ೪೪)

ಹೀಗೆ ನಡೆದ ಘಟನೆಯನ್ನು ಊಹೆಯಿಂದ ಹೇಳುವ ಆಶಯಗಳು ಜನಪದ ಕಥೆಗಳಲ್ಲಿ ಸಾಕಷ್ಟು ಕಂಡುಬರುತ್ತವೆ. 'ಗೌಡನ ಸಾಲ್ಕು ಹರಳು' ಎಂಬ ಜಾನಪದ ಕಥೆಯಲ್ಲಿ (೧೧೫ ಜಾನಪದ ಕಿರು ಕಥೆಗಳು, ಪು. ೧-೯) ಕಣ್ಣಾರೆ ಕಾಣದೆಯೇ ಬುದ್ಧಿ ಶಕ್ತಿಯಿಂದ ಅನುಮಾನಿಸಿ ಹೇಳುವ ವಿವರಗಳು ಬರುತ್ತವೆ. ಪ್ರತಿಯೊಬ್ಬ ವ್ಯಕ್ತಿಯೂ ಒಂದಲ್ಲ ಒಂದು ರೀತಿಯಲ್ಲಿ ಬುದ್ಧಿವಂತನಾಗಿರುತ್ತಾನೆ. ವಿಶೇಷ ಬುದ್ಧಿ ಇರುವವ ಬುದ್ಧಿ ಹೇಗೆ ಕೆಲಸ ಮಾಡುತ್ತದೆಂಬುದನ್ನು ಚಾವುಂಡರಾಯ ಪುರಾಣದ ಕಥೆ ನಿರೂಪಿಸುತ್ತದೆ.

ಪಾಪದ ಫಲದಿಂದೆ ಮೇೞುಂ ದಿವಸದಿಂದೊಳಗೌದುಂಬರ ಕುಷ್ಠಮಾಗಿ ಪುೞಿತು ನಮೆದು ಸತ್ತು ಕೌಸಂಬಿಯೆಂಬ ಪೊೞಲೊಳ್. . . . ಪೆಣ್ಗತ್ತೆಯಾಗಿ ಪುಟ್ಟಿ ಪಿರಿಯವಪ್ಪ ಪೊಱೆಗಳಂ ಪೊತ್ತು ಪೋಗಿ ಬೆನ್ನೊಳ್ ನಾಳಿ ಬಿರ್ದ್ದು ಕೞಿಮೆಯಾಗಿ

ಪುೞಿತು ನಮೆದು ಸತ್ತು ಮತ್ತಮಾ ಪೊೞಲೊಳ್ ಪೇಪಂದಿಯಾಗಿ ಪುಟ್ಟಿ ಸತ್ತು. . . . . ಪೆಣ್ನಾಯಾಗಿ ಮಾದೆಗರ ಮನೆಯೊಳ್ ಪುಟ್ಟಿ ಸತ್ತು. .

(ವಡ್ಡಾ. ಪು. ೮-೯)

ಸುಕುಮಾರ ಸ್ವಾಮಿ ಕಥೆಯಲ್ಲಿ ಬರುವ ಸನ್ನಿವೇಶ. ಸೂರ್ಯಮಿತ್ರರು ಅಗ್ನಿಭೂತಿಗೆ ಹೇಳುವ ಸಂದರ್ಭ. ಮತ್ತೆ ಮತ್ತೆ ಹುಟ್ಟುವುದು, ಮತ್ತೆ ಮತ್ತೆ ಸಾಯುವ ಈ ಪ್ರಕ್ರಿಯೆ ವಡ್ಡಾರಾಧನೆಯ ಕಥೆಗಳಲ್ಲಿ ಪದೇ ಪದೆ ಕಾಣಿಸಿಕೊಳ್ಳುತ್ತದೆ. ಪಾಪ ಕೃತ್ಯದ ಸಲುವಾಗಿ ಮನುಷ್ಯ ತಿರ್ಯಕ್ ಗತಿಗಳಲ್ಲಿ ಚಲನಶೀಲನಾಗುವುದನ್ನು ವಡ್ಡಾರಾಧನಕಾರ ಕೆಲವು ಕಡೆ ವಿವರವಾಗಿಯೇ ವರ್ಣಿಸತೊಡಗುತ್ತಾನೆ. ಅಂಥದ್ದೊಂದು ಪ್ರಸಂಗವಿದು : ಅವದಿ ಜ್ಞಾನವಿದ್ದ ಸೂರ್ಯ ಮಿತ್ರರು "ವಾಯಭೂತಿ ಜೀವವು ನಮ್ಮನ್ನು ತಿರಸ್ಕರಿಸಿದುದರ ಫಲವಾಗಿ ಕುಷ್ಠರೋಗದಿಂದ ಸತ್ತು ಕತ್ತೆಯಾಗಿ, ಹಂದಿಯಾಗಿ, ಹೆಣ್ಣುನಾಯಾಗಿ, ಆಮೇಲೆ ಹೊಲೆಯರ ಮಗಳಾಗಿ ಹುಟ್ಟಿದ್ದು, ನೀವು ಮಾಡಿದ ಉಪದೇಶದ ಫಲದಿಂದ ಉತ್ತಮಗತಿಗೆ ಬಂದು, ಈಗ ಸೋಮಶರ್ಮನ ಮಗಳು ನಾಗಶ್ರೀಯಾಗಿ ಹುಟ್ಟಿದ್ದಾಳೆ" (ವಡ್ಡಾರಾಧನ ಕಥಾಲೋಕ, ಪು. ೧೦) ಎಂದು ಹೇಳಿದರು.

ವಿಷ್ಣು ಹತ್ತು ಅವತಾರಗಳನ್ನು ತಾಳಿರುವುದನ್ನು ಇಲ್ಲಿ ಗಮನಿಸಬಹುದು. ಹಿಂದೂ ಧರ್ಮದಲ್ಲಿಯೂ ಪುನರ್ಜನ್ಮ ಕಲ್ಪನೆಗೆ ಆಸ್ಪದವಿದೆ. ಆತ್ಮದ ಅವಿನಾಶತ್ವವನ್ನು ಕುರಿತು ಭಗವದ್ಗೀತೆ ಸಾರಿದೆ. ಮನುಷ್ಯ ಪುಣ್ಯ ಮಾಡಿದರೆ ಸ್ವರ್ಗಲೋಕ, ಪಾಪ ಮಾಡಿದರೆ ನರಕಲೋಕ ಪ್ರಾಪ್ತಿಯಾಗುತ್ತದೆಂಬ ಕಲ್ಪನೆಗಳಿವೆ. ಎಸ್ಕಿಮೋಗಳಲ್ಲಿ ಚಂದ್ರನ ಸಹಾಯದಿಂದ ಸತ್ತವರು ಮತ್ತೆ ಮನುಷ್ಯರಾಗಿ ಪ್ರಾಣಿ, ಪಕ್ಷಿಗಳಾಗಿ ಮರು ಜನ್ಮ ಪಡೆಯುತ್ತಾರೆಂಬ ನಂಬಿಕೆ ಇದೆ. ಜನ್ಮಾಂತರದ ಕತೆಗಳೂ ನಮ್ಮಲ್ಲಿ ಸಾಕಷ್ಟಿವೆ. 'ಯಾವ್ಯಾವ ಜನ್ಮದ ಸಂಬಂಧವೋ ಏನು ಕತೆಯೋ' 'ಯಾವ ಜನ್ಮದಲ್ಲಿ ಋಣ ಮಾಡಿದ್ದೆನೋ ಇವನಿಗೆ' - ಎಂಬಿತ್ಯಾದಿ ಮಾತುಗಳು ಚಾಲ್ತಿಯಲ್ಲಿವೆ. ಜೈನಧರ್ಮದ ಭವಾವಳಿ ಕತೆಗಳು ಮನುಷ್ಯನ ವಿಕಾಸಮುಖವನ್ನು ಪ್ರತಿನಿಧಿಸುತ್ತವೆ.

ವೈನಾಕನ ಕಥೆ

(ವಡ್ಡಾ. ಪುಟ೧೮)

ಸುಕುಮಾರ ಸ್ವಾಮಿ ಕಥೆಯಲ್ಲಿ ಇದೊಂದು ಉಪಕಥೆ. ವೈನಾಕನೆಂಬ ಸೇವಕನಿದ್ದ. ಆತ ಕಬ್ಬಿನ ಗದ್ದೆಯನ್ನು ಉಳುತ್ತಿದ್ದ. ಆಗ ಆತನಿಗೆ ಹೇರಳ ಸಂಪತ್ತು ದೊರಕಿತು. ಯಾರಿಗೂ ತಿಳಿಯದಂತೆ ಅದನ್ನು ರಹಸ್ಯವಾಗಿಡಬೇಕೆಂದು ಆತ ಗರ್ಭಧರಿಸಿದಂತೆ ನಟನೆ ಮಾಡತೊಡಗಿದ. ಇದೇನು ನಿಮ್ಮ ಹೊಟ್ಟೆ ಹೀಗಾಗಿದೆ ಎಂದು ಹೆಂಡತಿ ಪದೇ ಪದೆ ಕೇಳುತ್ತಿದ್ದಳು. ಆಗ ಆತ ಯಾರಿಗೂ ಹೇಳಬೇಡ ಗಂಡಸಿಗೆ ಆಗಬಾರದ ಗರ್ಭಧಾರಣೆ ನನಗಾಗಿದೆ ಎಂದು ಹೇಳಿದ. ಅದನ್ನು ಸಹಿಸದ ಆಕೆ ಆ ವಿಷಯವನ್ನು ಎಲ್ಲರಿಗೂ ಹೇಳಿದಳು. ಇದರಲ್ಲಿ ಹೆಂಗಸರಿಗೆ ಗುಟ್ಟು ಹೇಳಬಾರದು ಎಂಬ ಆಶಯವಿದೆ. ಜನಪದ ಕಥೆಗಳಲ್ಲಿಯೂ ಇಂಥ ಆಶಯದ ಕತೆಗಳು ದೊರೆಯುತ್ತವೆ. ಹೆಂಗಸರಲ್ಲಿ ರಹಸ್ಯಗಳು ಉಳಿಯುವುದಿಲ್ಲವೆಂಬ ಮಾತನ್ನು ಇಂಥ ಕತೆಗಳು ಎತ್ತಿ ಹಿಡಿಯುತ್ತವೆ. ರತ್ನಗಿರಿ ರಹಸ್ಯದ ಕತೆ ಕನ್ನಡ ಜನಪದದಲ್ಲಿ ಪ್ರಸಿದ್ಧವಿದೆ.

ಗಂಭೀರೆ ಕಥೆ

(ವಡ್ಡಾ. ಪು. ೧೯)

ಒಂದು ಚಿತ್ರಕಥೆ. ಗಂಭೀರೆ ಒಬ್ಬ ಮುದುಕಿ. ಬೇರೆ ಊರಲ್ಲಿದ್ದ ಗರ್ಭಿಣಿಯಾಗಿದ್ದ ತನ್ನ ಮಗಳಿಗೆ ಬಯಕೆ ತಿಂಡಿಗಳನ್ನು ಮಾಡಿಕೊಂಡು ಹೋಗುತ್ತಿದ್ದಳು. ಆಗ ಕಳ್ಳರ ದರ್ಶನವಾಗುತ್ತದೆ. ಚಾಣಾಕ್ಷೆಯಾದ ಮುದುಕಿ ಒಬ್ಬ ಕಳ್ಳನ ಕೈಹಿಡಿದುಕೊಂಡು ನೀನು ನನ್ನ ಮಗನಂತೆಯೇ ಇರುವೆ. ನಿನ್ನನ್ನು ನೋಡಿದರೆ ಅವನನ್ನು ಕಂಡಂತೆಯೇ ಎಂದು ಆತ್ಮೀಯತೆಯನ್ನು ತೋರಿಸುತ್ತ ತನ್ನ ಮಗಳ ಮನೆಗೆ ಕರೆದುಕೊಂಡು ಹೋಗುತ್ತಾಳೆ. ಅಲ್ಲಿ ಅವರಿಗೆ ಎಣ್ಣೆ ನೀರಿನ ಸ್ನಾನ ಮಾಡಿಸುವಾಗ ಕಳ್ಳರು ಕಳ್ಳರು ಎಂದು ಕೂಗಿ ಅವರನ್ನು ಹೆದರಿಸಿ ಓಡಿಸುತ್ತಾಳೆ. ಸೇಡಿನಿಂದ ಅವರು ಆಕೆಯ ಮನೆಗೆ ಕನ್ನ ಹಾಕುತ್ತಾರೆ. ಆಗ ಆಕೆ ಅವರ ಮೂಗುಗಳನ್ನು ಕತ್ತರಿಸುತ್ತಾಳೆ. ಬೆಳಿಗ್ಗೆ ಒಬ್ಬಳೇ ಊರಿಗೆ ಹೊರಟಳು. ಇನ್ನೂ ಕತ್ತಲೆ ಇದ್ದುದರಿಂದ ಆಲದ ಮರವನ್ನು ಹತ್ತಿ ಕುಳಿತಳು. ಕಳ್ಳರೂ ಸಹ ಆ ಮರದ ಬುಡಕ್ಕೇ ಬರುತ್ತಾರೆ. ತಾವು ಕದ್ದು ತಂದ ಕುರಿಯನ್ನು ಸಾಯಿಸಿ ಸುಟ್ಟು ಮಾಂಸವನ್ನು ತಿನ್ನಲು ಅಲ್ಲಿಗೆ ಬರುತ್ತಾರೆ. ದಾರಿಯಲ್ಲಿ ಯಾರಾದರೂ ಬರುತ್ತಾರೆಯೇ ನೋಡೋಣವೆಂದು ಒಬ್ಬ ಮರವನ್ನು ಹತ್ತುತ್ತಾನೆ. ಈಕೆಯನ್ನು ಕಂಡು ಯಾರು ನೀನು ಎಂದು ಪ್ರಶ್ನಿಸಿದ. ಆಕೆ

ನಾನು ಯಕ್ಷಿ ಎಂದಳು. ಆತ ಮದುವೆಯಾಗುವೆಯಾ ಎಂದ. ಆ ಮಾಂಸದ ಚೂರನ್ನು ನಿನ್ನ ನಾಲಗೆಯ ಮೂಲಕ ನನ್ನ ಬಾಯಿಗಿಟ್ಟರೆ ಆಗುತ್ತೇನೆ ಎಂದಳು. ಅವನು ಅದೇ ರೀತಿ ಮಾಡುವಾಗ ಕಚಕ್ಕನೆ ಅವನ ನಾಲಗೆಯನ್ನು ಕಚ್ಚಿದಳು. ಹೆದರಿದ ಆತ ಅಲ್ಲಿಂದ ಕೆಳಕ್ಕೆ ಬಿದ್ದನು. ಎಲ್ಲರೂ ಓಡಿದರು. ಅವರಿಗೆ ಮುದುಕಿ ಈ ರೀತಿ ಹೇಳಿದಳು : "ನೀವು ಕದ್ದ ವಸ್ತುಗಳ ಎಂಟನೆಯ ಒಂದು ಭಾಗವನ್ನು ಆ ಮರದ ಬಿರುಕಿನಲ್ಲಿ ಬಿಟ್ಟು ಹೋಗುವುದಾದರೆ ಬದುಕಿದಿರಿ", ಮುಂದೆ ಅವರು ಹಾಗೇ ನಡೆದು ಕೊಂಡರು. ಮಾತಿನ ಪ್ರಕಾರ ತಂದಿಡುತ್ತಿದ್ದ ಎಂಟನೇ ಒಂದು ಭಾಗವನ್ನು ಗಂಭೀರೆ ಪಡೆದು ಕಳ್ಳರನ್ನು ಆಳುತ್ತಿದ್ದಳು. ಇದು ಜನಪದದ ಬುದ್ಧಿವಂತಿಕೆಗೆ ಪ್ರಾತಿನಿಧ್ಯವೆನಿಸುವ ಕತೆ.

ಈ ಕಥೆಯಲ್ಲಿ ಹಲವಾರು ಆಶಯಗಳಿವೆ : ಕಳ್ಳರನ್ನು ಉಪಾಯವಾಗಿ ನಂಬಿಸಿ ಮೋಸಗೊಳಿಸುವುದು, ಅವರ ಮೂಗನ್ನು ಕತ್ತರಿಸುವುದು, ಮದುವೆಯಾಗುವ ನೆಪದಲ್ಲಿ ಕಳ್ಳನ ಕೈಗೆ ಸಿಕ್ಕದ ಹೆಣ್ಣು ಅವನನ್ನು ಮೋಸಗೊಳಿಸುವ ಕಳ್ಳರ ಮೂಗು ಮತ್ತು ನಾಲಗೆಯನ್ನು ಕೊಯ್ಯುವ ಆಶಯದ ಕತೆಗಳೂ ಇವೆ.

ಪೂರ್ವ ಜನ್ಮಾಂತರದೊಳ್ ಕಟ್ಟಿಪಟ್ಟಮುಳಿಸು. .

(ವಡ್ಡಾ. ಪು. ೩೫)

ಸುಕೌಶಳಸ್ವಾಮಿಯ ಕಥೆಯಲ್ಲಿ ಅರಸ ಮತ್ತು ಸುಕೇಶಿನಿಯರ ಸಂಭಾಷಣೆಯಲ್ಲಿ ಬರುವ ಸಂದರ್ಭ. ಸುಕೇಶಿನಿ ತನ್ನ ಹಿಂದಿನ ಜನ್ಮದ ವಿವರಗಳನ್ನು ತಿಳಿಸುತ್ತಿದ್ದಂತೆಯೇ ಅರಸನಿಗೆ ಹಿಂದಿನ ಜನ್ಮದಿಂದ ಕಟ್ಟಿಕೊಂಡ ವೈರ ಉಕ್ಕಿ ಬರುತ್ತದೆ. ಗುರುದತ್ತ ಭಟಾರರ ಕಥೆಯಲ್ಲಿ ತನಗಿದ್ದುದಕ್ಕಿಂತಲೂ ಮಿಗಿಲಾದ ವಿದ್ಯೆಗಳನ್ನು ಸಾಧಿಸಲೆಂದು ವಜ್ರದಾಡನು ತನ್ನ ಪತ್ನಿಯೊಂದಿಗೆ ಬಂದಾಗ ಧರಣೇಂದ್ರನಿಗೆ ಅವನು ತನ್ನ ಪೂರ್ವಜನ್ಮದ ವೈರಿ ಎಂಬುದು ತಿಳಿಯುತ್ತದೆ (೧೪೫) ಹೆಂಡತಿಯ ಮೇಲೆ ಕೋಪವಮಾಡಿಕೊಂಡಿದ್ದ ಹಳಮುಖನಿಗೆ ನಿಜ ಸಂಗತಿ ತಿಳಿದ ನಂತರ ಋಷಿಯ ಮೇಲೆ ಕೋಪವುಕ್ಕಿ ಜನ್ಮಾಂತರದ ವೈರವೂ ಸೇರಿಕೊಳ್ಳುತ್ತದೆ.

ಸೇಡಿಗೆ ಸೇಡು, ಪ್ರತೀಕಾರಕ್ಕೆ ಪ್ರತೀಕಾರ ತೋರಿಸುವುದು ನಿಜ ಜೀವನದಲ್ಲಿ ಸಾಮಾನ್ಯ ಸಂಗತಿಯಾಗಿದೆ. ವಡ್ಡಾರಾಧನೆಯ ಕತೆಗಳಲ್ಲಿಯೂ ಈ ಪ್ರತೀಕಾರ ಒಂದು ಆಶಯವಾಗಿ ಬರುತ್ತದೆ.

ನೋಡಿ ತನ್ನಂ ಪರಿಭವಿಸಿದನೆಂದು ಪದ್ಮಾವತಿಯೊಳಪ್ಪ ಪುರುಡುಂ ಕಾರಣಮಾಗಿ ಮುಳಿಸಿನಿಂದಂ ಚಂದನ ಮಲಯ ಪರ್ವತದ ತುತ್ತ ತುದಿಯಂ ಬೇಗಂ ಪರಿದಡರ್ದು. . .

(ವಡ್ಡಾ. ಪು.೩೮)

ಸುಕೌಶಳಸ್ವಾಮಿ ಕಥೆಯಲ್ಲಿ ಕಂಡು ಬರುವ ಪ್ರಸಂಗ. ಮಲಯ ಸುಂದರನೆಂಬ ಆನೆಯು ಮಲಯಾವತಿ, ಪದ್ಮಾವತಿ ಎಂಬ ಎರಡು ಹೆಣ್ಣಾನೆಗಳ ಜೊತೆಯಲ್ಲಿ ಪ್ರಭಂಕರಿ ಎಂಬ ಸರೋವರಕ್ಕೆ ಕ್ರೀಡೆಗೆ ಬರುತ್ತಿತ್ತು. ಹೋಗುವಾಗ ಬಲಗಡೆಯಲ್ಲಿ ಮಲಯಾವತಿ ಎಡಗಡೆಯಲ್ಲಿ ಪದ್ಮಾವತಿ ಇರುತ್ತಿದ್ದವು. ಕ್ರೀಡೆ ಮುಗಿಸಿಕೊಂಡು ಬರುವಾಗ ಮಲಯಾವತಿಯ ತಲೆಯ ಮೇಲೆ ಅರಳಿದ ಸಾವಿರೆಸಳ ಹೂವನ್ನು ಮಲಯ ಸುಂದರನು ಇಡುತ್ತಿದ್ದದ್ದು ರೂಢಿಯಾಗಿತ್ತು. ಒಂದು ದಿನ ಹೂವು ಪದ್ಮಾವತಿಯ ತಲೆಗೆ ಬಿದ್ದಿತು. ಹೂವು ರೂಢಿಯಂತೆ ತನ್ನ ಮೇಲೆ ಬೀಳಲಿಲ್ಲ ಎಂಬ ಕೋಪದಿಂದ ಮಲಯಾವತಿಯು ಸವತಿ ಮತ್ಸರದಿಂದ ಪರ್ವತದ ಕೋಡುಗಲ್ಲನ್ನು ಹತ್ತಿ ಹಾರಿ ಪ್ರಾಣ ಕಳೆದುಕೊಂಡಿತು. ಗಂಡನ ಮೇಲೆ ಸೇಡು ಸಾಧ್ಯವಾಗದೆ ಅಸಹಾಯಕವಾದ ಹೆಣ್ಣು ಆತ್ಮಹತ್ಯೆಗೆ ಯತ್ನಿಸುವುದು ಸಾಧಾರಣ. ಗಂಡು ಅನೇಕ ಸ್ತ್ರೀಯರನ್ನು ಮದುವೆಯಾಗುವ ಅವಕಾಶ ಹಿಂದಿನ ಕಾಲದಲ್ಲಿ ಇತ್ತು. ಜೈನ ಪುರಾಣಗಳಲ್ಲಿಯೂ ಬಹು ಪತ್ನಿತ್ವದ ಬಗ್ಗೆ ಅನೇಕ ಮಾಹಿತಿಗಳು ದೊರಕುತ್ತವೆ. ಅನೇಕ ಹೆಂಡಿರನ್ನು ಕಟ್ಟಿಕೊಳ್ಳುವ ವ್ಯವಸ್ಥೆ ಎಲ್ಲಿರುತ್ತದೆಯೋ ಅಂಥ ಕಡೆಗಳಲ್ಲೆಲ್ಲ ಸವತಿ ಮಾತ್ಸರ್ಯ ಕಂಡುಬರುತ್ತದೆ. ಮಲಯ ಸುಂದರನ ಇಬ್ಬರು ಪತ್ನಿಯರಾದ ಹೆಣ್ಣಾನೆಗಳಲ್ಲಿ ಕಂಡು ಬರುವುದೂ ಸಹ ಈ ಸವತಿ ಮಾತ್ಸರ್ಯವೇ ಎಂಬುದನ್ನು ಗಮನಿಸಬೇಕು. ಇಂಥ ಸವತಿ ಮಾತ್ಸರ್ಯದ ಮುಂದೆ ದಡ್ಡತನ ಹೇಗೆ ಕೆಲಸ ಮಾಡುತ್ತದೆಂಬುದಕ್ಕೆ ಈ ಪ್ರಸಂಗ ಉದಾಹರಣೆಯಾಗಿದೆ : "ಎರಡು ಜನ್ಮಾಂತರದ ಇದೇ ಮಲಯ ಸುಂದರನು ಕುಬೇರ ಕಾಂತನೆಂಬವನಾಗಿ ಮನೋಹರಿ ಎಂಬವಳನ್ನು ವರಿಸಿದನು. ಶ್ರೀಧರನು ಅವನ ಗೆಳೆಯ. ಒಂದು ದಿನ ಶ್ರೀಧರನು ಕುಬೇರ ಕಾಂತನೊಡನೆ ನಿದ್ರಿಸಿ, ಅವನ ರತ್ನ ಕಂಬಳಿಯನ್ನು ಹೊಡೆದುಕೊಂಡು ತನ್ನ ಮನೆಗೆ ಬಂದನು. ಆಗ ಅವನ ಮಡದಿ ಕುಬೇರಕಾಂತೆ ಸವತಿಯಲ್ಲಿ ಆದ ಸಂಶಯದಿಂದ ಉಪ್ಪರಿಗೆಯ ಮೇಲಿನಿಂದ ಹಾರಿ ಬಿದ್ದು ಸತ್ತಳು. ಮನುಷ್ಯ ಲೋಕದ ಸವತಿ ಮಾತ್ಸರ್ಯಾದಿ ರಾಗಭಾವಗಳನ್ನು ಪ್ರಾಣಿ ಪ್ರಪಂಚಕ್ಕೂ ವಿಸ್ತರಿಸಿ ಪಂಚತಂತ್ರದ ಕತೆಗಳ ನೆನಪನ್ನು ತರುವಂತೆ ನಿರೂಪಿಸಲಾಗಿದೆ.

ಸಪ್ತತಳ ಪ್ರಾಸಾದದ

(ವಡ್ಡಾ. ಪು. ೪೩)

ಏಳು ಅಂತಸ್ತಿನ ಸಪ್ತ ತಳ ಪ್ರಾಸಾದದ ವರ್ಣನೆಗಳು ಸಾಮಾನ್ಯವಾಗಿ ಜೈನಧರ್ಮದ ಕಥೆಗಳಲ್ಲಿ ಆಗಮ ಪುರಾಣಗಳಲ್ಲಿ ಕಂಡುಬರುತ್ತವೆ, ಗೋಪುರ, ಬಾವುಟ, ಬಂಗಾರದ ಕಳಶ, ಪುಷ್ಪಾಲಂಕೃತ, ನೆಲದಲ್ಲಿ ನವರತ್ನ ಖಚಿತವಾದ ಹಾಸು - ಇತ್ಯಾದಿಗಳಿರುವುದನ್ನು ವರ್ಣಿಸಲಾಗಿದೆ.

"ಅರಸನುಂ ಮಹಾದೇವಿಯುಮಿಂತಿರ್ವರುಂ ಪ್ರಾಸಾದದ ಮೇಗಿರ್ದು ಗವಾಕ್ಷ ಜಾಳಾಂತ ರಂಗಳಿಂ ವಿಶಾವಲೋಕನಂ ಗೆಯ್ಯುತ್ತಿರ್ಪನ್ನೆಗಂ" (೯೩) "ಅಭಿಯಮತಿ ತನ್ನ ಕನ್ಯಾಮಾಡ ದೆರಡನೆಯ ನೆಲೆಯ ಮುಂದಣ ಚವುಕಿಗೆಯ ಮೇಲೆ ದಾದಿಯುಂ ಸಖೀಜನಂಗಳ್ ಬೆಸರು ನಡಪಾಡುತ್ತಿದ್ದಳ್ "(೧೪೮) - ಇತ್ಯಾದಿ ವರ್ಣನೆಗಳಲ್ಲಿ ಪ್ರಾಸಾದ, ಭವನ, ಉಪ್ಪರಿಗೆ, ಮೇಗಣ ನೆಲೆ ಶಬ್ದಗಳು ಪ್ರಸ್ತಾಪಿತವಾಗಿರುವುದನ್ನು ಕಾಣಬಹುದು. ಜನಪದ ಕಥೆಗಳಲ್ಲಿಯೂ ಏಳು ಅಂತಸ್ತಿನ ಅರಮನೆಯ ಪ್ರಸ್ತಾಪ ಬರುತ್ತದೆ. ನಮ್ಮ ನಾಗರಿಕತೆಯ ಬೆಳವಣಿಗೆಯ ಹಂತಗಳನ್ನು ಇಂಥ ವಾಸ್ತು ಶಿಲ್ಪಗಳ ವರ್ಣನೆಗಳಿಂದ ಗುರುತಿಸಬಹುದಾಗಿದೆ.

ಪಟ್ಟವಾರಮರಗಮೆಂಬ ದುಷ್ಟಾಶ್ವಮಂ ಕುಮಾರನೇ ಱಿ.... ಕುಮಾರನಂ ಕೊಂಡು ಮಹಾಟವಿಯಂ ಪೊಕ್ಕು

(ವಡ್ಡಾ. ಪು. ೫೩)

ಸನತ್ಕುಮಾರ ಚಕ್ರವರ್ತಿಯ ಕಥೆಯಲ್ಲಿ ಬರುವ ಪ್ರಸಂಗ. ಶತ್ರುಂದಮನೆಂಬುವನು ವಿಶ್ವಸೇನ ಮಹಾರಾಜನಿಗೆ ಹಲವಾರು ಉಡುಗೊರೆಗಳನ್ನು ಕಳಿಸಿದ. ಅವುಗಳಲ್ಲಿ ಪಟ್ಟವಾರ ಮರಗ ಎಂಬುದು ಒಂದು ದುಷ್ಟ ಕುದುರೆಯೂ ಇತ್ತು. ಒಮ್ಮೆ ಸನತ್ಕುಮಾರ ಅದನ್ನು ಹತ್ತಿ ಚಾಮಟಿಯಿಂದ ಹೊಡೆದದ್ದಕ್ಕೆ ಗಾಳಿಗಿಂತ ವೇಗವಾಗಿ ಧಾವಿಸಿ ಅರಣ್ಯ ಪ್ರದೇಶವನ್ನು ತಲುಪಿತು. ವೃಷಭಸೇನ ಭಟಾರರ ಕಥೆಯಲ್ಲಿ ಪ್ರದ್ಯೋತನೆಂಬ ಅರಸ ಕಾಡಾನೆಯನ್ನು ಹಿಡಿಯಲು ಆನೆಯನ್ನು ಏರಿ ಹೋಗುತ್ತಾನೆ. ಅದು ಅಂಕೆಗೆ ಸಿಲುಕದೆ ದಂಡಕಾರಣ್ಯವನ್ನು ಸೇರುತ್ತದೆ. (೧೧೦)

ಪಳಗದ ಕುದುರೆಗಳು, ಮದಿಸಿದ ಆನೆಗಳು ಕಥಾನಾಯಕನನ್ನು ಹೊತ್ತುಕೊಂಡು ಹೋಗಿ ಅರಣ್ಯದಲ್ಲಿ ಬಿಡುವ ಘಟನೆಗಳನ್ನು ಕುರಿತ ಹಲವಾರು ಜನಪದ ಕಥೆಗಳು ಕನ್ನಡದಲ್ಲಿವೆ. ತುಂಟ ಕುದುರೆ ಹತ್ತುವುದು, ಆನೆಯ ಮೇಲೆ ಸವಾರಿ ಮಾಡುವುದು ಜನಪದ ಆಶಯವಾಗಿದೆ. ಇಂಥ ಆಶಯವನ್ನು ವಡ್ಡಾರಾಧನಕಾರ ಉಪಯುಕ್ತವಾಗಿ ಬಳಸಿಕೊಂಡಿದ್ದಾನೆ. ಪ್ರಸಿದ್ಧವಾದ ಶನಿಕಥೆಯಲ್ಲೂ ಕುದುರೆಯ ಪಾತ್ರವಿದೆ.

ಈ ತರುವಲಿ ನಮ್ಮೂರೊಳಿರೆ ನಮಗೆ ಸಾವುಂ ಕೇಡುಮ ಮೋಘು
.. ಮಕ್ಕುಮಿವನನಟ್ಟಿ ಕಳೆಯಿ ಮೆಂದೂರಿಂದನಿಬರು ಮಟ್ಟಿ ಕಳೆದೊಡೆ

(ವಡ್ಡಾ. ಪು. ೭೬)

ಭದ್ರಬಾಹುಭಟಾರ ಕಥೆಯಲ್ಲಿ ಬರುವ ಪ್ರಸಂಗ. ನಂದಿ ಮಿತ್ರ ಎಂಬ ಹುಡುಗನನ್ನು ಅಪಶಕುನದವನೆಂದು ಭಾವಿಸಿ ಅವನನ್ನು ಅಟ್ಟುತ್ತಾರೆ. ಇಂಥ ಆಶಯದ ಕಥೆಗಳು ಜಾನಪದದಲ್ಲಿ ಹಲವಾರಿವೆ. ಅಪಶಕುನದ ಕಳಂಕ ಹೊತ್ತ ಮಗು ಅರಣ್ಯದಲ್ಲಿ ಬೆಳೆಯುವುದು, ಬೆಟ್ಟಗುಡ್ಡಗಳಲ್ಲಿ ಬೆಳೆಯುವುದು, ಪ್ರಾಣಿ ಪಕ್ಷಿಗಳು ರಕ್ಷಣೆ ನೀಡುವುದು, ಅತಿಮಾನವರು ಗಂಡಾಂತರದಿಂದ ಪಾರು ಮಾಡುವುದು, ದೊರೆಗಳ ಆಶ್ರಯ ಪಡೆಯುವುದು ಇಂಥವೇ ಇನ್ನೂ ಹಲವಾರು ಕತೆಗಳು ಕೇಳಿ ಬರುತ್ತವೆ. ಆರ್ಥಿಕ, ಕ್ಷಾಮಡಾಮರಗಳು, ಅಂಗ ವಿಕಲತೆ, ಅವಿಧೇಯತೆ, ಮೂರ್ಖತನ ಮೊದಲಾದ ಕಾರಣಗಳಿಂದಾಗಿ ಮಗುವನ್ನು ಮನೆಯಿಂದ ಅಥವಾ ಊರಿನಿಂದ ಹೊರಗಡೆ ಕೊಂಡೊಯ್ದು ಬಿಟ್ಟು ಬರುವ ಅಮಾನುಷವಾದ ನಡವಳಿಕೆ ಜಗತ್ತಿನಲ್ಲಿ ಚಾಲ್ತಿಯಲ್ಲಿದೆ. ಮೂಲ ನಿವಾಸಿಗಳಲ್ಲಿ ಮುದುಕನನ್ನು, ರೋಗಿಯನ್ನು, ಅನಾಥರನ್ನ, ತಿರಸ್ಕರಿಸಿ ಊರ ಹೊರಗಡೆ ಅಟ್ಟುವ ಪದ್ಧತಿ ಇದೆ. ಆರ್ಥಿಕ ಪರಿಸ್ಥಿತಿಯ ಹೀನತೆಯೇ ಇದಕ್ಕೆ ಮುಖ್ಯ ಕಾರಣವೆನ್ನಬಹುದು. ಸಮಾಜಕ್ಕೆ ಹೆದರಿ ಅವಿವಾಹಿತಳಾಗಿದ್ದ ಕುಂತಿ ಕರ್ಣನನ್ನು ನೀರಿಗೆ ಬಿಟ್ಟಳು. ಸವತಿ ಮತ್ಸರದಿಂದ ಉಪಶ್ರೇಣಿಕನು ತನ್ನ ಮಗ ಶ್ರೇಣಿಕನನ್ನು (ಚಿಲಾತಪುತ್ರನ ಕಥೆ) ಬಹಿಷ್ಕರಿಸುತ್ತಾನೆ. ಈ ರೀತಿ ಸಂಬಂಧಿಕರಿಂದ ದೂರವಾದ ಮಕ್ಕಳು ಯಾವುದೇ ಅಪಾಯವಿಲ್ಲದೆ ಬೆಳೆದ ವಿಷಯಗಳನ್ನು ಜನಪದ ಕಥೆಗಳು ವಿವರಿಸುತ್ತವೆ. ನಂದಿಮಿತ್ರ ಮತ್ತು ಶ್ರೇಣಿಕರೇ ಈ ಮಾತಿಗೆ ಉದಾಹರಣೆಗಳಾಗಿದ್ದಾರೆ.

ಎಲ್ಲಾ ಅರಸಿಯರ್ಕಳುಮನುೞಿದು ಜಿನದತ್ತೆಗಾಸಕ್ತನಾಗಿ ಪಲಕಾಲಮಾಕೆ
ಯೊಳಿಷ್ಟ ವಿಷಯ ಕಾಮಭೋಗಂಗಳನನು ಭವಿಸುತ್ತಿರ್ಪನ್ನೆಗಂ

(ವಡ್ಡಾ. ಪು. ೧೧೧)

ವೃಷಭಸೇನ ಭಟಾರರ ಕಥೆಯಲ್ಲಿ ಬರುವ ಪ್ರಸಂಗ. ಅರಸನು ಉಳಿದೆಲ್ಲ ರಾಣಿಯರನ್ನು ಬಿಟ್ಟು ಜಿನದತ್ತೆಯನ್ನು ಮೋಹಿಸಿ ಪಟ್ಟದ ರಾಣಿಯನ್ನಾಗಿ ಮಾಡುತ್ತಾನೆ. ಸನತ್ಕುಮಾರ ಚಕ್ರವರ್ತಿಯ ಕಥೆಯಲ್ಲಿ ಪ್ರತಿಮುಖನೆಂಬ ರಾಜ ಅನೇಕ ರಾಣಿಯರ ಅಂತಃಪುರಕ್ಕೆ

ಅಧಿಪತಿಯಾಗಿರುತ್ತಾನೆ. ವಿಷ್ಣುಶ್ರೀ ಎಂಬ ಸುಂದರಿಯನ್ನು, ಇನ್ನೊಬ್ಬನ ಹೆಂಡತಿಯನ್ನು ಮಂತ್ರ ಪ್ರಯೋಗದಿಂದ ವಶಪಡಿಸಿಕೊಳ್ಳುತ್ತಾನೆ (೬೨)

ಒಬ್ಬ ಗಂಡಸಿಗೆ ಹಲವು ಮಂದಿ ಪತ್ನಿಯರಿದ್ದರೆ ಅವರಲ್ಲಿ ಪರಸ್ಪರ ದ್ವೇಷಾಸೂಯೆಗಳು ಮೂಡುವುದು ಸಹಜ. ಅವರಲ್ಲಿ ಸಾಮಾನ್ಯವಾಗಿ ಚಿಕ್ಕವಳು ಸುಂದರಿಯಾಗಿರುತ್ತಾಳೆ. ಆದ್ದರಿಂದ ಸಹಜವಾಗಿ ಗಂಡ ಆಕೆಯನ್ನು ಹೆಚ್ಚು ಪ್ರೀತಿಸುತ್ತಾನೆ. ಗಂಡನ ಪ್ರೀತಿ ಅವಳತ್ತ ಹೆಚ್ಚಾಗಿ ಹರಿಯುವುದರಿಂದ ಆಕೆಯ ಮೇಲೆ ಉಳಿದ ಹೆಂಡಿರ ಈರ್ಶೆ ಬೆಳೆದು ಕೊಲ್ಲುವ ಸಂಚು ಮಾಡುತ್ತಾರೆ. ಬಾವಿಗೆ ತಳ್ಳುವುದು, ವಿಷ ಹಾಕುವುದು, ಹಾವಿನಿಂದ ಕಚ್ಚಿಸುವುದು ಇತ್ಯಾದಿಗಳ ಮುಖೇನ ಆಕೆಯ ಸಾವಿಗೆ ಕಾರಣರಾಗುತ್ತಾರೆ, ಸವತಿ ಮಾತ್ಸರ್ಯದ ಆಶಯಗಳನ್ನು ಹೊತ್ತ ಜನಪದ ಕತೆಗಳು ಕೇಳಿ ಬರುತ್ತವೆ.

ತಿರುಕುಱುಂಗುಡಿ ನಂಬಿಗೆ ಉಪದೇಶವಿತ್ತದು

(ಚಿ. ವಂಶಾವಳಿ, ಪುಟ ೫೧)

ಮದ್ರಾಸಿಗೆ ಹತ್ತಿರದಲ್ಲಿ ತಿರುಕುಱುಂಗುಡಿ ಎಂಬ ಊರು ಇದೆ. ರಾಮಾನುಜರು ಸಂಚಾರ ಮಾಡುತ್ತ ಅಲ್ಲಿಗೆ ಬಂದರು. ಅಲ್ಲಿಯ ದೇವತೆಯಾದ ಕುಱುಂಗುಡಿ ನಂಬಿಯು ಪೂಜಾರಿಯ ಮುಖಾಂತರ ರಾಮಾನುಜರ ಸಾಧನೆಯನ್ನು ಮೆಚ್ಚಿಕೊಂಡಿತು. ಹಲವು ಅವತಾರಗಳಲ್ಲಿ ತಾನು ಸಾಧಿಸಲಾರದ್ದನ್ನು ನೀವು ಸಾಧಿಸಿದಿರಿ ಅದು ಹೇಗೆಂದು ಆ ದೇವರು ಪ್ರಶ್ನಿಸಿತು. ಪ್ರತ್ಯಕ್ಷವಾಗಿ ಕಾಣಿಸಿಕೊಂಡರೆ ಮಾತ್ರ ಅದನ್ನು ಹೇಳಲಾಗುವುದು ಎಂದರು ರಾಮಾನುಜರು. ಅವರ ಮಾತಿನಂತೆ ದೇವರು ಪ್ರತ್ಯಕ್ಷವಾಯಿತು. ರಾಮಾನುಜರು ದೈವದ ಕಿವಿಯಲ್ಲಿ ಮಂತ್ರಸಾಧನೆಯಿಂದ ಸಾಧಿಸಿದ್ದರ ವಿವರಗಳನ್ನು ನೀಡಿದರೆಂದು ಹೇಳುವುದುಂಟು.

ಗೋದಾದೇವಿ ಅಥವಾ ಶೂಡಿಕ್ಕುಡುತ್ತನಾಚ್ಚಿಯಾರ್

(ಚಿ. ವಂಶಾವಳಿ. ಪು ೭೩)

ವಿಷ್ಣು ಚಿತ್ತರು ಅಥವಾ ಪೆರಿಯಾ ಟ್ವಾರರಿಗೆ ಭೂಮಿಯನ್ನು ಅಗೆಯುವಾಗ ಪೆಟ್ಟಿಗೆಯೊಂದು ದೊರಕಿತು. ಅದರಲ್ಲಿ ಗೋದಾದೇವಿ ಇದ್ದಳೆಂದು ಹೇಳುತ್ತಾರೆ. ರಂಗನಾಥನಿಗೆ ಅರ್ಪಿಸಬೇಕೆಂದು ತಂದೆ ವಿಷ್ಣು ಚಿತ್ತರು ತಂದಿದ್ದ ಮಾಲೆಯನ್ನು ಗೋದಾದೇವಿ ತಾನೇ ಧರಿಸಿ ಸಂತಸಪಡುತ್ತಿದ್ದಳು.

ಅಯೋನಿಜೆಯಾದುದರಿಂದ ಈಕೆಯನ್ನು ಲಕ್ಷ್ಮಿಯ ಅವತಾರವೆಂದು ಭಾವಿಸತೊಡಗಿದರು. ಭೂಮಿಯನ್ನು ಉಳುಮೆಮಾಡುವಾಗ ಜನಕ ರಾಜನಿಗೆ ಪೆಟ್ಟಿಗೆಯೊಂದು ದೊರಕಿ ಅದರಲ್ಲಿ ಸೀತೆ ಕಾಣಿಸಿಕೊಂಡಳು ಎಂಬ ಕಥೆ ಜನಪದ ರಾಮಾಯಣದಲ್ಲಿ ಬರುವುದನ್ನು ಈ ಸಂದರ್ಭದಲ್ಲಿ ಸ್ಮರಿಸಬಹುದು.

ಅವರೆ ಫಲವಾಯಿತ್ತೆ ?

(ಭೈರಕಾ, ಪು. ೮)

ಒಣಗಿ ಹೋದ ಅವರೆಬಳ್ಳಿಯಿಂದ ಭೈರವರಾಜನು ಫಲ ಪಡೆದ ಸನ್ನಿವೇಶ, ಇದೊಂದು ಪವಾಡ. ಶಿವ ಚರಲಿಂಗವಾಗಿ ಬಂದು ಒಂದು ಅವರೆ ಬೀಜವನ್ನು ಬೈರವನಿಗೆ ಕೊಟ್ಟು ಹಿತ್ತಲಲ್ಲಿ ಅದನ್ನು ಬಿತ್ತಿದ, ಬೆಳೆಯಿತು. ಅದರ ಹೂ ಹಣ್ಣು ಕಾಯಿಗಳನ್ನು ಶರಣರಿಗೆ ದಾನ ಮಾಡಿದ. ಕೆಲ ಕಾಲಾನಂತರ ಚರಲಿಂಗ ಮೂರ್ತಿ ಬಂದು ಅವರೆ ಫಲಕೊಟ್ಟಿತೆ ಎಂದು ಕೇಳಿದ ತನ್ನ ಪವಾಡದಿಂದ ಬೈರವನು ಒಣಗಿದ ಅವರೆಬಳ್ಳಿಯಲ್ಲಿ ಫಲವನ್ನು ತೋರಿಸುತ್ತಾನೆ.

ಎಲೈ, ಗಾರುಡಿಗನೇ, ನಿನ್ನ ಪೆಟ್ಟಿಗೆಯಲ್ಲಿರುವ ಸರ್ಪಗಳು ನಿನಗೆ ಹೇಗೆ ವಶವಾದುವು

(ಮುದ್ರಾ, ಪು. ೨೫೬)

ಮಲಯ ಕೇತುವಿನ ಆಶ್ರಯದಲ್ಲಿದ್ದ ಅಮಾತ್ಯ ರಾಕ್ಷಸನ ಮನೆಯ ಮುಂದೆ ಬಂದ ಹಾವಾಡಿಗನನ್ನು ಅಲ್ಲಿನ ದ್ವಾರಪಾಲಕನು ಹೀಗೆ ಕೇಳುವನು. ಈ ಗಾರುಡಿಗನು ಪಾಟಲೀಪುರದಲ್ಲಿ ಚಂದ್ರಗುಪ್ತನು ರಾಜನಾದ ಮೇಲೆ ಅಲ್ಲಿನ ಸಮಾಚಾರವನ್ನು ಪರ್ವತರಾಜನ ರಾಜಧಾನಿಗೆ ಮುಟ್ಟಿಸುವ ಒಬ್ಬ ಗೂಢಾಚಾರ. ರಾಕ್ಷಸನಿಂದ ಮೊದಲೇ ನೇಮಿಸಲ್ಪಟ್ಟಿದ್ದ ಈತ. ಹಿಂದಿನ ಕಾಲದಲ್ಲಿ ವೇಷಾಂತರದಲ್ಲಿ ಗೂಢಾಚಾರರು ಇದ್ದು ಒಂದು ರಾಜ್ಯ ಸಮಾಚಾರವನ್ನು ಇನ್ನೊಂದು ಕಡೆ ಮುಟ್ಟಿಸುತ್ತಿದ್ದರು. ಇಂಥ ಗೂಢಚಾರರಲ್ಲಿ ಹಾವಾಡಿಗನೂ ಒಬ್ಬ. ಈತ ರಾಜಕಾರಣದಲ್ಲಿ ಪಾತ್ರವಹಿಸುತ್ತಿದ್ದ ವಿಚಾರ ಪುರಾಣ ಪ್ರಸಿದ್ಧವಾದುದು. ಕೃಷ್ಣಗಾರುಡಿಗ ಇದಕ್ಕೆ ಉತ್ತಮ ಉದಾಹರಣೆ.

ಪರಾಮರ್ಶನ ಗ್ರಂಥಗಳು

೧. ಕಮಲಾಹಂಪನಾ, ಕೆ. ಆರ್. ಶೇಷಗಿರಿ (ಸಂ) : ಚಾವುಂಡರಾಯ ವಿರಚಿತ ಚಾವುಂಡರಾಯ ಪುರಾಣಂ (ತ್ರಿಷಷ್ಠಿ ಲಕ್ಷಣ ಮಹಾಪುರಾಣಂ) ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೧೮, ೧೯೮೩

೨. ಹಂಪ. ನಾಗರಾಜಯ್ಯ (ಪ್ರ. ಸಂ) : ಮ. ಬೋಯಿ (ಅನು) ತಿರುಮಲಾರ್ಯ ವಿರಚಿತ ಚಿಕ್ಕದೇವರಾಯ ವಂಶಾವಳಿ, ಕ.ಸಾ.ಪ. ಬೆಂಗಳೂರು ೧೯೮೧

೩. ಬಿ.ಎಸ್. ಸಣ್ಣಯ್ಯ (ಸಂ) : ದೇವಚಂದ್ರ ವಿರಚಿತ ರಾಜಾವಳಿ ಕಥಾಸಾರ, ಕನ್ನಡ ಅಧ್ಯಯನ ಸಂಸ್ಥೆ, ಮೈ.ವಿ.ವಿ. ಮೈಸೂರು ೧೯೮೮

೪. ಬಿ.ಎಸ್. ಸಣ್ಣಯ್ಯ (ಅನು) : ದೇವಚಂದ್ರನ ರಾಜಾವಳೀ ಕಥಾಸಾರ, ಶ್ರೀ ಕನಕಗಿರಿ ಪ್ರಕಾಶನ ಅತಿಶಯ ಸಿದ್ಧಕ್ಷೇತ್ರ, ಕನಕಗಿರಿ, ಮಲೆಯೂರು ೫೭೧೧೨೮, ೨೦೦೦

೫. ಡಾ. ವೆಂಕಟೇಶ ಇಂದ್ವಾಡಿ (ಸಂ) : ದೇವಚಂದ್ರನ ರಾಜಾವಳಿ ಕಥೆ,ಸಾಂಸ್ಕೃತಿಕ ಮುಖಾಮುಖಿ, ಪ್ರಸಾರಂಗ, ಕನ್ನಡ ವಿ. ವಿ. ಹಂಪಿ - ೨೦೦೩

೬. ಡಾ. ಎಂ. ಎ. ಜಯಚಂದ್ರ : ಪ್ರಾಚೀನ ಕನ್ನಡ ಜೈನ ಸಾಹಿತ್ಯದಲ್ಲಿ ಜಾನಪದ ಕಥೆಗಳು ಒಂದು ಅಧ್ಯಯನ ೧೯೯೪

೭. ಡಾ. ಆರ್. ಸಿ. ಹಿರೇಮಠ, ಡಾ. ಎಂ. ಎಸ್. ಸುಂಕಾಪುರ (ಸಂ) : ಶಾಂತಲಿಂಗದೇಶಿಕೃತ ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ (ಭಾಗ ೧), ಕ. ವಿ. ವಿ. ಧಾರವಾಡ ೧೯೬೪

೮. ಡಿ. ಎಲ್. ನರಸಿಂಹಾಚಾರ್, ಶಬ್ದವಿಹಾರ

೯. ಡಾ. ಡಿ. ಎಲ್. ನರಸಿಂಹಾಚಾರ್ (ಸಂ) : ಶಿವಕೋಟ್ಯಾಚಾರ್ಯ ವಿರಚಿತ ವಡ್ಡಾರಾಧನೆ ೧೯೭೦

೧೦. ಹಂಪ. ನಾಗರಾಜಯ್ಯ : ವಡ್ಡಾರಾಧನೆ ಸಮಗ್ರ ಅಧ್ಯಯನ, ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು ೧೯೯೯

೧೧. ಹಂಪ. ನಾಗರಾಜಯ್ಯ, ವಡ್ಡಾರಾಧನೆ, ಪ್ರಸಾರಂಗ, ಮೈ.ವಿ.ವಿ.೧೯೭೨

೧೨. ವಿ. ಸೀತಾರಾಮಯ್ಯ : ವಡ್ಡಾರಾಧನೆ (ಕವಿಕಾವ್ಯ ಪರಂಪರೆ) ೧೯೭೭

೧೩. ಎಸ್. ಬಿ. ತೋಟದ : ವಡ್ಡಾರಾಧನೆಯ ಕಥಾಗುಚ್ಛ ೧೯೭೯

೧೪. ಡಾ. ಹಂಪ. ನಾಗರಾಜಯ್ಯ : ಜೈನ ಕಥಾಪರಂಪರೆ ಪ್ರೇರಣೆ ಪ್ರಭಾವ, ೧೧೦೭೯,

೧೮ನೇ 'ಎ' ಮೇನ್, ೫ನೇ ಬ್ಲಾಕು, ರಾಜಾಜಿನಗರ, ಬೆಂಗಳೂರು -೧೦
೧೫. ಪ್ರೊ. ಜಿ. ವೆಂಕಟಸುಬ್ಬಯ್ಯ (ಸಂ) : ಮುದ್ದಣ ಭಂಡಾರ ಸಂ.೧ , ಸಂಪುಟ ೨, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ನೃಪತುಂಗ ರಸ್ತೆ, ಬೆಂಗಳೂರು - ೨
೧೬. ಕೆಂಪು ನಾರಾಯಣ (ಸಂ) : ಮುದ್ರಾ ಮಂಜೂಷ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ೧೯೮೫
೧೭. ಪ್ರೊ. ಶಿವರಾಮಯ್ಯ : ಗ್ರಾಮೀಣ ಸಂಸ್ಕೃತಿ ಸಂದರ್ಭ ಕೋಶ, ಕಲಾ ಪ್ರಕಾಶನ, ರಾಜಮಹಲ್ ಗುಟ್ಟಹಳ್ಳಿ ಬೆಂಗಳೂರು ೨೦೦೦
೧೮. ಡಾ. ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಮೈಸೂರು ೧೯೬೬
೧೯. ಡಾ. ಎಂ. ಚಿದಾನಂದಮೂರ್ತಿ : ಸಂಶೋಧನ ತರಂಗ, ಬೆಂ. ವಿ. ವಿ. ಬೆಂಗಳೂರು ೧೯೭೦
೨೦. ಡಾ. ಚಂದ್ರಶೇಖರ ಕಂಬಾರ (ಸಂ) : ಕನ್ನಡ ಜಾನಪದ ವಿಶ್ವಕೋಶ ಸಂಪುಟ ೧ ಮತ್ತು ೨ ಕ. ಸಾ. ಪ. ಬೆಂಗಳೂರು ೧೯೮೫
೨೧. ರಂ. ಶ್ರೀ. ಮುಗಳಿ : ಕನ್ನಡ ಸಾಹಿತ್ಯ ಚರಿತ್ರೆ, ಗೀತಾ ಬುಕ್ ಹೌಸ್, ಮೈಸೂರು ೮ನೇ ಮುದ್ರಣ ೧೯೯೦
೨೨. ಪ್ರೊ. ಡಿ. ಕೆ. ಭೀಮಸೇನರಾವ್ : ಅವಲೋಕನ ಸಂಶೋಧನ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ೨೦೦೦
೨೩. ಎಂ. ಮರಿಯಪ್ಪ ಭಟ್ಟ : ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು ೧೯೮೩
೨೪. ಅಚ್ಚಪ್ಪ , ಎಚ್. ಎಸ್, : ಗ್ರಂಥಸ್ಥ ಗಾದೆಗಳು,ಮೈಸೂರು ೧೯೬೬
೨೫. ಮಾರಾಧ್ಯ, ಹು.ಮಾ(ಸಂ) : ಕನ್ನಡ ಗಾದೆಗಳ ಮಹಾಕೋಶ ಸಂಪುಟ ೧, ೨, ಕ.ಸಾ.ಪ, ಬೆಂಗಳೂರು,೧೯೮೨
೨೬. ಸ್ವಾಮಿ, ಬಿಜಿಎಲ್ : ಶಾಸನಗಳಲ್ಲಿ ಗಿಡಮರಗಳು, ಬೆಂ. ವಿ.ವಿ. ಬೆಂಗಳೂರು,೧೯೭೫
೨೭ ಶ್ರೀನಿವಾಸ ಹಾವನೂರು : ಹೊಸಗನ್ನಡ ಅರುಣೋದಯ, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು ೨೦೦೦

ಇದೇ ಲೇಖಕರ ಇತರ ಕೃತಿಗಳು

೧	ಬಂದೀರೆ ನನ್ನ ಜಡೆವೊಳಗೆ	(ಜನಪದ ಗೀತೆಗಳು)	೧೯೮೧
೨	ಪ್ರಸ್ತಾಪ	(ವಿಮರ್ಶೆ)	೧೯೮೨
೩	ಅಗ್ನಿಸಾಕ್ಷಿ	(ಕಾವ್ಯ)	೧೯೮೫
೪	ಕಮಲಾಕೃತಿ ವಿಮರ್ಶೆ	(ಸಂಪಾದಿತ)	೧೯೮೫
೫	ಪ್ರಣೀತ	(ವಿಮರ್ಶೆ)	೧೯೮೬
೬	ಕನ್ನಡ ನಾಡಿನ ಕಲಾವಿದರು		೧೯೮೬
೭	ಬಾಲಣ್ಣ ಭಾಗವತರು : ಜೀವನಕಥೆ		೧೯೯೧
೮	ಜಿ. ವೆಂಕಟಯ್ಯ	(ಸಾಹಿತ್ಯವಾಚಿಕೆ)	೧೯೯೪
೯	ಕುಮಾರವ್ಯಾಸ : ವಿರಹಿಗಳ ಶೃಂಗಾರ	(ಸಂಪಾದಿತ)	೧೯೯೫
೧೦	ಕೋಲಾರಮ್ಮ	(ಜಾನಪದ)	೧೯೯೬
೧೧	ದಾಸಸಾಹಿತ್ಯ ಮೆತ್ತು ಜಾನಪದ		೧೯೯೭
೧೨	ಪ್ರಶಸ್ತಿ ಪಡೆದ ಮಹನೀಯರು		೧೯೯೫
೧೩	ಜಾನಪದ ಪರಿಭಾವನೆ		೨೦೦೧
೧೪	ವಿಚಾರಸಾಹಿತ್ಯ ೨೦೦೦	(ವೈಚಾರಿಕ)	೨೦೦೧
೧೫	ಅಭಿಮುಖ	(ವಿಮರ್ಶೆ)	೨೦೦೧
೧೬	ಕನ್ನಡ ದಲಿತ ಸಾಹಿತ್ಯದ ನೆಲೆ	(ವಿಮರ್ಶೆ)	೨೦೦೧
೧೭	ಬಗೆ ಬಗೆವನಾರು	(ವಿಮರ್ಶೆ)	೨೦೦೨

ಡಾ. ಜಿ. ಆರ್. ತಿಪ್ಪೇಸ್ವಾಮಿ ಹಳಗಾಲದ ಸಾಹಿತ್ಯ ಮತ್ತು ಹೊಸಗಾಲದ ಸಾಂಸ್ಕೃತಿಕ ನಂಟನ್ನು ತಿಳಿದವರು. ಅವರು ಕಳೆದ ಕಾಲು ಶತಮಾನಕ್ಕು ಹೆಚ್ಚು ಪ್ರಾಚೀನ, ಅರ್ವಾಚೀನ ಸಾಹಿತ್ಯ ವಿಶ್ಲೇಷಣೆಯಲ್ಲಿ ತೊಡಗಿದ್ದಾರೆ. ಅವರು ತಮ್ಮ ವಿಶ್ಲೇಷಣೆಗೆ ಮುಖ್ಯವಾಗಿ ಆಧುನಿಕ ಪರಿಕಲ್ಪನೆಗಳ ಒತ್ತಡ ಇರುವಂತೆ; ಸಾಹಿತ್ಯವೇ ನೀಡುತ್ತಿರುವ ದೇಸಿ ಪರಿಕಲ್ಪನೆಗಳ ಜತೆಗೆ ನಂಟನ್ನೂ ಇರಿಸಿಕೊಂಡೇ ಬರುತ್ತಿದ್ದಾರೆ. ಆಧುನಿಕಪೂರ್ವ ಗದ್ಯಕೋಶ - ಕನ್ನಡಕ್ಕೆ ಹೊಸ ಬಗೆಯ ಗ್ರಂಥವಾಗಿದೆ. ಇದು ನಮ್ಮ ಗದ್ಯಕಾವ್ಯಗಳಲ್ಲಿ ಪ್ರಯೋಗಗೊಂಡಿರುವ ವಿಶೇಷವಾದ ಸಾಂಸ್ಕೃತಿಕ ಉಕ್ತಿಗಳನ್ನು ಆಯ್ದು - ಅವುಗಳಿಗೆ ಉಚಿತವಾದ ಟಿಪ್ಪಣಿಗಳನ್ನು ಬರೆಯಲಾಗಿದೆ. ಇವುಗಳಿಗೆ ಲೇಖಕರು ವಡ್ಡಾರಾಧನೆಯಿಂದ ಹಿಡಿದು ಕೆಂಪು ನಾರಾಯಣನ ಮುದ್ರಾ ಮಂಜೂಷದವರೆಗೂ ಹರಡಿದೆ. ಲೇಖಕ ವಿದ್ವಾಂಸರು ತಮ್ಮ 'ಗದ್ಯಕೋಶ'ವನ್ನು ಮೂರು ಅಧ್ಯಾಯಗಳಾಗಿ ವಿಂಗಡಿಸಿಕೊಂಡಿದ್ದಾರೆ. ಮೊದಲನೆಯ ಅಧ್ಯಾಯವು ವ್ಯಕ್ತಿ, ಕುಟುಂಬಗಳಿಗೆ ಸಂಬಂಧಿಸಿದೆ ; ಎರಡನೆಯ ಅಧ್ಯಾಯವು ಆಚರಣೆ ಮತ್ತು ನಂಬಿಕೆಗಳಿಗೆ ಸಂಬಂಧಿಸಿದೆ ; ಮೂರನೆಯದು ಗ್ರಾಮೀಣ ಐತಿಹ್ಯ ಮತ್ತು ಪುರಾಣಗಳಿಗೆ ಸಂಬಂಧಿಸಿದೆ. ಈ ಕೋಶದ ಸಾಂಸ್ಕೃತಿಕ ಉಕ್ತಿಗಳನ್ನು ಓದುತ್ತಿದ್ದರೆ ; ಒಂದು ಸಾವಿರಕ್ಕೂ ಮಿಕ್ಕಿದ ವರ್ಷಗಳಲ್ಲಿ ಕನ್ನಡ ಜನ ಮನ ತಾಳಿದ ನಿಲುವು, ಎತ್ತಿದ ತಾತ್ವಿಕ ಪ್ರಶ್ನೆಗಳು, ಕೊಟ್ಟುಕೊಂಡ ಉತ್ತರಗಳು ನಮಗೆ ಸೂರ್ಯಸ್ಪಷ್ಟವಾಗುತ್ತವೆ ; ಸಂಸ್ಕೃತಿ ಅಧ್ಯಯನಕ್ಕೆ ಪುಷ್ಟಿಯನ್ನು ಕೊಡುತ್ತವೆ. ಇಂಥ ಸಾಂಸ್ಕೃತಿಕ ಉಕ್ತಿ ಪ್ರಪಂಚ ಕಟ್ಟಿಕೊಡುವ ವಿವರಗಳು ಕನ್ನಡ ಸಂಸ್ಕೃತಿಯ ಅಧ್ಯಯನಾಸಕ್ತರಿಗೆ ಬೆಲೆಯುಳ್ಳ ದಾರಿಗಳನ್ನು ತೋರಿಸುತ್ತವೆ. ಈ ಉಕ್ತಿಪ್ರಪಂಚವು ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಕುಟುಂಬಕ್ಕೂ ಸಂಬಂಧಿಸಿವೆ ; ಕುಟುಂಬಗಳಿಗೆ ಸಂಬಂಧಿಸಿರುವಂತೆ ಸಮಾಜಕ್ಕೂ ಸಂಬಂಧಿಸಿವೆ. ಇವು ಒಂದರೊಡನೊಂದು ಸಂಬಂಧಗಳ ನೇಯ್ಗೆಯನ್ನು ಪಡೆದಿರುವುದು ಎಲ್ಲರಿಗೂ ತಿಳಿದಿರುವ ಸಂಗತಿಗಳೇ. ಈ ಬಗೆಯ ಉಕ್ತಿಗಳು ಕೇವಲ ಕನ್ನಡ ಸಾಹಿತ್ಯ ಬಲ್ಲವರಿಗೆ ಮಾತ್ರವಲ್ಲ. ಸಮಾಜೋ ಸಾಂಸ್ಕೃತಿಕ ಅಧ್ಯಯನ ಮಾಡುವವರಿಗೂ ಹೊಸ ಬೆಳಕನ್ನೂ ಹೊಸ ತಿಳಿವನ್ನೂ ನೀಡಬಲ್ಲ ವೆಂಬುದು ನನ್ನ ನಮ್ರ ತಿಳಿವಳಿಕೆ.

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ
ಅಧ್ಯಕ್ಷರು

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು
ISBN No. 81-7713-172-9
ಬೆಲೆ -60/-